ಸ್ವಾಮಿಪಿ : ೧೮೬೮ ಸಂಪ್ಟ ಮಾರಿ

ಜೀವನ ಲಕ್ಷಣ ಪುಸ್ತಕವು

ಶತಮಾನೋತ್ಸವ ಸಂಸ್ಮರಣ ಗ್ರಂಥ

ಪುಸ್ತಕ ಸ್ಪರ್ಧಾನ ಗ್ರಂಥ

ಶತಮಾನೋತ್ಸವ ಸಂಸ್ಮರಣ

(ಪುನರ್ ಪ್ರಕಟನ : ೧೯೪೨)

ಕನ್ನಡ

ಪ್ರಥಮಿಕ ಶಿಕ್ಷಣ

ಸಿ ಚೆನ್ನಬಸಪ್ಪನವರ.

ಸಂಪಾದಕರು

ನಿಯಮ ಸಂಪುಟ

ಶಿಕ್ಷಣ ಸಂತತಿಯ

ಕರಡಾರಿ ಉಪಾಧ್ಯಾಯರ ಪರಿಷತ್ತಿನ ಗ್ರಂಥಾಲಯದ

ಪರಿಷ್ಕೃತ ಚೆನ್ನಬಸವ ಸ್ವಾಮಿ ರವರ ಸ್ಮಾರಕ ಪುಸ್ತಕ

ಏಪ್ರಿಲ್ ೧೯೪೨ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್ ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಹೊಸವರ್ಷದ ಹಾರೈಕೆ	೧
೨.	ಈ ವರ್ಷ ಪ್ರಕಟವಾದ ಮುಖ್ಯ ವಿಷಯಗಳು	೩
೩.	ಸರಕಾರದ ಆಯವ್ಯಯಗಳು	೫
೪.	ಷಡ್ರಾಗ ಮಾಲಿಕಾ ರಾಷ್ಟ್ರಗೀತೆ	೮
೫.	ನಾವು ಜಪಾನದೊಡನೆ ಯಾಕೆ ಯುದ್ಧ ಹೂಡಿದ್ದೇವೆ	೧೧
೬.	ವೈಮಾನಿಕ ಹಲ್ಲೆಯಿಂದ ರಕ್ಷಣೆ ಮಾಡಿಕೊಳ್ಳುವ ವಿಷಯದಲ್ಲಿ ಮನೆಯ ಯಜಮಾನರಿಗೂ ಸಾರ್ವಜನಿಕರಿಗೂ ಸೂಚನೆಗಳು	೧೭
೭.	ಪ್ರಕಟನೆಗಳು	೨೧
೮.	ಪುಸ್ತಕ ಪರಿಚಯ—ಶಿಕ್ಷಣ ಶಾಸ್ತ್ರ	೨೩
೯.	ಮಂಜೂರಾದ ಉರ್ದು ಪುಸ್ತಕಗಳು	೨೫
೧೦.	ಪತ್ರಗಳ ಮುಖ್ಯಾಂಶಗಳು	೨೯
೧೧.	ಬಾಗಿಲು ಕಿಡಿಕೆಗಳನ್ನು ತೆರೆದಿಡಿರಿ (ಪ್ರಬುದ್ಧರಿಗಾಗಿ)	೪೧

ನಾಲ್ಕೈದು ಚಿಂದಾ ಹಣ ನೀಡಿದರೆ ರೂಪಾಯಿಗಳು ನೂರಕ್ಕೆ. ಬಿಡಿಸಂಚಿಕೆಗೆ ನಾಲ್ಕು ಆಣೆಗಳು.

Printed by V. Y. Jathar, at the Karnatak Printing Works, Dharwar and Published by H. S. Torgal, Esq. M. A., Principal Training College For-Men, Dharwar, at his Office.

ವಿನಂತಿ

★

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಸುವ ಒತ್ತಾಯದ ಪ್ರಾಥಮಿಕ ಶಿಕ್ಷಣ, ಅಪವ್ಯಯ, ಕುಂಠಿತ ಪ್ರಗತಿ (Stagnation) 'ಶಿಷ್ಟ' ಪದ್ಧತಿ ಈ ಮೊದಲಾದ ಶಿಕ್ಷಣ ಖಾತೆಯ ಆಡಳತೆಗೆ ಸಂಬಂಧಿಸಿದ ವಿಷಯಗಳ ಮೇಲಿನ ಲೇಖಗಳು ಸಗಿಯಾದ ಅಂಕ ಸಂಖ್ಯೆಗಳನ್ನೂ ಸತ್ಯ ಸಂಗತಿಗಳನ್ನೂ ಒಳಗೊಂಡಿರಬೇಕು. ಅವು ಯಾವುದೊಂದು ಪಕ್ಷವನ್ನು ಎತ್ತಿ ಹಿಡಿಯುವ ಇಲ್ಲವೆ ಪ್ರಚಾರಕಾರ್ಯದ ಧ್ಯೇಯವನ್ನಿಟ್ಟುಕೊಂಡು ಬರೆದುವಾಗಿರ ಕೂಡದು. ಈ ವಿಷಯಗಳ ಮೇಲೆ ಲೇಖನಗಳನ್ನು ಬರೆಯುವವರು ಇಂಗ್ಲಿಷು ಬಲ್ಲವರಾಗಿದ್ದರೆ, ಅದರ ಇಂಗ್ಲಿಷು ಅನುವಾದವನ್ನಾಗಲಿ ತಾವು ಅವಲಂಬಿಸಿರುವ ಮೂಲ ಇಂಗ್ಲಿಷು ಲೇಖನವನ್ನಾಗಲಿ ನಮಗೆ ಕಳುಹಿಸಿದರೆ ಒಳಿತಾಗುವದು.

೨. ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು.

೩. ಈ ಮಾಸಪತ್ರಿಕೆಯು ಪ್ರತಿತಿಂಗಳ ಕೊನೆಯವಾರದಲ್ಲಿ ಪ್ರಸಿದ್ಧವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೪. ಲೇಖಕರು ಹಾಗು ಪ್ರಕಾಶಕರು ಪ್ರಾಥಮಿಕ ಶಿಕ್ಷಕ ಶಿಕ್ಷಯರಿಗೆ ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆಗಾಗಿ ಕಳಿಸಬಹುದು.

ಜಾಹಿರಾತಿನ ದರಗಳು

	೧೨ ತಿಂಗಳ	೬ ತಿಂಗಳ	೩ ತಿಂಗಳ
೧ ಪುಟ	೨೪ ರೂ.	೧೫ ರೂ.	೮ ರೂ.
½ ,,	೧೫ ,,	೮ ,,	೫ ,,
¼ ,,	೧೦ ,,	೫ ,,	೩ ,,

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ಸಂಪುಟ ೮೧	ಏಪ್ರಿಲ್ ೧೯೪೭	ವರ್ಷ ೧೫. ಸಂ. ೧

ಹೊಸ ವರ್ಷದ ಹಾರೈಕೆ

ಪ್ರಾಥಮಿಕ ಶಿಕ್ಷಣದ ಸಂಪಾದಕತ್ವವು ನಮ್ಮ ಕಡೆಗೆ ಬಂದು ೯ ತಿಂಗಳು ಗಳಾದವು. ಹಿಂದಿನವರು ಹಾಕಿಟ್ಟ ದಾರಿಯಲ್ಲಿಯೇ ನಾವೂ ಸಾಗಲು ಯತ್ನಿಸಿದ್ದೇ ವೆಂದು ಹೇಳಬಹುದು. ಶೈಕ್ಷಣಿಕ ಹಾಗು ಶಿಕ್ಷಕ ವರ್ಗಕ್ಕೆ ಸಂಬಂಧಿಸುವಷ್ಟೇ ಸಾಹಿತ್ಯ-ಸಂಸ್ಕೃತಿ-ವಿಷಯಕ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸುವದೇ ಧ್ಯೇಯವಾಗಿರುವ ನಮ್ಮ ಕಾರ್ಯಕ್ಷೇತ್ರವು ನಿಯಮಿತ ವರ್ತುಳದ ಹೊರಗೆ ಹೋಗಲು ಅವಕಾಶವಿರುವದಿಲ್ಲವೆಂಬುದು ಸಹಜವೇ ಸರಿ. ಈ ದೃಷ್ಟಿಯಿಂದ ಈ ವರ್ಷ ನಾವು ನಮ್ಮ ಲೇಖಕ ವರ್ಗಕ್ಕೊಂದು ವಿಶೇಷ ವಿನಂತಿಯನ್ನು ಮಾಡಿ ಕೊಳ್ಳಬೇಕಾಯಿತು. ಅದು ಕಳೆದ ಫೇಬ್ರುವರಿ ತಿಂಗಳ ಸಂಚಿಕೆಯಲ್ಲಿ ಪ್ರಕಟ ವಾಗಿದೆ.

ಕಳೆದ ವರ್ಷದಂತೆಯೇ ಈ ವರ್ಷವೂ ಮಹಾಯುದ್ಧದ ಸಂಬಂಧದ ಹಲವು ವಿಚಾರಗಳನ್ನು ನಮ್ಮ ವಾಚಕರಿಗೆ ಒದಗಿಸಿ ಕೊಡಲು ಯತ್ನಿಸಲಾಗಿದೆ. ವರ್ಧಾ ರಾಷ್ಟ್ರೀಯ ಶಿಕ್ಷಣ, ಶಿಕ್ಷಣಪದ್ಧತಿ, ಇತಿಹಾಸ ಶಿಕ್ಷಣ, ಪ್ರಾಥಮಿಕ ಶಿಕ್ಷಣವ ಸಮಸ್ಯೆಗಳಿಸಿಸುವ ಪ್ರಾಥಮಿಕ ಶಿಕ್ಷಣದ ಕಾಲನಿಯಂತ್ರಣ, ಅಪವ್ಯಯ ಮೊದಲಾದ ವೈಕ್ಷಣಿಕ ಲೇಖನಗಳನ್ನೂ ಮಾತ್ರಾವೃತ್ತಗಳು, ಲೀಲಾವತಿಯ ಲಾಲಿತ್ಯ, ಕಾವ್ಯ ವನ್ನೇಕೆ ಓದಬೇಕು, ಕವೀಂದ್ರ ರವೀಂದ್ರರು ಕಣ್ಮರೆಯಾದರು, ಮುಂತಾದ

ಸಾಹಿತ್ಯಕ ಲೇಖನಗಳನ್ನೂ ನಮ್ಮ ವಾಚಕರು ಓದಿ ಆನಂದಿಸಿ ತಕ್ಕ ಪ್ರಯೋಜನವನ್ನು ಹೊಂದಿರುವರೆಂದು ಹೇಳಬಹುದಾಗಿದೆ. ಇತ್ತೀಚೆಗೆ ಸಾಕ್ಷರತಾ ಪ್ರಸಾರವನ್ನು ಗುರಿಯಾಗಿಟ್ಟುಕೊಂಡು ಪ್ರಬುದ್ಧರ ಶಿಕ್ಷಣ ಕಾರ್ಯಕ್ಕೆ ಪ್ರೋತ್ಸಾಹನೆ ಕೊಡಬೇಕೆಂದು ನಮ್ಮ ಸರಕಾರವೂ ಜನತೆಯೂ ಯತ್ನಿಸುತ್ತಿರುವದು ಎಲ್ಲರೂ ಬಲ್ಲ ಮಾತು. ಹಾಗೆ ಒಮ್ಮೆ ಸಾಕ್ಷರಿಗಳಾದವರಿಗೆ ಓದುವದಕ್ಕೆ ತಕ್ಕ ಪಾಠಗಳುಳ್ಳ ಸ್ವತಂತ್ರ ಪುಸ್ತಕಗಳು ಕನ್ನಡದಲ್ಲಿ ಇನ್ನೂ ಹೆಚ್ಚಾಗಿ ಹುಟ್ಟಿ ಪ್ರಕಟವಾಗಬೇಕಷ್ಟೇ? ಪರಮಪವಿತ್ರವಾದ ಪ್ರಬುದ್ಧರ ಶಿಕ್ಷಣ ಕಾರ್ಯದಲ್ಲಿ ತೊಡಗಿದ ಶಿಕ್ಷಕ ಬಂಧುಗಳಿಗೆ ನೆರವಾಗುವ ಉದ್ದೇಶದಿಂದ ನಮ್ಮ ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರಾದ ಶ್ರೀ. **ತಾವಡೆ ಸೀತಾರಾಮರಾಯರು** ಪ್ರತಿ ಸಂಚಿಕೆಯಲ್ಲಿ ಎರಡು ಪುಟಗಳನ್ನು ಇದಕ್ಕಾಗಿ ಕಾದಿಟ್ಟು ಅವರ ವಾಚನಕ್ಕೆ ತಕ್ಕುವಾದ ಪಾಠಗಳನ್ನು ಆರಿಸಿ ಪ್ರಕಟಿಸಬೇಕೆಂದು ಅಪ್ಪಣೆಕೊಡಿಸಿದ್ದಾರೆ; ಮತ್ತು ಅಂಥ ಯೋಗ್ಯ ವಿಷಯಗಳನ್ನು ಅವರು ನಮಗೆ ಕಾಲಕಾಲಕ್ಕೆ ಒದಗಿಸುತ್ತಿದ್ದಾರೆ. ಪ್ರಬುದ್ಧರ ಶಿಕ್ಷಣದ ವರ್ಗಗಳನ್ನು ನಡೆಯಿಸುವವರು ಇದನ್ನು ಸರಿಯಾಗಿ ಉಪಯೋಗಿಸಿಕೊಳ್ಳುವರೆಂದು ನಂಬುವೆವು.

ಕಳೆದ ವರ್ಷದಿಂದಲೂ ಪ್ರಾಥಮಿಕ ಶಿಕ್ಷಣದ ಆದಾಯ ವೆಚ್ಚಗಳ ಮೇಲೆ ಕೆಲಮಟ್ಟಿಗೆ ವಿಶೇಷ ನಿರ್ಬಂಧಗಳನ್ನು ಹಾಕಲಾಗಿದೆ. ಧಾರವಾಡದೊಳಗಿನ ಎಲ್ಲ ಮುದ್ರಣಾಲಯಗಳ ಚಾಲಕರನ್ನು ಕೇಳಿ ಕಾಗದ ಮುದ್ರಣ ಮೊದಲಾದವುಗಳಿಗೆ ಹೆಚ್ಚು ಯೋಗ್ಯ ದರಗಳನ್ನು ಒಪ್ಪಿಕೊಂಡವರಿಗೇ ಪ್ರಾಥಮಿಕ ಶಿಕ್ಷಣದ ಕೆಲಸವನ್ನು ಒಪ್ಪಿಸಬೇಕೆಂದು ಗೊತ್ತಾಗಿದೆ.

ಜಗತ್ತನ್ನೇ ವ್ಯಾಪಿಸಿದ ಮಹಾಯುದ್ಧದ ಬೇಗೆಯ ಸೆಕೆಯು ನಮಗೂ ಬಡಿದಿದೆಯಂಡರೆ ಆಶ್ಚರ್ಯವೇಕಾಗಬೇಕು? ಇಂದಿನವರೆಗೆ, ಇನ್ನುಳಿದ ಕನ್ನಡ ಪುಸ್ತಕ ಪತ್ರಿಕೆಗಳಂತೆ ಪೆಚ್ಚಿದ ಭಾರವನ್ನು ನೀಗುವ ಮಟ್ಟಿಗಾದರೂ ಚಂದಾದಾರರನ್ನು ದೊರಕಿಸುವ ಚಿಂತೆಯು ಪ್ರಾಥಮಿಕ ಶಿಕ್ಷಣಕ್ಕೆ ಇದ್ದಿರಲಿಲ್ಲ. ಆದರೆ ಬರುವ ವರ್ಷ ನಮಗೂ ಆ ಯೋಚನೆಯು ಬಂದೇಬಿಟ್ಟಿದೆಯೆಂದು ನಮ್ಮ ಮುಖ್ಯ ಪೋಷಕರಾದ ಸ್ಥಾನಿಕ ಸಂಸ್ಥೆಗಳ ಚಾಲಕರಿಗೂ ಇನ್ನುಳಿದ ಬಂಧುಗಳಿಗೂ ನಿವೇದಿಸಿಕೊಳ್ಳಬೇಕಾಗಿದೆ. ನಾವು ಮುದ್ರಣಾಲಯದವರಿಗೆ ಕೊಡಬೇಕಾಗುವ ವೆಚ್ಚವು ಬೆಳೆದು ಒಂದಕ್ಕೆ ಒಂದೂವರೆ ಮಡಿಯಾಗಿದೆ. ಇಂಥ ಸ್ಥಿತಿಯಲ್ಲಿ ವೆಚ್ಚದ ಮಾನಕ್ಕೆ ತಕ್ಕಂತೆ ಚಂದಾದಾರರ ಸಂಖ್ಯೆಯು ಬೆಳೆಯದಿದ್ದರೆ ಈಗಿನಂತೆ ಲೇಖಕ ವರ್ಗಕ್ಕೆ ಕೊಡಬಹುದಾದ ಅಲ್ಪ ಸ್ವಲ್ಪ ಸಹಾಯ ಧನಕ್ಕೆ ಕೊರತೆಯುಂಟಾಗಬಹುದೆಂದು ಬಹು ವಿಷಾದದೊಡನೆ ಹೇಳಬೇಕಾಗುವದು.

ಪ್ರಾಥಮಿಕ ಶಿಕ್ಷಣವು ಮುಖ್ಯವಾಗಿ ಸ್ಥಾನಿಕ-ಸಂಸ್ಥೆಗಳ ಆಶ್ರಯದಲ್ಲಿ ಹೊರಡುವ ಪತ್ರಿಕೆ ಆ ಸಂಸ್ಥೆಗಳ ಚಾಲಕರು ಮನಸ್ಸು ಮಾಡಿದರೆ ಈ ಪತ್ರಿಕೆಗೆ ಹೆಚ್ಚು ಹೆಚ್ಚು ಉದಾರಾಶ್ರಯ ಕೊಡಲು ಸಾಧ್ಯವಿದೆ. ಇದರಿಂದ ನಮ್ಮ ಶಿಕ್ಷಕರಿಗೆ ತಮ್ಮ ದಿನದ ಕಾರ್ಯಕಲಾಪಗಳಲ್ಲಿ ತಕ್ಕ ಸುಧಾರಣೆ ಮಾಡಿಕೊಳ್ಳಲು ತುಂಬ ಸಹಾಯವಾಗುವದು. ನಮ್ಮಂತೆ ಗುಜರಾತ ಮಹಾರಾಷ್ಟ್ರಗಳಲ್ಲಿಯೂ ಇಂಥ ಪತ್ರಿಕೆಯು ಹೊರಡುವದು. ಅಲ್ಲಿಯ ಸ್ಥಾನಿಕ ಸಂಸ್ಥೆಗಳು ಆ ಪತ್ರಿಕೆಗಳನ್ನು ನಮಗಿಂತಲೂ ಹೆಚ್ಚು ಔದಾರ್ಯದ ದೃಷ್ಟಿಯಿಂದ ನೋಡುವ ರೆಂದು ಕಂಡುಬಂದಿದೆ.

ಯಾವದೊಂದು ಪತ್ರಿಕೆಯ ಯೋಗ್ಯತೆಯನ್ನು ನಿರ್ಣಯಿಸುವಾಗ ಇಲ್ಲವೆ ಸ್ಥಿತಿಗತಿಗಳನ್ನು ಪರ್ಯಾಲೋಚಿಸುವಾಗ ಸಕಾಲಕ್ಕೆ ಹೊರಡುವದು, ಆರ್ಥಿಕ ಪರಿಸ್ಥಿತಿ, ಲೋಕಾದರ ಇವನ್ನು ಲಕ್ಷಕ್ಕೆ ತರಬೇಕಾಗುವದು. ನಮ್ಮ ಪತ್ರಿಕೆಯ ದೃಷ್ಟಿಯಿಂದ ಈ ಮೂರೂ ವಿಷಯಗಳು ಅನುಕೂಲವಾಗಿಯೇ ಇವೆಯೆಂಬುದನ್ನು ನಮ್ಮ ವಾಚಕರು ಒಪ್ಪುವರೆಂದು ಭಾವಿಸುವೆವು. ಪ್ರತಿ ತಿಂಗಳ ೨೫ ನೆಯ ತಾರೀಖಿಗೆ ಸಂಚಿಕೆಯು ಹೊರಡಬೇಕೆಂಬ ನಿಯಮವನ್ನು ನಾವು ಇಡಿಯ ವರ್ಷದಲ್ಲಿ ಒಮ್ಮೆಯೂ ತಪ್ಪಿಸಿಲ್ಲ, ಮಿಕ್ಕವೆರಡು ವಿಚಾರಗಳನ್ನೂ ಮೇಲೆ ವಿವೇಚಿಸಲಾಗಿದೆಯಷ್ಟೇ ?

ಒಟ್ಟಿನ ಮೇಲೆ ಪ್ರಾಥಮಿಕ ಶಿಕ್ಷಣ ಪತ್ರಿಕೆಯನ್ನು ಕಳೆದ ವರ್ಷದಲ್ಲಿ ಯಶಸ್ವಿಯಾಗಿ ನಡೆಯಿಸಿ ಕೊಟ್ಟ ವಿಚಕ್ಷಣರಾದ ಲೇಖಕರೂ ಸಹೃದಯಿಗಳಾದ ವಾಚಕರೂ ಕಾರ್ಯತತ್ಪರರಾದ ಮುದ್ರಕರೂ ಶ್ರೀಮಾನ್ ತಾವಡೆ ಸಾಹೇಬರಂಥ ಶಿಕ್ಷಣ ಪ್ರೇಮಿಗಳಾದ ಅಧಿಕಾರಿಗಳೂ ಮುಂದಿನ ವರ್ಷದಲ್ಲಿಯೂ ಇದನ್ನು ಸುಸಂಗತವಾಗಿ ಸಾಗಿಸಿಕೊಡಲೆಂದು ಪ್ರಾರ್ಥಿಸಿ ಇಂದಿನವರೆಗೆ ಮಾಡಿದ ಸಹಾಯಕ್ಕಾಗಿ ಅವರೆಲ್ಲರನ್ನು ಅಭಿನಂದಿಸಿ ಈ ಚಿಕ್ಕ ಲೇಖನವನ್ನು ಮುಗಿಸುವೆವು.

ಭಗವಂತನು ಅನುಗ್ರಹಿಸಲಿ.

ಈ ವರ್ಷ ಪ್ರಕಟವಾದ ಮುಖ್ಯ ವಿಷಯಗಳು

ಅಪೂರ್ಣಾಂಕಗಳ ಭಾಗಾಕಾರ.

ಇತಿಹಾಸ ಶಿಕ್ಷಣ.

ಇತಿಹಾಸ ಪಾಠದ ಟಿಪ್ಪಣಿ.

ಇತಿಹಾಸ ಶಿಕ್ಷಣದ ಬೇರೆ ಬೇರೆ ಪದ್ಧತಿಗಳು.

ಒಕ್ಕಲುತನದ ಒಲನಿನ ವರ್ಗಗಳ ಶಿಕ್ಷಕರ ಉಜಳಣೆಯ ವರ್ಗ.

ಜಗನ್ಮಾನ್ಯ ಕವೀಂದ್ರ ರವೀಂದ್ರರು ಕಣ್ಮಾರೆಯಾದರು.

ಕಾವ್ಯವನ್ನು ಏಕೆ ಓದಬೇಕು ?

ಗೆಸ್ಟಪೋ ದಲ (ಜರ್ಮನಿಯಲ್ಲಿಯ ಗುಪ್ತ ಪೋಲೀಸರು).

ಜಪಾನಿಗಳು (ಅವರ ರೀತಿ ನಡತೆಗಳನ್ನು ತಿಳಿಸುವಂತಹದು).

ಟ್ರೇ. ಕಾ. ದ ಶಿಕ್ಷಣ ವಿಷಯದ ವ್ಯಾಪಕ ದೃಷ್ಟಿಯಿಂದ ಸಿದ್ಧಗೊಳಿಸಿದ ಅಭ್ಯಾಸ ಪತ್ರಿಕೆಯು.

ನಮ್ಮ ನಾಡ ಶಿಲ್ಪಿಗರು (ಶ್ರೀ. ಮುದವೀಡು ಕೃಷ್ಣರಾಯರ ಭಾಷಣ).

ಪ್ರಬುದ್ಧರ ಶಿಕ್ಷಣ (ಶ್ರೀ. ತಾವಡೆ ಸೀತಾರಾಮರಾಯರ ಭಾಷಣದಿಂದ ಕೂಡಿದ್ದು).

ಪ್ರಾಥಮಿಕ ಶಿಕ್ಷಣದ ಕಾಲನಿಯಂತ್ರಣ.

ಪ್ರಾಥಮಿಕ ಶಾಲೆಗಳಲ್ಲಿಯ ನಾಲ್ಕನೆಯ ಇಯತ್ತೆಯ ಸರ್ಟೀಫಿಕೇಟ ಪರೀಕ್ಷೆ.

ಪ್ರಾಥಮಿಕ ಶಾಲೆಗಳಲ್ಲಿ ಅಪವ್ಯಯ.

ಬಾಲದಿನ (ಪ್ರಾಥ. ಸ್ಕೂ. ವಿದ್ಯಾರ್ಥಿಗಳ ಚಟುವಟಿಕೆಯನ್ನು ತಿಳಿಸುವಂಥದು).

ಬಾಲಕರ ವ್ಯಾಯಾಮಪಾಠ (ಟಿಪ್ಪಣಿ ವಿವರಣೆಗಳಿಂದ ಕೂಡಿದೆ).

ಮರಣ ಸಮಸ್ಯೆ (ಪದ್ಯಗಳು).

ಮರಣದಾವರಣದಲ್ಲಿ (ಪದ್ಯಗಳು).

ಮೈಸೂರಿನ ಪ್ರವಾಸ (ಕಾಲೇಜದ ವಿದ್ಯಾರ್ಥಿಗಳ ಪ್ರವಾಸದ ವಿವರಣೆ).

ಮಾತ್ರಾವೃತ್ತಗಳು.

ಮೋಹರಮ್ (ಪ್ರಬುದ್ಧರಿಗಾಗಿ).

ಲೀಲಾವತೀ ಲಾಲಿತ್ಯ (ಕಾವ್ಯವಿವೇಚನೆ).

ವರ್ಧಾ ರಾಷ್ಟ್ರೀಯ ಶಿಕ್ಷಣದ ಸಂಬಂಧೀಕರಣ ತತ್ವವು.

ವ್ಯಾಯಾಮದ ಮಾದರಿಯ ಪಾಠದ ಟಿಪ್ಪಣಿ.

ವಿಮಾನದಾಳಿಯಾದರೆ ? (ಪ್ರಬುದ್ಧರಿಗಾಗಿ).

ಶಿಕ್ಷಕನ ಕರ್ತವ್ಯ.

ಶಾಲೆಗಳಲ್ಲಿ ಬಾಲಕರ ಹೆಸರು ಹಚ್ಚಿಕೊಳ್ಳುವದು.

ಶಿಕ್ಷಣ ಪದ್ಧತಿ.
ಶಿಕ್ಷಣದ ಗೊತ್ತುಗುರಿಗಳು.
ಶಾರೀರಿಕ ಶಿಕ್ಷಣ ಶಿಬಿರ (ಧಾರವಾಡದಲ್ಲಿ ನಡೆದದ್ದು).
ಶಿಕ್ಷಣವೂ ಮಾನಸಶಾಸ್ತ್ರವೂ.
ಶಿಕ್ಷಣದ ನಿಜವಾದ ಧ್ಯೇಯವೇನು?
ಷಡ್ರಾಗಮಾಲಿಕಾ ರಾಷ್ಟ್ರಗೀತವು.
ಸರಕಾರದ ಆಯವ್ಯಯಗಳು.
ಸದ್ಯದ ಮಹಾಯುದ್ಧದ ಬಗ್ಗೆ ಯಾರು ಏನು ಅನ್ನುವರು?
ಹಿಂದುಸ್ತಾನಿ ಶಿಕ್ಷಣದ ಅಗತ್ಯವು ಎಷ್ಟರ ಮಟ್ಟಿಗೆ ಇದೆ?
ಹಿಟ್ಲರನ ಅಸತ್ಯ ಪ್ರಚಾರ.
ಹಿತ ವಚನಗಳು (ಪ್ರಬುದ್ಧರಿಗಾಗಿ).
ಹೊಸ ವರ್ಷದ ಕಾರ್ಯಕಲಾಪಗಳು.
ಹೊಸ ಶಿಕ್ಷಣ.
ಹೋಳಿಯ ಹಬ್ಬ (ಪ್ರಬುದ್ಧರಿಗಾಗಿ).

ಈ ಮುಖ್ಯ ವಿಷಯಗಳಲ್ಲದೆ ಸರಕಾರೀ ಪ್ರಕಟಣೆಗಳು, ಸಂಪಾದಕೀಯ ಟಿಪ್ಪಣಿಗಳು, ಪುಸ್ತಕಗಳ ಪರಿಚಯ, ಪ್ರಚಲಿತ ವಿಷಯಗಳು ಮುಂತಾದ ಹಲವು ಚಿಕ್ಕ ದೊಡ್ಡ ಲೇಖನಗಳು ಈ ವರ್ಷದಲ್ಲಿ ಪ್ರಕಟವಾಗಿವೆ.

ಸರಕಾರದ ಆಯವ್ಯಯಗಳು

ಸನ್ ೧೯೪೨–೪೩

೧. ಮುಂಬಯಿ ಪ್ರಾಂತಿಕ ಸರಕಾರದ ಮುಂಗಡ ಪತ್ರಿಕೆಯು

ಕಳೆದ ಮಾರ್ಚ್‌ತಿಂಗಳ ೨೮ನೆಯ ತಾರೀಖಿನ ದಿವಸ ಮುಂಬಯಿ ಸರಕಾರದ ಹೊಸವರ್ಷದ ಆದಾಯ ವೆಚ್ಚಗಳ ಮುಂಗಡ ಪತ್ರಿಕೆಯನ್ನು ನಾಮದಾರ ಗವ್ಹರ್ನರ ಸಾಹೇಬರು ಪ್ರಸಿದ್ಧಿಸಿ ಅದರೊಳಗಿನ ಕೆಲವೊಂದು ಬಾಬುಗಳ ವಿಷಯದಲ್ಲಿ ಮುಂಬಯಿ ವೃತ್ತಪತ್ರಗಳ ಪ್ರತಿನಿಧಿಗಳಿಗೆ ವಿವರಣೆಯನ್ನು ತಿಳಿಸಿದರು. ಆದರ ಮುಖ್ಯಾಂಶಗಳು—

ಈ ವರ್ಷ ನಮ್ಮ ಪ್ರಾಂತದಲ್ಲಿ ೧೫ ಕೋಟಿ ೧೯ ಲಕ್ಷ ರೂಪಾಯಿಗಳ ಆದಾಯವು ಹಾಗು ೧೫ ಕೋಟಿ ೧೭ ಲಕ್ಷ ರೂಪಾಯಿಗಳ ವೆಚ್ಚವು ಬಂದು, ಸುಮಾರು ೯೮ ಸಾವಿರ ರೂಪಾಯಿಗಳ ಉಳಿತಾಯವಾಗುವದು. ಬೇರೆಬೇರೆ ಕಾರ್ಯಗಳಿಗಾಗಿ ಕಾದಿಟ್ಟ ಹಣವು ಸುಮಾರು ೪ ಕೋಟಿ ೫೦ ಲಕ್ಷ ರೂಪಾಯಿ ಇರುವದು. ಈ ಹಣದಿಂದ ಯುದ್ಧಕಾಲದಲ್ಲಿಯ ಅನುವು ಆಪತ್ತುಗಳನ್ನೂ ಬರಗಾಲ ಭಾಗದ ಸಂಕಟ ನಿವಾರಣೆ ಮೊದಲಾದವುಗಳನ್ನೂ ನೀಗಬಹುದು. ಭೂಕಂದಾಯ, ಮಾದಕ ದ್ರವ್ಯಗಳ ಮಾರಾಟ, ಕೊರ್ಟ ಫೀ ಸ್ಟ್ಯಾಂಪು ಮೊದಲಾದವುಗಳಿಂದ ಅಂದಾಜಿಗಿಂತಲೂ ಹೆಚ್ಚು ಉತ್ಪನ್ನವು ಬಂದುದರಿಂದ ಈ ವರ್ಷದ ಪ್ರಾರಂಭದಲ್ಲಿಯೇ ಇಷ್ಟೊಂದು ಹಣವನ್ನು ಕಾದಿಡಲು ಅನುಕೂಲವಾಗಿದೆ. ಯುದ್ಧದ ಜ್ವಾಲೆಯು ಇದುವರೆಗೆ ಪ್ರತ್ಯಕ್ಷ ತಗಲದಿದ್ದರೂ ಕೂಡ ೫೦ ಲಕ್ಷ ರೂಪಾಯಿಗಳನ್ನು ಕೇವಲ ನಾಗರಿಕರ ರಕ್ಷಣೆಗಾಗಿಯೇ ತೆಗೆದಿಟ್ಟು, ಈ ವಿಷಯದಲ್ಲಿ ಸರಿಯಾದ ಏರ್ಪಾಡು ಮಾಡುತ್ತಲಿದೆ. ಯುದ್ಧೋತ್ತರ ಕಾಲದಲ್ಲಿ ಪುನರ್ಘಟನೆಯ ಸಲುವಾಗಿ ೨೨ ಲಕ್ಷ ರೂಪಾಯಿಗಳನ್ನು ಕೂಡ ಈಗಿನಿಂದಲೇ ಬೇರೆಯಾಗಿ ತೆಗೆದಿಟ್ಟಿರುತ್ತದೆ. ಇವ್ಯಾಗಿಯೂ ಈ ವರ್ಷ ಪಟ್ಟಣಗಳಲ್ಲಿಯ ಆಸ್ತಿಯ ಮೇಲಿನ ತೆರಿಗೆಯನ್ನು ತುಸಮಟ್ಟಿಗೆ ಕಡಿಮೆ ಮಾಡಲಾಗಿದೆ. ಪೋಲೀಸಖಾತೆಗೆ ೫ ಲಕ್ಷ ರೂ. ಗಳನ್ನು ಹೆಚ್ಚಿಗೆ ಒದಗಿಸಲಾಗಿದೆ. ಶಿಕ್ಷಣಪ್ರಸಾರ, ಗ್ರಾಮೋದ್ಯೋಗ, ನೀರಿನ ಪೂರೈಕೆ ಮೊದಲಾದವುಗಳಿಗೆ ಪ್ರತಿವರ್ಷಕ್ಕಿಂತಲೂ ಹೆಚ್ಚು ಲಕ್ಷ್ಯವನ್ನು ಪೂರೈಸಲಾಗಿದೆ. ಸಾರ್ವಜನಿಕ ಆರೋಗ್ಯ ಹಾಗು ಉದ್ಯೋಗ ವ್ಯವಸಾಯಗಳ ವಿಭಾಗದಲ್ಲಿ ೧ ಕೋಟಿ ೧೪ ಲಕ್ಷ ರೂಪಾಗಳ ವೆಚ್ಚದ ಹೊಸ ಯೋಜನೆಯನ್ನು ಕೈಕೊಳ್ಳಲಾಗಿದೆ.

೧೯೪೦–೪೧ ನೆಯವರ್ಷ ೪೮ ಸಾವಿರ ರೂಪಾಯಿಗಳ ಉಳಿತಾಯವೆಂದು ಅಂದಾಜು ಮಾಡಿದ್ದರೂ ಕೂಡ, ಕೊನೆಗೆ ೧ ಕೋಟಿ ೭೮ ಲಕ್ಷ ರೂಪಾಯಿಗಳ ಉಳಿತಾಯವಾಯಿತು. ೧೯೪೧–೪೨ನೆಯ ವರ್ಷ ೬೨ ಸಾವಿರ ರೂಪಾಯಿಗಳ ಉಳಿತಾಯವೆಂದು ಅಂದಾಜು ಮಾಡಿದ್ದರೂ ಹಿಡಿತದಿಂದ ವೆಚ್ಚಮಾಡುವ ಹಾಗು ದಕ್ಷತೆಯಿಂದ ತೆರಿಗೆ ಎತ್ತುವ ಉಪಾಯಗಳಿಂದ ೧ ಕೋಟಿ ೭೫ ಲಕ್ಷ ರೂಪಾಯಿಗಳ ಉಳಿತಾಯವಾಗಿದೆ.

೨. ಹಿಂದುಸ್ತಾನ ಸರಕಾರದ ಮುಂಗಡ ಪತ್ರಿಕೆಯು

ಹಿಂದುಸ್ತಾನ ಸರಕಾರದ ಅರ್ಥಸಚಿವರಾದ ಸರ್ ಜರೆಮಿ ರೇಜಿಮನ್ ಇವರು ದಿಲ್ಲಿಯ ಕಾನೂನುಮಂಡಲದ ಸದಸ್ಯರ ಮುಂದೆ ಕಳೆದ ವರ್ಷದ

ನಿಶ್ಚಿತವಾದ ಆದಾಯ ವೆಚ್ಚಗಳ ಲೆಕ್ಕವನ್ನೂ ಹೊಸ ವರ್ಷದ ಮುಂಗಡ ಪತ್ರಿಕೆಯನ್ನೂ ಕಳೆದ ಮಾರ್ಚ್ ತಿಂಗಳಲ್ಲಿ ಮಂಡಿಸಿದ್ದರು. ಅದರ ಕೆಲವು ಅಂಶಗಳು ಈ ರೀತಿಯಾಗಿವೆ.

೧೯೪೧–೪೨ನೆಯ ವರ್ಷದಲ್ಲಿ ೧೭ ಕೋಟಿ ರೂಪಾಯಿಗಳ ಕೊರತೆಯಾಯಿತು. ಹೊಸ ವರ್ಷದಲ್ಲಿ ಸುಮಾರು ೪೭ ಕೋಟಿ ರೂಪಾಯಿಗಳ ಕೊರತೆಯಾಗುವದು. ಇದಕ್ಕಾಗಿ ಪ್ರಾಪ್ತಿ, ಕಲ್ಲೆಣ್ಣೆ, ಪೆಟ್ರೋಲ, ತಂತೀಟಪಾಲು ಮೊದಲಾದ ವಿಭಾಗಗಳಲ್ಲಿ ಕೆಲವೊಂದು ಪ್ರಮಾಣದಿಂದ ತೆರಿಗೆಯನ್ನು ಏರಿಸ ಬೇಕಾಗಿದೆ. ಇದರಿಂದ ಸುಮಾರು ೧೨ ಕೋಟಿ ರೂಪಾಯಿಗಳ ಆದಾಯವು ಹೆಚ್ಚಾದರೂ ಕೂಡ ೩೫ ಕೋಟಿ ರೂಪಾಯಿಗಳ ಕೊರತೆಯು ಉಳಿದೇ ಉಳಿಯುವದು. ಸಾಲ ತೆಗೆದು ಇದನ್ನು ಪೂರೈಸಿಕೊಳ್ಳುವ ಯೋಜನೆಯನ್ನು ಮಾಡಲಾಗಿದೆ.

೧೯೪೦–೪೧ನೆಯ ವರ್ಷದಲ್ಲಿ ನಮ್ಮ ದೇಶದ ಉತ್ಪನ್ನವು ೧೪೫ ಕೋಟಿ ೧೨ ಲಕ್ಷ ರೂ. ಇತ್ತು. ವೆಚ್ಚವು ೧೫೧ ಕೋಟಿ ೧೬ ಲಕ್ಷ ರೂ. ಆಯಿತು. ೧೯೪೧–೪೨ನೆಯ ವರ್ಷದಲ್ಲಿ ೧೬೭ ಕೋಟಿ ೯೭ ಲಕ್ಷ ರೂಪಾಯಿಗಳ ಉತ್ಪನ್ನವಾಗಿ ೧೪೫ ಕೋಟಿ ೨೪ ಲಕ್ಷ ರೂಪಾಯಿಗಳ ವೆಚ್ಚ ಬಂದಿತು. ಬರುವ ವರ್ಷದಲ್ಲಿ ೧೯೧ ಕೋಟಿ ೪೮ ಲಕ್ಷ ರೂಪಾಯಿಗಳ ಉತ್ಪನ್ನವಾಗಿ ೨೨೬ ಕೋಟಿ ೫೪ ಲಕ್ಷ ರೂಪಾಯಿಗಳ ವೆಚ್ಚವಾಗುವದೆಂದು ಅಂದಾಜು ಮಾಡಲಾಗಿದೆ. ಈ ೨೨೬ ಕೋಟಿ ರೂ. ಗಳ ಒಟ್ಟು ವೆಚ್ಚದಲ್ಲಿ ಹಿಂದುಸ್ತಾನದ ಸಂರಕ್ಷಣೆಗಾಗಿಯೇ ೧೩೫ ಕೋಟಿ ರೂ. ವೆಚ್ಚವಾಗುವದೆಂದು ಗ್ರಹಿಸಲಾಗಿದೆ. ಹಿಂದುಸ್ತಾನದ ರಕ್ಷಣೆಗೆ ಇಷ್ಟೇ ಹಣವು ಸಾಕೆಂದು ಯಾರೂ ಭಾವಿಸಕೂಡದು. ಸಾಮ್ರಾಜ್ಯ ಸರಕಾರದವರು ಯುದ್ಧದ ವೆಚ್ಚವೆಂದು ಕಳೆದ ವರ್ಷ ೩೦೦ ಕೋಟಿ ರೂಪಾಯಿಗಳನ್ನು ಹಿಂದುಸ್ತಾನಕ್ಕೆ ಕೊಟ್ಟಿದ್ದಾರೆ. ಮತ್ತು ಈ ವರ್ಷ ೪೦೦ ಕೋಟಿ ರೂಪಾಯಿಗಳನ್ನು ಕೊಡತಕ್ಕವರಿದ್ದಾರೆ.

ಯುದ್ಧದ ಅನಿಶ್ಚಿತ ಪರಿಸ್ಥಿತಿಯಲ್ಲಿ ಕೂಡ ನಮ್ಮ ಅರ್ಥಸಚಿವರು ಪ್ರಗತಿಯ ಹಲವು ಯೋಜನೆಗಳನ್ನು ಕೈಕೊಂಡದ್ದು ತುಂಬ ಪ್ರಶಂಸನೀಯವೆಂದು ಹಲವರು ಅಭಿಪ್ರಾಯಪಟ್ಟಿದ್ದಾರೆ.

೩. ಗ್ರೇಟ ಬ್ರಿಟನ್ನಿನ ಆಯವ್ಯಯ

ಅರ್ಥಸಚಿವರಾದ ಸರ್ ಕಿಂಗ್ಸ್‌ಲೆ ವುಡ್ಡರು ಈ ತಿಂಗಳ ಮಧ್ಯದಲ್ಲಿ ಪಾರ್ಲಮೆಂಟಿನ ಸದಸ್ಯರ ಮುಂದೆ ೧೯೪೧–೪೨ನೆಯ ವರ್ಷದ ಆದಾಯ ವೆಚ್ಚಗಳ

ಲೆಕ್ಕವನ್ನು ಹಾಗು ೧೯೪೨-೪೩ನೆಯ ವರ್ಷದ ಅಂದಾಜು ಪತ್ರಿಕೆಯನ್ನು ಮಂಡಿಸಿದರು.

ಕಳೆದ ವರ್ಷ ಗ್ರೇಟಬ್ರಿಟನ್ನಿನ ಸರಕಾರಕ್ಕೆ ೧೬೩ ಕೋಟಿ ಪೌಂಡುಗಳ ಆದಾಯವಾಗಿ ೪೨೦ ಕೋಟಿ ಪೌಂಡುಗಳ ವೆಚ್ಚ ಬರುವದೆಂದು ಅಂದಾಜು ಮಾಡಲಾಗಿತ್ತು. ಆದರೆ ೧೪೦ ಕೋಟಿ ಪೌಂಡುಗಳ ಆದಾಯವಾಯಿತು. ಕೇವಲ ಯುದ್ಧಕ್ಕಾಗಿಯೆ ೪೦೦ ಕೋಟಿ ಪೌಂಡುಗಳು ವೆಚ್ಚವಾದವು!

ಹೊಸವರ್ಷದಲ್ಲಿ ೨೫೦ ಕೋಟಿ ಪೌಂಡುಗಳ ಉತ್ಪನ್ನವಾಗಿ ೫೦೦ ಕೋಟಿ ಪೌಂಡುಗಳ ವೆಚ್ಚ ಬರಬಹುದೆಂದು ಅಂದಾಜು ಮಾಡಲಾಗಿದೆ. ಹೆಚ್ಚಿಗೆ ಬರುವ ವೆಚ್ಚವನ್ನು ಪೂರೈಸಿಕೊಳ್ಳುವದಕ್ಕಾಗಿ ಬಿಅರ, ವ್ಹಿಸ್ಕಿ, ತಂಬಾಕ, ಸಿಗರೇಟ ಮೊದಲಾದವುಗಳ ಮೇಲೆಯೂ ಮನರಂಜನೆಯ ಸಾಧನಗಳ ಮೇಲೆಯೂ ಪ್ರತ್ಯಕ್ಷ ಹಾಗು ಅಪ್ರತ್ಯಕ್ಷ ತೆರಿಗೆಗಳನ್ನು ಹೆಚ್ಚಿಸಲಾಗಿದೆ; ಸಾಲವನ್ನು ತೆಗೆಯಲಾಗಿದೆ. ಯುದ್ಧಕ್ಕಾಗಿ ೪೫೦ ಕೋಟಿ ಪೌಂಡುಗಳ ವೆಚ್ಚವನ್ನು ಸಹಿಸಬೇಕಾಗಿದೆ! (ಒಂದು ದಿನಕ್ಕೆ ಸುಮಾರು ೧೭ ಕೋಟಿ ರೂಪಾಯಿಗಳು) ಇಂಥ ಗಂಡಾಂತರದ ಪ್ರಸಂಗದಲ್ಲಿ ಜನರು ಮಾದಕ, ಅನವಶ್ಯಕ ಮತ್ತು ವಿಲಾಸದ ವಸ್ತುಗಳನ್ನು ಕಡಿಮೆ ಮಾಡಿ ರಾಷ್ಟ್ರರಕ್ಷಣೆಗೆ ನೆರವಾಗಬೇಕೆಂದು ಅರ್ಥಸಚಿವರು ವಿನ್ನವಿಸಿಕೊಂಡಿದ್ದಾರೆ.

ಷಡ್ರಾಗ ಮಾಲಿಕಾ ರಾಷ್ಟ್ರಗೀತೆ

(ಕಳೆದ ಮಾರ್ಚ ತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು)

೪ ಕೇದಾರ ಗೌಳರಾಗ ಏಕತಾಳ ೪ ಅಕ್ಷರ

ಸ	ರಿ	ಧ	ಪ	ನಿ	ಸ	ಸನಿ	ಧ	ಮುಮು	ಗ	ಸಿಸ
,,	ಚ.	ಶು.	,,	ಕೈ.	,,	,,	ಚ	,,	ಅಂ.	,,

ಸರಿಸಾ | ನೀಧಪ | ಮಪನೀ | ಧಪಧಪ | ,ಮಗರಿ | ಮಾಗರಿ | ಮಪನಿಸ
ನಿನಿಸಾ |
ತುಮಿವಿ | ದ್ಯಾ ತುಮಿ | ಧ ,ರ್ಮಾ | ತುಮಿಹೃದಿ | ,ತು,ಮಿ | ಮಾರ್ಮ , |
ತ್ವಂಹಿ , | ಪ್ರಾ , ಣ |
ನಿ ವ ಗರಿಸರಿ | ಸಾನಿಧ | ಪಧದಾ | ಮಗಗರಿ | ಮಪನಿಸ | ನಿಧಪಾ |
ಶ , ,-ರೀ | , ,-ರೇ , | ಬಾಹು , | ತೆ , ತು | ಮಿ , ಮಾ , | ಶ , ಕ್ತಿ , | ಹೃದಯೇ |
ಮಗರಿ | ಮಾಗರಿ | ಮಪನಿಸ | ನಿಸರೀ | ಸನಿಧಪ | ಧಪಮಗ | ರಿಮಪನಿ |
ಮಪನಿಸ ||
ತುಮಿಮಾ | ಮಾ ಭ , | ಕ್ತಿ , ತೋ , | ಮು , ರಾ | ಪ್ರತಿಮು , | ಗಡಿ , , |
ಮುಂದಿರೆ | ಮುಂದಿರೆ ||
ಸ್ಥರ || ಸಾನಿಧ-ಪಾಧಪ | ಮಾಗರಿ-ಮಗರಿಸ | ರಿಮಪನಿ-ಧಪರಿಮ |
, , , - , , , | , , , - , , , , | , , , , - , , , ,
ರಿಮಪನಿ-ಪನಿಸಾ |
, , , , - , , ,
ನಿಸರಿಸ - , ನಿಧಪ | ಸನೀಪ-ಧನಿಪಮ | ರಿಗರಿಸ-ರಿಮಪನಿ || ಸನಿಪಮ ||
, , , , - , , , , | , , , - , , , , | , , , , - , , , , || ವಂದೆ , ||

೫ ಕಾಂಭೋಜರಾಗ-ಏಕತಾಳ ೪ ಅಕ್ಷರ

ಸ	ರಿ	ಗ	ಮು	ಪ	ಧ	ಸ	ಸ	ನಿ	ಧಪಮಗರಿಸ
,,	ಜ.	ಅಂ	ಶು.	ಷ	ಚ.	,,	,,	ಕೈ.	,,

ಪ || ಸಾಸಾ | ನಿನಿಧಾ | ಮಪಧಧ | ನಿನಿಧಪ | ಮಪನಿಧ | ಪಧಮಾ |
ಪಗಾಮು | , ಪಾಧ |
ತ್ವಂಹೀ | ದು , ರ್ಗಾ | , , , , | ದ , ಶ , | ಪ್ರಹರ , | ಣ , ಧಾ | , ರಿ , ಣಿ , |
ಪಧಸಾ || ಧಪಮಗ | ಪಾಧಪ | ಧಾಪಧ | ಸಾ , , | ಪಧಸರಿ | ಸನೀಧ | ಪಾಧಪಿ
ಕಮಲಾ || ಕಮಲದ | ಲವಿ , | ಹಾರಿ , | ಣೀ , , | ವಾ , ಣಿ , | ವಿದ್ಯಾ , |
ಮಗರಿಗ | ಪಧಸಾ | ನೀಧಪ | ಗಪಧಸ | ಮಗಪಧ ||
ನಮಾ , ಮಿ | ತ್ವಂ೦ | ವಂದೇ , | ಮಾ , ತ , | ರಂ೦೦ ||

ಸ್ವ || ಸಾನಿಪ | ಧಾಧಾ | ಸಾ , , | ನೀಧಪ | ಮುಪನಿಧ | ಪಧಪಾ |
ಮುಗಾರಿ | ಗಪ ||

ಧಧ | ಸಾರಿಸ | ನಿಧಪಧ | ಸನೀಪ | ಧನಿಪಮು | ರಿಗರಿಸ | ರಿಮುಪನಿ | ಪನಿಸರಿ ||

||ಸನಿಪಮು|| ..... ||ಆ||ಸರಿಗಪನಿಸ ||
||ವಂದೆ , || ..... ||ಆಮು||ಸನಿಪಗರಿಸ||

೬ ಹಂಸಧ್ವನಿರಾಗ ಏಕತಾಳ ೪ ಅಕ್ಷರ

ಸರೇಗ | ರಿಗಪಾ | ಗೆಪನೀ | ಪನಿಸಾ | ರಿಸನೀ | ಪನಿಸಾ | ಪನಿಸರಿ | ಗಾರಿಪ |
ನಮಾಮಿ | ಕಮುಲಾಂ | ಅಮುಲಾಂ | ಅತುಲಾಂ | ಸುಜಲಾಂ | ಸುಫಲಾಂ |
ಮಾ , ತ , | ರಂಂಂ |

ರೀಗರಿ | ಸಾನಿಪ | ರಿಗಪಾ | ಪಗರೀ | ಗಾರಿಗ | ರಿಸಾ , | ರಿಗಪನಿ | ಪನಿಸಾ |
ಶಾಮುಲಾ | , ಂ ಂ | ಸರಲಾಂ | ಸುಸ್ಮಿತಾಂ | ಭೂಷಿತಾ | ಂ , , | ಧರಣೀಂ |
ಭರಣೀಂ |

ನಿಪಗೆದ | ಗರಿಸಾ || ಸ್ವರ || ಸಾನಿಪ | ಗರಿಸಾ | ಪನಿಸರಿ | ಗರಿಗಾ |
ಪಗಾರಿ | ಗಸವೀ

ಮಾ , ತ , | ರ ಂ ಂ || ನಿಪಗರಿ-ನಿಗರಿಸ | ಸರಿಗಪ-ರಿಗಪನಿ | ಪನಿಸಾ-ಸನೀಪ
ಧನಿಪಮು-ರಿಗರಿಸ | ರಿಮುಪನಿ-ಪನಿಸರೆ || ಸನಿಪಮು ||
|| ವಂದೇ , ||

ಸ್ವರ || ಸಾನಿಪ-ಗರಿಸಾ | ರಿಗಪನಿ-ಪನಿಸಾ | ಪನಿಸನಿ-ಸಾ , , |

ರೀಗರಿ-ಗರಿಸರಿ || ಸನಿಪಮು ||
ನಿರಿಸನಿ ನಿಪಗಪ | ರಿಗಪನಿ - ಸನೀಪ | ಧನಿಪಮು - ರಿಗರಿಸ | ರಿಮುಪನಿ -
ಪನಿಸರೆ || ವಂದೇ , ||

ನಾವು ಜಪಾನದೊಡನೆ ಯಾಕೆ ಯುದ್ಧ ಹೂಡಿದ್ದೇವೆ?

('Why we are fighting with Japan' ಎಂಬ ಪುಸ್ತಕದ ಆಧಾರದಿಂದ)

ಪ್ರಾಸ್ತಾವಿಕ ವಿಚಾರಗಳು :—ಜಗತ್ತಿನೊಳಗಿನ ಒಂದೊಂದು ರಾಷ್ಟ್ರವು ಒಂದೊಂದು ಕಾಲದಲ್ಲಿ ಸಾಮ್ರಾಜ್ಯತೃಷ್ಣೆಯಿಂದ ಕಾತರಗೊಳ್ಳುತ್ತಿದ್ದಿತು. ಗ್ರೇಟ ಬ್ರಿಟನ್ನವು ಇಲಿಜಾಬೆಥ ರಾಣಿಯ ಕಾಲದಿಂದ ೨೦ ನೆಯ ಶತಮಾನದವರೆಗೂ ಇಂಥ ಸಾಮ್ರಾಜ್ಯವಾದೀ ವಾತಾವರಣದಲ್ಲಿಯೇ ಬೆಳೆದು ಬಂದಿದೆ. ಗ್ರೀಸ, ಸ್ಪೇನ, ಹಾಲಂಡ, ಪೋರ್ತುಗಾಲ ದೇಶಗಳೂ ಇಂಥ ಸಾಮ್ರಾಜ್ಯವಾದೀ ಧೋರಣೆಯ ಅನುಭವ ಪಡೆದಿವೆ. ಇಂಥ ಸಾಮ್ರಾಜ್ಯದ ಲಾಲಸೆಯನ್ನು ಕೆಲವು ರಾಷ್ಟ್ರಗಳು ವೈರಿಗಳ ಆಕ್ರಮಣಕ್ಕೆ ಒಳಗಾಗಿ ನಡುದಾರಿಯಲ್ಲಿಯೇ ಕೈಬಿಟ್ಟವು. ಕೆಲವು ಅಂತಃಕಲಹ ರಾಜಕೀಯ ತಂತ್ರಗಳ ದೌರ್ಬಲ್ಯ ಇವುಗಳ ಮೂಲಕ ಮೂಲೆ ಗುಂಪಾದವು. ಬ್ರಿಟಿಷ ಸಾಮ್ರಾಜ್ಯವು ತನ್ನ ಅಂಕಿತದಲ್ಲಿರುವ ರಾಷ್ಟ್ರಗಳಿಗೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯ ಸುರಾಜ್ಯಗಳನ್ನು ಒದಗಿಸಿಕೊಟ್ಟು ಮುಂದೆ ಸಾಗಿದೆ. ಈ ತತ್ವಾನುಸಾರವಾಗಿಯೇ ಭರತಖಂಡಕ್ಕೂ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವು ದೊರೆಯಬಹುದಾಗಿದೆ. ಬ್ರಿಟಿಷ ಸರಕಾರವು ಈ ಧೋರಣೆಯನ್ನು ನಿರ್ಧರಿಸಿಕೊಂಡೇ ಮುಂದೆ ಸಾಗಿದೆ.

ನಮ್ಮ ದೇಶದಲ್ಲಿಯೂ ಪ್ರಾಚೀನಕಾಲದಲ್ಲಿ ಚಿಕ್ಕ ದೊಡ್ಡ ಸಾಮ್ರಾಜ್ಯಗಳು ಹುಟ್ಟಿ ಬೆಳೆದಿದ್ದವು. ಅರ್ವಾಚೀನ ಕಾಲದಲ್ಲಿಯೂ ಅಕಬರನು ಕಟ್ಟಲು ಹೊರಟಿದ್ದ ಮೊಗಲ ಸಾಮ್ರಾಜ್ಯಕ್ಕೆ ಔರಂಗಜೇಬನ ಕಾಲದಲ್ಲಿಯೇ ಅಳಿಗಾಲ ವೊದಗಿತು.

ಪ್ರಕೃತದ ಜಗತ್ತಿನ ರಾಜಕೀಯ ರಂಗವನ್ನು ವಿಹಂಗಮ ದೃಷ್ಟಿಯಿಂದ ನೋಡಿದರೆ ಅದರಲ್ಲಿ ಎರಡು ರಾಷ್ಟ್ರಗಳು ಮಹಾ ಸಾಮ್ರಾಜ್ಯತೃಷ್ಣೆಯಿಂದ ಬಾಯಾರಿ ನಿಂತಿರುವದು ಒಡೆದು ಕಾಣುವದು. ಇವುಗಳಲ್ಲಿ ಒಂದು **ಜರ್ಮನಿ;** ಮತ್ತೊಂದು **ಜಪಾನ.** ಒಂದು ಯುರೋಪದಲ್ಲಿ; ಇನ್ನೊಂದು ಏಶಿಯಾದಲ್ಲಿ. ಪ್ರಕೃತ ಲೇಖನದಲ್ಲಿ ಜಪಾನದ ಸಾಮ್ರಾಜ್ಯತೃಷ್ಣೆಯ ಧೋರಣೆಯನ್ನು ಕುರಿತು ನಾಲ್ಕು ಮಾತುಗಳನ್ನು ಬರೆಯುವೆವು.

ಮೊದಲನೆಯ ಭಾಗ—ಜಪಾನದ ಉತ್ಕರ್ಷ ಮತ್ತು ಸಾಮ್ರಾಜ್ಯಧೋರಣೆ ಇವುಗಳ ಇತಿಹಾಸ

ಏಶಿಯಾಖಂಡದೊಳಗೆ ಚೀನವೂ ಜಪಾನವೂ ಪೂರ್ವಕಾಲದಿಂದಲೂ ವಿಚಿತ್ರ ಪರಿಸ್ಥಿತಿಯುಳ್ಳ ದೇಶಗಳು. ಇವೆರಡೂ ರಾಷ್ಟ್ರಗಳು ತಮ್ಮಷ್ಟಕ್ಕೆ ಸ್ವಸಂಪೂರ್ಣ ಮತ್ತು ಸ್ವಸಂತುಷ್ಟ ರಾಷ್ಟ್ರಗಳೆನ್ನಿಸಿಕೊಂಡು ಬಹುಕಾಲ ಬಾಳಿದವು. ಚೀನವು ಪರದೇಶದವರಿಂದ ಬೇರೆಯಾಗಿರಲು ಬಯಸಿ ಭೂಮಾರ್ಗದಲ್ಲಿ ಬಲವಾದ ಗೋಡೆಯನ್ನು ಕಟ್ಟಿಕೊಂಡಿದ್ದಿತು. ಜಲಮಾರ್ಗದಿಂದಲೂ ಪರದೇಶದವರಿಗೆ ಅಲ್ಲಿ ಪ್ರವೇಶವಿರಲಿಲ್ಲ. ೧೭ನೆಯ ಶತಮಾನದವರೆಗೂ ಈ ಮಾತು ಸಾಗಿ ಬಂದಿತು. ಆದರೆ ಆ ಸುಮಾರಕ್ಕೆ ತಮ್ಮ ವ್ಯಾಪಾರವನ್ನು ಹರಡುವದಕ್ಕಾಗಿ ಯತ್ನಿಸುತ್ತಿದ್ದ ಯುರೋಪದ ರಾಷ್ಟ್ರಗಳು ವಿಶೇಷವಾಗಿ ಗ್ರೇಟಬ್ರಿಟನ್ನವು ಚೀನದ ಈ ಸಂಕುಚಿತ ದೃಷ್ಟಿಗೆ ಅಂಜನ ಹಾಕಿತು. ನೊತ್ತನೊದಲು ಕಂತಾನ ಬಂದರವು ಯುರೋಪದ ವ್ಯಾಪಾರಸ್ಥರಿಗೆ ಮುಕ್ತದ್ವಾರವಾಯಿತು. ಜಪಾನದಲ್ಲಿಯೂ ಇದೇ ಧೋರಣೆ ಇದ್ದಿತು. ಅವರು ತಮ್ಮ ದೇಶದೊಳಗಿನ ಪೊರ್ಟ್ ನಾಗಾಸಾಕಿಯಲ್ಲಿ ಚೀನೀಯರೂ ಡಚ್ಚರೂ ಮಾತ್ರ ವ್ಯಾಪಾರಮಾಡಬಹುದೆಂದು ಗೊತ್ತುಮಾಡಿಕೊಂಡಿದ್ದರು. ಮಿಕ್ಕವರಿಗೆ ಆ ದೇಶದಲ್ಲಿ ಪ್ರವೇಶವೇ ಇರಲಿಲ್ಲ. ಹೀಗೆ ಚೀನೀಯರೂ ಜಪಾನರೂ ತಮ್ಮಷ್ಟಕ್ಕೆ ತಾವು ಸುಸಂಸ್ಕೃತರಾಗಿದ್ದರೂ ಪ್ರಗತಿಪರರಾಗಿರಲಿಲ್ಲ. ತಮ್ಮ ಇಂದಿನ ಇಂಥ ಸ್ಥಿತಿಯೇ ಒಳ್ಳೆಯದೆಂದೂ ಇಷ್ಟರಿಂದಲೇ ಸಂತುಷ್ಟರಾಗಿರುವೆವೆಂದೂ ಹೇಳುತ್ತಿದ್ದುದರಿಂದ ಅವರಲ್ಲಿ ತಕ್ಕಂತೆ ಪ್ರಗತಿಯಾಗಿರಲಿಲ್ಲ. ೧೯ನೆಯ ಶತಮಾನದಲ್ಲಿ ಯುರೋಪದಲ್ಲಿ ಔದ್ಯೋಗಿಕ ಪ್ರಗತಿಯಾಗಿ ಬಗೆಬಗೆಯ ಪಕ್ಕಾ ಸರಕುಗಳು ಹುಟ್ಟಿ ಅವುಗಳ ವ್ಯಾಪಾರಕ್ಕೆ ತಕ್ಕ ಗಿರಾಕಿಗಳು ಬೇಕಾದುದರಿಂದ ಯುರೋಪದ ದೃಷ್ಟಿಯು ಏಶಿಯದ ಕಡೆಗೆ ಹೊರಳಿತು. ಯುರೋಪದ ರಾಷ್ಟ್ರಗಳು ಪ್ರಾಮುಖ್ಯವಾಗಿ ಬ್ರಿಟಿಷರು ಚಹಾದ ಪೂರೈಕೆಗಾಗಿ ಚೀನವನ್ನು ಅವಲಂಬಿಸಬೇಕಾಯಿತು. ಬಂಗಾಲದಲ್ಲಿ ಹುಟ್ಟುವ ಅಫೀಮಿನ ವ್ಯಾಪಾರಕ್ಕಾಗಿ ಅವರು ಚೀನದ ಮೇಲೆ ದೃಷ್ಟಿ ಇಟ್ಟರು. ೧೮೯೯ರಿಂದ ೧೯೪೨ರವರೆಗೆ ಮತ್ತು ೧೮೫೬ರಿಂದ ೬೦ ವರೆಗೆ ನಡೆದ ಎರಡು ಮಹಾಯುದ್ಧಗಳಿಂದ ಚೀನದ ಕೇವಲ ಆತ್ಮಾವಲಂಬನದ ಧೋರಣೆಯು ಅಳಿದುಹೋಯಿತು. ಯುರೋಪಿಯನ್ನರು ಅಲ್ಲಿ ತಮ್ಮ ವ್ಯಾಪಾರಕ್ಕಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡರು. ಆ ದೇಶದಲ್ಲಿರುವ ಯುರೋಪಿಯನ್ ವ್ಯಾಪಾರಸ್ಥರ ಸಲುವಾಗಿ ಬೇರೆ ನ್ಯಾಯಕೋರ್ಟುಗಳೂ ಕಾಯಿದೆಗಳೂ ಹುಟ್ಟಿದವು ಯುರೋಪಿಯನ್ ವ್ಯಾಪಾರಸ್ಥರ ಸರಕುಗಳ

ಮೇಲಿನ ಸುಂಕದ ನಿಯಂತ್ರಣಾಧಿಕಾರವೂ ಅವರಿಗೇ ಒಪ್ಪಿಸಲ್ಪಟ್ಟಿತು. ಇಂಥ ಸಮಯಕ್ಕೆ ಜಪಾನದ ಮೇಲೆಯೂ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳು ತಮ್ಮ ವರ್ಚಸ್ಸನ್ನು ಹೇರಿ ಅಲ್ಲಿಯ ವ್ಯಾಪಾರವನ್ನು ಆಕ್ರಮಿಸಿಕೊಂಡವು. ಮತ್ತು ಅಮೇರಿಕಾ ಬ್ರಿಟಿನ್ ಫ್ರಾನ್ಸ ಡಚ್ ಹಡಗುಪಡೆಗಳ ಸಂಯುಕ್ತಬಲದಿಂದ ಶಿಮಾನೆಸಾಕಿ ಎಂಬ ಜಪಾನರ ಬಂದರವನ್ನು ವಶಪಡಿಸಿಕೊಂಡರು. ಜಪಾನದಲ್ಲಿ ಪರದೇಶದವರ ಪ್ರವೇಶವಾಯಿತು.

ಹೀಗೆ ಜಪಾನದಲ್ಲಿಯೂ ಚೀನದಲ್ಲಿಯೂ ಪರದೇಶದವರ ಪ್ರವೇಶವಾಯಿತು. ಚೀನದ ಸ್ವಸಂತುಷ್ಟ ತತ್ವಾನುಸರಣೆಯ ಮನೋವೃತ್ತಿಯ ಮೂಲಕವಾಗಿ ೧೯೧೧ ನೆಯ ಇಸ್ವಿಯಲ್ಲಾದ ಕ್ರಾಂತಿಯ ಕಾಲದ ವರೆಗೂ ಆ ದೇಶದಲ್ಲಿ ಹೇಳತಕ್ಕ ಪ್ರಾಗತಿಕ ಬದಲಾವಣೆಯೇನೂ ಆಗಲಿಲ್ಲ. ಆದರೆ ಜಪಾನದ ಮಾತು ಬೇರಾಯಿತು. ಅದು ಯುರೋಪದ ಪ್ರಾಗತಿಕ ರಾಷ್ಟ್ರಗಳನ್ನು ಬಹು ತೀವ್ರವಾಗಿ ಅನುಕರಣೆಮಾಡಿತು. ೧೮೬೮ ರಿಂದ ೧೯೧೧ ರ ವರೆಗಿನ ೫೦ ವರ್ಷಗಳ ಅವಧಿಯಲ್ಲಿ ಜಪಾನವು ಚೀನಕ್ಕಿಂತ ಬಹುದೂರ ಮುಂದೆಸಾಗಿ ಬಹುವಿಧದಿಂದ ಸುಧಾರಿಸಿದ ರಾಷ್ಟ್ರವೆನ್ನಿಸಿಕೊಂಡಿತು. ಚೀನವು ಪ್ರಪಂಚದ ಪ್ರಗತಿಪಥದಲ್ಲಿ ಜಪಾನಕ್ಕಿಂತ ೫೦ ವರ್ಷ ಹಿಂದೆ ಉಳಿದುಬಿಟ್ಟಿತು. ಹಿಂದಿನಕಾಲದಲ್ಲಿ ಯಾವ ದೊಂದು ದೇಶದ ಬೇಡಿಕೆಯೂ ಅಷ್ಟೇ ಕಡಿಮೆಯಾಗಿದ್ದಿತು ; ಆ ಮಾನದಿಂದ ಪೂರೈಕೆಯ ಆವಶ್ಯಕತೆಯೂ ಇರಲಿಲ್ಲ. ಇದರಿಂದ ಸ್ವಸಂತುಷ್ಟ ರಾಷ್ಟ್ರವಾದ ಚೀನವು ತನ್ನ ಉದ್ಧಾರಕ್ಕಾಗಿ ಅಷ್ಟು ಆತುರವಾಗಿರಲಿಲ್ಲ. ಮೇಲಾಗಿ ಇಷ್ಟರಲ್ಲಿಯೇ ಎಚ್ಚತ್ತು ಪರಾಕ್ರಮಣಶೀಲವಾದ ಜಪಾನವು ಚೀನವನ್ನು ಹತ್ತಿಕ್ಕಿ ತಾನು ಮುಂದೆ ಸರಿಯುವ ಸಿದ್ಧತೆ ನಡೆಯಿಸಿಬಿಟ್ಟಿತು.

ಜಪಾನವು **ಕೋರಿಯಾ, ಮಂಚೂರಿಯಾ, ಮಂಚೂಕೂವೊ** ಮೊದಲಾದ ಪ್ರದೇಶಗಳಲ್ಲಿ ಕ್ರಮಕ್ರಮವಾಗಿ ಕಾಲುಚಾಚಿ, ಒಳನುಗ್ಗಿ, ರಾಜಕೀಯ ತಂತ್ರಗಳನ್ನು ನಡೆಯಿಸಿ, ಸೈನ್ಯಬಲವನ್ನು ಉಪಯೋಗಿಸಿ, ಇನ್ನೂ ಹಲವುಬಗೆಯ ಯೋಗ್ಯಾಯೋಗ್ಯ ಸಾಧನಗಳನ್ನು ಪಯೋಗಿಸಿ, ಚೀನ ರಶಿಯಾಗಳ ಗಡಿಯನ್ನು ದಾಟಿ, ತನ್ನ ರಾಜ್ಯಪ್ರಸಾರ ಮಾಡುತ್ತ ನಡೆಯಿಸಿತು. ೧೯೧೪ರ ಮಹಾಯುದ್ಧವೂ ಚೀನ ರಶಿಯಾ ಗ್ರೇಟಬ್ರಿಟನ್ ಅಮೇರಿಕಾಗಳ ಅಂತಸ್ಥ ಪರಿಸ್ಥಿಯೂ ಜಪಾನಕ್ಕೆ ಈ ಕಾರ್ಯಕ್ಕೆ ಅನುಕೂಲವಾದವು. ಮಹಾಯುದ್ಧದ ತರುವಾಯ ೧೯೨೨ರಲ್ಲಿ ವಾಶಿಂಗ್ಟನ್ನಿನಲ್ಲಿ ಕೂಡಿದ ಕಾನ್‌ಫರೆನ್ಸಿನಲ್ಲಾದ ನಿರ್ಣಯಗಳಿಂದ ಜಪಾನದ ಪರಾಕ್ರಮಣದ ಧೋರಣೆಗೆ ಇನ್ನಿಷ್ಟು ಪ್ರೋತ್ಸಾಹನೆ ದೊರೆಯಿತು. ಗ್ರೇಟಬ್ರಿಟನ್ನವೂ

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳೂ ಮನಸ್ಸಿಲ್ಲದಿದ್ದರೂ ಬಹಿರಂಗದಲ್ಲಿ ಜಪಾನದ ಧೋರಣೆಯನ್ನು ಎದುರಿಸಲಾರದೆ ಹೋದುವು. ೧೮೯೪ ರ ವರೆಗೂ ಜಪಾನವು ತನಗೆ ಕೋರಿಯಾವೊಂದು ಸಿಕ್ಕರೆ ಸಾಕೆಂದೂ ಮಂಚೂರಿಯಾವನ್ನು ರಶಿಯಾಕ್ಕೆ ಬಿಟ್ಟುಕೊಡುವೆನೆಂದೂ ಹೇಳಿತು. ಆದರೆ ೧೮೯೪ ರ ಸಿನೋ ಜಪಾನಿ ಯುದ್ಧದ ತರುವಾಯ ಅದು ಆ ಧೋರಣೆಯನ್ನು ಬದಲಿಸಿ ಮಂಚೂರಿಯಾವನ್ನು ನುಂಗಿಯೇ ಬಿಡಬೇಕೆಂದು ನಿರ್ಧರಿಸಿತು. ಆಧುನಿಕ ಸುಧಾರಣೆಯ ಕಾಲದಲ್ಲಿ ಒಂದು ದೇಶವು ಇನ್ನೊಂದು ದೇಶವನ್ನು ಆಕ್ರಮಿಸಲು ಯತ್ನಿಸುವಾಗ ಜಗತ್ತಿನ ಮುಂದೆ ಇಲ್ಲದ್ದೊಂದು ರಾಜನೀತಿಯ ತತ್ವವನ್ನು ಮುಂದೆ ಮಾಡುವುದುಂಟು. ಜರ್ಮನಿಯು ಮೊದಲು ಶ್ಲೇಸ್ವಿಗ್-ಹೋಲ್ಸ್ಟೀನಿಯಾವನ್ನು ಸಂರಕ್ಷಿಸುವದಕ್ಕಾಗಿ ಯುದ್ಧ ಹೂಡುವೆನೆಂದು ಹೇಳಿತು. ಅದು ಈಗ ಯುರೋಪಿನಲ್ಲಿ ಹೊಸರಾಜ್ಯಘಟನೆ ಗಳನ್ನು ಪ್ರಚಾರದಲ್ಲಿ ತರುವೆನೆಂಬ ಆಡಂಬರದ ಮಾತುಗಳನ್ನು ಆಡುತ್ತಿದೆ. ಇದೇ ರೀತಿಯಾಗಿ ಐದಾರು ವರ್ಷಗಳ ಹಿಂದೆ ಜಪಾನವು ಚೀನದೊಡನೆ ಯುದ್ಧ ಹೂಡಿ ದಾಗ ಪೂರ್ವ ಏಶಿಯಾದ ಹೊಸವ್ಯವಸ್ಥೆಯೇ ತನ್ನ ಗುರಿಯೆಂದು ಸಾರಿತು. ಇವೆಲ್ಲ ವಿಚಾರಗಳನ್ನು ಸವಿಸ್ತಾರವಾಗಿ ವಿವೇಚಿಸಲು ಇಲ್ಲಿ ಅನುವಿಲ್ಲ. ಮುಖ್ಯವಾಗಿ, ಭವಿಷ್ಯದಲ್ಲಿ ಜಪಾನಕ್ಕೆ ಚೀನದ ಹೆದರಿಕೆಯು ತಪ್ಪಿದ್ದಲ್ಲವೆಂಬುದನ್ನು ಜಪಾನಿಗಳು ಅರಿತು ಅವರಲ್ಲಿ ಇನ್ನೂ ತಕ್ಕ ಸಿದ್ಧತೆ ಇಲ್ಲದಿರುವಾಗಲೆ ಆ ರಾಷ್ಟ್ರವನ್ನು ಬಗ್ಗುಬಡಿದು ಬಿಡಬೇಕೆಂಬ ಧೋರಣೆಯಿಂದ ಮೊದಲು ಯುದ್ಧವನ್ನು ಹೂಡಿತು.

ಅತ್ತ ಉತ್ತರದಲ್ಲಿ ಚೀನದೊಡನೆ ಹೂಡಿದ ಯುದ್ಧದಲ್ಲಿ ಜಪಾನೀ ಭೂಸೈನ್ಯಕ್ಕೆ ಜಯ ದೊರೆಯದಿರುವಾಗಲೇ ಜಪಾನದ ಹಡಗುಪಡೆಗೆ ದಕ್ಷಿಣದಲ್ಲಿ ಹಬ್ಬಿರುವ ದ್ವೀಪ ಸಮುದಾಯಗಳನ್ನು ವಶಪಡಿಸಿಕೊಳ್ಳುವ ಆತುರತೆ ಹುಟ್ಟಿತು. ೧೯೪೦ ರಿಂದ ಅವರ ಈ ಧೋರಣೆಯು ಜಗತ್ತಿನ ನಿದರ್ಶನಕ್ಕೆ ಬಂದಿತು.

ಗ್ರೇಟ್‌ಬ್ರಿಟನ್ನವು ಜರ್ಮನಿಯೊಡನೆ ಯುದ್ಧಹೂಡಿದಾಗ ಇತ್ತ ಜಪಾನಕ್ಕೆ ಸುವರ್ಣಸಂಧಿಯೊದಗಿತು. ಇಂಗ್ಲಿಷ ಸೈನ್ಯವು ಡಂಕರ್ಕಿನಿಂದ ಹಿಂದಿರುಗುವಾಗಲೇ ಜಪಾನವು ಎಲ್ಲಿ ಯುದ್ಧ ಸಾರುವದೋ ಎಂಬ ಧೋರಣೆಯುಂಟಾಗಿದ್ದಿತು. ಆದರೆ ಅದು ತುಸು ಮುಂದೆ ಸರಿಯಿತು. ಇದಕ್ಕೇನು ಕಾರಣವಾಯಿತೋ ನಿಶ್ಚಿತವಾಗಿ ತಿಳಿ ಯಲಿಲ್ಲ. ಬಹುಶಃ ಜಪಾನೀ ರಾಜಕೀಯ ಮುಂದಾಳುಗಳ ಏಕಾಭಿಪ್ರಾಯವಿಲ್ಲದಿರು ವುದೇ ಮುಖ್ಯ ಕಾರಣವೆಂದು ಊಹಿಸಲಾಗಿದೆ. ಜಪಾನಕ್ಕೆ ೧೯೪೦ ರಲ್ಲಿರುವಷ್ಟು ಅನುಕೂಲತೆಯು ೧೯೪೧ ರಲ್ಲಿ ಇರಲಿಲ್ಲ. ಯಾಕೆಂದರೆ, ಅಮೇರಿಕೆಯು ಜಪಾನದ ಧೋರಣೆಯನ್ನು ಮನಗಂಡು ತನ್ನ ಭೂಸೈನ್ಯ ವಿಮಾನಬಲ ಹಡಗುಪಡೆಗಳನ್ನು

ಹೆಚ್ಚಿಸತೊಡಗಿತ್ತು. ೧೯೪೧ ರಲ್ಲಿರುವಷ್ಟು ಸುಯೋಗವು ಕೂಡ ೧೯೪೨ ರಲ್ಲಿ ಕಂಡುಬರಲಿಲ್ಲ. ಇದನ್ನೆಲ್ಲ ಅರಿತು ಜಪಾನವು 'ಆದರೆ ಈಗ ಆಗಬೇಕು. ಇಲ್ಲವಾದರೆ ಎಂದೂ ಆಗಲಿಕ್ಕಿಲ್ಲವೆಂಬ' ವಿಚಾರವನ್ನು ಖಂಡಿತವಾಗಿ ತಿಳಿದುಕೊಂಡು ೧೯೪೧ ನೆಯ ಸಾಲಿನ ಕೊನೆಯ ಭಾಗದಲ್ಲಿ ಇಂಗ್ಲಂಡ ಅಮೇರಿಕೆಗಳ ವಿರುದ್ಧ ಒಮ್ಮೆಲೆ ಯುದ್ಧ ಸಾರಿತು.

ಜಪಾನವು ಪೂರ್ವ ಏಶಿಯದಲ್ಲಿ ರಾಜಕೀಯ ಸುವ್ಯವಸ್ಥೆಯನ್ನು ನೆಲೆಗೊಳಿಸುವದಕ್ಕೆ ಹವಣಿಸುವುದೆಂದು ಹೇಳುವುದುಂಟು. ಇದರಲ್ಲಿ ತಥ್ಯಾಂಶವೇನೂ ಇಲ್ಲ. ಜಪಾನವು ತನ್ನ ಸಾಮ್ರಾಜ್ಯತೃಷ್ಣೆಯ ತೃಪ್ತಿಗಾಗಿಯೇ ಈ ಕಾರ್ಯದಲ್ಲಿ ತೊಡಗಿದೆಯಲ್ಲದೆ ಲೋಕಕಲ್ಯಾಣದ ಮಾತು ಕೇವಲ ಆಡಂಬರದ ಮಾತಲ್ಲದೆ ಬೇರೆಯೇನೂ ಇಲ್ಲ.

ನೆದರ್ಲಂಡ್, ಈಸ್ಟ ಇಂಡಿಯನ್ ದ್ವೀಪಗಳು, ಮಲಾಯಾ, ಫಿಲಿಪಾಯಿನ್ ದ್ವೀಪಗಳು, ಇವು ಒಂದಕ್ಕೊಂದು ಹೊಂದಿಕೊಳ್ಳಬಹುದಾದ ಪ್ರಾಕೃತಿಕ ಸಹಕಾರವುಳ್ಳ ಪ್ರದೇಶಗಳೆಂಬದು ನಕಾಶೆಯನ್ನು ನೋಡುವದರಿಂದ ಗೊತ್ತಾಗಬಹುದು. ಮತ್ತು ಕಲ್ಲೆಣ್ಣೆ, ರಬ್ಬರು, ತವರ, ಇವು ಈ ಪ್ರದೇಶದ ಅತಿ ಮಹತ್ವದ ಹುಟ್ಟುವಳಿಗಳು. ಜಪಾನಕ್ಕೆ ಇವುಗಳ ಪೂರೈಕೆಯ ಆವಶ್ಯಕತೆಯಿದೆ. ಅಂತೂ ಜಪಾನವು ಈ ಪ್ರದೇಶವನ್ನು ಕೈವಶಮಾಡಿಕೊಳ್ಳಲು ಬಹುದಿನಗಳಿಂದಲೂ ಹವಣಿಸುತ್ತಿದ್ದಿತು. ಆದರೆ ಮನಸ್ಸಿನೊಳಗಿನ ಈ ಮಾತನ್ನು ಕೃತಿಯಲ್ಲಿ ತರುವದು ಅಷ್ಟು ಸುಲಭವಾಗಿರಲಿಲ್ಲ. ಯಾಕಂದರೆ ಇವು ಜಪಾನದ ಮುಖ್ಯ ನೌಕಾಕೇಂದ್ರಗಳಿಂದ ತುಸು ಹೆಚ್ಚು ಕಡಿಮೆ ೩ ಸಾವಿರ ಮೈಲು ದೂರದಲ್ಲಿವೆ. ಮೇಲಾಗಿ ವಿರೋಧಿಗಳ ನೌಕಾಕೇಂದ್ರಗಳಾದ ಸಿಂಗಾಪುರ ಅಂಬೋಯನಾಗಳು ನೆದರ್ಲಂಡ ಈಸ್ಟ ಇಂಡಿಯನ್ ದ್ವೀಪಗಳಿಗೆ ತೀರ ಸಮೀಪದಲ್ಲಿವೆ. ಆದುದರಿಂದ ಜಪಾನವು ಇಂಡೋಚಾಯನಾ ಫ್ಯೆಲಂಡಗಳನ್ನು ಮೊದಲು ವಶಪಡಿಸಿಕೊಳ್ಳಲು ಹವಣಿಸಿತು. ಅಚ್ಚಿನ ರಾಷ್ಟ್ರಗಳ 'ನಮಗೆ ಬೇಕಾದುದನ್ನೆಲ್ಲ ತೆಗೆದುಕೊಂಡೇ ಬಿಡುವೆ'ಎಂಬ ತತ್ವವನ್ನು ಜಪಾನವು ಮರೆಯಲಿಲ್ಲ.

ನಾಯ್ಸಿಗಳು ಫ್ರಾನ್ಸನ್ನು ಆಕ್ರಮಿಸಿಕೊಂಡಬಳಿಕ ವಿಚಿ ಸರಕಾರದ ಸಹಾಯದಿಂದ ಜಪಾನಿಗಳು ೧೯೪೧ರ ಆಗಸ್ಟ ತಿಂಗಳಲ್ಲಿ ಇಂಡೋಚಾಯನಾದಲ್ಲಿ ಸುಲಭವಾಗಿ ಪ್ರವೇಶಿಸಿದರು; ಮತ್ತು ಇಂಡೊಚಾಯಿನಾದೊಳಗಿನ ನೌಕಾಕೇಂದ್ರಗಳನ್ನೂ ವಿಮಾನದ ನಿಲ್ದಾಣಗಳನ್ನೂ ಆಕ್ರಮಿಸಿಕೊಂಡು ಅಲ್ಲಿ ಒಮ್ಮೆಲೆ ೪೦ ಸಾವಿರ ಸೈನ್ಯವನ್ನು ಸಂಗ್ರಹಿಸಿದರು.

ಒಟ್ಟಿನಮೇಲೆ ಫ್ರಾನ್ಸಿನ ಪತನವಾದಂದಿನಿಂದಲೂ ಜಪಾನವು ಅತಿಪೂರ್ವದ ಏಶಿಯಾಖಂಡವನ್ನೆಲ್ಲ ಆಕ್ರಮಿಸಿಕೊಂಡೇ ಬಿಡುವೆನೆಂದು ನಿರ್ಣಯಿಸಿತು. ಸಾಧ್ಯವಾದರೆ ಪ್ರತ್ಯಕ್ಷ ಯುದ್ಧವನ್ನು ಹೂಡದೆಯೆ ಇದನ್ನು ಆಕ್ರಮಿಸಿಕೊಳ್ಳುವ ಬಯಕೆಯಿಂದ ಅದು ತಕ್ಕ ಪ್ರಯತ್ನವೂಡಿ ನೋಡಿತು. ಬ್ರಿಟನ್ ಅಮೇರಿಕೆಗಳ ನಡುವೆ ಕಡ್ಡಿಯನ್ನು ಕೊರೆದು ಹಚ್ಚುವದಕ್ಕಾಗಿ ಯತ್ನಿಸಿತು. ೧೯೪೧ ನೆಯ ಇಸ್ವಿಯ ಕೊನೆಗೆ ಇದಾವ ಯುಕ್ತಿಯೂ ಫಲಿಸಲಾರದೆಂಬದು ಸಿದ್ಧವಾಯಿತು. ಜಪಾನದ ವಿಷಯಕ್ಕೆ ಅಮೇರಿಕೆಯ ಸಂಯುಕ್ತ ಸಂಸ್ಥಾನದವರ ಮನಸ್ಸಿನಲ್ಲಿದ್ದ ಸದ್ಭಾವವು ಆಳಿದುಹೋಯಿತು. ಡಚ್ ಸರಕಾರವೂ ಜಪಾನಕ್ಕೆ ಅನುಕೂಲವಾದ ಹೊಸ ಆರ್ಥಿಕಯೋಜನೆಗೆ ಒಪ್ಪಲಿಲ್ಲ. ಥಾಯಿಲಂಡವೂ ಜಪಾನದ ಅಂತಸ್ಥಹೇತುವನ್ನು ಕಂಡುಕೊಂಡು ಅದರ ತಾಳಕ್ಕೆ ಮೇಳವಾಗಿ ಕುಣಿಯಲು ಒಪ್ಪದಾಯಿತು. ಜಪಾನಕ್ಕೆ 'ಯುದ್ಧ ಹೂಡಬೇಕು; ಇಲ್ಲವೆ ಮನಸ್ಸಿನಲ್ಲಿಯೆ ಮುಂಡಿಗೆ ಮೆಲ್ಲುವದನ್ನು ನಿಲ್ಲಿಸಬೇಕು' ಎಂಬಂತಾಗಿಬಿಟ್ಟಿತು. ರಶಿಯದ ಇರುಕಿನಲ್ಲಿ ಸಿಕ್ಕ ಜರ್ಮನಿಯೂ ಕೂಡ ಜಪಾನವನ್ನು ರಣರಂಗಕ್ಕೆ ಎಳೆಯಲು ಸಾಹಸಪಟ್ಟಿತು.

ಜಪಾನವು ಯುದ್ಧ ಹೂಡುವದೆಂಬ ಬಗ್ಗೆ ಯಾವ ಸಂಶಯವೂ ಇರಲಿಲ್ಲ. ಅದು ಬಹುಕಾಲದಿಂದಲೂ ಅನುಕೂಲ ಸಮಯವನ್ನು ಇದಿರುನೋಡುತ್ತಲಿದ್ದಿತು. ಪಶ್ಚಿಮದಲ್ಲಿ ನಾಝಿಗಳು ಯತ್ನಿಸುವಂತೆ ಪೂರ್ವದಲ್ಲಿ ಜಪಾನವು ಜಗತ್ತನ್ನೆಲ್ಲ ಪಾದಾಕ್ರಾಂತಮಾಡಿ ತಾವು ಸರ್ವತಂತ್ರಸ್ವತಂತ್ರ ರಾಷ್ಟ್ರವಾಗಬೇಕೆನ್ನುವ ಹವಣಿಕೆಯಲ್ಲಿರುವದು ಜಗತ್ತಿನ ನಿದರ್ಶನಕ್ಕೆ ಬಂದುಹೋಗಿದೆ. ಜಪಾನವು ಕೋರಿಯಾ ಮಂಚೂರಿಯಾ ಚೀನ ಇಂಡೋಚಾಯನಾಗಳಲ್ಲಿ ನಡೆಯಿಸಿದ ತಂತ್ರಗಳನ್ನು ನೋಡಿರಿ. ಅದು ಹೇಳುವ ಆರ್ಥಿಕಸುಧಾರಣೆಯ ಯೋಜನೆಯನ್ನು ಲಕ್ಷಿಸಿರಿ. ಪಶ್ಚಿಮದಲ್ಲಿ ಜರ್ಮನಿಯು ಇತಲಿಯನ್ನು ತನ್ನ ಬಗಲಗೂಸಾಗಿಟ್ಟುಕೊಂಡು ಇಡಿಯ ಯುರೋಪವನ್ನೆ ಆಕ್ರಮಿಸಲು ಹವಣಿಸುತ್ತಿದೆ. ಪೂರ್ವದಲ್ಲಿ ಜಪಾನವು ಪೂರ್ವ ಏಶಿಯದ ದ್ವೀಪಸಮೂಹಗಳನ್ನೆಲ್ಲವನ್ನೂ ದಕ್ಷಿಣದಲ್ಲಿ ಆಸ್ಟ್ರೇಲಿಯಾ ನ್ಯೂಝೀಲಂಡಗಳನ್ನೂ ಪಶ್ಚಿಮದ ಥಾಯಿಲಂಡ ಬ್ರಹ್ಮದೇಶಗಳನ್ನೂ ಆಕ್ರಮಿಸಲು ಹವಣಿಸುತ್ತಿದೆ. ಒಂದು ವೇಳೆ ಈ ಅಚ್ಚಿನ ರಾಷ್ಟ್ರಗಳು ಜಯಶಾಲಿಗಳಾಗಿ ಅವರ ಬಯಕೆಯು ಈಡೇರಿದರೆ ಹಿಂದುಸ್ತಾನವು ಬಹುಶಃ ಜಪಾನದ ಪಾಲಿಗೆ ಹೋಗುವ ಸಂಭವವುಂಟು.

(ಮುಂದೆಸಾಗುವದು.)

ವೈಮಾನಿಕ ಹಲ್ಲೆಯಿಂದ ತಮ್ಮ ರಕ್ಷಣೆ ಮಾಡಿಕೊಳ್ಳುವ ವಿಷಯದಲ್ಲಿ ಮನೆಯ ಯಜಮಾನರಿಗೂ ಸಾರ್ವಜನಿಕರಿಗೂ ಸೂಚನೆಗಳು

ಮೊದಲಿಗೆ ನಿಮ್ಮ ಇಮಾರತಿನ ಹಾಗೂ ಓಣಿಯ ವಾರ್ಡನ್ನರು ಯಾರಿರುತ್ತಾರಂಬದನ್ನು ಗೊತ್ತುಮಾಡಿಕೊಳ್ಳಿರಿ. ಯಾಕೆಂದರೆ, ಅವರು ನಿಮ್ಮ ಗುರ್ತುಮಾಡಿಕೊಂಡು ಸಧ್ಯದಲ್ಲಿಯೂ ಮುಂದೆ ಹೆಚ್ಚಿಗೆ ಗಂಭೀರ ಪರಿಸ್ಥಿತಿಗಳು ಉಂಟಾದ ಕಾಲದಲ್ಲಿಯೂ ನಿಮಗೆ ಅವರು ಸಹಾಯ ಮಾಡಬೇಕಾಗಿರುತ್ತದೆ.

ಕೆಳಗಿನ ಸಂಗತಿಗಳನ್ನು ಲಕ್ಷ್ಯದಲ್ಲಿಡಿರಿ—

ಹಲ್ಲೆಯ ಪೂರ್ವದಲ್ಲಿ

(೧) ನಿಮ್ಮ ವ್ಯವಸಾಯವನ್ನೂ ಮನೆಗೆಲಸಗಳನ್ನೂ ವಾಡಿಕೆಯಂತೆ ಸಾಗಿಸಿರಿ.

(೨) ಕೆಲಸವನ್ನು ನಿಲ್ಲಿಸಬೇಡಿರಿ.

(೩) ಹಾರಸುದ್ದಿಗಳಿಗೆ ಕಿವಿಗೊಡಬೇಡಿರಿ ಅಥವಾ ಜನರ ಗುಂಪುಗಳು ಕೂಡಿದರೆ ಅಲ್ಲಿ ಹೋಗಿ ಸೇರಬೇಡಿರಿ.

(೪) ನಿಮ್ಮ ಆಹಾರದ ಮೇಲೆ ಯಾವದಾದರೊಂದು ಮುಚ್ಚಳಿಕೆಯನ್ನು ಹಾಕಿಟ್ಟು ಅದನ್ನು ಸಂರಕ್ಷಿಸಿರಿ. ಇದಕ್ಕಿಂತಲೂ ಹೆಚ್ಚಿಗೆ ಒಳಿತಾದ ಉಪಾಯವೆಂದರೆ, ಆಹಾರದ ಎಲ್ಲ ಪದಾರ್ಥಗಳನ್ನು ಮುಚ್ಚಳಿಕೆಗಳುಳ್ಳ ಪಾತ್ರೆಗಳಲ್ಲಿ ಹಾಕಿ ಅವುಗಳ ಮೇಲೆ ಮುಚ್ಚಳಿಕೆಗಳನ್ನು ಹಾಕಿಡಿರಿ. ಮುಚ್ಚಳಿಕೆಗಳು ಸರಿದು ಬೀಳದಂತೆ ಮಾಡುವದಕ್ಕಾಗಿ ಅವುಗಳ ಮೇಲೆ ಒಜ್ಜೆಗಳನ್ನು ಹೇರಿಡಿರಿ, ಯಾಕೆಂದರೆ, ಕಾಜಿನ ತುಣುಕುಗಳು ಹಾರಿಬಂದು ಆಹಾರದಲ್ಲಿ ಕೂಡಿಕೊಂಡರೆ ಆ ಆಹಾರವು ಅಪಾಯಕರವಿರುತ್ತದೆ ಮತ್ತು ಇಂಥ ಆಹಾರವನ್ನು ಯಾವದೇ ಕಾರಣದಿಂದ ಉಪಯೋಗಿಸತಕ್ಕದ್ದಲ್ಲ.

(೫) ಕುಡಿಯುವ ನೀರನ್ನು ಸುಲಭವಾಗಿ ಕೈಗೆ ದೊರಕುವಂತೆಯೂ ಕೆಡದಂತೆಯೂ ಇಡಿರಿ. ಬೆಂಕಿಗಳನ್ನು ನಂದಿಸಲಿಕ್ಕೆ ತತ್ಕಾಲಕ್ಕೆ ಉಪಯೋಗಿಸ

ಲಿಕ್ಕೆ ಬರುವಹಾಗೆ ನಿಮ್ಮ ಹತ್ತರಿದ್ದ ಯಾವತ್ತು ಪಾತ್ರೆಗಳಲ್ಲಿ ನೀರನ್ನು ತುಂಬಿಡಿರಿ.

ಹಲ್ಲೆಯು ನಡೆದಾಗ

ಭಯಸೂಚಕ ಸೂಚನೆಯನ್ನು ನೀವು ಕೇಳಿದಾಕ್ಷಣಕ್ಕೆ—

(೧) ಮನೆಯೊಳಗೆ ಉಳಿಯಿರಿ. ನೀವು ಮನೆಬಿಟ್ಟು ಹೊರಗೆ ಹೋಗತಕ್ಕದ್ದಲ್ಲ; ಮತ್ತು ನೀವು ಹಾಗೆ ಹೊರಗೆ ಹೋದರೆ ಅದರಿಂದ ನಿಮಗೆ ಅಪಾಯವಿದೆ.

(೨) ನೀವು ಮನೆಯ ಹೊರಗೆ ಇದ್ದರೆ, ಎಲ್ಲಕ್ಕೂ ಸಮೀಪದಲ್ಲಿರುವ ಇಮಾರತಿನೊಳಗೆ ಹೋಗಿರಿ ಮತ್ತು ಅಲ್ಲಿಯೇ ಉಳಿಯಿರಿ.

ನೀವು ಮನೆಯ ಹೊರಗೆ ಉಳಿಯಕೂಡದು.

ನೀವಿದ್ದ ಸ್ಥಳದಲ್ಲಿರುವ ವಾರ್ಡನ್ನನ ಸಲಹೆಯನ್ನು ಕೇಳಿರಿ.

(೩) ಮನೆಯೊಳಗೆ ಎಲ್ಲಕ್ಕೂ ಹೆಚ್ಚು ಸುರಕ್ಷಿತವಾದ ಸ್ಥಳವೆಂದರೆ ಕೆಳಮಜಲಿನಲ್ಲಿ ಹೆಚ್ಚಾಗಿ ಒಳಗಿರುವ ಕೋಣೆಯು, ಅದರಲ್ಲಿಯೂ ರಸ್ತೆಯು ಕಾಣುವಂತೆ ಕಿಡಿಕಿಗಳು ಇರದಂಥ ಕೋಣೆಯು ಹೆಚ್ಚು ಸುರಕ್ಷಿತವಾದದ್ದು.

(೪) ಯಾವದಾದರೊಂದು ಮೆತ್ತಗಿನ ವಸ್ತುವಿನ (ಕುರ್ಚಿ, ಕೋಚು, ಲೋಡುಗಳ) ಮೇಲೆ ಅಡ್ಡಾಗಿರಿ ಅಥವಾ ಕುಳಿತುಕೊಳ್ಳಿರಿ.

ಗೋಡೆಗಳಿಗೆ ಆತುಕೊಳ್ಳಬೇಡಿರಿ. ಕಿಡಿಕಿಗಳಿಂದ ದೂರವಾಗಿ ಇರ್ರಿ; ಹಾರಿಬರುವ ಕಾಜಿನಿಂದ ಮರಣವ್ರುಂಟಾಗಬಹುದು.

(೫) ಕಿಡಿಕಿಗಳನ್ನು ತೆರೆದು ಇಡಿರಿ; ಆದರೆ ವಿಷವಾಯುವಿನ ಸಂಬಂಧದ ಭಯಸೂಚಕ ಗಂಟೆಯು (ಕೈಗಿರಕೆಯ ಸಪ್ಪಳವು) ನಿಮಗೆ ಕೇಳಬಂದರೆ ಕಿಡಿಕಿಗಳತ್ನು ಮುಚ್ಚಿರಿ. ಕೈಗಿರಕೆಯ ಸಪ್ಪಳವನ್ನು ಕೇಳಿದಾಕ್ಷಣಕ್ಕೆ ಯಾವತ್ತು ಭಾಗಿಲುಗಳನ್ನೂ, ಕಿಡಿಕಿಗಳನ್ನೂ ಮುಚ್ಚಿರಿ ಮತ್ತು ತೆರೆದಿದ್ದ ಯಾವತ್ತು ತೂತುಗಳನ್ನೂ ಸಂದಿಗಳನ್ನೂ ಕಾಗದದಿಂದಾಗಲಿ ಚಿಂದಿಯ ತುಣುಕುಗಳಿಂದಾಗಲಿ ಬಂದವಾಡಿರಿ. ಈ ಕೆಲಸದ ಸಲುವಾಗಿ ಉಣ್ಣೆಯ ಕಂಬಳಿ ಬ್ಲಾಂಕೇಟುಗಳು ಬಹಳೇ ಉಪಯುಕ್ತವಾಗಿರುತ್ತವೆ.

(೬) ನಿಮ್ಮ ಗ್ಯಾಸ ಮೀಟರನ್ನು ಬಂದವಾಡಿರಿ. ಯಾವತ್ತು ಬೆಂಕಿಗಳನ್ನು ಬೆಂಕಿ ಇರುವ ಒಲೆಗಳನ್ನು ಮತ್ತು ಆಚ್ಛಾದನೆ ಇರದಿದ್ದ ದೀಪ-

ಗಳನ್ನು (ಈ ದೀಪಗಳು ಧಾರ್ಮಿಕ ಅಥವಾ ಸಾಂಕೇತಿಕ ಸ್ವರೂಪದ ವಿದ್ದಾಗ್ಯೂ) ಆರಿಸಿರಿ.

(೭) ಬೆಂಕಿಗಳು ಸ್ಥಿರವಾಗಿ ಹಬ್ಬುವದಕ್ಕಿಂತ ಮೊದಲೇ ಅವುಗಳನ್ನು ಆರಿಸಲಿಕ್ಕೆ ಪ್ರಾರಂಭಿಸಿರಿ; ಇದರ ಸಲುವಾಗಿ ನೀವು ನೀರನ್ನು ಸುಲಭವಾಗಿ ಕೈಗೆ ದೊರಕುವಂತೆ ಇಟ್ಟಿದ್ದೀರಿ.

(೮) ಅಪಘಾತ ಮರಣಗಳಾದರೆ ಅಥವಾ ಆಸ್ತಿಗೆ ನಷ್ಟವುಂಟಾದರೆ, ನಿಮ್ಮ ಇಮಾರತಿನ ವಾರ್ಡನ್ನನಿಗೆ ಅಥವಾ ಪೋಲೀಸರಿಗೆ ಅಥವಾ ಸಿವ್ಹಿಕ್ ಗಾರ್ಡನಿಗೆ ಕೂಡಲೆ ತಿಳಿಸಿರಿ.

ಹಲ್ಲೆಯು ಮುಗಿದ ನಂತರ

"ಎಲ್ಲವೂ ಸುರಕ್ಷಿತ"ವೆಂಬ ಗಂಟೆಯನ್ನು ಕೇಳಿದಾಕ್ಷಣಕ್ಕೆ—

(೧) ನೀವು ಪುನಃ ನಿಮ್ಮ ವಾಡಿಕೆಯ ಕೆಲಸಕ್ಕೆ ಹತ್ತಿರಿ.

(೨) ಜನರ ಗುಂಪುಗಳಲ್ಲಿ ಹೋಗಿ ಸೇರಬೇಡಿರಿ.

(೩) ನಷ್ಟವುಂಟಾದದ್ದನ್ನು ನೋಡಲಿಕ್ಕೆ ಹೋಗಬೇಡಿರಿ. ಎರಡನೇ ಯವರಿಗೆ ಉಂಟಾದ ಸಂಕಟಗಳು ನೀವು ನೋಡತಕ್ಕ ತಮಾಶೆಯಾಗಿರುವದಿಲ್ಲ. ಮುಂದಿನ ಸಲ ನಿಮ್ಮ ಪಾಳಿ ಬರಬಹುದು. ಮತ್ತು ಆಗ್ಗೆ ಜರನು ನಿಮ್ಮನ್ನು ಕುತೂಹಲದಿಂದ ನೋಡುವದು ನಿಮಗೆ ಸರಿಬರಲಿಕ್ಕಿಲ್ಲ.

ವಿಷವಾಯು (ಗ್ಯಾಸು).

ವಿಷವಾಯು ಉಪಯೋಗಿಸಲ್ಪಡುವ ಸಂಭವವಿರುವದಿಲ್ಲ ಆದರೆ, ಉಪಯೋಗಿಸಲ್ಪಟ್ಟರೆ ಏನು ಮಾಡತಕ್ಕದ್ದೆಂಬದು ನಿಮಗೆ ಗೊತ್ತಿರಬೇಕು.

(೧) ವಿಷವಾಯುವಿನ ಭಯಸೂಚಕ ಗಂಟೆಯು ವಾರ್ಡನ್ನರಿಂದಲೂ ಪೋಲೀಸರಿಂದಲೂ ಕೈಗಿರಕಿಯನ್ನುಪಯೋಗಿಸಿ ಕೊಡಲ್ಪಡುವದು.

ಈ ಕೈಗಿರಕಿಯ ಸಪ್ಪಳವನ್ನು ಕೇಳಿದಾಕ್ಷಣಕ್ಕೆ ಯಾವತ್ತು ಬಾಗಿಲ ಗಳನ್ನೂ ಕಿಡಿಕಿಗಳನ್ನೂ ಮುಚ್ಚಿರಿ ಮತ್ತು ಯಾವೆತ್ತು ತೂತುಗಳನ್ನು ಕಾಗದ ದಿಂದಾಗಲಿ ಚಿಂದಿಯಿಂದಾಗಲಿ ಬಂದುಮಾಡಿರಿ. ಕಂಬಳಿ, ಬ್ಲಾಂಕೇಟುಗಳು ಕೈಗೆ ಸುಲಭವಾಗಿ ದೊರೆಯುವಂತಿದ್ದರೆ ಅವುಗಳನ್ನು ಉಪಯೋಗಿಸಿರಿ.

ಶಾಂತರಾಗಿರ್ರಿ, ನೀವು ಮಾಡುತ್ತಿದ್ದ ಕೆಲಸಗಳನ್ನು ಮಾಡಹತ್ತಿರಿ ಮತ್ತು "ಗ್ಯಾಸ್ ಕ್ಲಿಯರ್" (ವಿಷವಾಯುವಿನ ಬಾಧೆಯು ಮುಗಿಯಿತು) ಗಂಟೆಯು ಆಗುವ ವರೆಗೆ ದಾರಿ ಕಾಯರಿ.

(೨) "ಗ್ಯಾಸ್ ಕ್ಲೀಯರ್"ಗಂಟೆಯು ವಾರ್ಡನ್ನರಿಂದಲೂ ಪೋಲೀಸರಿಂದಲೂ ಕೈಗಂಟೆಗಳನ್ನು ಬಾರಿಸಿ ಕೊಡಲ್ಪಡುವದು.

ನೀವು ಈ ಗಂಟೆಗಳ ಸಪ್ಪಳವನ್ನು ಕೇಳಿದ ಕೂಡಲೆ ನೀವು ನಿಮ್ಮ ಬಾಗಿಲುಗಳನ್ನೂ ಕಿಡಿಕಿಗಳನ್ನೂ ತೆರೆಯಬಹುದು.

ಟೀಪು.— ವಿಷವಾಯು ಉಪಯೋಗಿಸಲ್ಪಟ್ಟಾಗಿನ ಹೊರ್ತು ಕಿಡಿಕಿಗಳನ್ನೂ ಕಾಜಿನ ಬಾಗಿಲುಗಳನ್ನೂ ತೆರೆದು ಇಡಿರಿ, ಯಾಕೆಂದರೆ ಹೀಗೆ ಮಾಡುವದರಿಂದ ಅವುಗಳೊಳಗಿನ ಕಾಜು ಒಡೆದು ಹಾರಿಬಂದು ನಿಮಗೆ ಗಾಯವನ್ನುಂಟುಮಾಡುವದಿಲ್ಲ.

ಯಾವಾಗಲೂ ಶಾಂತರಾಗಿರ್ರಿ; ಹಾಗೂ ಸಮಾಧಾನದಿಂದಿರ್ರಿ; ಮತ್ತು ನಿಮ್ಮನ್ನು ನೋಡಿ ಉಳಿದವರೂ ಹಾಗೆಯೇ ಮಾಡುವರು.

ಶತ್ರು ನಿಮ್ಮನ್ನು ಭಯಚಕಿತರನ್ನಾಗಿ ಮಾಡಬೇಕೆನ್ನುತ್ತಾನೆಂಬದನ್ನು ಲಕ್ಷ್ಯದಲ್ಲಿಡಿರಿ, ಆದ್ದರಿಂದ ಅವನನ್ನು ದುರ್ಲಕ್ಷ ಮಾಡಿ ಸೋಲಿಸಿರಿ.

ಲಕ್ಷ್ಯದಲ್ಲಿಡಬೇಕಾದ "ಭಯಸೂಚಕ ಸಂಜ್ಞೆಗಳು" ಕೆಳಗಿನಂತಿವೆ:—

(೧) ವೈಮಾನಿಕ ಹಲ್ಲೆಯ ಎಚ್ಚರಿಕೆಯು, ಸೈರನು (ಧ್ವನಿಯುತ್ಪಾದಕ ಯಂತ್ರ)ಗಳ ಮೇಲೆ ಏರುವ ಮತ್ತು ನಂತರ ಇಳಿಯುವ ಸ್ವರದಿಂದ ಎರಡು ನಿಮಿಟುಗಳ ವರೆಗೆ ನಡೆಯುವ ಧ್ವನಿಯು ಆಗಿರುತ್ತದೆ.

(೨) ಬೆಂಕಿ ಹಚ್ಚುವ ಬಾಂಬುಗಳು ಬೀಳಹತ್ತಿವೆ ಎಂಬ ಸಂಜ್ಞೆಯು ಸೀಳಿನ ಕೊಳಿವೆಯನ್ನು ನಡುವೆ ಸ್ವಲ್ಪ ಬಿಟ್ಟು ಬಿಟ್ಟು ಜೋರಾಗಿ ಊದುವದು ಆಗಿರುತ್ತದೆ.

(೩) ವಿಷವಾಯುವಿನ ಸಂಬಂಧದ ಭಯಸೂಚಕ ಗಂಟೆಯೆಂದರೆ ಕೈಗಿರಿಕಿಯು.

(೪) ಗ್ಯಾಸ್ ಕ್ಲಿಯರ್ (ವಿಷವಾಯುವಿನ ಬಾಧೆಯು ಮುಗಿಯಿತು) ಸಂಜ್ಞೆಯು ಕೈಗಂಟೆಯನ್ನು ಬಾರಿಸುವದು.

(೫) "ಎಲ್ಲವೂ ಸುರಕ್ಷಿತ" (ಅಂದರೆ ವೈಮಾನಿಕ ಹಲ್ಲೆಯು ಮುಗಿಯಿತು) ಎಂಬ ಸಂಜ್ಞೆಯೆಂದರೆ ಸೈರನ್ನಿನ ಮೇಲೆ ಒಂದೇ ಸವನೆ ಸ್ಥಿರವಾಗಿ ಎರಡು ನಿಮಿಟುಗಳ ವರೆಗೆ ನಡೆಯುವ ಧ್ವನಿಯು.

ಪ್ರಕಟನೆ

ಮೆ|| ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ನರವರ ೧೫೮೮/೩೬ D. ೬-೧೨-೧೯೩೧ ನೆಯ ನಂಬರಿನ ಹುಕುಮಿಗೆ ಅನುಸಾರವಾಗಿ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜದ ನಿಯಮಗಳಲ್ಲಿಯ ೪ (ಫ) ನಿಯಮವನ್ನು ಮುಂದೆ ಹೇಳುವಂತೆ ಬದಲಿಸಲಾಗಿದೆ; ಮತ್ತು ಅದಕ್ಕೆ ಸರಕಾರದ ಮಂಜೂರಿಯೂ ದೊರೆದಿದೆ.

ಈ ಬದಲಾವಣೆಯು ೧೯೩೨-೩೩ ನೆಯ ಸಾಲಿನಿಂದ ಪ್ರಚಾರದಲ್ಲಿ ಬರುವದು; ಮತ್ತು ಅದು ಪ್ರಾಥಮಿಕ ಶಾಲಾಪ್ರಮಾಣಪತ್ರ ಪರೀಕ್ಷೆಯು ಗಂಡು ಮಕ್ಕಳಿಗೂ ಹೆಣ್ಣುಮಕ್ಕಳಿಗೂ ಒಂದೇ ಆಗುವ ವರೆಗೂ ಪ್ರಚಾರದಲ್ಲಿ ಉಳಿಯುವದು.

ಹೆಣ್ಣುಮಕ್ಕಳ ಟ್ರೇನಿಂಗ್ ಸಂಸ್ಥೆಗಳ ನಿಯಮಗಳಲ್ಲಿ ತಿದ್ದುಪಡಿ.

ಸದ್ಯಕ್ಕೆ ಪ್ರಚಾರದಲ್ಲಿಯ ೪ (ಫ) ನಿಯಮಕ್ಕೆ ಬದಲಾಗಿ ಈ ಕೆಳಗಿನ ನಿಯಮನನ್ನು ಸೇರಿಸಬೇಕು.

ನಿಯಮ ೪ (ಫ) "ಹೆಣ್ಣುಮಕ್ಕಳ ಟ್ರೇನಿಂಗ್ ಸಂಸ್ಥೆಯ ಮೊದಲನೆಯ ವರ್ಷದ ಜ್ಯೂನಿಯರ್ ಕ್ಲಾಸಿಗೆ ಸೇರಲಿಚ್ಛಿಸುವ ಉಮೇದುವಾರರು ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯಲ್ಲಾಗಲಿ ಮಾಧ್ಯಮಿಕ ಶಾಲೆಯ ೫ನೆಯ ಇಯತ್ತ್ಯೆಯಲ್ಲಾಗಲಿ ಪಾಸಾದವರಿರಬೇಕು.

ಮಾಧ್ಯಮಿಕ ಶಾಲೆಯ ೮ನೆಯ ಇಯತ್ತ್ಯೆಯ ಪರೀಕ್ಷೆಯಲ್ಲಾಗಲಿ (ಹೊಸ ಅಭ್ಯಾಸಪತ್ರಿಕೆಯ ಮೇರೆಗೆ) ಹೆಣ್ಣುಮಕ್ಕಳ ೭ನೆಯ ಇಯತ್ತ್ಯೆಯನ್ನು ಕಲಿತ ತರುವಾಯ ಆಗುವ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯಲ್ಲಾಗಲಿ ಪಾಸಾದ ಉಮೇದವಾರರು ಮೊದಲನೆಯ ವರ್ಷದ ಸೀನಿಯರ್ ಕ್ಲಾಸಿಗೆ ಸೇರಬಹುದು. ಆದರೆ ಇಂಥವರು ಯೋಗ್ಯ ಶಿಕ್ಷಕರ ಮೇಲ್ವಿಚಾರಣೆಯ ಕೆಳಗೆ ನಾಲ್ವತ್ತು ಪಾಠಗಳನ್ನು ಕಲಿಸಿ ತೋರಿಸಬೇಕಾಗುವದು. ಮೂಲ ನಿಯಮದಂತೆ ಸೀನಿಯರ್ ವರ್ಗದವರು ೨೫ ಪಾಠಗಳನ್ನು ಕಲಿಸಿದರೆ ಸಾಕಾಗುತ್ತಿತ್ತು.

ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಅಥವಾ ಅದಕ್ಕೆ ಸರಿಯಾದ ಅಥವಾ ಅದಕ್ಕೂ ಹೆಚ್ಚಿನ ತರಗತಿಯ ಪರೀಕ್ಷೆಯಲ್ಲಿ ಪಾಸಾದ ಇಲ್ಲವೆ S. N. D. T. ಯವರ ಇಂಡಿಯನ್ ಯುನಿವ್ಹರ್ಸಿಟಿಯ ಪ್ರವೇಶ ಪರೀಕ್ಷೆಯಲ್ಲಿ ಒಟ್ಟು ಗುಣಗಳಲ್ಲಿ ೧೦೦ ಕ್ಕೆ ೪೦ ರಷ್ಟು ಗುಣಗಳನ್ನು ದೊರಕಿಸಿ (ಮುಖ್ಯ ಹಾಗು ಅಮುಖ್ಯ ವಿಷಯಗಳಲ್ಲಿ ಕೂಡಿ) ಪಾಸಾದವರು ಒಮ್ಮೆಲೆ ಎರಡನೆಯ ವರ್ಷದ ವರ್ಗಕ್ಕೆ ಸೇರಬಹುದು. ಇಂಥವರು ಯೋಗ್ಯ ಶಿಕ್ಷಕರ ಮೇಲ್ವಿಚಾರಣೆಯ ಕೆಳಗೆ ೬೦ ಪಾಠಗಳನ್ನು ಕಲಿಸಿತೋರಿಸಬೇಕಾಗುವದು."

ಪ್ರಕಟನೆ

ಕೆಳಗೆ ಹೇಳುವ ಹಿಂದು ಸ್ತಾನಿ ಪುಸ್ತಕಗಳು ಪಠ್ಯಪುಸ್ತಕವೆಂದು ಮಂಜೂರಾಗಿವೆ.

ಈ ಸಂಬಂಧದ ಪ್ರಕಟನೆಯನ್ನು ಮುಂಬಯಿ ಸರಕಾರಿ ಗ್ಯಾಝಿಟಿನಲ್ಲಿ ಪ್ರಸಿದ್ಧಿಸಲಾಗುವದು.

ಕೇವಲ ಪುನರ್ಮುದ್ರಣವನ್ನಷ್ಟೇ ಬಿಟ್ಟು ಹೊಸ ಆವೃತ್ತಿಗಳನ್ನು ಹೊರಡಿಸಿದ ಎಲ್ಲ ಸಂದರ್ಭಗಳಲ್ಲಿ ಆ ಪುಸ್ತಕಗಳನ್ನು ಪುನಃ ಬುಕ್ ಕಮೀಟಿಗೆ ಕಳುಹಿಸಿ ಮಂಜೂರಿಯನ್ನು ಪಡೆದುಕೊಳ್ಳದೆ ಶಾಲೆಗಳಿಗೂ ವಿದ್ಯಾರ್ಥಿಗಳಿಗೂ ಅವನ್ನು ಮಾರಕೂಡದೆಂದು ನಿರ್ಬಂಧ ಹಾಕಿದೆ. ಮತ್ತು ಕಮೀಟಿಯು ಅಪ್ಪಣೆ ಪಡೆದು ಕೊಳ್ಳದೆ ಪುಸ್ತಕಗಳ ಬೆಲೆಯನ್ನು ಹೆಚ್ಚಿಸಕೂಡದು; ಇಲ್ಲವೆ ಕಾಗದ ಮುದ್ರಣ ಅಥವಾ ಕಟ್ಟು ಇವನ್ನು ಬದಲಿಸಕೂಡದು.

ಅ. ನಂ.	ಪುಸ್ತಕದ ಹೆಸರು	ಗ್ರಂಥಕರ್ತನ ಹೆಸರು	ಪ್ರಕಾಶನ ಹೆಸರು	ಬೆಲೆ	ಯಾತಕ್ಕೆ ಮಂಜೂರಾಗಿದೆ
೧.	ದೇಶಕಿ ಜಬಾನ (ನಾಗರಿ ಲಿಪಿ) ಭಾಗ ೧-೧೪ಳಿಗರ ಮೊದಲನೆಯ ಮುದ್ರಣ	ಆರ್. ವಿ. ಸೇಮನ್ ಮತ್ತು ಎಸ್. ಪಿ. ಪದ್ಮಾ ವೇಲಣಕರ	ಕರ್ನಾಟಕ ಪಬ್ಲಿಶಿಂಗ್ ಹೌಸ್, ಚೀರಾ ಬಝಾರ ಮುಂಬಯಿ	೦-೫-೦	ಎಲ್ಲ ಶಾಲೆಗಳಲ್ಲಿ ಪಠ್ಯ ಪುಸ್ತಕ
೨.	ಸದರ (ಉರ್ದುಲಿಪಿ)	ಸದರ	ಸದರ	೦-೫-೦	ಸದರ
೩.	ಸದರ ೨ನೆಯ ಭಾಗ ನಾಗರಿಲಿಪಿ	ಸದರ	ಸದರ	೦-೬-೦	ಸದರ
೪.	ಸದರ (ಉರ್ದುಲಿಪಿ) (೧೪ಳಿಗ ಮೊದಲನೆಯ ಮುದ್ರಣ	ಸದರ	ಸದರ	೦-೬-೦	ಸದರ
೫.	ಸದರ ಮೂರನೆಯ ಭಾಗ (ನಾಗರಿ ಲಿಪಿ ೧೪ಳಿಗರ ೧ನೆಯ ಮುದ್ರಣ)	ಸೀತಾರಾಮು ಪಾಂಡುರಂಗ ಪುಣೆ	ಸದರ	೦-೭-೦	ಸದರ
೬.	ಸದರ ಉರ್ದುಲಿಪಿ	ಸದರ	ಸದರ	೦-೭-೦	ಸದರ

ಪುಣೆ
ತಾ. ೮-೪-೧೪೬೨

(ಸಹಿ.) ಪಿ. ಕೆ. ರೇಗೆ,
ಡಾಯರೆಕ್ಟರ ಆಫ್ ಪಬ್ಲಿಕ್ ಇನ್ಸ್ಟ್ರಕ್ಶನ್ ರವರ
ಪರವಾಗಿ

ಪ್ರಕಟನೆ

ಶ್ರೀ. ಎಸ್.ಆರ್. ಸಾಳವಿ ಇವರು ಬರೆದಿರುವ "**ಮಹಾರಾಷ್ಟ್ರಾಚ್ಯಾ ಇತಿಹಾಸಾತೀಲ ಗೋಷ್ಟೀ**" ಎಂಬ ಪುಸ್ತಕವು ಮೊದಲು ಪ್ರಾಥಮಿಕ ಶಾಲೆಗಳಲ್ಲಿ ಪಾಠಪುಸ್ತಕದಂತೆ ಉಪಯೋಗಿಸಲು ಅಡ್ಡಿ ಇಲ್ಲವೆಂದು ಮುಂಬೂರಾಗಿದ್ದಿತು. ಮರಾಠಿ ಟೆಕ್ಸ್ಟ್ ಬುಕ್ ಕಮೀಟಿಯವರು ಅದನ್ನು ಪುನಃ ಕೂಲಂಕಷವಾಗಿ ವಿಮರ್ಶಿಸಿ ನೋಡಿ ಅದರಲ್ಲಿ ಐತಿಹಾಸಿಕ ದೋಷಗಳೂ ಭಾಷಾ ದೋಷಗಳೂ ಹೆಚ್ಚಾಗಿರುವವೆಂದು ತಿಳಿದುಬಂದುದರಿಂದ ಈ ಪುಸ್ತಕವನ್ನು ಮುಂಬೂರಾದ ಪುಸ್ತಕಗಳ ಯಾದಿಯೊಳಗಿಂದ ತೆಗೆದುಹಾಕಬೇಕೆಂದು ನಿರ್ಣಯಿಸಿರುವರು.

ಹೀಗಿರುವದರಿಂದ ಬರುವ ಜೂನ್ ೧೯೪೨ ನೆಯ ಇಸವಿಯಿಂದ ಯಾವ ಸ್ಕೂಲ್‌ಬೋರ್ಡಿನವರೂ ತಮ್ಮ ಪ್ರಾಥಮಿಕ ಶಾಲೆಗಳಿಗೆ ಈ ಪುಸ್ತಕವನ್ನು ಪಾಠಪುಸ್ತಕದಂತೆ ನಿಯಮಿಸಕೂಡದು ಎಂದು ಮಧ್ಯಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರವರು ತಮ್ಮ $\frac{\text{S. 66. B. S.}}{\text{10-3-1942}}$ ನೆಯ ನಂಬರಿನ ಪತ್ರದ ಮೂಲಕ ತಿಳಿಯಪಡಿಸಿದ್ದಾರೆ.

ಪುಸ್ತಕ ಪರಿಚಯ

★

೧. ಶಿಕ್ಷಣಶಾಸ್ತ್ರ

ಬರೆದವರು :— ಶ್ರೀ. ಶ್ರೀನಿವಾಸ ಗುರಾಚಾರ್ಯ ಬೈಚವಾಳ, ಎಮ್. ಎ.
ಪ್ರಕಾಶಕರು :— ಆರ್. ಆರ್. ಆಕಳವಾಡಿ ಎಂಡ ಸನ್ಸ
ಕ್ರೌನ್ ಆಕಾರದ ೧೯೩+೮ ಪುಟಗಳು. ಬೆಲೆ : ೧ ರು. ೪ ಆ.

ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಶಿಕ್ಷಣದ ಮಹತ್ವವು ಅಷ್ಟಿಷ್ಟಲ್ಲ. ಜಗತ್ತಿನಲ್ಲಿಯ ಯಾವ ಮುಂದುವರಿದ ರಾಷ್ಟ್ರವನ್ನು ನೋಡಿದರೂ ಅದರ ಉತ್ಕರ್ಷಕ್ಕೆ ಅಲ್ಲಿನ ಶಿಕ್ಷಣವೇ ಆಧಾರಸ್ತಂಭವೆಂದು ಧಾರಾಳವಾಗಿ ಹೇಳಬಹುದು.

ಶಿಕ್ಷಣವು ಇಷ್ಟು ಮಹತ್ವದ ವಿಷಯವಾಗಿದ್ದರೂ ನಮ್ಮ ಕನ್ನಡನಾಡಿನಲ್ಲಿ ಶಿಕ್ಷಣಶಾಸ್ತ್ರವನ್ನು ಆಳವಾಗಿ ಅಭ್ಯಾಸಮಾಡಿದವರೂ ನಾಡಿನ ಏಳ್ಗೆಗೆ ಪೋಷಕವಾಗುವಂತಹ ಶಿಕ್ಷಣವನ್ನು ಪ್ರಚಾರದಲ್ಲಿ ತಂದು ಕನ್ನಡದ ಉಜ್ವಲಪರಂಪರೆ

ಯನ್ನು ಕಾಯ್ದುಕೊಳ್ಳಲು ಹವಣಿಸುವವರೂ ಹಂಬಲಿಸುವವರೂ ಹೆಣಗಾಡುವವರೂ ಬೆರಳಿನಿಂದೆಣಿಸಲು ಬರುವಷ್ಟು ಜನ ಮಾತ್ರ. ಇಂತಹ ಸಂದರ್ಭದಲ್ಲಿ ಶ್ರೀ. ಜ್ಯೆಜವಾಳ ಶ್ರೀನಿವಾಸಾಚಾರ್ಯರು "ಶಿಕ್ಷಣಶಾಸ್ತ್ರ" ವೆಂಬ ಪುಸ್ತಕವನ್ನು ಬರೆದು ಕನ್ನಡನಾಡಿಗೂ ಕನ್ನಡ ಸಾಹಿತ್ಯಕ್ಕೂ ಮಹದುಪಕಾರಮಾಡಿದ್ದಾರೆ.

ಕನ್ನಡ ಭಾಷೆಯಲ್ಲಿ ಶಿಕ್ಷಣ ಶಾಸ್ತ್ರಕ್ಕೆ ಸಂಬಂಧಿಸಿದ ಪಾರಿಭಾಷಿಕ ಪ್ರಯೋಗಗಳ ವಿಷಯದ ಈಗಿನ ಕೊರತೆಯನ್ನನುಲಕ್ಷಿಸಿದರೆ ಗ್ರಂಥಕರ್ತರು ವಹಿಸಿದ ಶ್ರಮವೂ ಅವರು ಪಡೆದ ಯಶಸ್ಸೂ ತಟ್ಟನೆ ಲಕ್ಷ್ಯಕ್ಕೆ ಬಾರದಿರಲಾರವು. ಶಿಕ್ಷಣದ ಸ್ವರೂಪವನ್ನು ಮೊದಲ್ಮಾಡಿಕೊಂಡು, ಅದರ ಆವಶ್ಯಕತೆ, ಮಹತ್ವ, ಧ್ಯೇಯಗಳು, ಪ್ರಕಾರಗಳು, ವೈಶಿಷ್ಟ್ಯಗಳು ಮುಂತಾದ ಅನೇಕ ಉಪಯುಕ್ತ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸಿದ್ದಲ್ಲದೆ, ಶಿಕ್ಷಣ-ಮಾನಸ ಶಾಸ್ತ್ರಗಳ ಸಂಬಂಧ, ಶಿಕ್ಷಕನ ಕಾರ್ಯಕ್ಷೇತ್ರ ಮತ್ತು ಹೊಣೆಗಾರಿಕೆ, ಪಠ್ಯಕ್ರಮ ರಚನೆಯ ಮೂಲತತ್ವಗಳು, ಕ್ರೀಡನಪದ್ಧತಿ, ಶಾಲೆಯ ಸ್ಥಾನ-ಮಾನ ಮತ್ತು ಕರ್ತವ್ಯ ಪ್ರಾಗತಿಕ ಶಾಲೆಗೂ ವ್ಯಕ್ತಿ, ಮನೆ, ಸಮಾಜ, ರಾಷ್ಟ್ರ ಮತ್ತು ಪ್ರಪಂಚಗಳಿಗೂ ಇರುವ ಸಂಬಂಧ ಇವೇ ಮೊದಲಾದ ಶಿಕ್ಷಣಕ್ಕೆ ನಿಕಟವಾಗಿ ಹೊಂದಿಕೊಂಡಿರುವ ಎಲ್ಲ ವಿಷಯಗಳನ್ನು ಅವುಗಳ ಮಹತ್ವಕ್ಕೆ ತಕ್ಕಂತೆ ವಿವರವಾಗಿ ವಿವೇಚಿಸಿದ್ದಾರೆ.

ಪರಿಶಿಷ್ಟದಲ್ಲಿ ಹಿಂದುಸ್ತಾನದಲ್ಲಿಯ ಪ್ರಾಥಮಿಕ ಶಿಕ್ಷಣದ ಸಾಮಾನ್ಯ ಕುಂದುಕೊರತೆಗಳನ್ನು ನಿವೇದಿಸಿ ಪುಸ್ತಕಕ್ಕೆ ಪೂರ್ಣತೆಯ ರೂಪಕೊಟ್ಟಿದ್ದಾರೆ. ಹಿಂದುಸ್ತಾನದ ಮತ್ತು ಪಾಶ್ಚಿಮಾತ್ಯ ದೇಶಗಳ ಸುಪ್ರಸಿದ್ಧ ಶಿಕ್ಷಣ ತಜ್ಞರ ವಿಚಾರಗಳನ್ನು ಅಲ್ಲಲ್ಲಿ ಪೋಣಿಸಿ ಪರಿಚಿತ ವಾತಾವರಣದಿಂದ ಉದಾಹರಣೆಗಳನ್ನು ಆಯ್ದುಕೊಂಡು ಗ್ರಂಥಕ್ಕೆ ಹೆಚ್ಚು ಕಳೆಯನ್ನಿತ್ತಿದ್ದಾರೆ.

ಶೈಲಿಯು ಟ್ರೇನಿಂಗ್ ಕಾಲೇಜದ ವಿದ್ಯಾರ್ಥಿಗಳಿಗೆ ತಕ್ಕಷ್ಟು ಪ್ರೌಢವಾಗಿದೆ. ವಿವೇಚನೆಯು ಸ್ಪಷ್ಟವಾಗಿದೆ; ಉಪಯೋಗಿಸಲ್ಪಟ್ಟ ಪ್ರಯೋಗಗಳು ಅರ್ಥಪೂರ್ಣವಾಗಿವೆ; ವಿಷಯ ಸಂವಿಧಾನವು ತರ್ಕಬದ್ಧವಾಗಿದೆ. ರ್ಯಾಂಗ್ಲರ ಕಟ್ಟಳೆಯವರು ತಮ್ಮ ಮುನ್ನುಡಿಯಲ್ಲಿ ಹೇಳಿದಂತೆ ಗ್ರಂಥಕರ್ತರು "ಎತ್ತಿರುವ ಪ್ರಶ್ನೆಗಳು, ಉತ್ತರ ಕೊಡುವ ರೀತಿ, ತಳೆದಿರುವ ಧೋರಣ, ತಿಳುಹಿಸಿರುವ ಕ್ರಮದ ಸರಳತೆ, ಬರೆದ ಕನ್ನಡ—ಇವೆಲ್ಲವೂ ಓದುಗರ ಮನಸ್ಸನ್ನು ಹಿಡಿಯುವಂತಿವೆ."

ಒಟ್ಟಾರೆ ಈ ಪುಸ್ತಕವು ಟ್ರೇನಿಂಗ್ ಕಾಲೇಜಗಳಲ್ಲಿಯ ವಿದ್ಯಾರ್ಥಿಗಳಿಗೂ ಕರ್ನಾಟಕದ ಶಿಕ್ಷಣ ಪ್ರೇಮಿಗಳಿಗೂ ಶಿಕ್ಷಕರಿಗೂ ತುಂಬ ಉಪಯುಕ್ತವಾದುದೆಂದು ನನ್ನ ಅಭಿಪ್ರಾಯ.

—S. R. R.

ಉರ್ದು ಬುಕ್ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು.

ಮೆ. ಸೆಕ್ರೆಟರಿ ಉರ್ದು ಸ್ಕೂಲ್ ಬುಕ್ ಕಮಿಟಿ ಮುಂಬಯಿ ಅವರಿಂದ ಪ್ರಕಟನೆಗಾಗಿ ಬಂದಿದೆ.

(ಕಳಿದ ಮಾರ್ಚ್ ತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಟಪ್ಪಣಿ :— ಪ್ರಾ. ಪ್ರಾಥಮಿಕ; ಮಾ. ಮಾಧ್ಯಮಿಕ; ಟ್ರೇ. ಟ್ರೇನಿಂಗ್; ಶಿ. ಶಿಕ್ಷಕ; ವಿ. ವಿದ್ಯಾರ್ಥಿ; ವಾ. ವಾಚನಾಲಯ; ಶಾ. ಶಾಲೆ.

ಅ.ನಂ.	ಪುಸ್ತಕಗಳ ಹೆಸರು	ಲೇಖಕರು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂ.
೫೩	**ಸಿಲ್ಸಿಲಯು ಸುಲ್ತಾನಿಯಾ ಕಾವುಕಿ ಕಿತಾಬ ಭಾಗ ೬**	ವಾಹಿದಾಖಾನಮ್ ಮಕ್ತಬಯೆ ಕುರಾನಿಯಾ ಬಾಂಬೂ ಬರಖೂರ ಬೆಂಗಳೂರ ಸಿಟಿ.	ಲೇಖಕಿಯವರು	೦– ೭–೦	ವಿ. ವಾ.
೫೪	ಸದರ **ಭಾಗ ೭**	ಸದರ	ಸದರ	೦– ೮–೦	ವಿ. ವಾ.
೫೫	ಸದರ **ಭಾಗ ೮**	ಸದರ	ಸದರ	೦– ೭–೦	ವಿ. ವಾ.
೫೬	**ಉರ್ದು ವ್ಹನ್ಯಾಕ್ಯುಲರ ಜಾವೆಟ್ರಿ ಭಾಗ ೧** ಎರಡನೆಯ ಆವೃತ್ತಿ ೧೯೪೧	ಮಿ. ಸಜ್ಜಾದಅಲಿ ಶಾಕೆರ್ (ಮಾಂಚಾರಿ) ಮತ್ತು ಮಹಮ್ಮದ ಹುಸೇನ ತಾರೀಕ ಅಲ್ಲಾಹಾಬಾದಿ	ಲೇಖಕರು	೦–೧೨–೦	ಪಠ್ಯಪುಸ್ತಕ
೫೭	**ತಾರೀಖೆ ಗುಜರಾಥ** ೧ನೆ ಆ. ೧೯೪೧	ಅಲ್ಲಾಮಾ ಅಬೂಜಾಫರ ನದವಿ	ಮೇಸರ್ಸ ಇಲ್ಮಿಯಾ ಬುಕ್ ಡಿಪೊ ಮಹಮ್ಮದ ಅಲಿ ರೋಡ ಮುಂಬಯಿ	೦– ೮–೦	ಪ್ರಾ.ಶಾ. ಪಠ್ಯಪುಸ್ತಕ

ಅ.ನಂ.	ಪುಸ್ತಕಗಳ ಹೆಸರು	ಲೇಖಕರು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂ.
೫೮	**ನಿಗಾರೆ ಅದಬ್ ಭಾಗ ೧** ೨ನೆ ಆ. ೧೯೩೯	ಕಾಝೀ ಮಹಮ್ಮದ ಸುಲ್ತಾನ ಕಾಲಿ ಟೀಚರ ಮಿಸ್. ಬಾ. ಉಲೂಮ ಅಲ್ಲಾಹಾಬಾದ	ಲಕ್ಷ್ಮೀನಾರಾಯಣ ಅಗರವಾಲ ಆಗ್ರಾ	೦– ೮–೦	ಪ್ರಾ. ಮಾ. ಶಾ. ಗಳಲ್ಲಿ ವಾಚನಾಲಯ ಹಾಗು ಸ್ಕಾಲರರಿಗಾಗಿ
೫೯	ಸದರ **ಭಾಗ ೨** ೩ನೆ ಆ. ೧೯೩೯	ಸದರ	ಸದರ	೦– ೮–೦	
೬೦	ಸದರ **ಭಾಗ ೩** ೨ನೆ ಆ. ೧೯೩೯	ಸದರ	ಸದರ	೦–೧೦–೦	
೬೧	ಸದರ **ಭಾಗ ೪** ೨ನೆ ಆ. ೧೯೩೯	ಸದರ	ಸದರ	೦– ೧–೦	
೬೨	**ಜುಗ್ರಾಫಿಯೊ-ಸುಬಾ-ಗುಜರಾತ್** ೧ನೆಯ ಆವೃತ್ತಿ	ಮುನಸಿ ಪೀರಖಾ ಗುಲಾಮಖಾ ಪಠಾಣ ಹೆ. ಮಾ. ಮ್ಯು. ಉ. ಸ್ಕೂ. ಅಸರ್ವಾನ ನಂ. ೧ ಅಹಮದಾಬಾದ	ಹಾಜಿ ಬದ್ರುದ್ದೀನಹುಸೇನು ದ್ದೀನ ನಿರ್ಝೂಮಿ ಅ್ಯಂಡ ಸನ್ಸ ಪಂಚಪಟ್ಟಿ ಅಹಮದಾಬಾದ	೦– ೫–೦	ಪ್ರಾ.ವಿ.ಶಿ.ವಾ.
೬೩	**ಚಮನಕೇ ಫೂಲ್ ಭಾಗ ೧** ೧ನೆ ಆ. ೧೯೪೦	ಕಾಝೀ ಸೈಯ್ಯದ ಮಹಮ್ಮದ ನವಾಜ ಉರ್ದು ಟ್ರೇ. ಕಾಲೇಜ ಪುಣೆ.	ಲೇಖಕರು	೦– ೨–೦	ಪ್ರಾ. ವಿ. ವಾ.
೬೪	ಸದರ **ಭಾಗ ೨** ೧ನೆ ಆ. ೧೯೪೦	ಸದರ	ಸದರ	೦– ೨–೦	ಪ್ರಾ. ವಿ. ವಾ.

೬೫	**ಪಂಡಿತ ಪಾಠಾಳಿ ಹಿಸಾಬ** ೧೯೨೮ ಇ. ೧೯೫೧	ಸಹಪಠ	ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕು ಅಂಚೆ ಕಾರ್ಯಾಲಯ	೦ – ೪–೦	೬. ಗಂ.	
೬೬	**ಪಡೀಪ ತರೀಪುಸ್ತಕ** ೧೯೨೮ ಇ. ೧೯೫೧	ಸಹಪಠ	ಸಹಪಠ	೦ – ೬–೦	೬. ಗಂ.	
೬೭	**ಉದ್ಯೋಗ ಕೆ ಪಡಿ ಹಿಸಾಬ** ೧೯೨೮ ಇ. ೧೯೫೦	ಸಹಪಠ	ಉದ್ಯೋಗ ಮಿತ್ರ ಎಜೆನ್ಸಿ ಶಿವಮೊಗ್ಗ	೦ – ೩–೦	೬. ಗಂ.	
೬೮	ಸಹಪಠ **ಪುಸ್ತಕ ಹಿಸಾಬ** ೧೯೨೮ ಇ. ೧೯೫೦	ಸಹಪಠ	ಸಹಪಠ	೦ – ೫–೦	೬. ಗಂ.	
೬೯	ಸಹಪಠ **ಅಕಿ ಹಿಸಾಬ** ೧೯೨೮ ಇ. ೧೯೫೦	ಸಹಪಠ	ಸಹಪಠ	೦ – ೭–೦	೬. ಗಂ.	
೭೦	ಸಹಪಠ **ಚಿತ್ರ ಹಿಸಾಬ** ೧೯೨೮ ಇ. ೧೯೫೦	ಸಹಪಠ	ಸಹಪಠ	೦ – ೮–೦	೬. ಗಂ.	
೭೧	ಸಹಪಠ **ಹಾಂಜಿನೀ ಹಿಸಾಬ**	ಸಹಪಠ	ಸಹಪಠ	೦ – ೯–೦	೬. ಗಂ.	
೭೨	ಸಹಪಠ **ಛಪಿನೀ ಹಿಸಾಬ**	ಸಹಪಠ	ಸಹಪಠ	೦–೧೦–೦	೬. ಗಂ.	
೭೩	ಸಹಪಠ **ಸಾಚಿನೀ ಹಿಸಾಬ**	ಸಹಪಠ	ಸಹಪಠ	೦–೧೧–೦	೬. ಗಂ.	
೭೪	ಸಹಪಠ **ಅಟಿನೀ ಹಿಸಾಬ**	ಸಹಪಠ	ಸಹಪಠ	೦–೧೩–೦	೬. ಗಂ.	
೭೫	**ಇಂತಿಹಾಸಿ ಉದ್ಯೋ**	ಸಹಪಠ	ಸಹಪಠ	೮– ೦–೦	೬. ಗಂ.	
೭೬	**ಜಗತ್ಪ್ರಸಿದ್ಧ ಪುನಿಯಾ** ೧೯೨೮ ಇತ್ಯಾದಿ ೧೯೫೦	ಸಹಪಠ ಪಠ್ಯವಿರುವ ಪ್ರೌಢಶಾಲೆಗಳು ಮತ್ತು ಪಿ. ಸಿ. ಪಿ. ಪಿ.	ಅಭಿನವ ಪ್ರಕಾಶನ ಪ್ರೈವೇಟ್ ಲಿಮಿಟೆಡ್ ಹುಬ್ಬಳ್ಳಿ (ಧಾರವಾಡ ಜಿಲ್ಲೆ)	೮– ೫–೦	ಪ್ರಾ. ಶಾಲೆಗಳಿಗೆ ಇರುವುದಿಲ್ಲ ಪ್ರೌ. ಶಾಲೆಗಳಿಗೆ ಇರುವುದಿಲ್ಲ ಪಿ. ಸಿ. ಪಿ. ಪಿ.	

ಅ. ನಂ.	ಪುಸ್ತಕಗಳ ಹೆಸರು	ಲೇಖಕರು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮುಂ.
೭೭	**ಬಚ್ಚೊಂಕಿ ಬಹಾರ** ೧ನೆ ಆವೃತ್ತಿ ೧೯೪೧	ಕಾಝಿ ಫೈಜಮಹಮ್ಮದ ಫೈಜ ಲುಧಿಯಾನ್ವಿ	ರಿಯಾಜ ಬುಕ್ ಡಿಪೋ ಮೊಹಲ್ಲಾ ದಾರಾಶಿಕೋಟ ಲಾಹೋರ	೦– ೨–೦	ಪ್ರಾ. ಶಾ. ವಿ. ವಾ.
೭೮	**ಕೌಮುತಿ ಬಟನ್** ೨ನೆ ಆವೃತ್ತಿ ೧೯೪೦	ಸದರ	ಸದರ	೦– ೨–೦	ಸದರ
೭೯	**ಇನ್‌ಸಾನಿ ಜುಗ್ರಾಫಿಯಾ ಬುಕ್ ೧** ೯ನೆ ಆವೃತ್ತಿ ೧೯೪೧	ಮೀಯಾಂ ಅಬ್ದುಲ್‌ಹಮೀದ ಬಿ. ಎ., ಬಿ. ಟಿ.	ಶೇಖ ಹಸನುದ್ದೀನ ಪಬ್ಲಿಶರ ಆ್ಯಂಡ ಪ್ರಿಂಟರ ಲಾಹೋರ	೦– ೮–೦	ಪ್ರಾ. ಶಾ. ವಿ. ಶಿ. ವಾ.
೮೦	ಸದರ **ಬುಕ್ ೨** ೬ನೆ ಆವೃತ್ತಿ ೧೯೪೦	ಸದರ	ಸದರ	೦–೧೦–೦	ಸದರ
೮೧	ಸದರ **ಬುಕ್ ೩** ೩ನೆ ಆವೃತ್ತಿ ೧೯೩೩	ಸದರ	ಸದರ	೦– ೭–೦	ಸದರ
೮೨	ಸದರ **ಬುಕ್ ೪** ೩ನೆ ಆವೃತ್ತಿ ೧೯೩೩	ಸದರ	ಸದರ	೦– ೮–೦	ಸದರ
೮೩	**ರುಕೊ, ಜೇಖೊ, ಸುನೋ**	ಮೇಸರ್ಸ್ ಎ. ಎಸ್. ತ್ರಿಲೋಪ ಆ್ಯಂಡ ಆರ್. ವ್ಹಿ. ಪರುಳೇಕರ	ಮಿ. ಆರ್. ವ್ಹಿ. ಪರುಳೇಕರ ಫಾರ್ ಸೆಪ್ಟಿ ಫರ್ಸ್ಟ್ ಆಸೋಸಿಏಶನ್ಸ್ ಆಫ್ ಇಂಡಿಯಾ ಇಲೆಕ್ಟ್ರಿಕ್ ಹೌಸ್ ಮುಂಬಯಿ	೦– ೩–೦	ಪ್ರಾ. ಮಾ. ಟ್ರೇ. ವಾ. ಸ್ಕಾಲರರಿಗೆ
೮೪	**ಮುಬ್ದಿಯಾತೆ ಸಾಯಿನ್ಸ್**	ಮಿ. ಸಜ್ಜಾದಅಲಿ ಶಾಕೀರ ನಿಂಚಾರಿ ಆ್ಯಂಡ ಮಹಮ್ಮದ ಹುಸೇನ ತಾರಿಕ್ ಅಲ್ಲಾಬಾದ	ಮತ್ಬಾಯೆ ರಹೀಮಿಯಾ ಬೊಂಬೇ ನಂ. ೮	೦–೧೨–೦	ಪ್ರಾ. ಶಾ. ಮೇಲಿನ ಇಯತ್ತೆ ಪಠ್ಯಪುಸ್ತಕ

ಪತ್ರಗಳ ಮುಖ್ಯಾಂಶಗಳು

ಉಳಗೆ :— (ಕಾರವಾರ ತಾಲೂಕು) ಇಲ್ಲಿಯ ಶಾಲೆಯ ಹೊಸಕಟ್ಟಡದ ಉದ್ಘಾಟನ ಸಮಾರಂಭವು ತಾ. ೧೪-೩-೧೯೨೨ನೆಯ ದಿವಸ ಕಾರವಾರ ಡಿ. ಸ್ಕೂ. ಬೋ. ಚೇಅರಮನ್ನರ ಅಧ್ಯಕ್ಷತೆಯಲ್ಲಿ ವೈಭವದಿಂದ ಜರುಗಿತು. ಆಗ ಶ್ರೀ. ಕೃ. ಸೋ. ಗಾವಕರ ಅವರು ೫ ರೂ. ಗಳ ಒಂದು ಜಾಗಟೆಯನ್ನೂ ಶ್ರೀ. ಜೋ. ಯೇ. ದೇವಳಿ ಅವರು ೫ ರೂ. ಬೆಲೆಯ ಕನ್ನಡಿಯನ್ನೂ ಕೊಟ್ಟಿದ್ದಾರೆ.

ತಿಳಿಸಿದವರು :— ಹೆ. ಮಾ. ಕ. ಶಾ. ಉಳಗೆ.

ಹುಬ್ಬಳ್ಳಿ :— ೧ ನೆಯ ನಂಬರ ಉರ್ದು ಗಂಡುಮಕ್ಕಳ ಶಾಲೆಯಿಂದ ೧೯೨೨ ರಲ್ಲಿ ಆದ ಸ್ಕಾಲರಶಿಪ್ ಪರೀಕ್ಷೆಗೆ ಕುಳಿತವರಲ್ಲಿ ೪ ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್ ದೊರಕಿದವು.

ತಿಳಿಸಿದವರು :— ಶ್ರೀ. ಎಚ್. ಆಯ್. ಮೋಮಿನ ಉರ್ದು ಮಾಸ್ತರ, ಹುಬ್ಬಳ್ಳಿ.

ಸೂಡಿ:— (ರೋಣ ತಾಲೂಕು) ಕುಮಾರಿ ಸಂಘದ ಕೆಲವು ವಿದ್ಯಾರ್ಥಿನಿಯರು ಧಾರವಾಡದಲ್ಲಿಯ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜ, ಬೋಸ್ಟಲ್ ಸ್ಕೂಲ್, ಲೋಕಲ್ ಬೋರ್ಡ ಆಫೀಸುಗಳನ್ನು, ಹುಬ್ಬಳ್ಳಿಯಲ್ಲಿಯ ಭಾರತಮಿಲ್, ಸಂಯುಕ್ತ ಕರ್ನಾಟಕ ಮುದ್ರಾಣಾಲಯಗಳನ್ನು ನೋಡಿ ಬಂದರು.

ತಿಳಿಸಿದವರು :— ಶ್ರೀ. ಕಾಳಿಕಾದೇವಿ ಮುದಕವಿ ಸೂಡಿ.

ಗುಡೂರು :— (ವಿಜಾಪುರ ಜಿಲ್ಲೆ) ಈ ಭಾಗದ ಶಿಕ್ಷಕ ಶಿಕ್ಷಕಿಯರ ಸಮ್ಮೇಲನವು ಮೆ. ಅ. ಡೆ. ಎ. ಇ. ಅವರಾದ ಶ್ರೀ. ಸಂಗನಾಳಮಠ ಸಾಹೇಬರ ಅಧ್ಯಕ್ಷತೆಯಲ್ಲಿ ನೆರವೇರಿತು. ಊರ ಹಿರಿಯರು ತುಂಬ ನೆರವಾದರು.

ತಿಳಿಸಿದವರ :— ಶ್ರೀ. ಅನಂತ ಬಾಳಕೃಷ್ಣ ದಂಡಿನ. ಗುಡೂರು

ಅನಗವಾಡಿ — (ಬಾಗಲಕೋಟೆ ತಾಲೂಕು) ಈ ಭಾಗದ ಪ್ರಾ. ಶಿ. ಶಿ. ಸಮ್ಮೇಲನವು ತಾ. ೨೩-೩-೨೨ನೆಯ ದಿವಸ ಮೆ. ಕಾಳಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಮಾದರಿಯ ಪಾಠಗಳು, ಚರ್ಚೆ, ಸಂಭಾಷಣೆ, ಕೋಲಾಟ, ಕಾವ್ಯಗಾಯನ, ಆಟ ಮೊದಲಾದವುಗಳು ಎಲ್ಲರ ಮನಮೆಚ್ಚುವಂತೆ ಆದವು.

ತಿಳಿಸಿದವರು :— ಶ್ರೀ. ಪಾ. ಪೆ. ಮಾಗಿ. ಹೆಡ್ ಮಾಸ್ತರ ಅನಗವಾಡಿ.

ಶಿರಾಳಿ :— (ಕಾರವಾರ ಜಿಲ್ಲೆ) ಈ ಭಾಗದ ಮೆ. ಅ. ಡೆ. ಎ. ಇ. ಅವರಾದ ಶ್ರೀ. ಕಾಮತರಾಯರು. ಈ ಊರ ಶಾಲಾಪಂಚರನ್ನೂ ಹಿರಿಯರನ್ನೂ

ಕರೆಯಿಸಿ ಪಾಲಕರಿಗೂ ಶಿಕ್ಷಕರಿಗೂ ಇರುವ ಸಂಬಂಧದ ವಿಷಯದಲ್ಲಿ ಭಾಷಣ ಮಾಡಿದರು. ಹಿಂದುಳಿದ ಜಾತಿಯ ಬಡ ಹುಡುಗರಿಗೆ ಪಾಟಿ, ಪುಸ್ತಕ, ಚಡ್ಡಿ, ಅಂಗಿ, ಟೊಪ್ಪಿಗೆಗಳನ್ನು ಹಂಚಿ ವಿದ್ಯಾಭಿರುಚಿಯುಂಟಾಗುವಂತೆ ಪ್ರೋತ್ಸಾಹನೆ ಕೊಟ್ಟರು.

ತಿಳಿಸಿದವರು :— ಶ್ರೀ. ಪ. ಸು. ಭಟ್ಟ ಮಾಸ್ತರ, ಶಿರಾಳಿ.

ಕೊಂಡ್ಲಿ: —(ಕಾರವಾರ ಜಿಲ್ಲೆ) ತಾ. ೧೦-೩-೧೯೪೨ ನೆಯ ದಿವಸ ಶಾಲಾ ಬಾಲಿಕೆಯರ ಪಂದ್ಯಾಟವಾಯಿತು. ಸ್ಥಳಿಕ ಅಧಿಕಾರಿಗಳೂ ನಾಗರಿಕರೂ ಬಂದಿದ್ದರು. ವಿದ್ಯಾರ್ಥಿನಿಗಳ ಚಟುವಟಿಕೆಗಳನ್ನು ಕಂಡು ಸಂತೋಷಬಟ್ಟರು.

ತಿಳಿಸಿದವರು:—ಶ್ರೀ. ಆರ್. ವಿ. ಪೈ. ಹೆಡ್‌ಮಾಸ್ತರರು.

ವಿಶ್ರೀಕೋಟಿ :— (ಧಾರವಾಡ ಜಿಲ್ಲೆ) ಈ ಭಾಗದ ಶಿ. ಶಿ. ಸಮ್ಮೇಲನವು ಧಾರವಾಡ ಸ್ಕೂ. ಬೋ. ಎಡ್ಮಿನಿಸ್ಟ್ರೇಟಿವ್ವ ಆಫೀಸರರ ಅಧ್ಯಕ್ಷತೆಯಲ್ಲಿ ತಾ. ೨೧-೩-೧೯೪೨ ನೆಯ ದಿವಸ ಜರುಗಿತು. ೨೧ ಶಾಲೆಗಳ ಶಿಕ್ಷಕರೂ ೪೦೦ ಹುಡುಗರೂ ಇದರಲ್ಲಿ ಭಾಗವಹಿಸಿದ್ದರು. ಪರಸ್ಥಳಗಳಿಂದ ಬಾಲಕರ ಪಾಲಕರೂ ಬಂದಿದ್ದರು. ಈ ಎಲ್ಲ ಜನರ ಊಟ ಉಪಚಾರ ಮೊದಲಾದ ಎಲ್ಲ ವ್ಯವಸ್ಥೆಯನ್ನು ಇಲ್ಲಿಯ ವಿದ್ಯಾಭಿಮಾನಿಗಳಾದ ಶ್ರೀ. ಗುರುಸಿದ್ದಪ್ಪ ಅಂಗಡಿ, ಶ್ರೀ. ತಂಬಾಕದ, ಶ್ರೀ. ಶಂಕರಭಟ್ಟ ಪುರೋಹಿತ ಮೊದಲಾದ ಗ್ರಾಮಪಂಚಾಯತಿಯ ಮೆಂಬರರು ಅತ್ಯಂತ ಉತ್ಸಾಹದಿಂದ ಮಾಡಿದರು. ಸಮ್ಮೇಲನವು ಯಶಸ್ವಿಯಾಗಿಯೂ ಮಾದರಿಯದಾಗಿಯೂ ಆಯಿತೆಂದು ಹೇಳಬಹುದು.

ತಿಳಿಸಿದವರು :—ಶ್ರೀ. ಮೊ. ಮು. ಜಕಾತಿ, ಹೆ. ಮಾ. ಉರ್ದುಶಾಲೆ.

ಗುಳೇದಗುಡ್ಡ :— (ವಿಜಾಪುರ ಜಿಲ್ಲೆ) ತಾ. ೨೯-೩-೧೯೪೨ನೆಯ ದಿವಸ ಶಿ. ಶಿ. ಸಮ್ಮೇಲನವು ಮೆ|| ಅ. ಡೆ. ಎ. ಇ. ಅವರಾದ ಶ್ರೀ. ಜಾಲಿ ಸಾಹೇಬರ ಅಧ್ಯಕ್ಷತೆಯಲ್ಲಿ ಒಳಿತಾಗಿ ಸಾಗಿತು. ಐದಾರು ನೂರು ಬಾಲಬಾಲಿಕೆಯರ ಸಾಮೂಹಿಕ ವ್ಯಾಯಾಮವು ಚಿತ್ತಾಕರ್ಷಕವಾಯಿತು. ಪಾಠ, ಚರ್ಚೆ, ಸಂಭಾಷಣೆಗಳು ಮನೋರಂಜಕವಾಗಿದ್ದವು.

ತಿಳಿಸಿದವರು :— ಶ್ರೀ. ಲ. ಗ. ಕಾಳೆ, ಹೆ. ಮಾ. ಕ. ಗ. ನ. ೧.

ಡಂಬಳ :— (ಧಾರವಾಡ ಜಿಲ್ಲೆ) ಈ ಭಾಗದ ಶಿ. ಶಿ. ಸಮ್ಮೇಲನವು ಮೆ. ಅ. ಡೆ. ಇ. ಅವರಾದ ಶ್ರೀ. ಪಿ. ಬಿ. ದೇಸಾಯಿ ಅವರ ನೇತೃತ್ವದಲ್ಲಿ ಜರುಗಿತು. ವಿದ್ಯಾರ್ಥಿಗಳ ನಾಟಕ-ಆಟಗಳನ್ನು ಕಂಡು ಸರಪಂಚರಾದ ಶ್ರೀಮಾನ್ ವೆಂಕರಡ್ಡಿ ಅಸುಂಡಿಯವರು ೨ ರೂ. ಪಾರಿತೋಷಕವೆಂದು ಕೊಟ್ಟರು.

ತಿಳಿಸಿದವರು :— ಶ್ರೀ. ಭ. ದೇ. ಪಾಟೀಲ, ವ್ಹಿ. ಪ. ಸ್ಕೂ. ಚೆ. ಡಂಬಳ.

ಸಾಕ್ಷರಿಗಳಾದ ಪ್ರಬುದ್ಧರಿಗಾಗಿ

ಬಾಗಿಲು-ಕಿಡಿಕೆಗಳನ್ನು ತೆರೆದಿಡಿರಿ

ಶ್ರೀಮಾನ್ ಎಸ್. ಆರ್. ತಾವಡೆ, ಎಮ್. ಎ., ಎ. ಇ. ದ. ಭಾ. ಧಾರವಾಡ ಅವರಿಂದ

"ಗಂಗಕ್ಕಾ, ಗಾಳಿ ಬರುತ್ತದೆ; ಬಾಗಿಲು ಮುಚ್ಚು."

"ರಾಮಣ್ಣಾ, ಆ ಕಿಡಿಕೆಯನ್ನೂ ಮುಚ್ಚು. ಬಾಗಿಲು ಕಿಡಿಕೆಗಳ ಸಂದುಗಳಿಗೆ ಚಿಂದಿಯನ್ನು ತುರುಕಿರಿ. ಭೀಮಣ್ಣನಿಗೆ ಜ್ವರವು ಏರುತ್ತಲೇ ಇದೆ."

* * * *

"ಅಣ್ಣಾ, ಅಣ್ಣಾ, ಡಾಕ್ಟರರು ಬಂದರು. ಬಾಗಿಲು ತೆರೆಯಿರಿ."

"ಹೇಗಣ್ಣಾ, ಬಾಗಿಲು ತೆರೆಯುವದು? ಕೆಂಡದಂಥ ಜ್ವರ! ಗಾಳಿ ಬಡಿದರೆ ಏನುಗತಿ?"

"ಡಾಕ್ಟರರು ಬಂದಿರುವರು; ಗಂಗಕ್ಕಾ ಬಾಗಿಲು ಸ್ವಲ್ಪವೇ ತೆರೆ."

* * * *

"ಇಶ್! ಏನು ಹೊಲಸು ವಾಸನೆ; ಬಾಗಿಲು ತೆರೆಯಿರಿ; ಕಿಡಕಿಗಳನ್ನು ತೆರೆಯಿರಿ; ಒಳಗೆ ಹವೆಯಾಡಲಿ."

"ಡಾಕ್ಟರಸಾಹೇಬ, ಕೂಸಿಗೆ ಜ್ವರ ಇನ್ನೂ ಏರುತ್ತಲೇ ಇದೆ; ಗಾಳಿ ಬಡಿದರೆ ಏನುಗತಿ?"

"ನೀವು ಹೀಗೆ ಮಾಡುವದರಿಂದಲೇ ಎಲ್ಲವೂ ಕೆಟ್ಟು ಹೋಗುವದು. ರೋಗಿಗೆ ಗಾಳಿಬಡಿಯುವದು ಬೇರೆ; ಬಾಗಿಲು ಕಿಡಿಕೆಗಳನ್ನು ತೆರೆದಿಟ್ಟು ಕೋಣೆಯೊಳಗೆ ಸರಿಯಾಗಿ ಹವೆ

ಆಡುವಂತೆ ಮಾಡುವದು ಬೇರೆ. ಬಾಗಿಲು ಕಿಡಿಕೆಗಳನ್ನು ಮುಚ್ಚಿಟ್ಟರೆ ಒಳಗಿನ ಹವೆ ಕೆಡುವದು. ಇದರಿಂದ ರೋಗಿಯ ಪ್ರಕೃತಿಯು ಇನ್ನಿಷ್ಟು ಕೆಡುವದು. ರೋಗಿಯು ಮೈಗ ಹೊರಗಿನ ತಂಗಾಳಿಯು ಬಡಿಯುವಂತೆ ಅವನನ್ನು ಒತ್ತಟ್ಟಿಗ ಸರಿಸಿ ಮಲಗಿಸಿದರೆ ಸಾಕು."

ಡಾಕ್ಟರರು ಹೇಳಿದಂತೆ ರೋಗಿಯೆನ್ನು ಕೋಣೆಯ ಒಂದು ಮಗ್ಗುಲಲ್ಲಿ ಮಲಗಿಸಿದರು. ಡಾಕ್ಟರರು ಅವನನ್ನು ನೋಡಿ ಮನೆಗೆ ಹೋದರು. ವೇಳೆಗೆ ಸರಿಯಾಗಿ ಔಷಧ ಕೊಟ್ಟು ಉಪಚಾರ ಮಾಡಿದ್ದರಿಂದ ಭೀಮಣ್ಣನಿಗೆ ಗುಣವಾಯಿತು.

ಇದರಿಂದ ಎಲ್ಲರಿಗೂ ಸಂತೋಷವಾಯಿತು; ಮತ್ತು ಅವರೆಲ್ಲರೂ ಬಾಗಿಲು ಕಿಡಿಕೆಗಳ ಉಪಯೋಗವನ್ನು ಚೆನ್ನಾಗಿ ತಿಳಿದುಕೊಂಡರು.

ಮನೆಯೊಳಗೆ ಗಾಳಿ ಬೆಳಕು ಬರಬೇಕೆಂದು ಬಾಗಿಲು ಕಿಡಿಕೆಗಳನ್ನು ಹಚ್ಚುವರು. ರಾತ್ರಿ ಮಲಗುವಾಗಲೂ ಕಿಡಿಕೆ ಗಳನ್ನು ಮುಚ್ಚಿಡಬಾರದು. ಒಳಗಿನವರ ಮೈಗೆ ತಂಗಾಳಿಯು ಬಡಿಯುವದಂತೆ, ಕಿಡಿಕೆಗಳನ್ನು ದೂರಬಿಟ್ಟು, ಮಲಗಿದರೆ ಸಾಕು. ಕೆಟ್ಟ ಹವೆಯಿಂದಲೇ ಹಲವು ಬೇನೆಗಳು ಬರುವವು.

ಚಳಿಗಾಲದಲ್ಲಿ ಕೆಲವರು ಕಿಡಿಕಿಗಳನ್ನು ಮುಚ್ಚಿ ಬಿರಕು ಸಂದುಗಳಲ್ಲಿ ಅರಿವೆಯನ್ನು ತುರುಕಿ ಹೊರಗಿನ ಹವೆಯಾಡ ದಂತೆ ಮಾಡುವರು. ಇದು ಸರಿಯಲ್ಲ. ಕೋಣೆಯಲ್ಲಿ ದೀಪ ವನ್ನು ಹಚ್ಚಿಟ್ಟು ಮಲಗುವದರಿಂದಲೂ ಅಪಾಯವಾಗುವದು.

ಜಾಹೀರಾತಿಗಾಗಿ

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರದ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕವಿತಾಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಅರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರದ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು

ಮೇ-ಜೂನ ೧೯೪೨ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾನೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್ ಎಂ. ಎ.

ಈ ಸಂಚಿಕೆಗೆ ಒಂದು ಆಣೆಗಳು.

ವಾರ್ಷಿಕ ಚಂದಾ ಹಣ ಒರಡು ರೂಪಾಯಿಗಳು ಮಾತ್ರ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
	ಮೇ ೧೯೪೨	
೧.	ಪ್ರಬುದ್ಧರ ಶಿಕ್ಷಣ	೧
೨.	ಸಾಕ್ಷರತಾ ಪ್ರಸಾರ (ಹಳ್ಳಿಯ ಹಾಡು)	೧೬
೩.	ಹೆಣ್ಣುಮಕ್ಕಳ ಪ್ರಾ. ಶಾ. ಪರೀಕ್ಷೆಯ ರಿಜಾಮು ಪರ೧೯೪೨	೧೭
೪.	ಧಾರವಾಡ ಹೆಣ್ಣುಮಕ್ಕಳ ಟ್ರೇ. ಕಾ. ಪ. ಪರಿಣಾಮ ೧೯೪೨	೨೨
೫.	ವರ್ಧಾ ರಾಷ್ಟ್ರೀಯ ಅ. ಕೇ. ಪರೀಕ್ಷೆಯ ಪರಿಣಾಮ ೧೯೪೨	೨೪
೬.	ಕನ್ನಡ " ವರ್ಧಪ್ರಾಯೋಜ " ಪರೀಕ್ಷೆ ೧೯೪೨	೨೫
೭.	ಮುಂಜೂರಾದ ಕನ್ನಡ ಪುಸ್ತಕಗಳು	೨೬
೮.	ಪತ್ರಗಳ ಮುಖ್ಯಾಂಶಗಳು	೨೮
೯.	ಉರಿಯುತ್ತಿರವ ಬಾಂಬು ಆರಿಸಲು ಕಲಿಯಿರಿ (ಪ್ರಬುದ್ಧರಿಗಾಗಿ)	೩೦
	ಜೂನ್ ೧೯೪೨	
೧	ವಿದ್ಯಾಖಾತೆಯ ವೃತ್ತಾಂತಗಳು	೧
೨.	ಮೇಡಮ್ ಮೇರಿ ಕ್ಯೂಅರಿ	೪
೩.	ನಾವು ಜಪಾನದೊಡನೆ ಯಾಕೆ ಯುದ್ಧಹೂಡಿದ್ದೇವೆ ?	೯
೪.	ದುಃಖವಾರ್ತೆ	೧೬
೫.	ಟ್ರೇನಿಂಗ್ ಕಾಲೇಜಗಳ ಸರ್ಟಿಫಿಕೇಟ ಪರೀಕ್ಷೆಯ ಪರಿಣಾಮ ೧೯೪೨	೧೭
೬.	ಮುಂಜೂರಾದ ಉರ್ದು ಪುಸ್ತಕಗಳು	೨೪
೭.	ಪುಸ್ತಕ ಪರಿಚಯ—ಗೃಹ-ವಿಜ್ಞಾನ-ಶಾಸ್ತ್ರ	೨೬
೮.	ಪತ್ರಗಳ ಮುಖ್ಯಾಂಶಗಳು	೨೭
೯.	ಬಾಯಿಬಡಾಯಿಯಿಂದ ಜಪಾನರನ್ನು ಹಿಮ್ಮೆಟ್ಟಿಸಬಹುದೊ ?	೩೯

Printed by V. Y. Jathar, at the Karnatak Printing Works, Dharwar and Published by H. S. Torgal, Esq. M. A., Principal Training College For-Men, Dharwar, at his Office.

ಪುರೋಗಾಮಿ ಶಿಕ್ಷಕ

★

(ಲೇಖಕರು : ಶ್ರೀ. ಎಸ್. ಬಿ. ಗಜೇಂದ್ರಗಡ, ಬಿ.ಎ., ಬಿ.ಟಿ., ವಿಜಾಪುರ

ಪ್ರಾಥಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಅವರ
ದೈನಂದಿನ ಅಭ್ಯಾಸದಲ್ಲಿ— ಕಲಿಸುವ ಕಾರ್ಯದಲ್ಲಿ ಅತ್ಯಂತ ಉಪ-
ಯುಕ್ತವಾಗುವಂತೆ, ವಿದ್ವಜ್ಜಾತೆಯ ಅಭ್ಯಾಸಪತ್ರಿಕೆ-
ಯನ್ನು ಸಂಪೂರ್ಣವಾಗಿ ಅನುಸರಿಸಿ ಬರೆಯಲ್ಪಟ್ಟಿದೆ.

ಪುಟಗಳು ೩೩೬ ★ ಬೆಲೆ ೨-೪-

ಇದು ಮೂರು ಮುಖ್ಯ ಭಾಗಗಳನ್ನೊಳಗೊಂಡಿದೆ:

(೧) ಶೈಕ್ಷಣಿಕ ಮನಃಶಾಸ್ತ್ರವನ್ನು ೧೫೫ ಪುಟಗಳಲ್ಲಿ ವಿವೇಚಿಸಿ
(೨) ಶಿಕ್ಷಣಶಾಸ್ತ್ರದ ಮೂಲತತ್ವಗಳನ್ನೂ ಪ್ರತ್ಯಕ್ಷವಾಗಿ ಕಲಿಸುವ ಶಾಸ್ತ್ರೀಯ
ಪದ್ಧತಿಯನ್ನೂ ವಿವರಿಸಿದೆ. (೩) ಆಧುನಿಕ ಶಿಕ್ಷಣ ಕ್ರಮದ ಮಹತ್ವ
ಅಂಗಗಳಾದ ಶಾರೀರಿಕ ಶಿಕ್ಷಣ, ಶಿಸ್ತು, ಸಂಘಟನೆ ಮೊದಲಾದ ವಿಷಯಗಳನ
ತಿಳಿಸಿದೆ.

ಶಿಕ್ಷಣದ ಸರ್ವಾಂಗಗಳನ್ನೂ ಸುಲಲಿತವಾದ ಭಾಷೆಯುಲ್ಲಿ ಒತ್ತಟ್ಟಿಗೆ
ಸುಂದರವಾಗಿ ಮಂಡಿಸಿದ ಶಾಸ್ತ್ರೀಯ ಗ್ರಂಥವು

ಕನ್ನಡದಲ್ಲಿ ಇದೊಂದೇ!

★

ಕನ್ನಡ-ಇಂಗ್ಲಿಷ್ ಶಾಲೆ-ಕಾಲೇಜುಗಳ ಎಲ್ಲಾ ಪಠ್ಯಪುಸ್ತಕಗಳೂ ಇತರ ಪುಸ್ತಕ
ಸ್ಕೂಲ್ ಸ್ಟೇಶನರಿ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ.

ಸ್ಟೂಡಂಟ್ಸ್ ಓನ್ ಬುಕ್ ಡಿಪೋ, ಧಾರವಾಡ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ಸಂಪುಟ ೮೧	ಮೇ ೧೯೪೨	ವರ್ಷ ೧೫. ಸಂ. ೨

ಪ್ರಬುದ್ಧರ ಶಿಕ್ಷಣ

ಕಳೆದ ವರ್ಷದ ನೊವೆಂಬರ ತಿಂಗಳ ಸಂಚಿಕೆಯಲ್ಲಿ ಇದೇ ವಿಷಯವನ್ನು ಕುರಿತು ಹಲಕೆಲವು ಮಾತುಗಳನ್ನು ಬರೆಯಲಾಗಿದೆ. ಅದರಲ್ಲಿ ಪ್ರಬುದ್ಧರ ಶಿಕ್ಷಣದ ವರ್ಗಗಳನ್ನು ನಡೆಯಿಸುವ ಕೆಲಸಗಾರರಿಗೆ ಶಿಕ್ಷಣ ಕೊಡುವ ವಿಷಯದಲ್ಲಿ ಟ್ರೇನಿಂಗ್ ಕಾಲೇಜದಲ್ಲಿ ನಡೆಯಿಸಿದ ಒಂದು ವರ್ಗದ ವಿಷಯದ ಸವಿಸ್ತಾರವಾದ ವಿವೇಚನೆಯು ಇರುವದು.

ಕಳೆದ ಅಕ್ಟೋಬರ ತಿಂಗಳ ಸೂಟಿಯಂತೆಯೇ ಈ ವರ್ಷದ ಮೇ ತಿಂಗಳ ಬಿಡುವಿನಲ್ಲಿಯೂ ನಮ್ಮ ಟ್ರೇನಿಂಗ್ ಕಾಲೇಜದಲ್ಲಿ ಪ್ರಬುದ್ಧರ ಶಿಕ್ಷಣದ ವರ್ಗಗಳನ್ನು ನಡೆಯಿಸುವ ಶಿಕ್ಷಕರಿಗೆ ತಕ್ಕ ಸಲಹೆ ಸೂಚನೆಗಳನ್ನು ಕೊಟ್ಟು ಅವರ ಕೆಲಸವು ಸುಸಂಗತವಾಗಿ ಸಾಗುವಂತೆ ಮಾಡುವ ಉದ್ದೇಶದಿಂದ ಒಂದು ವರ್ಗವನ್ನು ಪ್ರಾರಂಭಿಸಿ ಎರಡು ವಾರಗಳ ವರೆಗೆ (ತಾ. ೪-೫-೧೯೪೨ ನೆಯಿಂದ ೧೬-೫-೧೯೪೨ ಪೂರ್ಣ) ನಡೆಯಿಸಲಾಯಿತು. ಧಾರವಾಡ ಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀ. ಕೊಪ್ಪಳ ಗುಂಡೇರಾಯರೂ ಟ್ರೇನಿಂಗ್ ಕಾಲೇಜದ ಪ್ರಿನಿಪಾಲರಾದ ಶ್ರೀ. ತೊರಗಲ್ ಹನುಮಂತರಾಯರೂ ಅದರ ಮುಖ್ಯ ಚಾಲಕರಾಗಿದ್ದರು. ನಮ್ಮ ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀಮಾನ್ ತಾವಡೆ ಸಾಹೇಬರು ತಮ್ಮ ಸ್ವಾಭಾವಿಕವಾದ

ಉತ್ಸಾಹದಿಂದ ಈ ವರ್ಗದ ಎಲ್ಲ ಕಾರ್ಯಕ್ರಮಗಳು ಸುವ್ಯವಸ್ಥಿತವಾಗಿ ಸಾಗುವಂತೆ ಕಾಲಕಾಲಕ್ಕೆ ತಕ್ಕ ಅನುಕೂಲತೆಗಳನ್ನು ಒದಗಿಸಿಕೊಟ್ಟು ತಕ್ಕಂತೆ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು.

ಈ ಸಾರೆಯ ಶಿಕ್ಷಣದ ವರ್ಗಕ್ಕೆ ೪೭ ಜನ ಕೆಲಸಗಾರರನ್ನು ಆರಿಸಲಾಗಿತ್ತು. ಅವರಲ್ಲಿ ನಾಲ್ವರು ಶಿಕ್ಷಕಿಯರಿದ್ದರು.

ಧಾರವಾಡ ಜಿಲ್ಲೆ	೧೩	(ಒಬ್ಬರು ಶಿಕ್ಷಕಿಯರು)
ಬೆಳಗಾವ ಜಿಲ್ಲೆ	೮	
ವಿಜಾಪುರ ಜಿಲ್ಲೆ	೮	
ಕಾರವಾರ ಜಿಲ್ಲೆ	೯	(ಒಬ್ಬರು ಶಿಕ್ಷಕಿಯರು)
ಹುಬ್ಬಳ್ಳಿ ಮ್ಯು.	೬	(ಇಬ್ಬರು ಶಿಕ್ಷಕಿಯರು)
ಗದಗ ಮ್ಯು.	೩	

ಒಟ್ಟು ೪೭ (೪೩ ಶಿಕ್ಷಕರು + ೪ ಶಿಕ್ಷಕಿಯರು)

ಕೆಲಸಗಾರರ ಸಂಬಂಧದ ಕಳೆದ ವರ್ಷದ ನೊವೆಂಬರ ತಿಂಗಳ ಸಂಚಿಕೆಯಲ್ಲಿ ವಿವರಿಸಿದ ಎಲ್ಲ ಸಂಗತಿಗಳು (G R. E. D. No. 7139 ನೆಯ ನಿಯಮದಲ್ಲಿ ಹೇಳಿದಂತೆ) ಈ ವರ್ಷದ ಕೆಲಸಗಾರರಿಗೂ ಅನ್ವಯಿಸುವವು.

ಈ ವರ್ಗದಲ್ಲಿಯೂ ಹಿಂದಿನ ವರ್ಗದಂತೆಯೆ ಓದು, ಬರೆಹ, ಗಣಿತ ಹಾಗು ಪ್ರಬುದ್ಧರ ಶಿಕ್ಷಣದ ವರ್ಗಕ್ಕೆ ಸಂಬಂಧಿಸುವ ಇತರ ವಿಷಯಗಳ ಸಾಮಾನ್ಯ ಜ್ಞಾನ, ಗ್ರಾಮಸುಧಾರಣೆಯ ಸಾಧನಗಳು, ವಿನೋದಕರವಾದ ಹಲಕೆಲವು ವಿಷಯಗಳು, ಇವುಗಳನ್ನು ಕುರಿತು ಚರ್ಚಿಸಿ ಅವಶ್ಯಕ ಸಂಗತಿಗಳನ್ನೆಲ್ಲ ಸಂಗ್ರಹಿಸಿ ಹೇಳಲಾಯಿತು. ಧಾರವಾಡದ ವರ್ಧಾಶಿಕ್ಷಣಕೇಂದ್ರದ ಮುಖ್ಯಾಧ್ಯಾಪಕರು, ಟ್ರೇನಿಂಗ್ ಕಾಲೇಜದ ಶಿಕ್ಷಕರು, ಎಲ್ಲ ಅಸಿ. ಡೆ. ಎ. ಇನ್‌ಸ್ಪೆಕ್ಟರರು ಹಾಗು ಶ್ರೀ. ಜೆ. ಪಿ. ನಾಯಿಕರಂಥ ಉತ್ಸಾಹ-ಶಾಲಿಗಳಾದ ಕೆಲಸಗಾರರು ಇವರು ಈ ಕೆಲಸದಲ್ಲಿ ತುಂಬ ಉತ್ಸಾಹದಿಂದ ಮುಂದೆಬಂದು ತಮ್ಮ ತಮಗೆ ಒಪ್ಪಿಸಿಕೊಟ್ಟ ಕಾರ್ಯಗಳನ್ನು ನೆರವೇರಿಸಿದರು. ಅ. ಡೆ. ಎ. ಇ. ರಾದ ಶ್ರೀ. ತೇರಗಾವಕರರು ಈ ವರ್ಗದ ಆಂತರಿಕ ಆಡಳಿತೆಯ ಕೆಲಸವನ್ನು ತುಂಬ ದಕ್ಷತೆಯಿಂದ ನೋಡಿಕೊಳ್ಳುತ್ತಿದ್ದರು. ಶ್ರೀ. ಕುರಡಿಯವರು ಅವರಿಗೆ ತಕ್ಕ ನೆರವು ಕೊಡುತ್ತಿದ್ದರು. ಶ್ರೀ. ಜಾತಿಗೇರ ಶ್ರೀ. ಕುರಡಿ ಶ್ರೀ. ಕುಂಬಾರ ಮುಂತಾದ ಅನುಭವಿಕರು ಒಂದೊಂದು ಮಾದರಿಯ ಪಾಠಗಳನ್ನು ಕಲಿಸಿ

ತೋರಿಸಿದ ಬಳಿಕ ಶಿಕ್ಷಣದ ವರ್ಗಕ್ಕೆ ಬಂದ ಶಿಕ್ಷಕರಲ್ಲಿಯೂ ಕೆಲವರು ಉತ್ಸಾಹದಿಂದ ಮುಂದೆಬಂದು ಒಂದೊಂದು ಪಾಠ ಕಲಿಸಿದರು.

೪-೫-೧೯೪೨ನೆಯ ದಿನ ಮುಂಜಾನೆ ೮ ಗಂಟೆಗೆ ಟ್ರೇನಿಂಗ್ ಕಾಲೇಜದ ಜನರಲ್ ಹಾಲಿನಲ್ಲಿ ಈ ವರ್ಗದ ಪ್ರಾರಂಭಕಾರ್ಯವು ಶ್ರೀಮಾನ್ ತಾವಡೆ ಸಾಹೇಬರ ಅಧ್ಯಕ್ಷತೆಯಲ್ಲಿ ಜರುಗಿತು. ಈಶಸ್ತವನ ಸ್ವಾಗತಪದ್ಯಗಳಾದ ಮೇಲೆ ಶ್ರೀ. ಕೊಪ್ಪಳ ಗುಂಡೇರಾಯರು ನೆರೆದ ಶಿಕ್ಷಕರನ್ನೂ ಸದ್ಗೃಹಸ್ಥರನ್ನೂ ಕುರಿತು ನಾಲ್ಕು ಮಾತುಗಳನ್ನು ಆಡಿದರು. ಅವುಗಳ ಸಾರಾಂಶವು ಈ ರೀತಿಯಾಗಿದೆ:—

ಬಂಧುಭಗಿನಿಯರೇ, ನನ್ನ ಪ್ರೀತಿಯ ಶಿಕ್ಷಕರೇ,

ನೀವು ಈ ವರ್ಗದಲ್ಲಿ ಹೆಚ್ಚಿನವಿಷಯಗಳನ್ನು ಕಲಿತು ಹೋಗುವೆನೆಂಬ ಅತ್ಯಾಶೆ ಮಾಡಬೇಡಿರಿ. ನಿಮಗೆ ಈ ವರ್ಗಗಳನ್ನು ನಡೆಯಿಸಿದ ಪ್ರತ್ಯಕ್ಷ ಅನುಭವವಿದೆ. ಅನುಭವಜನ್ಯ ಜ್ಞಾನಕ್ಕಿಂತ ಹೆಚ್ಚಿನದು ಪರರ ಉಪದೇಶದಿಂದ ಬರಲಾರದು. ನಮ್ಮ ಪುಸ್ತಕೀಯ ಅಥವಾ ತಾರ್ಕಿಕ ಜ್ಞಾನದಿಂದ ನಿಮಗಾಗುವ ಪ್ರಯೋಜನಕ್ಕಿಂತಲೂ ನಿಮ್ಮ ಅನುಭವಜನ್ಯ ಜ್ಞಾನದಿಂದಲೇ ನಿಮಗೆ ಹೆಚ್ಚು ಪ್ರಯೋಜನವಾಗಬಹುದು. ಆದ್ದರಿಂದ ನಾನೂ ನನ್ನ ಸಹಾಯಕರೂ ನಿಮ್ಮ ಅನುಭವದ ಉಪಯೋಗಮಾಡಿಕೊಳ್ಳಲು ನಿರ್ಧರಿಸಿದ್ದೇವೆ. ಇರಲಿ. ನಾವೂ ಈ ವಿಷಯದಲ್ಲಿ ಹೆಚ್ಚು ಕಾಲ ಹೆಚ್ಚು ಶ್ರಮ ವಹಿಸಿ ವಿಚಾರಮಾಡಿದ್ದೇವೆ. ನಮ್ಮ ಮಾತಿನಿಂದ ನಿಮಗೆ ಏನೂ ಪ್ರಯೋಜನವಾಗಲಿಕ್ಕಿಲ್ಲೆಂದು ಮಾತ್ರ ತಿಳಿಯಬೇಡಿರಿ. ಆದ್ದರಿಂದ ಇಲ್ಲಿ ನಡೆಯುವ ಚರ್ಚೆ ಉಪನ್ಯಾಸಗಳನ್ನು ಲಕ್ಷ್ಯಪೂರ್ವಕವಾಗಿ ಕೇಳಿ ತಿಳಿದುಕೊಳ್ಳಿರಿ. ಉಪಕರಣಗಳನ್ನು ತಯಾರಿಸಿಕೊಳ್ಳಿರಿ.

ನಿರಕ್ಷರಿಗಳಾದ ಪ್ರಬುದ್ಧರನ್ನು ಅಲ್ಪ ಶ್ರಮದಿಂದ ಅಲ್ಪಕಾಲದಲ್ಲಿ, ಹೆಚ್ಚೆಂದರೆ ಆರು ತಿಂಗಳ ಕಾಲದಲ್ಲಿ, ಸಾಕ್ಷರಿಗಳನ್ನಾಗಿ ಮಾಡುವ ಉಪಾಯಗಳನ್ನು ಕುರಿತು ಚರ್ಚಿಸಿ ಒಂದು ನಿಶ್ಚಿತವಾದ ಧೋರಣೆಯ ನಿರ್ಣಯಕ್ಕೆ ಬರುವದೇ ಈ ವರ್ಗದ ಮುಖ್ಯಧ್ಯೇಯ. ಅದಕ್ಕೆ ಬೇಕಾಗುವ ಇತರ ಸಾಧನ ಸಾಮಗ್ರಿಗಳು, ಗ್ರಾಮಸುಧಾರಣೆ ಮುಂತಾದ ಪ್ರಚಲಿತ ವಿಷಯಗಳು, ಇವುಗಳನ್ನು ಕುರಿತು ಇಲ್ಲಿ ಚರ್ಚಿಸಲಾಗುವದು. ನುತ್ತು ಕೆಲವು ಪಾಠಗಳನ್ನು ಕಲಿಸಿ ತೋರಿಸಲಾಗುವದು. ನೀವೂ ಕೆಲವು ಪಾಠಗಳನ್ನು ಪ್ರಯೋಗರೂಪವಾಗಿ ಕಲಿಸಿರಿ.

ಸಾಕ್ಷರತಾ ಪ್ರಸಾರ ಕಾರ್ಯವು ಈ ವರ್ಷದಲ್ಲಿ ಹೇಗೆ ನಡೆದಿದೆಯೆಂಬ ಬಗ್ಗೆ ನಮ್ಮ ಜಿಲ್ಲೆಯ ಪುಟ್ಟಿಗೆ ನಾನು ಕೆಲವು ಅಂಕೆ ಸಂಖ್ಯೆಗಳನ್ನು ಕೊಡ-

ಬಲ್ಲೆನು. ಈ ವರ್ಷ ಧಾರವಾಡ ಜಿಲ್ಲೆಯಲ್ಲಿ ೭೨ ಕನ್ನಡ (೬೮ ಗಂಡು + ೪ ಹೆಣ್ಣು) ೧ ಮರಾಠಿ ೯ ಉರ್ದು ವರ್ಗಗಳು ನಡೆಯಿಸಲ್ಪಟ್ಟವು. ಈ ಎಲ್ಲ ವರ್ಗಗಳಲ್ಲಿ ಸೇರಿ ಪ್ರಬುದ್ಧ ವಿದ್ಯಾರ್ಥಿಗಳ ಸರಾಸರಿ ಹಾಜರಿಯು ೨೫೦೬ ಇತ್ತು. ಅವರಲ್ಲಿ ೧೮೦೨ ವಿದ್ಯಾರ್ಥಿಗಳು ಸಾಕ್ಷರಿಗಳಾದರೆಂದು ನಿರ್ಣಯಿಸಲ್ಪಟ್ಟರು. ಈ ವರ್ಗಗಳಿಗಾಗಿ ಸರಕಾರವು ೪೫೦೦ ರೂ. ಗಳನ್ನು ವೆಚ್ಚ ಮಾಡಬೇಕಾಯಿತು. ಒಬ್ಬ ಸಾಕ್ಷರಿಯಾದ ಪ್ರಬುದ್ಧ ವಿದ್ಯಾರ್ಥಿಗಾಗಿ ಸುಮಾರು ೪-೧೪-೬ ವೆಚ್ಚ ಬಂದಿರುವದು.

ಮುಂದಿನ ವರ್ಷಗಳಲ್ಲಿ ನೀವೆಲ್ಲರೂ ಹೆಚ್ಚು ಉತ್ಸಾಹದಿಂದ ಕೆಲಸ ಮಾಡಿ ಹೆಚ್ಚು ಜನ ಪ್ರಬುದ್ಧರನ್ನು ಸಾಕ್ಷರಿಗಳನ್ನಾಗಿ ಮಾಡುವ ಪುಣ್ಯತಮವಾದ ಕಾರ್ಯವನ್ನು ಹೆಚ್ಚು ಯಶಸ್ವಿಯಾಗಿ ನಡೆಯಿಸಿಕೊಡುವಿರೆಂದು ನಂಬಿರುವೆನು. ಇತ್ಯಾದಿ.

ಶ್ರೀಮಾನ್ ತಾವಡೆ ಸಾಹೇಬರು ಪ್ರಬುದ್ಧರ ಶಿಕ್ಷಣದ ಕೆಲಸಗಾರರ ವರ್ಗದ ಆರಂಭದ ಮತ್ತು ಕೊನೆಯ ದಿನಗಳಲ್ಲಿ ಶಿಕ್ಷಕರಿಗೆ ಉಪದೇಶಪರವಾದ ನಾಲ್ಕು ಮಾತುಗಳನ್ನು ಆಡಿ ಅವರನ್ನು ಹುರುಪುಗೊಳಿಸಿದರು. ಆ ಮಾತುಗಳು ಸಾಮಾನ್ಯವಾಗಿ ಇಡಿಯ ಶಿಕ್ಷಕ ವರ್ಗಕ್ಕೇ ಅನ್ವಯಿಸುವಂತಿರುವದರಿಂದ ಅವನ್ನು ಇಲ್ಲಿ ಕೊಡಲಾಗಿದೆ.

ಶ್ರೀ. ಎಸ್. ಆರ್. ತಾವಡೆ, ಎಮ್. ಎ. ಅವರ

ಪ್ರಾಸ್ತಾವಿಕ ಭಾಷಣದ ಮುಖ್ಯಾಂಶಗಳು

ಶಿಕ್ಷಕ ಬಂಧುಗಳೇ, ಪದ್ಮಹಸ್ತರೇ,

ಈ ಹೊತ್ತಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ನಿಮಗೆ ನೆರವಾಗುವ ದಕ್ಕೆ ನನಗೆ ತುಂಬ ಆನಂದವಾಗುವದು. ಹಿಂದಿನ ಸಾರಿಗಿಂತಲೂ ಈಸಾರಿ ಕಡಿಮೆ ಜನ ಕೆಲಸಗಾರರು ಬಂದಿರುವದನ್ನು ಕಂಡು ನನ್ನ ಮನಸ್ಸಿಗೆ ಸ್ವಲ್ಪ ಅಸಮಾಧಾನವೆನಿಸಿದೆ. ಆದರೆ ಅದಕ್ಕೆ ಯೋಗ್ಯ ಕಾರಣಗಳೂ ಇವೆ. ಈ ವರ್ಗವನ್ನು ಪ್ರಾರಂಭಿಸುವ ಕೆಲಸವು ತುಂಬ ಅವಸರದಿಂದ ನಡೆಯಿತು. ಆಯಾ ಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು ತಾವು ಆರಿಸಿದ ಶಿಕ್ಷಕರಿಗೆ ಅಪ್ಪಣೆ ಕಳಿಸುವದಕ್ಕೂ ಸಾಕಾದಷ್ಟು ಅವಕಾಶ ದೊರೆಯಲಿಲ್ಲ. ಎಷ್ಟೋ ಜನ ಕೆಲಸಗಾರರಿಗೆ ಇನ್ನೂ ಆ ಅಪ್ಪಣೆಯ ಕಾಗದವು ಮುಟ್ಟಿಲ್ಲವೆಂದೂ ಹೇಳುತ್ತಾರೆ.

ಈ ಬೇಸಗೆಯ ಬಿಡುವಿನ ಕಾಲವು ಎಲ್ಲರಿಗೂ ಅನುಕೂವಾಗಿಲ್ಲವೆಂದು ಹೇಳುವದುಂಟು. ಇದು ವಿಶ್ರಾಂತಿಯ ಕಾಲ. ೪-೬ ತಿಂಗಳ ಬಿಟ್ಟುಬಿಡದೆ ಕೆಲಸ ಮಾಡಿ ದಣಿದ ಶಿಕ್ಷಕರು ವಿಶ್ರಾಂತಿಯನ್ನು ಕೋರುವದೇನೂ ಆಶ್ಚರ್ಯವಲ್ಲ. ಇವರಲ್ಲಿ ಹೊಲಮನೆಗಳ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕೆನ್ನುವವರು ಹಲವರು. ಹೆಂಡಿರುಮಕ್ಕಳೊಡನೆ ವಿಶ್ರಾಂತಿಯಿಂದ ಕಾಲಕಳೆಯಬೇಕೆನ್ನುವವರು ಕೆಲವರು. ಮಳೆಗಾಲದ ಸಂಸಾರದ ಜೋಡಣೆಯಂತೂ ಎಲ್ಲರಿಗೂ ಬೇಕೇಬೇಕು. ಹೀಗೆ ಬಗೆಬಗೆಯ ಸಿದ್ಧತೆ ಮಾಡಿಕೊಂಡು ಮುಂದಿನ ವರ್ಷದ ಕೆಲಸಕ್ಕೆ ಹೊಸ ಹುರುಪಿನಿಂದ ಸಿದ್ಧರಾಗಬೇಕೆನ್ನುವ ಸಮಯವಿದು. ಇಂಥ ಸಮಯದಲ್ಲಿ ನಾವು ನಿಮ್ಮನ್ನು ಈ ವರ್ಗಕ್ಕೆ ಅನಿವಾರ್ಯವಾಗಿ ಕರೆಸಬೇಕಾಯಿತು. ನೀವು ಕೂಡ ನಮ್ಮ ಕರೆಯಕ್ಕೆ ತಕ್ಕ ಮನ್ನಣೆಕೊಟ್ಟು ಇಲ್ಲಿಗೆ ಬಂದಿರಿ; ಒಳಿತಾಯಿತು. ಇದು ರಾಷ್ಟ್ರಸೇವೆಯ ಕಾರ್ಯ. ಇಂಥ ಪುಣ್ಯತಮವಾದ ಕಾರ್ಯಕ್ಕೆ ಕರೆದಾಗ ಸಿದ್ಧರಿನ್ನುವದು ಒಳಿತಲ್ಲವೇ? ಉತ್ಸಾಹದರ್ಶಕವಲ್ಲವೇ?

ಪ್ರಬುದ್ಧರ ವರ್ಗಗಳನ್ನು ನಡೆಯಿಸಿ ಸಾಕ್ಷರತಾಪ್ರಸಾರ ಮಾಡುವದು ಒಂದು ಮಹತ್ವದ ದೇಶಕಾರ್ಯ. ನಮ್ಮ ದೇಶದಲ್ಲಿ ಹಿಂದೆ ಹಲವರು ಹಲವುಬಗೆಯಿಂದ ರಾಷ್ಟ್ರಕಾರ್ಯವನ್ನು ನೆರವೇರಿಸಿದರು. ಯಾವುದೊಂದು ಮಹತ್ಕಾರ್ಯದ ಘಟನೆಗಾಗಲಿ ಮಹಾಪುರುಷರ ಉದಯಕ್ಕಾಗಲಿ ದೇಶಕಾಲಪರಿಸ್ಥಿತಿಗಳೇ ಕಾರಣವಾಗುವವು. ಇದಕ್ಕೆ ಮಹಾರಾಷ್ಟ್ರದ ಇತಿಹಾಸದಲ್ಲಿ ಒಂದು ಉಜ್ವಲವಾದ ಉದಾಹರಣೆಯಿದೆ. ಆಗ ಪರಕೀಯರ ಆಳಿಕೆಯಿಂದ ಮಹಾರಾಷ್ಟ್ರವು ಹಣ್ಣು ಹಣ್ಣಾಗಿತ್ತು. ಜನರಲ್ಲಿ ಸ್ವಾತಂತ್ರ್ಯಜೀವನದ ಹಂಬಲವೇ ಇರಲಿಲ್ಲ. ಅಂಥ ಪರಿಸ್ಥಿತಿಯಲ್ಲಿ ತುಕಾರಾಮ, ರಾಮದಾಸ, ಜ್ಞಾನೇಶ್ವರ ಮುಂತಾದ ಸಾಧು ಸಂತರು ಉದಯಿಸಿ ದೇಶದಲ್ಲಿ ಪ್ರಚಾರಕಾರ್ಯವನ್ನು ಕೈಕೊಂಡರು. ಅವರ ಪ್ರಚಾರಕಾರ್ಯವೇ ಶಿವಾಜಿಯ ಉದಯಕ್ಕೂ ಮಹಾರಾಷ್ಟ್ರರ ರಾಜ್ಯಸ್ಥಾಪನೆಗೂ ಕಾರಣವಾಯಿತು. ಆರ್ಥಾತ್ ಆ ಕಾಲದ ಸುಪ್ರಸಿದ್ಧ ಸಾಧುಸಂತರಾದ ಜ್ಞಾನೇಶ್ವರ, ತುಕಾರಾಮ, ರಾಮದಾಸರೇ ನಮ್ಮ ಉದ್ಧಾರಕ್ಕೆ ಕಾರಣರೆನಿಸಿದರು. ನಮಗೆ ಇಂದು ಇಂಥದೇ ಪರಿಸ್ಥಿತಿಯುಂಟಾಗಿದೆ. ದೇಶವು ನಿರಕ್ಷರತೆಯ ಗಾಢಕತ್ತಲೆಯಲ್ಲಿ ಮುಳುಗಿಹೋಗಿದೆ; ಮಲಗಿ ನಿದ್ರಿಸುತ್ತಿದೆ. ಅದನ್ನು ಎಬ್ಬಿಸುವದಕ್ಕಾಗಿ ಕೋಳಿಗಳು ಕೂಗಿ ಸೂರ್ಯೋದಯವನ್ನು ಸೂಚಿಸಬೇಕಾಗಿದೆ. ನಿದ್ರೆಯಿಂದ ಮುಚ್ಚಿಹೋದವರ ಕಣ್ಣಿಗೆ ಅಂಜನವನ್ನಿಕ್ಕಬೇಕಾಗಿದೆ. ನೀವು ಜ್ಞಾನೇಶ್ವರ ತುಕಾರಾಮರಂತೆ ನಿಸ್ವಾರ್ಥಬುದ್ಧಿಯಿಂದ ಪ್ರಚಾರಕಾರ್ಯವನ್ನು ಕೈಕೊಂಡು ಜನತೆಯ ಅಂಧಕಾರವನ್ನು ಕಳೆಯಲು ಯತ್ನಿಸಬೇಕು. ಇಂದಿನ ಶಿಕ್ಷಕವರ್ಗವು

ಹಿಂದಿನ ಸಾಧುಸಂತರ ನಿಷ್ಕಾಮವೃತ್ತಿಯನ್ನು ಅನುಕರಿಸಿ ಕೆಲಸಮಾಡಿದರೇನೇ ಈ ಪವಿತ್ರ ರಾಷ್ಟ್ರಕಾಯವು ಸಾಧಿಸಬಹುದು. ನಿಮ್ಮ ಪ್ರೇರಣೆಯಿಂದ ಶಿವಾಜಿಯಂಥ ಮಹಾಪುರುಷರು ಉದಯವಾಗಿ ರಾಷ್ಟ್ರೋದ್ಧಾರ ಮಾಡಬಹುದೆಂದು ಭಾರತಮಾತೆಯು ಎದುರು ನೋಡುತ್ತಲಿರುವಳು.

ಇನ್ನೊಂದು ಉದಾಹರಣೆಯನ್ನು ನೋಡಿರಿ. ಒಬ್ಬನಿಗೆ ಧನುರ್ವಾತದಂಥ ಉಗ್ರ ಬೇನೆಯು ಆವರಿಸಿದೆ. ಕೈಕಾಲು ಬಿಗಿದು ನಿಂತಿವೆ. ಕಣ್ಣುಗಳು ಮೇಲೆ ಸೇರಿವೆ. ಆಗಾಗ ಮಣಿದು ಸೆಟೆಯುತ್ತಾನೆ. ಕೆಟ್ಟ ಧ್ವನಿಯಿಂದ ಒದರುತ್ತಿದ್ದಾನೆ. ಈಗಲೋ ಇನ್ನೊಂದು ಗಳಿಗೆಗೋ ಎಂದು ಆಪ್ತೇಷ್ಟರು ದುಃಖದಿಂದ ಕಂಗಾಲಾಗಿದ್ದಾರೆ. ಆಗ ಒಬ್ಬ ಡಾಕ್ಟರನು ಬಂದು ಅತಿ ತೀವ್ರ ಪರಿಣಾಮಕಾರಿಯಾದ ಒಂದು ಔಷಧಿಯನ್ನು ಚುಚ್ಚಿ ರಕ್ತದಲ್ಲಿ ಸೇರಿಸಿ (ಇಂಜೆಕ್ಶನ್ ಮಾಡಿ) ರೋಗನಿವಾರಣೆ ಮಾಡುತ್ತಾನೆ. ಅವನಿಗೆ ಹೊಟ್ಟೆಯೊಳಗೆ ಔಷಧ ಕೊಟ್ಟು ಗುಣಪಡಿಸುವಷ್ಟು ಅವಕಾಶವಿರುವದಿಲ್ಲ. ನಮ್ಮ ದೇಶಕ್ಕೂ ಇಂಥದೇ ಸಂದರ್ಭವಿಂದು ಬಂದಿರುವದು. ದೇಶವು ನಿರಕ್ಷರತೆಯ ಬೇನೆಯಿಂದ ಬಳಲಿ ಸಾಯುವ ಹೊತ್ತು ಬಂದಿರುವದು. ಈ ಸಂದರ್ಭದಲ್ಲಿ ಪ್ರಬುದ್ಧರ ಶಿಕ್ಷಣಕಾರ್ಯದಂಥ ತೀವ್ರ ಪರಿಣಾಮಕಾರಿಯಾದ ಔಷಧೋಪಚಾರವು ನಡೆದ ಹೊರತು ಗತ್ಯಂತರವಿಲ್ಲ.

ರಾಷ್ಟ್ರನಿಷ್ಠೆಯಿಲ್ಲದ ವ್ಯಕ್ತಿಯು ಕೇವಲ ಶವದಂತೆಯೇ ಸರಿ. ಜಗತ್ತಿನಲ್ಲಿ ಜನಿಸಿದ ಮಾನವರೆಲ್ಲರೂ ಸರಿಸಮಾನರು. ಹಾಗೆ ನಾವು ಇತರರೊಡನೆ ಸರಿಸಮಾನವಾದ ಹಕ್ಕುಬಾಧ್ಯತೆಗಳನ್ನು ಪಡೆದು ಬಾಳಬೇಕಾದರೆ ನಮ್ಮ ರಾಷ್ಟ್ರವು ಉಜ್ವಲವಾದ ರಾಷ್ಟ್ರಭಕ್ತಿಯಿಂದ ಬೆಳಗಬೇಕು. ಆದರೆ ನಮ್ಮಲ್ಲಿ ಇನ್ನೂ ಅಂಥ ಸ್ಥಿತಿಯುಂಟಾಗಿಲ್ಲ. ೪೦ ಕೋಟಿ ಜನತೆಯಲ್ಲಿ ಎಷ್ಟು ಜನರಿಗೆ ನಾವು, ನಮ್ಮ ದೇಶ, ಎಂಬುದರ ಕಲ್ಪನೆಯಿದೆ? ಸದ್ಯದ ಮಹಾಯುದ್ಧದ ಸಂದರ್ಭದಲ್ಲಿ ನಮ್ಮ ಜನರು ಕೇವಲ ದನಕುರಿಗಳಂತೆ ನಡೆಸಿಕೊಳ್ಳಲ್ಪಡುತ್ತಿದ್ದಾರೆ. ಬ್ರಹ್ಮದೇಶ ಮಲಾಯಾ ಮುಂತಾದ ಕಡೆಗಳಲ್ಲಿದ್ದ ಹಿಂದುಗಳ ಅವಸ್ಥೆಯು ಇಂದು ಏನಾಗಿದೆ? ಇಟಲಿ, ಜರ್ಮನಿ, ಜಪಾನಗಳಲ್ಲಿಯ ಜನರು ಯಾವ ಬಗೆಯ ಸ್ವಾತಂತ್ರ್ಯದಲ್ಲಿ ಎದೆಹಾಯಿಸಿ ನಿಂತಿದ್ದಾರೆ? ಈಗ ಇರುವಂತೆಯೇ ಇನ್ನು ಮುಂದೆಯೂ ಉಳಿದರೆ ನಾವು ಬದುಕಿಬಾಳುವುದು ಸಾಧ್ಯವಿಲ್ಲ. ಅಂಥ ಜೀವನದಲ್ಲಿ ಅರ್ಥವೂ ಇಲ್ಲ. ಇಂದು ನಾವು ಬದುಕಿದವರೂ ಅಲ್ಲ; ಸತ್ತವರೂ ಅಲ್ಲ, ಇಂಥ ಸ್ಥಿತಿಯಲ್ಲಿದ್ದೇವೆ. ಆದ್ದರಿಂದ ಶಿಕ್ಷಕ ಬಂಧುಗಳೇ, ಮುಂದೆ ಬನ್ನಿರಿ. ರಾಷ್ಟ್ರದ ಉದ್ಧಾರಕಾರ್ಯವಾದ ಸಾಕ್ಷರತಾ ಪ್ರಸಾರದಂಥ ಪವಿತ್ರಕಾರ್ಯದಲ್ಲಿ ನೆರವಾಗಿರಿ. ಕೇವಲ

ಸಾಕ್ಷರತೆಯೊಂದೇ ಸಾಲದು. ಜನರ ಮನಸ್ಸಿನಲ್ಲಿ ಏಕರಾಷ್ಟ್ರೀಯ ಭಾವನೆಯಿಲ್ಲದೆ ಕೆಲಸವಾಗದು. ಅಂತಃಕರಣದಲ್ಲಿ ಜಾಗ್ರತೆಯನ್ನು ಹುಟ್ಟಿಸಬೇಕು. ಜನತೆಯ ಸುಪ್ತ ಆತ್ಮವನ್ನು ಜಾಗ್ರತಗೊಳಿಸಬೇಕು.—ಬುದ್ಧಿಪೂರ್ಣವಾದ ಜೀವನವನ್ನು ಜಾಗ್ರತಗೊಳಿಸಬೇಕು.

ಇಲ್ಲಿಗೆ ಬಂದಿರುವ ನೀವು ನನ್ನ ಅಥವಾ ನಿಮ್ಮ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಅಪ್ಪಣೆಯನ್ನು ಪಾಲಿಸುವದಕ್ಕಾಗಿ ಇಲ್ಲಿಗೆ ಬಂದಿರುವಿರೆಂದಾಗಲಿ, ಏನೋ ಎರಡು ದುಡ್ಡು ಸಿಗಬಹುದೆಂಬ ಆಶೆಯಿಂದ ಬಂದಿರುವಿರೆಂದಾಗಲಿ ನಾನು ಭಾವಿಸಿಲ್ಲ. ಅದು ಅನುಮುಖ್ಯಕಾರಣ. ಅಂತಃಕರಣದಲ್ಲಿ ಉದಯವಾದ ರಾಷ್ಟ್ರೀಯ ಭಾವನೆಯಿಂದ ಪ್ರೇರಿತರಾಗಿಯೇ ನೀವೆಲ್ಲರೂ ಇಲ್ಲಿಗೆ ಬಂದಿರುವಿರೆಂದು ನಾನು ತಿಳಿಯುತ್ತೇನೆ; ಸ್ವದೇಶ, ಸ್ವಜನರ ಹಿತದ ಸಲುವಾಗಿ ಕಾರ್ಯಮಾಡಲು ಉತ್ಸಾಹಿತರಾಗಿ ಮುಂದೆ ಬಂದಿರುವಿರೆಂದು ನಂಬುತ್ತೇನೆ. 'ದೇಶದಲ್ಲಿ ಸಾಕ್ಷರತಾ ಪ್ರಸಾರ ಮಾಡುವದು ಪರಮ ಪವಿತ್ರ ಕಾರ್ಯ—ಇದು ನನ್ನ ಕರ್ತವ್ಯ—ಈ ನನ್ನ ಕರ್ತವ್ಯವನ್ನು ನಾನು ನನಗೆ ಸಾಧ್ಯವಿದ್ದಮಟ್ಟಿಗೆ ಮಾಡೇ ತೀರಬೇಕು.' ಎಂಬ ನಿರ್ಧಾರದಿಂದ ನೀವು ಈ ಕಾರ್ಯದಲ್ಲಿ ತೊಡಗಿದ್ದೀರಿ. ಆ ಕಾರ್ಯಕ್ಕೆ ಬೇಕಾಗುವ ಸಾಧನಸಾಮಗ್ರಿಗಳನ್ನೂ ತಕ್ಕಜ್ಞಾನವನ್ನೂ ಪಡೆದು ಪೂರ್ವಸಿದ್ಧತೆ ಮಾಡಿಕೊಳ್ಳಲು ಇಲ್ಲಿಗೆ ಬಂದಿರುವರೆಂದು ನಾನು ಇನ್ನೊಮ್ಮೆ ಹೇಳಬಯಸುತ್ತೇನೆ.

ನೀವು ನಿಮ್ಮ ಹೆಂಡಿರು ಮಕ್ಕಳ ಹಿತವನ್ನಷ್ಟೇ ನೋಡಿಕೊಂಡರೆ ಸಾಲದು. ಪ್ರತಿಯೊಬ್ಬನಲ್ಲಿಯೂ ನಾನು ನನ್ನ ಜೀವನದಲ್ಲಿ ಇಂಥದೊಂದು ದೇಶಕಾರ್ಯವನ್ನು ಮಾಡಿದೆನು ಎಂಬ ಉಚ್ಚ ಭಾವನೆಯಿರಬೇಕು. ಇಂದಿಗೆ ಅತ್ಯಾವಶ್ಯಕವಾದ ದೇಶಕಾರ್ಯವೆಂದರೆ ಸಾಕ್ಷರತಾ ಪ್ರಸಾರ. ಆದುದರಿಂದ 'ನಾನು ಇಷ್ಟು ಹಣವನ್ನು ಗಳಿಸಿದೆನು. ಇಷ್ಟು ಆಸ್ತಿಯನ್ನು ದೊರಕಿಸಿದೆನು. ನನಗೆ ಇಷ್ಟು ಮಂದಿ ಮಕ್ಕಳಿದ್ದಾರೆ. ಅವರಿಗೆ ಇಷ್ಟಿಷ್ಟು ಶಿಕ್ಷಣ ಕೊಟ್ಟಿನು,' ಮುಂತಾದ ಸ್ವಂತ ಹಿತದ ಮಾತುಗಳಿಂದ ಸಮಾಧಾನಹೊಂದುವ ಜನರನ್ನು ನಾವು ಬೇಕಾದಲ್ಲಿ ಕಾಣಬಹುದು. ಆದರೆ ನಾನು ಇಂಥದೊಂದು ರಾಷ್ಟ್ರಕಾರ್ಯವನ್ನು ಮಾಡಿದೆನು. ಇಷ್ಟು ಜನರನ್ನು ಸಾಕ್ಷರಿಗಳನ್ನಾಗಿ ಮಾಡಿದೆನು. ಕುರುಡರಾದ ನನ್ನ ಬಂಧುಗಳಲ್ಲಿ ಇಷ್ಟು ಜನರಿಗೆ ದೃಷ್ಟಿಶಕ್ತಿಯನ್ನು ಒದಗಿಸಿಕೊಟ್ಟಿನು, ಎಂದು ಎದೆ ತಟ್ಟಿ ಧೈರ್ಯದಿಂದ ಹೇಳುವಂಥ ಜನರನ್ನು ಕಾಣುವದು ಅಪರೂಪ. ನೀವು ನಿಮ್ಮ ದೈನಂದಿನ ಜೀವನದಲ್ಲಿ ಇದೊಂದು ಗುರಿಯನ್ನು ಸಾಧಿಸಲು ಯತ್ನಿಸಿರಿ. ೧-೨-೧೦-೨೦, ೧೦೦ ಎಷ್ಟು ಸಾಧಿಸಿದಷ್ಟು ಜನರನ್ನು ಸಾಕ್ಷರಿಗಳನ್ನಾಗಿ ಮಾಡೇ ಮಾಡುವೆನು, ಇದು ನನ್ನ ಜೀವನದ ಸಾರ್ಥಕತೆಯ ಒಂದು ಸಾಧನ, ಎಂದು ಭಾವಿಸಿರಿ.

ಸಾಕ್ಷರತೆಯೇ ನಮ್ಮ ಸಾಧ್ಯವಲ್ಲ. ಅದು ಸಾಧನ ಮಾತ್ರ. ಏಕ ರಾಷ್ಟ್ರೀಯ ಭಾವನೆ ಸ್ವಾತಂತ್ರ್ಯಪ್ರವೃತ್ತಿ ಮುಂತಾದ ಉಜ್ವಲ ಗುಣಗಳನ್ನು ವಿದ್ಯಾರ್ಥಿಗಳಿಗೆ ನಾವು ಅವಶ್ಯವಾಗಿ ದೊರಕಿಸಿಕೊಡಬೇಕಾಗಿದೆ. ಆ ಸಂದರ್ಭದಲ್ಲಿ ನಾವು ನಮ್ಮ ಇಂದಿನ ಪರಿಸ್ಥಿತಿಯನ್ನು ಅವರ ಮುಂದಿರಿಸಬೇಕಾಗುವದು. ಆಗ ನಾವು ಸರಕಾರದ ವಿರುದ್ಧ ಪ್ರಚಾರಮಾಡಲು ಹೊರಡಬಾರದು. ಸರಕಾರವನ್ನು ಹೊಗಳಿ ಮಾತಾಡಲಿಕ್ಕೂ ಸಹ ಹೆಚ್ಚಾಗಿ ಹವಣಿಸಬಾರದು. ಒಳ್ಳೆಯ ವೃತ್ತಪತ್ರಿಕೆಗಳನ್ನು ಸಮತೋಲನ ವೃತ್ತಿಯಿಂದ ಓದಿ, ಅವುಗಳಲ್ಲಿ ಹೇಳಿರುವ ವಿಚಾರಗಳನ್ನು ನಿಮ್ಮ ವಿದ್ಯಾರ್ಥಿಗಳಿಗೆ ತಿಳಿಸಿಕೊಡಿರಿ; ಇಷ್ಟರಿಂದಲೇ ಎಷ್ಟೋ ಕೆಲಸವಾಗಬಹುದು.

ಗ್ರಾಮಸುಧಾರಣೆಯು ನಾವು ಕೈಕೊಳ್ಳಬೇಕಾದ ಅವಶ್ಯಕ ಕಾರ್ಯಗಳಲ್ಲಿ ಒಂದೆಂಬದನ್ನು ಅವರ ಲಕ್ಷ್ಯಕ್ಕೆ ತಂದುಕೊಡಿರಿ. ಬ್ರಹ್ಮದೇಶದಲ್ಲಿ ಜನರ ಹಾಡೇ ನಾಗಿರುವದೆಂಬದನ್ನು ಕೇಳಿಕೊಳ್ಳಿರಿ. ಮುಂಬಯಿ ಮದ್ರಾಸ ಕಲಕತ್ತೆಗಳಂಥ ದೊಡ್ಡ ಊರುಗಳಲ್ಲಿ ಆತ್ಮರಕ್ಷಣೆಯ ಬಗ್ಗೆ ಯಾವ ಕಾರ್ಯಗಳು ನಡೆದಿವೆಯೆಂಬದನ್ನು ಅರಿತುಕೊಳ್ಳಿರಿ. ನಿಮ್ಮ ಹಳ್ಳಿಗಳನ್ನು ರಕ್ಷಿಸುವದಕ್ಕಾಗಿ ನೀವು ಏನು ಮಾಡಬೇಕಾಗಿದೆಯೆಂಬದನ್ನು ಆಲೋಚಿಸಿರಿ. ಹಗೆಗಳ ಸೈನ್ಯವು ಬಂದು ನಿಮ್ಮನ್ನು ಆಪತ್ತಿಗೀಡುಮಾಡುವ ಮಾತು ಬೇರೆ. ಆ ಸಂದರ್ಭವು ಹಳ್ಳಿಗಳಿಗೆ ತೀರ ಕಡಿಮೆ. ಆದರೆ ಯುದ್ಧಕಾಲದಲ್ಲಿ ಅಂತಸ್ಥ ವ್ಯವಸ್ಥೆ ಕಡಿಮೆಯಾಗುವದರಿಂದ ನಿಮ್ಮ ನೆರೆಹೊರೆಯವರಿಂದಲೇ ನಿಮಗೆ ಪೀಡೆಯಾಗುವ ಸಂಭವವೇ ಹೆಚ್ಚು. ಅದಕ್ಕಾಗಿ ನಿಮ್ಮಲ್ಲಿಂದು ವ್ಯವಸ್ಥೆಯನ್ನು ಹೂಡಿಕೊಳ್ಳಿರಿ. ಹಳ್ಳಿಯ ತರುಣರನ್ನು ಎಚ್ಚರಿಸಿ ಅವರಿಗೆ ಆತ್ಮರಕ್ಷಣೆಯ ಉಪಾಯಗಳನ್ನು ತಿಳಿಸಿಕೊಡಿರಿ. ಪ್ರತಿಹಳ್ಳಿಯೂ ತನ್ನನ್ನು ತಾನೇ ರಕ್ಷಿಸಿಕೊಳ್ಳುವ ಪೂರ್ವಸಿದ್ಧತೆಯನ್ನು ಈಗಲೇ ಹೂಡಿಕೊಳ್ಳಿರಿ. ಅದಕ್ಕಾಗಿ ಈಗಿನಿಂದಲೇ ತಕ್ಕ ಚಟುವಟಿಕೆಗಳನ್ನು ನಡೆಯಿಸುವದು ಅನಿವಾರ್ಯವಾಗಿದೆಯೆಂಬದನ್ನು ನೀವು ತಿಳಿದುಕೊಳ್ಳಿರಿ. ನಿಮ್ಮ ವಿದ್ಯಾರ್ಥಿಗಳಿಗೆ ತಿಳಿಸಿಕೊಡಿರಿ.

ಸಾಕ್ಷರತಾ ಪ್ರಸಾರ, ಗ್ರಾಮಸುಧಾರಣೆ, ಇವು ಬಹು ಘನತರವಾದ ಕಾರ್ಯಗಳು. ಅಖಿಲ ಭರತಖಂಡದ ತುಂಬ ಹಗಲಿರುಳು ಚಳಿವಳಿ ನಡೆದಾಗಲೆ ಅಲ್ಪಸ್ವಲ್ಪ ಕಾರ್ಯವಾಗಬಹುದು. ಇಂಥ ಹಿಮಾಲಯದಷ್ಟು ದೊಡ್ಡ ಕಾರ್ಯದಲ್ಲಿ ನಾವು ಎಷ್ಟು ಭಾಗವಹಿಸಬಹುದು ಎನ್ನಬೇಡಿರಿ. ಇದಕ್ಕೊಂದು ಉದಾಹರಣೆಯನ್ನು ಹೇಳುವೆನು.

ಹತ್ತಿಪ್ಪತ್ತು ಕೂರಿಗೆ ಹೊಲವುಳ್ಳ ಒಬ್ಬ ಒಕ್ಕಲಿಗನಿದ್ದಾನೆ. ಅವನ ಹಿರಿಯರು ಆ ಹೊಲದಲ್ಲಿ ಬಿತ್ತಿ ಬೆಳೆದು ಶ್ರೀಮಂತನಾಗಿ ಜೀವಿಸುತ್ತಿದ್ದರು. ಆದರೆ ಇಂದು

ಅವನು ತೀರ ಬಡವನಾಗಿದ್ದಾನೆ. ಹೊಲ ತುಂಬ ಕಳೆ ಬೆಳೆದಿದೆ; ಕರಿಕೆ ಹತ್ತಿದೆ. ಬಿತ್ತಿದರೆ ಬೆಳೆಗಿಂತ ಕಳೆಯೆ ಹೆಚ್ಚಾಗಿ ಬೆಳೆದು ಬಿಟ್ಟು ಕಾಳಿಗಿಂತ ಕಸವೇ ಹೆಚ್ಚಾಗಿಹೋಗುತ್ತಿದೆ. ಇಂಥ ಸ್ಥಿತಿಯಲ್ಲಿ ಅವನೇನು ಮಾಡಬೇಕು? 'ದೇವರೇ ಮುಂದೇನು ಗತಿ' ಎಂದು ಅಳುತ್ತ ಕುಳಿತರೆ ಸಾಗಬಹುದೇ?

ಇದರಂತೆ ನಮ್ಮ ದೇಶದ ತುಂಬ ಅಜ್ಞಾನದ ಕಳೆ ಬೆಳೆದಿದೆ. ಹಳ್ಳಿಗಳೂ ಪಟ್ಟಣಗಳೂ ದ್ವೇಷ, ಅಸೂಯೆ, ಅಸತ್ಯ, ಅನ್ಯಾಯ, ಪಕ್ಷ-ಪಂಗಡಗಳ ಕಲಹ ಇವುಗಳಿಂದ ತುಂಬಿಹೋಗಿವೆ. ನಿರಕ್ಷರತೆಯೇ ಇವಕ್ಕೆಲ್ಲ ಮೂಲ ಕಾರಣ. ಗಿಡದ ತುಂಬ ಬಂದಳಿಕೆ ಹತ್ತಿದರೆ ಗಿಡವು ಬೆಳೆದು ಫಲ ಕೊಡುವ ಬಗೆ ಹೇಗೆ? ಆದುದರಿಂದ ಈ ನಿರಕ್ಷರತೆಯ ಕಳೆಯನ್ನು ಕಿತ್ತೊಗೆಯದೆ ಗತ್ಯಂತರವಿಲ್ಲ.

ಮೇಲೆ ಹೇಳಿದ ಒಕ್ಕಲಿಗನು ತನ್ನ ಹೊಲವನ್ನು ಬೆಳೆ ಬರುವಂತೆ ಮಾಡಬೇಕಾದರೆ ಮೊದಲು ಹೊಲಕ್ಕೆ ಹತ್ತಿದ ಕರಿಕೆಯನ್ನು ತೆಗೆಯಲು ಯತ್ನಿಸಬೇಕು. ದೊಡ್ಡ ಹೊಲ, ನನ್ನೊಬ್ಬನಿಂದಲೇ ಏನಾದೀತು, ಎಂದರೆ ಸಾಗದು. ಅವನು ತಾನು ಹೊಲದ ಒಂದು ಕಡೆಯಿಂದ ಕೆಲಸ ಮಾಡಬೇಕು; ಹೆಂಡಿರು ಮಕ್ಕಳನ್ನು ಬೇರೆ ಬೇರೆ ಕಡೆಯಿಂದ ಕರಿಕೆಯನ್ನು ತೆಗೆಯಲು ನಿಯಮಿಸಬೇಕು. ಹೀಗೆ ಸುತ್ತು ಕಡೆಯಿಂದ ಕೆಲಸ ಪ್ರಾರಂಭಿಸಿ ಸಂತತ ಪ್ರಯತ್ನಮಾಡತೊಡಗಿದರೆ ಇಂದಿಲ್ಲ ನಾಳೆ, ಇನ್ನೊಂದು ತಿಂಗಳ ಮೇಲೆ, ಒಂದು ವರ್ಷದ ಮೇಲೆಯಾದರೂ ಅವನ ಹೊಲದ ಕೆಲವೊಂದು ಭಾಗವಾದರೂ ಕೈಗೆ ಹತ್ತಬಹುದು. ಇದರಂತೆಯೇ ಸಾಕ್ಷರತಾ ಪ್ರಸಾರಕಾರ್ಯದಲ್ಲಿ ಸಂತತವಾಗಿಯೂ ಸರ್ವವಿಧದಿಂದಲೂ ಸರ್ವತೋಮುಖವಾಗಿಯೂ ಪ್ರಯತ್ನ ನಡೆಯಬೇಕಾಗಿದೆ.

ಇಡಿಯ ಹಿಂದುಸ್ತಾನದ ಮಾತು ಒತ್ತಟ್ಟಿಗಿರಲಿ, ನಮ್ಮ ಕರ್ನಾಟಕದ ಸ್ಥಿತಿಯನ್ನೇ ಮೊದಲು ಪರ್ಯಾಲೋಚಿಸೋಣ. ಕಳೆದ ವರ್ಷ ನಮ್ಮ ಕರ್ನಾಟಕದಲ್ಲಿ ಒಟ್ಟು ೨೬೭ ವರ್ಗಗಳಲ್ಲಿ ಸೇರಿ ೭೫೫೩ (೬೭೫೩ಗಂ+೮೦೦ ಹೆ.) ಪ್ರಬುದ್ಧ ವಿದ್ಯಾರ್ಥಿಗಳಿದ್ದರೆಂದೂ ಅವರಲ್ಲಿ ಸುಮಾರು ೨೫೩೨ ಜನರು (೨೨೯೯ಗಂ+೨೪೩ಹೆ) ಸಾಕ್ಷರಿಗಳಾದರೆಂದೂ ಅಂಕೆ-ಸಂಖ್ಯೆಗಳಿಂದ ಗೊತ್ತಾಗಿದೆ. ಇದಕ್ಕಾಗಿ ಸರಕಾರಕ್ಕೆ ೧೬೫೦೯ ರೂ. ವೆಚ್ಚವಾಗಿದೆ. ಇಡಿಯ ಕರ್ನಾಟಕದ ಜನಸಂಖ್ಯೆಯ ಮಾನದಿಂದ ಇದು ಏನೂ ಅಲ್ಲ. ಈ ಪ್ರಮಾಣದಿಂದ ಸಾಕ್ಷರಿಗಳಾದರೆ ಅಖಂಡ ಕರ್ನಾಟಕವು ಸಾಕ್ಷರಿಯಾಗುವದೆಂದಿಗೆ, ಎಂದು ನಿರಾಶರಾಗುವ ಕಾರಣವಿಲ್ಲ.

ಹನಿ ಹನಿ ಕೂಡಿ ಹಳ್ಳವಾಗುವದು; ತೆನೆ ತೆನೆ ಕೂಡಿ ರಾಶಿಯಾಗುವದು.

ಸಂತತವಾಗಿ ದೃಢನಿಶ್ಚಯದಿಂದ ಕೆಲಸ ಮಾಡಿದರೆ ಇಂದಿಲ್ಲ ನಾಳೆ ಕಾರ್ಯ ವಾಗೇ ಆಗುವದೆಂಬ ವಿಷಯದಲ್ಲಿ ಒಂದು ಕಥೆಯಿದೆ.

ಮುಂದೆ ಜ್ಞಾನನಿಧಿಯಾಗಿ ಬುದ್ಧದೇವನೆನಿಸಿದ ಕುಮಾರ ಗೌತುಮನು ಒಂದು ದಿನ ಸತ್ಯಶೋಧನೆಗಾಗಿ ವನವನಾಂತರಗಳಲ್ಲಿ ಸಂಚರಿಸುತ್ತ ಸಾಗಿ ಕೊನೆಗೂ ಸತ್ಯಶೋಧನವಾಗದೆ ಹಿಂದಿರುಗಿ ಬರುತ್ತಿರುವಾಗ ದಾರಿಯಲ್ಲೊಂದು ವಿಶಾಲವಾದ ಕೊಳವನ್ನು ನೋಡಿದನು. ಒಂದು ದಂಡೆಯಲ್ಲಿ ನಿಂತು ನೋಡಿದರೆ ಮತ್ತೊಂದು ದಂಡೆಯು ಕಾಣಿಸದಷ್ಟು ವಿಶಾಲವಾಗಿದ್ದಿತು ಆ ಸರೋವರ. ಮುಂದೆ ಬರುವಾಗ ಒಂದು ಇಣಚಿಯನ್ನು ಕಂಡನು. ಅದು ಆಗಾಗ ಸರೋವರದಲ್ಲಿಳಿದು ಅದರ ನೀರಿನಲ್ಲಿ ತನ್ನ ಬಾಲವನ್ನು ಎದ್ದಿ ಮೇಲೆ ಬಂದು ಅದನ್ನು ಅಲುಗಿಸಿ ನೀರು ಕೊಡುವುತ್ತಿದ್ದಿತು. ಅದು ಒಂದು ಸಲ, ಎರಡು ಸಲ, ಮೂರು ಸಲ ಹೀಗೆ ಮಾಡುವದನ್ನು ಗೌತುಮನು ನೋಡಿದನು. ಗೌತುಮನಿಗೆ ಅರಿವೆನಿಸಿ ಏನಯ್ಯಾ ಇದೆಂಥ ಕೆಲಸ ? ಎಂದನು. ನಾನು ಈ ಕೊಳದ ಜಲವನ್ನೆಲ್ಲ ಆರಿಸಿಬಿಡಬೇಕೆಂದು ನಿಶ್ಚಯಿಸಿದ್ದೇನೆ. ಎಷ್ಟೋ ಕಾಲದಿಂದ ಹಸಿವೆ–ನೀರಡಿಕೆಗಳ ಪರಿವೆಯಿಲ್ಲದೆ ಹಗಲಿರುಳು ಈ ಕೆಲಸ ನಡೆಯಿಸಿದ್ದೇನೆ. ನಿನ್ನಂತೆ ಅಲ್ಪಕಾಲ ಸಂಚರಿಸಿ ಸತ್ಯ-ದರ್ಶನವಾಗದ ಮಾತ್ರಕ್ಕೆ ಮನನೊಂದು ಹಿಂದಿರುಗಿ ಬರುವಷ್ಟು ಸತ್ವಹೀನನಲ್ಲ ನಾನು ಎಂದಿತು. ಆ ಮಾತು ಕೇಳಿ ಗೌತುಮನಿಗೆ ನಾಚಿಕೆ ಬಂದಿತಂತೆ. ಮತ್ತು ದೃಢನಿಶ್ಚಯದಿಂದ ಯತ್ನಮಾಡಿ ಕಾಲಾಂತರದಲ್ಲಿ ಸತ್ಯದರ್ಶನವಾಗಲು ಜ್ಞಾನಿಯೂ ಜಗತ್ತಿಗೆ ಜ್ಞಾನದಾತನೂ ಎನಿಸಿದನು ಆ ಮಹಾಜ್ಞಾನಿ.

ಶಿಕ್ಷಕಬಂಧುಗಳೇ, ಜ್ಞಾನದಾನದ ಕಾರ್ಯವು ನೀವು ಯೋಚಿಸಬಹುದಾದಷ್ಟು ಸುಲಭವಾಗಿಲ್ಲ. ಅದಕ್ಕೆ ಸಂತತಪರಿಶ್ರಮ ದೃಢನಿಶ್ಚಯಗಳು ಬೇಕೇಬೇಕು. ಇಂದು ಕೆಲಸ ಪ್ರಾರಂಭಿಸಿ ನಾಳೆ ಎಷ್ಟು ಕೆಲಸವಾಯಿತು ? ಎಂದು ಲೆಕ್ಕ ಹಾಕಿದರೆ ಸಾಗದು. ಗಿಡ ಹಚ್ಚಿದ ಮರುದಿನವೆ ಬೇರು ಬಿಟ್ಟಿತೊ ಇಲ್ಲವೋ ನೋಡುವದಕ್ಕಾಗಿ ಅದನ್ನು ಕಿತ್ತುನೋಡುವ ಚಿಕ್ಕಮಗುವಿನ ಕೆಲಸದಂತಾಗುವ ಸಂಭವವುಂಟು–ನಿಮ್ಮ ಕಾರ್ಯಾತುರತೆಯ ಫಲ. ಇದು ನಿಮ್ಮ ಲಕ್ಷ್ಯದಲ್ಲಿರಲಿ.

ಗೃಹವರ್ಗಗಳು ಈ ಕೆಲಸದಲ್ಲಿ ಹೆಚ್ಚು ಯಶಸ್ವಿಯಾಗುವಂತೆ ಕಂಡುಬಂದಿದೆ. ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ಪ್ರದೇಶದಲ್ಲಿ ಈ ಕ್ರಮದಿಂದ ಸಾಕ್ಷರತಾ ಪ್ರಸಾರ ಕಾರ್ಯವು ಹೆಚ್ಚು ಯಶಸ್ವಿಯಾಗಿ ಸಾಗಿದೆ. ಒಬ್ಬ ಶಿಕ್ಷಕನು ತನ್ನ ವರ್ಗದಲ್ಲಿರುವ ಸುಮಾರು ೩೦ ಜನ ವಿದ್ಯಾರ್ಥಿಗಳ ಮನವೊಲಿಸಿ ಕೆಲಸ ಪ್ರಾರಂಭಿಸಿದರೆ ೪–೬ ತಿಂಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಒಬ್ಬನಂತೆಯಾದರೂ ಸಾಕ್ಷರಿಯಾಗುವ

ಸಂಭವವುಂಟು. ಈ ವಿಷಯದ ಹೆಚ್ಚು ವಿವರಣಾತ್ಮಕವಾದ ವಿಚಾರಗಳನ್ನು ಇನ್ನೊಮ್ಮೆ ಪ್ರಸ್ತಾಪಿಸೋಣ.

ಇನ್ನು ನಿಮಗೆ ಇಲ್ಲಿಗೆ ಬಂದುದಕ್ಕಾಗಿ ದಾರಿಯ ವೆಚ್ಚ ಇಲ್ಲಿರುವಾಗಿನ ವೆಚ್ಚಗಳಿಗಾಗಿ ಹತ್ತು ರೂಪಾಯಿಗಳನ್ನು ಕೊಡಬೇಕೆಂದು ಸರಕಾರದವರು ನಿರ್ಣಯಿಸಿದ್ದಾರೆ. ಆ ನಿಮ್ಮ ಶ್ರಮದ ಮಾನದಿಂದ ಈ ಹಣವು ಏನೂ ಅಲ್ಲ ಈ ಹತ್ತು ರೂಪಾಯಿಗಳಲ್ಲಿಯೂ ನೀವು ಇಲ್ಲಿ ಮಾಡಬೇಕಾದ ಕೆಲಸಕ್ಕೆ ಬೇಕಾಗುವ ಉಪಕರಣಗಳು, ಟಿಪ್ಪಣಿ ಪುಸ್ತಕಗಳು ಮುಂತಾದವುಗಳಿಗಾಗಿ ಹತ್ತೈಂಟು ಆಣೆಗಳನ್ನು ವೆಚ್ಚಮಾಡಬೇಕಾದೀತು.

ಒಟ್ಟಿನಮೇಲೆ, ನೀವು ಆದಾಯವೆಚ್ಚಗಳ ಕಡೆಗೆ ವಿಶೇಷ ಲಕ್ಷ್ಯಗೊಡದೆ ಮುಂದಿನ ಮಹತ್ಪದ ದೇಶಕಾರ್ಯದ ಕಡೆಗೆ ಲಕ್ಷ್ಯಗೊಟ್ಟು ಕಾರ್ಯಮಾಡಬೇಕಾಗಿದೆ. ಕೊನೆಯ ದಿನ ನಾನು ಇಲ್ಲಿಗೆ ಮತ್ತೊಮ್ಮೆ ಬರುವೆನು. ನನಗೆ ಆಗ ನೀವು ಮಾಡಿರುವ ಕೆಲಸಗಳನ್ನೆಲ್ಲ ನೋಡಿ ಸಂತೋಷಪಡಬೇಕೆಂಬ ಆಶೆಯಿದೆ. ನಡುವೆ ಒಂದೆರಡು ಸಲ ಅನುವಾದರೆ ನಿಮ್ಮ ವರ್ಗಕ್ಕೆ ಬಂದು ಹೋಗುವೆನು. ನೀವು ಇಲ್ಲಿಗೆ ಬಂದಿರುವಷ್ಟೇ ಉತ್ಸಾಹದಿಂದ ಕಾರ್ಯಾರಂಭವಾಗಲಿ.

* * * *

ಜೂನ್‌ತಿಂಗಳ ೧೪ನೆಯ ತಾರೀಖಿನ ದಿನ ಈ ವರ್ಗದ ಸಮಾರೋಪಣ ಕಾರ್ಯವು ನೆರವೇರಿತು. ಶಿಕ್ಷಣ ಕಾರ್ಯದಲ್ಲಿ ಆಸ್ಥೆಯನ್ನು ತೋರಿಸುವ ಕೆಲವು ಮಹನೀಯರಿಗೆ ಆಮಂತ್ರಣ ಕಳುಹಲಾಗಿದ್ದಿತು. ಪ್ರಾರಂಭದಲ್ಲಿ ಈಶಸ್ತವನ ವಾದನಂತರ ನಮ್ಮ ಡಿ|| ಎ. ಇನ್‌ಸ್ಪೆಕ್ಟರರಾದ ಶ್ರೀ. ಕೊಪ್ಪಳ ಗುಂಡೇರಾಯರು ಈ ವರ್ಗದ ಕಾರ್ಯ ಕಲಾಪಗಳ ಸಂಕ್ಷಿಪ್ತ ವರದಿಯನ್ನು ಒಪ್ಪಿಸಿದರು. ಶಿಕ್ಷಕರ ಕಾರ್ಯೋತ್ಸಾಹವನ್ನು ಪ್ರಶಂಸಿದರು. ತಮ್ಮ ಕಾರ್ಯದಲ್ಲಿ ನೆರವಾದ ಶಿಕ್ಷಕ ಬಂಧುಗಳ ಮತ್ತು ಇತರ ಸದ್ಗೃಹಸ್ಥರ ಉಪಕಾರವನ್ನು ಸ್ಮರಿಸಿದರು. ತಮಗೆ ನೌಕರಿಯ ತೀರ ಕೊನೆಯ ಭಾಗದಲ್ಲಿಯೂ ಇಂಥ ಸುಯೋಗವನ್ನು ಒದಗಿಸಿ ಕೊಟ್ಟದ್ದಕ್ಕಾಗಿ ಮೆ|| ತಾವಡೆ ಸಾಹೇಬರ ಆಭಾರವೆಣಿಸಿದರು. ತರುವಾಯ ವರ್ಗಕ್ಕೆ ಬಂದ ಶಿಕ್ಷಕರಲ್ಲೊಬ್ಬರು ಮುಂದೆ ಬಂದು ಈ ವರ್ಗದಲ್ಲಿ ನಡೆದ ಕಾರ್ಯ ಕಲಾಪಗಳನ್ನೆಲ್ಲ ವಿವರಿಸಿ ಅವರೆಲ್ಲರ ಆಭಾರವನ್ನಿಸಿದರು. ಹುಬ್ಬಳ್ಳಿಯ ಶಿಕ್ಷಕ ರೊಬ್ಬರು ತಾವೇ ರಚಿಸಿದ ಸಾಕ್ಷರತೆಯ ಲಾವಣಿಯನ್ನು ಸರಸವಾಗಿ ಹಾಡಿದರು. ಕೊನೆಗೆ ಅಂದಿನ ಅಧ್ಯಕ್ಷರಾದ ಶ್ರೀಮಾನ್ ತಾವಡೆ ಸಾಹೇಬರು ಉಪಸಂಹಾರ ಭಾಷಣ ಮಾಡಿದರು.

ಮೆ. ತಾವಡೆ ಸಾಹೇಬರ ಸಮಾರೋಪ ಭಾಷಣದ ಮುಖ್ಯಾಂಶಗಳು.

ಶಿಕ್ಷಕ ಬಂಧುಗಳೇ, ಸದ್ಗೃಹಸ್ಥರೇ,

ಈ ವರ್ಗದ ಸಮಾರೋಪಕ ಭಾಷಣಕ್ಕಾಗಿ ನಾನು ನಿಮ್ಮ ಮುಂದೆ ನಿಂತಿದ್ದೇನೆ. ಈ ವರೆಗಿನ ನಿಮ್ಮ ಕಾರ್ಯಕಲಾಪಗಳನ್ನು ನೋಡಿ ನನಗೆ ತುಂಬ ಸಂತೋಷವಾಗಿದೆ. ಶ್ರೀ. ಕೊಪ್ಪಳ ಗುಂಡೇರಾಯರೂ ಅವರ ಇನ್ನಿತರ ಸಹಾಯಕರೂ ನಿಮಗಾಗಿ ದುಡಿದು ಕೆಲಸ ಮಾಡಿದ್ದಾರೆ.

ನಿಮ್ಮ ಮತ್ತು ಅವರೆಲ್ಲರ ಶ್ರಮದ ಸಾರ್ಥಕತೆಯು ನೀವು ಇನ್ನು ಮುಂದೆ ಮಾಡುವ ಸಾಕ್ಷರತಾ ಪ್ರಸಾರಕಾರ್ಯವನ್ನೇ ಅವಲಂಬಿಸಿರುವದೆಂದು ನಾನು ಹೇಳಬೇಕಾಗಿಲ್ಲ.

ಪ್ರಬುದ್ಧರ ಶಿಕ್ಷಣದ ವಿಷಯಕ್ಕೆ ನಿಮಗೆ ಬೇರೆ ಬೇರೆ ಜನರು ಬೇರೆ ಬೇರೆ ರೀತಿಯಿಂದ ಉಪದೇಶಮಾಡಿದರು. ನಾನು ಅದನ್ನೆಲ್ಲ ಪುನಃ ಪ್ರಸ್ತಾಪಿಸಲು ಬಯಸುವದಿಲ್ಲ. ಆದರೂ ಸಮಯೋಚಿತವಾಗಿ ಒಂದೆರಡು ಸಂಗತಿಗಳನ್ನು ಪುನಃ ನಿಮ್ಮ ನೆನಪಿಗೆ ತಂದುಕೊಡಲು ಅಪೇಕ್ಷಿಸುವೆನು. ನಿಮ್ಮ ವರ್ಗಕ್ಕೆ ಬರುವ ಪ್ರಬುದ್ಧರು ದಣಿದು ಬಂದಿರುವರು. ಅವರ ಬಗ್ಗೆ ನಿಮ್ಮಲ್ಲಿ ಸಹಾನುಭೂತಿಯಿರಬೇಕು. ನಿಮ್ಮ ವರ್ಗಕ್ಕೆ ಬಂದವರೆಲ್ಲರೂ ತಮ್ಮ ಹಿತವನ್ನರಿತು ಜ್ಞಾನಸಂಪಾದನೆಯ ಲಾಲಸೆಯಿಂದ ಬಂದಿರುವರೆಂದು ಭಾವಿಸಬೇಡಿರಿ. ಅವರಲ್ಲಿ ಹಲವರು ತಮ್ಮಿಂದ ನಿಮಗೇನಾದರೂ ಪ್ರಯೋಜನವಾಗಬಹುದೇನೋ ಎಂಬ ಭಾವನೆಯವರೂ ಇರುತ್ತಾರೆ. 'ನಮ್ಮ ಊರ ಶಿಕ್ಷಕರು; ಇವರು ಕರೆಯುತ್ತಾರೆ; ಸರಕಾರದಿಂದ ಇವರಿಗೆ ನಾಲ್ಕು ಹಣ ಕಾಸು ದೊರೆದರೂ ದೊರೆಯಬಹುದು. ಅವರು ಕೊಡುವ ಜ್ಞಾನದಿಂದ ತಮಗೆ ಅಲ್ಪ ಸ್ವಲ್ಪ ಪ್ರಯೋಜನವಾದರೂ ಆದೀತು.' ಈ ತರದ ಸಂಯುಕ್ತ ಧ್ಯೇಯದಿಂದ ಅವರು ನಿಮ್ಮ ಮುಂದೆ ಬಂದು ಕುಳಿತಿರುತ್ತಾರೆ. ಇವರು ಪ್ರಪಂಚದ ತಾಪತ್ರಯಗಳಿಂದ ಬೆಂಡುಬೆಂಡಾದವರಿರುವರು. ಪ್ರಪಂಚದ ಅನುಭವದಿಂದ ಅವರ ಗ್ರಹಣಶಕ್ತಿಯು ವಿಕಾಸಹೊಂದಿರುವದು. ಆದುದರಿಂದ ಬಾಲಕರ ವರ್ಗಗಳನ್ನು ನಡೆಯಿಸಿದಂತೆ ಪ್ರಬುದ್ಧರ ವರ್ಗಗಳನ್ನು ನಡೆಯಿಸಲು ಹವಣಿಸಲಾಗದು. ಅವರು ಚಿಕ್ಕಮುಕ್ಕಳೂ ಅಲ್ಲ; ಸುಶಿಕ್ಷಿತರಾದ ಪ್ರಬುದ್ಧರೂ ಅಲ್ಲ; ಇಂಥ ನಡುವಿನ ಅವಸ್ಥೆಯವರಿರುವರು. ಚಿಕ್ಕ ಬಾಲಕರಂತೆಯೇ ಅವರೂ ಒತ್ತಟ್ಟಿಗೆ ಕುಳಿತು ತಕ್ಕ ಅವಧಾನದಿಂದ ಅಭ್ಯಾಸಮಾಡಲಾರರು. ಚಿಕ್ಕ

ಮಕ್ಕಳ ಅಭ್ಯಾಸ ಕ್ರಮದಲ್ಲಿರುವಂತೆ ಪ್ರಬುದ್ಧರ ಶಿಕ್ಷಣದಲ್ಲಿಯೂ ಮನರಂಜನೆಯ ವಿಷಯಗಳು ಸೇರಿರಬೇಕು. ಆದರೆ ಪ್ರಬುದ್ಧರಿಗೆ ಹೇಳುವ ಕಥೆಗಳಲ್ಲಿ ಚಿಕ್ಕಮಕ್ಕಳಿಗೆ ಹೇಳುವ ಪಂಚತಂತ್ರದ ಕಥೆಗಳಂತೆ ಕಾಗೆ ಗುಬ್ಬಿಗಳ ಪಾತ್ರಗಳಿರಕೂಡದು. ಅವರ ಪ್ರಪಂಚದ ಅನುಭವದ ಘಟನೆಗಳುಳ್ಳ ಕಥೆಗಳಿದ್ದರೆ ಮಾತ್ರ ಅವು ಅವರಿಗೆ ರುಚಿಸುವವು. ಪುರಾಣ ಪುಣ್ಯಕಥೆಗಳಿಗೆ ಅವರ ಮನಸ್ಸು ಮೆಚ್ಚುವದು. ಹಾಡುಗಳಲ್ಲಿಯೂ ಈಗ ನಿಮ್ಹ್ಯಾಳಗಿನ ಶಿಕ್ಷಕರೊಬ್ಬರು ಹಾಡಿದ ಲಾವಣಿಯಂತೆ ತಾಳತಾನಗಳುಳ್ಳವುಗಳೂ ಧಾರ್ಮಿಕ ಭಜನೆ ಕೀರ್ತನೆಗಳೂ ಅವರಿಗೆ ಹೆಚ್ಚಾಗಿ ಸೇರುವವು. ಚಿಕ್ಕ ನಾಟಕಗಳೂ ಊರೊಳಗಿನ ಬಯಲಾಟಗಳೂ ಅವರ ಮನಸ್ಸನ್ನು ಆಕರ್ಷಿಸುವವು. ಇಂಥ ಸಾಧನಗಳ ಮೂಲಕ ಅವರ ಮನಸ್ಸನ್ನಾಕರ್ಷಿಸಿಕೊಂಡು ನಿಮ್ಮ ಶಿಕ್ಷಣ ಕ್ರಮವು ಮುಂದುವರಿಯಬೇಕಾಗುವದು.

ಈ ಸಂದರ್ಭದಲ್ಲಿ ಪ್ರೌಢ ಶಿಕ್ಷಣದ ವರ್ಗದ ಆಡಳಿತೆಗೆ ಸಂಬಂಧಿಸಿದ ಒಂದು ಮಹತ್ವದ ಮಾತನ್ನು ನಿಮಗೆ ಹೇಳಲು ಬಯಸುತ್ತೇನೆ. ಸರಕಾರದವರು ಪ್ರೌಢ ಶಿಕ್ಷಣದ ವರ್ಗಗಳನ್ನು ನಡೆಯಿಸುವ ಕೆಲಸಗಾರರಿಗೆ ಕೆಲಮಟ್ಟಿಗೆ ಹಣದ ಸಹಾಯ ಮಾಡುತ್ತಾರೆ. ಅದು ಎರಡು ವಿಧವಾಗಿದೆ. ವರ್ಗದ ಪ್ರಾರಂಭಕ್ಕೆ ಅದರ ಹಾಜರಿಯ ಮಾನದಿಂದ ಸಹಾಯ ದ್ರವ್ಯವನ್ನು ಕೊಡುವ ರೀತಿಯೊಂದು. ಸಾಕ್ಷರಿಗಳಾದವರೆನ್ನುವವರನ್ನು ಪರೀಕ್ಷಿಸಿ ಪ್ರತಿ ಸಾಕ್ಷರಿಗೆ ನಾಲ್ಕು ರೂಪಾಯಿಯಂತೆ ಸಾಹಾಯ್ಯವನ್ನು ಕೊಡುವಕ್ರಮವು ಇನ್ನೊಂದು. ಇವೆರಡರಲ್ಲಿ ಎರಡನೆಯ ಮಾರ್ಗವು ಹೆಚ್ಚು ಸುರಕ್ಷಿತವಾಗಿದೆ. ನಾನು ಇಷ್ಟು ಜನರನ್ನು ಸಾಕ್ಷರಿಗಳನ್ನಾಗಿ ಮಾಡಿದ್ದೇನೆ; ಇವರನ್ನು ಪರೀಕ್ಷಿಸಿ ನನಗೆ ಕೊಡುವದನ್ನು ಕೊಟ್ಟು ಬಿಡಿರಿ; ಎಂದು ನಿರ್ದಾಕ್ಷಿಣ್ಯದಿಂದ ಹೇಳುವದು ತೀರ ಸರಳವಾದ ದಾರಿ. ಇದರಲ್ಲಿ ಒಬ್ಬರ ಮೇಲೊಬ್ಬರು ಹರಿಹಾಯುವ ಕಾರಣವಿಲ್ಲ. ವರ್ಗದ ಹಾಜರಿಯ ಮೇಲೆ ಸಹಾಯ ದ್ರವ್ಯವನ್ನು ಪಡೆಯಬೇಕಿನ್ನುವ ದಾರಿಯಲ್ಲಿ ತುಂಬ ತೊಂದರೆಗಳಿವೆ. ನಿಮ್ಮ ಮೇಲಣ ಅವಿಶ್ವಾಸಕ್ಕೆ ಕಾರಣವಿವೆ. ಈ ದಾರಿಯಲ್ಲಿ ನಮ್ಮ ನಿಮ್ಮ ನಡುವೆ ಕಲಹವುಂಟಾಗುವ ಸಂಭವವುಂಟು. ಪ್ರಬುದ್ಧರ ವರ್ಗದ ಹಾಜರಿಯ ಕ್ರಮದಲ್ಲಿಯ ಅನೇಕ ಆಕ್ಷೇಪಾರ್ಹವಾದ ಸಂಗತಿಗಳು ನನ್ನ ಅನುಭವಕ್ಕೆ ಬಂದಿರುವವು. ನಾನು ಇಂಥದೊಂದು ವರ್ಗವನ್ನು ನೋಡಲಿಕ್ಕೆ ಹೋದಾಗ ಹಾಜರಿಯ ಮೇಲೆ ೨೦ ಜನರಿದ್ದರೂ ೪೦-೫೦ ಜನ ಪ್ರಬುದ್ಧರು ಅಲ್ಲಿ ಹಾಜರಿದ್ದರು. ಅವರಲ್ಲಿ 'ಯಾರೋ ದೊಡ್ಡ ಸಾಹೇಬರಂತೆ. ಪ್ರಬುದ್ಧರ ಶಾಲೆಯನ್ನು ನೋಡಲು ಬಂದಾಗ ಏನೇನು ಮಾಡುವರೋ, ನೋಡೋಣ'

ಎಂದು ತಮಾಶೆಗಾಗಿ ಬಂದವರೂ ಕೆಲವರಿದ್ದರು. ಆ ವರ್ಗದ ದಿನದ ಸರಾಸರಿ ಹಾಜರಿಯು ನಿಜವಾಗಿ ಹತ್ತೆಂಟು ಇದ್ದಿದ್ದರೆ ಶಿಕ್ಷಕರು ಕೃತಾರ್ಥರಾಗಿ ಹೋಗಬಹುದಾಗಿತ್ತು. ಆದುದರಿಂದ ಹಾಜರಿಯ ಸಂಖ್ಯೆಯನ್ನು ಅವಲಂಬಿಸಿ ವರ್ಗ ನಡೆಯಿಸಬೇಕೆನ್ನುವದು ಸುಲಭವಲ್ಲ. ಧೈರ್ಯ, ಸತ್ಯ, ಸರಳ ವರ್ತನಗಳನ್ನು ಬಂಡವಾಳವಾಗಿಟ್ಟುಕೊಂಡು ಕೆಲಸ ಮಾಡಿದರೆ ನೀವು ನಿಶ್ಚಯವಾಗಿಯೂ ಕೈಕೊಂಡ ಕಾರ್ಯದಲ್ಲಿ ಯಶಸ್ಸು ಪಡೆಯುವಿರಿ. ನಿಮ್ಮಲ್ಲಿ ಆತ್ಮವಿಶ್ವಾಸ ವಿರಬೇಕು. ಆತ್ಮವಿಸ್ವಾಸವಿಲ್ಲದೆ ಯಾವ ಕಾರ್ಯವೂ ಸಾಗದು. ಹೊರವರ ಮಾತಿಗಾಗಿ ಇಲ್ಲವೆ ಅಲ್ಪ ಸ್ವಲ್ಪ ಸ್ವಾರ್ಥಸಾಧನೆಗಾಗಿ ಕೆಲಸ ಮಾಡಬೇಕೆನ್ನುವ ಪ್ರವೃತ್ತಿ ಬೇಡ. ಇಂಥ ಮನೋವೃತ್ತಿಯಿಂದ ಹಿತವಾಗುವದಕ್ಕಿಂತ ಅಹಿತವಾಗುವ ಸಂಭವವೇ ಹೆಚ್ಚು. ಮತ್ತು ನೀವು ಮಾಡಿದ ಕೆಲಸವು ಅಲ್ಪವೆಂದು ಅಸಮಾಧಾನಪಡುವ ಕಾರಣವಿಲ್ಲ. ಮತ್ತು ನಾಲ್ಕು ಜನರು ಕೂಡಿ ಕೆಲಸ ಮಾಡಿದಾಗ ಎಲ್ಲ ಪ್ರತಿಫಲವಾಗಲಿ ಪ್ರತಿಸಲದ ದೊಡ್ಡ ಭಾಗವಾಗಲಿ ನನಗೇ ಸಿಕ್ಕಬೇಕೆಂದು ಅತ್ಯಾಶೆಪಡಬಾರದು. ಹಾಗೆ ಮಾಡುವದರಿಂದ ಎಂದೂ ನಿಮ್ಮ ಹಿತವಾಗಲಾರದು. ಇಡಕ್ಕೊಂದು ಕಥೆಯ ದೃಷ್ಟಾಂತವನ್ನು ಹೇಳುವೆನು.

ಒಂದು ಊರಲ್ಲಿ ಒಬ್ಬ ಸಾವುಕಾರನಿದ್ದನು. ಅವನು "ಕೊಡು ಎಂಬದು ತನ್ನ ಕುಲಾಚಾರವೇ ಅಲ್ಲ" ಎನ್ನುವಷ್ಟು ಕೃಪಣನಾಗಿದ್ದನು. ಯಾರಿಗೂ ಎಂದೂ ಏನನ್ನೂ ಕೈಯೆತ್ತಿ ಕೊಟ್ಟವನೇ ಅಲ್ಲ. ಅವನೊಂದು ದಿನ ಊಟಕ್ಕೆ ಕುಳಿತಾಗ ಹಸಿದು ಕಂಗಾಲಾದ ಭಿಕ್ಷುಕನೊಬ್ಬನು ಅಲ್ಲಿಗೆ ಬಂದು 'ಅಣ್ಣಾ ಒಂದು ತುತ್ತು ನೀಡಿರಿ. ಮೂರು ದಿನದಿಂದ ಉಪವಾಸವಿದ್ದೇನೆ' ಎಂದು ಅಂಗಲಾಚಿ ಬೇಡಿಕೊಂಡನು. ಇವನು ನಾನು ತಿನ್ನುವ ತುತ್ತನ್ನು ಬೇಡುವನಲ್ಲ ಎಂದು ಸಾವುಕಾರನಿಗೆ ಅನಿವಾರ್ಯ ಕೋಪ ಬಂದಿತು. ಕೋಪದ ಆವೇಶದಲ್ಲಿ ಅವನು ತಾನು ತಿನ್ನುವದಕ್ಕೆ ಎತ್ತಿದ ಕೈಯ ರೊಟ್ಟಿಯ ತುಣುಕನ್ನು ಭಿಕ್ಷುಕನ ಮೋರೆಗೆ ಎಸೆದು ಬೈದು ಕಳುಹಿಸಿದನು. ತಾನು ರೊಟ್ಟಿಯ ತುಣುಕನ್ನು ಒಗೆದೆನೆಂಬ ಪರಿವೆ ಅವನಿಗಿರಲಿಲ್ಲ. ಆ ಪರಿವೆಯಿದ್ದರೆ ಅವನು ಕೂಡಲೆ ಹೋಗಿ ಆ ರೊಟ್ಟಿಯ ತುಂಡನ್ನು ಆರಿಸಿಕೊಂಡು ಬಂದು ತಾನೇ ತಿನ್ನುತ್ತಿದ್ದನು ! ಆ ಪುಣ್ಯಾತ್ಮನು ಹೀಗೆ ಕರ್ಣನ ಅವತಾರವಾಗಿದ್ದನು. ಹಸಿದ ಭಿಕ್ಷುಕನು " ಕರುಳಿಗೆ ನಾಚಿಕೆಯಿಲ್ಲ. ಹಸಿವೆಗೆ ಎಂಜಲಿಲ್ಲ " ಎಂಬಂತೆ ಆ ರೊಟ್ಟಿಯ ತುಣುಕನ್ನು ಆರಿಸಿಕೊಂಡು ತಿಂದು ಹೋದನು.

ಮುಂದೆ ಕೆಲಕಾಲದ ಮೇಲೆ ಸಾವುಕಾರನು ಮರಣಹೊಂದಿದನು. ಮರಣಾನಂತರದಲ್ಲಿ ಯಮಲೋಕಕ್ಕೆ ತೆರಳಿದ ಬಳಿಕ ಅತನನ್ನು ಯಮದೂತರು ಅಲ್ಲಿ

ನಾನಾಬಗೆಯ ಕ್ರೂರ ದಂಡನೆಗೆ ಗುರಿಮಾಡಿದರು. ಅವನು ತನ್ನ ದುರಾಶೆಯ ದುರ್ನಡತೆಗಾಗಿ ಹಲವು ಬಗೆಯ ನರಕಯಾತನೆಗಳನ್ನು ಅನುಭವಿಸಬೇಕಾಯಿತು.

ಒಂದು ದಿನ ಯಮದೂತರು ಅವನನ್ನು ಕಾದ ಕಬ್ಬಿಣದ ಹಂಚಿನ ಮೇಲೆ ನಿಲ್ಲಿಸಿ ಪೀಡಿಸುತ್ತಿದ್ದರು. ಆಗ ಅಕಸ್ಮಾತ್ ದೇವಲೋಕದಿಂದ ಮಿರಿ ಮಿರಿ ಮಿನಗುತ್ತಿರುವ ದಾರವೊಂದು ಅವನ ಮುಂದೆ ತೂಗಾಡಹತ್ತಿತು. ಮತ್ತು ಯಾರೋ "ನೀನು ಅರಿಯದೆಯೇ ಆದರೂ ದಾನಮಾಡಿದ ಒಂದು ತುಣುಕು ರೊಟ್ಟಿಯ ಪ್ರತಿಫಲವಿದು. ಬೇಗನೆ ಈ ದಾರದ ಆಧಾರದಿಂದ ಏರಿ ಬಾ" ಎಂದು ಹೇಳಿದಂತೆ ಕೇಳಿಸಿತು. ಕೃಪಣನು ಅವಸರದಿಂದ ಆ ದಾರವನ್ನು ಹಿಡಿದುಕೊಂಡನು. ಅಷ್ಟರಲ್ಲಿ ಅಲ್ಲಿಯೇ ಇದ್ದ ಇನ್ನೊಬ್ಬನು ಬಂದು ಆ ದಾರವನ್ನು ಹಿಡಿಯಲು ಹವಣಿಸಿದನು. ಅದನ್ನು ಕಂಡು ಕೋಪಗೊಂಡು "ಸರಿ ದೂರ, ಇದು ನನ್ನ ಸಲುವಾಗಿ ಬಂದಿದೆ. ನೀನು ಇದನ್ನು ಮುಟ್ಟಕೂಡದು" ಎಂದು ಗದ್ದರಿಸಿದನು. ಕೂಡಲೆ ದಾರವು ಕತ್ತರಿಸಿ ಹೋಯಿತು. ಅವನು ಕೆಳಗಿನ ಕಾದ ಹಂಚಿನ ಮೇಲೆ ಬಿದ್ದು ಬಿಟ್ಟನು. "ಎಲ್ಲವೂ ತನಗೇ ಬೇಕು. ಇನ್ನೊಬ್ಬನಿಗೆ ಎಷ್ಟೂ ಪ್ರಯೋಜನವಾಗಕೂಡದು" ಎನ್ನುವ ದುರ್ಭಾವನೆಯನ್ನು ನೋಡಿ ಅವನನ್ನು ಉದ್ಧರಿಸಲು ಬಂದ ದೇವದೂತನು ಹಿಂದಿರುಗಿ ನಡೆದನು.

ಸಾಕ್ಷರತಾ ಪ್ರಸಾರದ ಕಾರ್ಯದಲ್ಲಿಯೂ ಕೂಡ ನಿಮಗೆ ನಿಮ್ಮ ನಿಮ್ಮ ಶ್ರಮಕ್ಕೆ ತಕ್ಕಂತೆ ಪ್ರತಿಫಲ ದೊರೆಯುವದು ಖಂಡಿತವೆಂದು ನಂಬಿ ಕೆಲಸ ಮಾಡಬೇಕು.

ನಾನು ಅಲ್ಪ, ನಾನು ಏಕಾಕಿ, ನನ್ನಿಂದ ಏನು ಕೆಲಸವಾದೀತು ಎಂದು ಅಂಜುವ ಕಾರಣವಿಲ್ಲ. ಈ ವರ್ಗದಲ್ಲಿ ನೀವು ೪೭ ಜನರಿದ್ದೀರಿ. ಒಬ್ಬೊಬ್ಬರು ಹತ್ತು ಜನರಂತೆ ಮೊದಲಿನ ಆರು ತಿಂಗಳಲ್ಲಿ ೪೭೦ ಜನರನ್ನು ಸಾಕ್ಷರಿಗಳನ್ನಾಗಿ ಮಾಡುವದು ನಿಶ್ಚಿತವೆಂಬ ಮಾತಿಗಂತೂ ಸಂಶಯವಿಲ್ಲವಷ್ಟೇ? ಇದರಂತೆ ನೀವೆಲ್ಲರೂ ೧ ವರ್ಷ, ೨ ವರ್ಷ, ಹೀಗೆ ೧೦ ವರ್ಷ ಕೆಲಸ ಮಾಡಿದರೆ ೪೭ ನೂರು ೪೭ ಸಾವಿರ ಜನರು ಸಾಕ್ಷರಿಗಳಾಗಬಹುದು. ಆದುದರಿಂದ ನೀವು ಮುಂದಿರುವ ಹಿಮಾಲಯದಷ್ಟು ಕೆಲಸಕ್ಕಾಗಿ ಕಂಗೆಡುವ ಕಾರಣವಿಲ್ಲ. ಆತ್ಮವಿಶ್ವಾಸ ದೃಢ ನಿರ್ಧಾರಗಳೊಡನೆ ಕಾರ್ಯಾರಂಭಮಾಡಿರಿ. ಸತ್ಯ ಸರಳ ವರ್ತನೆಗಳೇ ನಿಮ್ಮ ಬಂಡವಾಳವಾಗಿರಲಿ. ದೇವರು ನಿಮಗೆ ಯಶಸ್ಸು ಕೊಡಲಿ.

ತಮ್ಮ ನೌಕರಿಯು ಕೊನೆಯ ದಿನಗಳಲ್ಲಿಯೂ ಅಮಿತ ಉತ್ಸಾಹದಿಂದ ಕೆಲಸ ಮಾಡಿ ಈ ವರ್ಗವನ್ನು ಸಾಂಗಗೊಳಿಸಿದ ಶ್ರೀ. ಕೊಪ್ಪಳ ಗುಂಡೇರಾಯರಿಗೆ ಅಭಿನಂದನೆಗಳನ್ನು ಅರ್ಪಿಸಿ ನನ್ನ ಮಾತು ಮುಗಿಸುವೆನು.

ಸಾಕ್ಷರತಾಪ್ರಸಾರ

ಹಳ್ಳಿಯ ಹಾಡು *

ಲೇಖಕ: ಗ. ನಿಂ. ಉಪರಿ

ಚಂದದಿ ಇಂದು ಬಂದು ಕೂತಿರಿ ಹೇಳತೇನ್ರಿ ಖುಲ್ಲಾ-- ಲಾ ಲಾ
ಕಲಲಲಲಲಲಲ ಬಾಯಿವಮಾಡಿದರೆ ಪದಾ ಕೇಳೊದಿಲ್ಲಾ-- ಲಾ ಲಾ ॥ ಪಲ್ಲ॥

ಸುಮ್ಮನೆ ನೀವು ಕಟ್ಟಗೆ ಕುಂತು ಹರ್ಟಿಕೊಚ್ಚಿರಲ್ಲಾ-- ಲಾ ಲಾ
ಮನೆಗೆ ಬಂದು ಕರೆದರೆ ನಾವು ಸಾಲೆಗ್ಯಾಕ ಬರೊದಿಲ್ಲಾ-- ಲಾ ಲಾ ॥೧॥

ಪುಸ್ತಕ ಪಾಟಿ ಮನೆಯಿಂದ ನೀವು ತರೂವ್ವಾಂಗ ಇಲ್ಲಾ-- ಲಾ ಲಾ
ಇವೆಲ್ಲ ನಿಮಗ ಒದಗಿಸಿಕೊಟ್ಟರೆ ನೀವ್ಯಾಕ ಕಲಿಯುದಿಲ್ಲಾ-- ಲಾ ಲಾ ॥೨॥

ಓದಾಕ ಬರಿಯಾಕ ಬಾರದಿದ್ದರ ಮನಶ್ಯಾ ಅವ ಅಲ್ಲಾ-- ಲಾ ಲಾ
ಸುಮ್ಮನೆ ನೀವು ಮನ್ಯಾಗ ಕುಂತರ ನಿಮಗ್ಯಾರು ಕೆಳೋದಿಲ್ಲಾ-- ಲಾ ಲಾ ॥೩॥

ಸಾಲೆಗೆ ಬಂದರ ಜಗತಿನ ಸುದ್ದಿ ನಿಮಗೆ ಹೇಳ್ತೆವಲ್ಲಾ-- ಲಾ ಲಾ
ನಿಮಗಾದ ಬೇಸರ ಕಫೆ ಹಾಡು ಕೇಳಿ ಇಲ್ಲೇ ಕಳೀರಲ್ಲಾ-- ಲಾ ಲಾ ॥೪॥

ಊರಿಂದ ನಿಮಗೆ ಪತ್ರ ಬಂದರ ಮನಿಮನಿ ತಿರಗ್ತಿರಲ್ಲಾ-- ಲಾ ಲಾ
ಓದಾಕ ಬರಿಯಾಕ ಕಲ್ತರ ನಿಮಗ ತಿರಗೋದು ತಪ್ಪದಲ್ಲಾ-- ಲಾ ಲಾ ॥೫॥

ರೂಪಾಯಿ ಬೇಕಾದ್ರ ಹೆಬ್ಬಟ್ಟ ಒತ್ತಿ ಸಾಲಾ ತರ್ತಿರಲ್ಲಾ-- ಲಾ ಲಾ
ಮೋಸಮಾಡಿ ನಿಮಗ ಹೆಚ್ಚಿಗೆ ಬರೆದರೆ ಸುಮ್ಮನೆ ಕೊಡ್ತಿರಲ್ಲಾ-- ಲಾ ಲಾ॥೬॥

ತಿಳಿದು ನೋಡಿದರೆ ಬಹಳ ಕಲ್ತವರು ನಿಮಗಿಂತ ಶ್ಯಾಣ್ಯಾರಲ್ಲಾ-- ಲಾ ಲಾ
ಕಟಿಪಿಟಿ ಮಾಡದೆ ಅವರ ಶಾಣೇತನ್ಕ ತಲೀ ಹಾಕ್ತಿರಲ್ಲಾ-- ಲಾ ಲಾ ॥೭॥

ಕೆಡವಿ ಬಾಯೊಳ ಹಾಲು ಸುರುವಿದರ ನೀವ್ಯಾಕ ಕುಡಿಯುದಿಲ್ಲಾ-- ಲಾ ಲಾ
ನೆನಸಿಕೊಂಡು ನೀವು ಕುಡ್ಯಾಕ ಬೇಡಿದರ ನೀರು ಸಿಗಾಕಿಲ್ಲಾ-- ಲಾ ಲಾ ॥೮॥

ಇಷ್ಟೆಲ್ಲ ತಿಳಿದು ಇನ್ನಾದ್ರು ನೀವು ಸಾಲೆಗೆ ಬರಬೇಕಲ್ಲಾ-- ಲಾ ಲಾ
ಹುಬ್ಬಳ್ಳಿ ಶಹರದ ಗಣೇಶ ನಿಮಗ ಕರ್ಯಾಕ ಬರ್ತಾನಲ್ಲಾ-- ಲಾ ಲಾ ॥೯॥

---

* ಪ್ರಬುದ್ಧರ ಶಿಕ್ಷಣದ ಕೆಲಸಗಾರರ ವರ್ಗದ ಪರಿಸಮಾಪ್ತಿಯಲ್ಲಿ ದಿನದ ಸಭೆಯಲ್ಲಿ ಓದಿದ್ದು.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ಪರಿಣಾಮ ೧೯೪೨

ಧಾರವಾಡ ಕೇಂದ್ರ (ಕನ್ನಡ)

ನಂ.	ಹೆಸರು	ಗುಣಗಳು
೧	ಅಂಬೂತಾಯಿ ಜೋಶಿ	೩೫೫
೨	ಅಕ್ಕು ಪದಕಿ	೩೨೪
೩	ಅನುಸೂಯಾಬಾಯಿ ದೂದಿಹಳ್ಳಿ	೩೫೯
೪	ಅನುಸೂಯಾ ಕೊಳಗಲ್ಲ	೩೧೨
೫	ಅನ್ನಪೂರ್ಣಾ ಕಡ್ಲಾಸಕರ	೩೫೦
೬	ಭಾಗೀರಥಿಬಾಯಿ ಜೋಸಿ	೪೨೩
೭	ಬಂಗಾರೆಮ್ಮ ಬನವಾಸಿ	೨೬೨
೮	ಬಸಲಿಂಗವ್ವ ಪಾಟೀಲ	೩೫೩
೯	ಬಾಯಿತಾಯಿ ಜೋಗಳೇಕರ	೩೩೮
೧೦	ಚನ್ನವ್ವ ಅಸುಂಡಿ	೩೦೪
೧೧	ದ್ರೌಪದಿ ಸಿಂಧೆ	೨೯೭
೧೪	ಗಂಗವ್ವ ತಳವಾರ	೩೪೭
೧೬	ಗುರವ್ವ ಭಂಡಿವಡ್ಡರ	೩೧೦
೧೭	ಹನುಮುಂತವ್ವ ಸುಣಗಾರ	೩೩೫
೧೮	ಇಂದಿರಾಬಾಯಿ ಘಾಟಿಗೆ	೩೫೩
೧೯	ಈರವ್ವ ಹಿಂದಿಹೊಳಿ	೩೭೮
೨೨	ಕೃಷ್ಣಾಬಾಯಿ ನರಿಬೋಳಿ	೩೬೮
೨೩	ಕಮಲಾಕ್ಷಿ ಶೆಟ್ಟಿ	೩೩೪
೨೬	ಲೀಲಾಬಾಯಿ ಬದಾಮಿ	೩೧೪
೨೭	ಮಲ್ಲವ್ವ ಸೊಗಲದ	೩೪೫
೨೮	ಮಲ್ಲವ್ವ ಕುಡಚಿಮಠ	೩೩೩
೩೧	ನಿಂಗವ್ವ ಹಳಕಟ್ಟಿ	೨೭೫
೩೨	ನೀಲವ್ವ ಹಡಗಲಿ ಹಿರೇಮಠ	೩೧೨
೩೩	ಪುಟ್ಟಕ್ಕ ಕಡ್ಲಾಸಕರ	೩೫೭
೩೪	ಪುಟ್ಟವ್ವ ಹಿರೇಮಠ	೩೯೧
೩೬	ಪಾರ್ವತೆವ್ವ ಮುಗದ	೪೫೯
೩೮	ಪ್ರಮಿಳಾ ಹಂಪಿಹೊಳಿ	೪೨೩
೩೯	ಪೌಲಿನಾ ಫ್ರಾನ್ಸಿಸ್	೩೧೪
೪೦	ಪೀತಾಂಬರವ್ವ ದೇಸಾಯಿ	೨೪೦
೪೧	ರುದ್ರವ್ವ ಪಾಟೀಲ	೩೦೦
೪೨	ರೋಜಾ ಉಳ್ಳಾಗಡ್ಡಿ	೩೪೨
೪೩	ಶಾಂತಾಬಾಯಿ ಕುಲಕರ್ಣಿ	೨೯೫
೪೪	ಶಾಂತಾಬಾಯಿ ತಿಬಿಲೆ	೨೯೪
೪೬	ಶಾಂತಾಬಾಯಿ ಹಿರೇಮಠ	೩೫೧
೪೮	ಸಾವಿತ್ರಿಬಾಯಿ ಶೆಟ್ಟಿ	೩೩೪
೪೯	ಸಾವಿತ್ರಿ ಪಾಟೀಲ	೩೩೦
೫೧	ಸುಶೀಲಾ ಲದ್ವಾ	೩೭೪
೫೩	ಶ್ರೀಮತಿ ದೇಶಪಾಂಡೆ	೩೦೧
೫೪	ಶಾರದಾಬಾಯಿ ಹುರಳೀಕರ	೩೦೧
೫೫	ಶಂಕುಂತಲಾ ಪುನೀತ	೨೯೯
೫೬	ಸುಲೋಚನಾ ಅದವಾನಿ	೪೪೪
೫೭	ಸುಸನ್ನಾ ಹೊಸಕೇರಿ	೩೬೪
೬೦	ಸುಮಿತ್ರಾ ಹುಕ್ಕೇರಿಕರ	೨೭೪

೬೧	ಸುಮಿತ್ರಾ ತೇರಗಾವಕರ	೩೧೫
೬೩	ಸುಭದ್ರಾ ತೊರಗಲ್ಲ	೩೧೦
೬೬	ಸುಂದರಾ ಅಗಡಿ	೩೪೫
೬೮	ಶಿವಲಿಂಗವ್ವ ಎಂಡಿಗೇರಿ	೩೬೮
೬೯	ಶಿವವ್ವ ಕುರ್ತಕೋಟಿ	೩೯೬
೭೧	ಅನುಸೂಯಾ ಟೇಂಗ್ಸೆ	೩೦೬
೭೨	ಬನುತಾಯಿ ಪೋತದಾರ	೩೯೧
೭೪	ದೇವಕ್ಕ ದಾಸರ	೩೫೮
೭೫	ಎಲಿಜಾಬೆಥ ನರೇಂದ್ರ	೩೦೦
೭೬	ಗೌರವ್ವ ಹೆಗಡಿ	೩೨೫
೭೭	ಲಲಿತಾ ಪೆನ್ನಾನಿ	೩೦೬
೭೮	ಲೀಲಾವತಿ ನಾಡಿಗೇರ	೩೪೧
೭೯	ನೇತ್ರಾವತಿ ನಾಯಕ	೩೨೫
೮೦	ರೇಣವ್ವ ಗೋಕಾವಿ	೩೩೭
೮೧	ಸಾವಿತ್ರಿ ಮುದವೀಡು	೩೪೭
೮೩	ಸರೋಜಿನಿ ಮು. ದೇಶಪಾಂಡೆ	೨೮೦
೮೪	ಸೀತಾಬಾಯಿ ಕುಲಕರ್ಣಿ	೨೯೯
೮೫	ಸರದಾರಬಿ ಮುಲ್ಲಾನವರ	೩೬೯
೮೬	ಸುಂದರಾ ಜೋಶಿ	೩೩೮
೮೭	ಶಿವಬಸವ್ವ ಜಪಾಲಿ	೨೯೨
೮೮	ಕಮಲಾ ಗಣಪತಿ	೩೫೬
೯೦	ಲಕ್ಷ್ಮಿ ಪಾಂಡುರಂಗ	೩೭೬
೯೨	ಶಾಂತಾಬಾಯಿ ದತ್ತಾತ್ರಯ	೨೭೫

ಹುಬ್ಬಳ್ಳಿ ಕೇಂದ್ರ (ಕನ್ನಡ)

೧	ಅನುಸೂಯಾ ಗೊಂದಕರ	೨೬೪
೨	ಆಶೀರ್ವಾದವ್ವ ಪಟ್ಟಿ	೩೪೭
೩	ಬಸಲಿಂಗವ್ವ ಶಿಗ್ಗಾವಿ	೩೨೦
೪	ಭರಮವ್ವ ನೆಲವಗಿ	೩೧೯
೬	ಚನ್ನವ್ವ ಅಲಗಿ	೩೪೬
೮	ದಾಕ್ಷಾಯಿಣಿ ಹುರಕಡ್ಲಿ	೩೨೪
೯	ಎಲ್ಫ್ರೀಡಾ ಕನವಳ್ಳಿ	೩೩೩
೧೧	ಗಂತುಬಾಯಿ ಜೌಧರಿ	೩೭೫
೧೩	ಗ್ರೇಸ ಬೋರಗಾಯಿ	೩೦೬
೧೫	ಗುರುಶಿದ್ದವ್ವ ಬತಲಿ	೪೦೭
೧೯	ಜೇತೆವ್ವ ಗುಂಜಾಳ	೩೩೪
೨೦	ಕಮಲಾಬಾಯಿ ಕುಲಕರ್ಣಿ	೩೧೭
೨೨	ಲಕ್ಷ್ಮೀದೇವಿ ಮೆಣಸಿನಕಾಯಿ	೩೦೭
೨೪	ಲೀಲಾ ಶಿರಾಳಿ	೩೫೪
೨೫	ಲಿಂಗವ್ವ ಕಳ್ಳಿಮಠ	೩೦೯
೨೬	ಮೈನಾ ಸೂರ್ಯವಂಶಿ	೩೭೨
೨೭	ಮೇರಿ ಢವಳೆ	೩೦೯
೨೯	ನೀಲವ್ವ ಬೆಂಡಿಗೇರಿ	೨೭೫
೩೦	ನೀಲವ್ವ ಮರಶಿಳ್ಳಿ	೩೩೪
೩೨	ಪಾರ್ವತೆವ್ವ ಚವಕೀಮಠ	೩೪೩
೩೫	ಪ್ರೇಮ ಲೀಲಾವತಿ ಮುನ್ನಾಳ	೨೮೯
೩೭	ಪುಷ್ಪಾವತಿ ಅಜಗಣ್ಣಿ	೩೭೭
೩೮	ರಾಧಾ ಸಾನಕಾರ	೩೪೧
೩೯	ರಿಂದಾಬಾಯಿ ರೊಟ್ಟಿ	೩೪೪
೪೧	ರೋಧಾ ಚಕ್ಕಣ್ಣವರ	೩೪೪
೪೨	ರುತ್ತವ್ವ ತಿಮ್ಮಾ	೨೯೭
೪೩	ರುಕ್ಮಿಣಿ ಹೋವಳೆ	೩೦೯
೪೪	ಸಂಗವ್ವ ಹಿರೇಮಠ	೩೭೭
೪೬	ಸರಸ್ವತಿ ಮುಳಗುಂದ	೪೩೬
೪೭	ಸರೋಜಿನಿದೇವಿ ಪಾಟೀಲ	೩೪೧

೪೯	ಸಲ್ಯಾಸ್ಟಿನ್ ಮುರನಾಳ	೩೩೯
೫೦	ಶೇತುಬಾಯಿ ದೇಶಪಾಂಡೆ	೩೧೩
೫೧	ಶಾಂತಾಬಾಯಿ ಸೊನಗಾರ	೩೧೯
೫೪	ಶಿವವ್ವ ಶಿರಹಟ್ಟಿಮಠ	೨೯೮
೫೬	ಶಾಂತೂ ಆ್ಯಬ್ಡಿಸ	೩೧೧
೫೭	ಸುಮಂಗಲವ್ವ ಹುಚ್ಚಪ್ಪನವರ	೩೩೨
೫೮	ಸುಸನ್ನಾ ಬಂಗಾರಿ	೨೯೦
೫೯	ಸುಸನ್ನಾ ಕೋಟಿ	೩೯೭
೬೦	ಸುಶೀಲಾ ಸೊನಗಾರ	೩೨೫
೬೧	ಸುಶೀಲಾ ದೇಶಕುಲಕರ್ಣಿ	೩೧೮

ಹುಬ್ಬಳ್ಳಿ ಕೇಂದ್ರ (ಉರ್ದು)

೧	ಅಮೀನಬೀ ಕಿರೇಸೂರ	೩೦೪
೩	ಬೀಬಿಜಾನ ಶಾಬದಿ	೩೫೭
೧೬	ನಾಜಮುನ್ನೀಸಾ ತಾಸಗಾವ	೩೨೭
೧೭	ರಹಿಮುನ್ನೀಸಾ ಶೀಗಿಹಳ್ಳಿ	೩೦೪
೧೯	ರೋಶಿಂಬಿ ಡ್ರಾಯವ್ವರ	೨೬೫
೨೩	ಝೋಬುನ್ನೀಸಾ ಹೊಸಮನಿ	೨೯೯

ಗದಗ ಕೇಂದ್ರ (ಕನ್ನಡ)

೩	ಅನ್ನಪೂರ್ಣಾ ಲೋಣಿ	೩೨೦
೪	ಅನುಸೂಯಾ ಕುಲಕರ್ಣಿ	೩೬೪
೫	ಬನೂಬಿ ನಾಗರಕಟ್ಟಿ	೩೫೯
೯	ಚನಬಸವ್ವ ಇಂಗಳಹಳ್ಳಿ	೩೦೫
೧೪	ಗೌರವ್ವ ಬಸರೀಕಟ್ಟಿ	೨೯೫
೧೫	ಗುಣವಂತೆವ್ವ ಹೊನ್ನಳ್ಳಿ	೩೦೬
೧೭	ಇಂದಿರಾಬಾಯಿ ಠಾಕುರದಾಸ	೩೨೫
೧೯	ಇಂದೂಬಾಯಿ ನಾರಪ್ಪನವರ	೨೯೬
೨೨	ಜನಾಬಾಯಿ ಸರ್ವದೆ	೨೯೯
೨೩	ಕಾಳಿಕಾದೇವಿ ಮುದಕವಿ	೨೭೬
೨೪	ಕಮಲಾ ಕಬಾಡಿ	೩೧೫
೨೫	ಕರಿಯವ್ವ ಖಾನೀಕರ	೬೧೪
೨೭	ಕೃಷ್ಣಾಬಾಯಿ ವಡವಿ	೩೦೫
೨೮	ಕುಸುಮಾವತಿ ಕುಷ್ಟಗಿ	೩೪೨
೨೯	ಲೀಲಾವತಿ ತಾಡಪತ್ರಿ	೩೦೯
೩೦	ಲೀಲಾವತಿ ಕೊಣ್ಣೂರ	೨೮೩
೩೧	ಲಕ್ಷ್ಮೀಬಾಯಿ ಪಾತರದ	೨೮೭
೩೭	ನೀಲಲೋಚನೆ ಇಳಕಲ್ಲ	೨೬೫
೩೮	ಪದ್ಮಾವತಿ ವರಾಹಮೂರ್ತಿ	೨೯೫
೩೯	ಪದ್ಮಾವತಿ ಜೇರೆ	೩೫೮
೪೦	ಪದ್ಮಾವತಿ ಕುಲಕರ್ಣಿ	೩೩೨
೪೨	ಪ್ರಮಿಲಾಬಾಯಿ ಕುಲಕರ್ಣಿ	೩೦೪
೪೩	ಪಾರ್ವತೆವ್ವ ಹೊಸಮಠ	೩೦೯
೪೭	ಪ್ರಸನ್ನಾ ಕಳೇಬಾರ	೨೯೫
೪೮	ಪುಷ್ಪಾವತಿ ಪಿಳ್ಳೆ	೩೧೯
೫೦	ಪತ್ಮಾಬಾಯಿ ಮುದಗಲ್ಲು	೩೨೦
೫೧	ಸರಸ್ವತಿಬಾಯಿ ಲದ್ವಾ	೩೧೩
೫೨	ಶಾಂತಾ ದೇಸಾಯಿ	೨೯೯
೫೩	ಶಾಂತವ್ವ ಮಟ್ಟಿ	೩೧೯
೫೬	ಸಿಂಧುಬಾಯಿ ಜಾಲೀಹಾಳ	೩೪೬
೫೭	ಸಿಂಧು ಕುಲಕರ್ಣಿ	೩೦೯
೫೮	ಶಿವಗಂಗವ್ವ ಕಾಡದಳ್ಳಿ	೨೯೬
೬೨	ಸುಜ್ಞಾನಿ ಖಾನಾಪುರ	೩೧೭

೬೪ ಸುಂದರಾ ಬಾರಾಟಕ್ಕೆ ೨೪೦
೬೬ ತುಳಸಾಬಾಯಿ ಕಬಾಡಿ ೩೩೯
೬೭ ತುಂಗಾ ಮಹಿಷಿ ೩೫೭
೬೮ ವತ್ಸಲಾಬಾಯಿ ಗಲಗಲಿ ೩೨೬
೬೯ ವೀರವ್ವ ಮಾಲೇಕಾರ ೩೪೧

ಗದಗ ಕೇಂದ್ರ (ಉರ್ದು)

೭೬ ಜುಲೇಖಾ ಹಳ್ಳೀಕೇರಿ ೩೧೭
೭೭ ಖೈರುನ್ನೀಸಾ ಯಾದಗಿರಿ ೩೦೬

ಕಾರವಾರ ಕೇಂದ್ರ (ಕನ್ನಡ)

೬ ಗುಲಾಬಿಬಾಯಿ ಶಟ್ಟಿ ೩೦೫
೭ ಗೌರಿ ಶಿರಸಿ ೩೦೧
೮ ಇಂದಿರಾ ಪೈ ೩೪೫
೯ ಜುಪೆಪಿನ್ ಫರ್ನಾಂಡೀಸ ೩೦೮
೧೧ ಮಗದಲೀನ ಡಿಸೋಜಾ ೨೯೮
೧೨ ಮೇರಿ ಅಲ್ಮೇಡಿಯಾ ೩೫೦
೧೩ ಮಿತ್ರಾಬಾಯಿ ಶಟ್ಟಿ ೩೧೦
೧೫ ಮುಕ್ತಾಬಾಯಿ ಹೊದಕೆ ೩೦೭
೧೬ ಮುಕ್ತಾ ಪೈ ೩೦೫
೧೯ ರಾಧಾ ಭಟ್ಟ ೩೨೫
೨೦ ರೋಜಾ ಸೋಜಾ ೩೫೪
೨೧ ಸರಸಾ ಮಂಜಾ ೩೧೫
೨೪ ಸೀತಾಬಾಯಿ ಹೆಗಡೆ ೩೦೬
೨೬ ಶ್ರೀಮತಿ ನಾರ್ವೇಕರ ೩೭೪
೨೭ ಶಾಂತಾ ಕಾಮತ ೪೦೩
೨೯ ಶಾಂತಾಬಾಯಿ ನಾಯಿಕ ೩೬೦
೩೧ ತಾರಾಬಾಯಿ ಹನಮಟ್ಟೀಕರ ೩೧೩
೩೨ ತುಳಸೀಬಾಯಿ ಗೋವಿಂದಪ್ಪ ೨೭೩
೩೩ ತುಳಸಿ ಶೆಟ್ಟಿ ೩೫೮
೩೬ ಥಕ್ಕಿ ಚನುಗಾರ ೨೭೪
೩೭ ವತ್ಸಲಾಬಾಯಿ ನಾಡಕರ್ಣಿ ೩೨೯
೩೯ ವಿಮಲಾನಂದು ಪೈ ೬೦೩
೪೦ ವಿದ್ಯಾಬಾಯಿ ಸಣ್ಣಭಡತಿ ೬೦೭
೪೧ ಯೆಂಕಿ ಭಟ್ಟ ೬೦೫
೪೨ ಯಮುನಾ ನಾಯಿಕ ೩೦೯
೪೩ ಯಮುನಾ ಹಿರೇಗಂಗೆ ೨೯೭

ಕಾರವಾರ ಕೇಂದ್ರ (ಉರ್ದು)

೩ ಐಷಾಬಾಯಿ ಅಕಬರ ೪೧೨
೫ ಹಾಲಿಂಬಿ ತಾಹೇರ ೨೮೯
೭ ಮೈಮೂನಬಿ ಅಬ್ದುಲ್ ಅಜೀಮ್ ೩೦೪
೧೦ ಸಫೂರಾ ಕಿತ್ತೂರ ೬೪೬
೧೧ ಝೋರಾಬಿ ಮುನಶಿ ೩೨೪

ಬೆಳಗಾವಿ ಕೇಂದ್ರ (ಕನ್ನಡ)

೧ ಅಕ್ಕುಬಾಯಿ ವಾಮನಾಚಾರ ೩೬೯
೨ ಅಕ್ಕುಬಾಯಿ ಶಿವಾರಿ ೩೨೧
೭ ಗಂಗುಬಾಯಿ ಬನ್ನಟ್ಟಿ ೩೨೨
೮ ಗ್ರೇಸ ನಂದಿಹಾಳ ೪೩೩
೯ ಚಂದ್ರಾಬಾಯಿ ಕುಲಕರ್ಣಿ ೩೯೧
೧೭ ನಾಗವ್ವ ಹಾಲಗಿ ೩೧೪
೧೪ ಪ್ರಮಿಳಾ ಹೊನವಾಡ ೨೪೭
೧೯ ಪ್ರಮಿಳಾಬಾಯಿ ಬಾಸುತಕರ ೨೯೦
೨೧ ಫಕೀರವ್ವ ಕಮ್ಮಾರ ೩೨೪
೨೨ ಬಸವ್ವ ಅಂಗಡಿ ೬೪೭

೨೬	ಯಮುನಾಬಾಯಿ ಕುಲಕರ್ಣಿ	೩೯೭
೨೮	ರಹಿಮತಬಿ ಜಮಾದಾರ	೨೮೮
೩೦	ವೀರವ್ವ ಎಳ್ಳೂರ	೪೦೦
೩೨	ಶಕುಂತಲಾ ಕ್ಷೀರಸಾಗರ	೩೮೫
೩೩	ಶಕುಂತಲಾ ಕುಲಕರ್ಣಿ	೩೯೪
೩೬	ಶಾರದಾಬಾಯಿ ಕುಲಕರ್ಣಿ	೩೧೦
೩೭	ಶಾಲಿನಿ ಲಾಡ	೨೯೯
೩೮	ಶೇಷೂಬಾಯಿ ಲೋಕೂರ	೩೩೬
೪೨	ಸುಂದರಾಬಾಯಿ ಲಕಡೆ	೩೬೪
೪೪	ಅಮೀನಬಿ ಶೇಟ	೩೬೦
೪೫	ಇಂದುಮತಿ ಕುಲಕರ್ಣಿ	೨೮೦
೪೦	ಮಹಾದೇವಿ ಜೋಶಿ	೩೩೪
೪೧	ಲಕ್ಷ್ಮಿಂಬಾಯಿ ಕುಂಬಾರ	೨೯೦
೪೨	ಶಾಂತಾಬಾಯಿ ಡಮ್ಮಣಗಿ	೩೭೬
೪೪	ಸಾವಿತ್ರಿ ಗೆಜ್ಜಿ	೩೪೪
೪೫	ಸುಭದ್ರಾ ಹುದಲಿ	೪೫೯
೪೬	ಸುಶೀಲಾ ಅಸುಂಡಿ	೩೪೭

ಬೆಳಗಾವಿ ಕೇಂದ್ರ (ಉರ್ದು)

೧	ಮರಿಯಾಂಬಿ ಶೇಖ	೩೨೩
೫	ವಝೀರಬಿ ಔಟ	೩೧೭

ವಿಜಾಪುರ ಕೇಂದ್ರ (ಕನ್ನಡ)

೧	ಅಂಬಾಬಾಯಿ ಹಜೇರಿ	೨೯೭
೪	ಗೋದಾವರಿ ಆಶ್ರಿತ	೩೨೯
೬	ಇಂದಿರಾಬಾಯಿ ಮುತಾಲಿಕ	೨೮೪
೮	ಇಂದಿರಾ ಕರ್ಜಗಿ	೩೩೨
೯	ಕಾಂತಾಬಾಯಿ ಕುಲಕರ್ಣಿ	೪೦೧
೧೫	ಮಂಡೋದರಿ ಕುಲಕರ್ಣಿ	೩೪೩
೧೬	ಮೇನಕಾ ಕುಲಕರ್ಣಿ	೩೪೬
೧೮	ನಾಗವ್ವ ಕಾಗವಾಡ	೨೫೭
೨೦	ಪಾರ್ವತಿ ಹಿರೇಮಠ	೨೯೦
೨೧	ಪ್ರಯಾಗಾ ಕುಲಕರ್ಣಿ	೩೬೫
೨೪	ಸಾತವ್ವ ವಾರದ	೩೬೫
೨೭	ಶರಣವ್ವ ಪೆದ್ದ	೩೪೯
೩೦	ಸುಶೀಲಾ ಶಿರಹಟ್ಟಿ	೨೮೨
೩೩	ಚಂಪಾವತಿ ಕೇಸನೂರ	೩೧೯
೩೪	ಗಂಗವ್ವ ದಿವಟರ	೨೮೮
೩೮	ಇಂದಿರಾಬಾಯಿ ಒಡೆಯರ	೩೪೭
೪೧	ನಿಂಗವ್ವ ಪೂಜಾರ	೨೭೪
೪೩	ಕುಸುಮಾವತಿ ಜೋಶಿ	೩೨೨
೪೪	ಮಹಿಮುನಾ ಮ್ಯಾಗೇರಿ	೨೮೬
೪೬	ಸಂಕವ್ವ ಮದಕಟ್ಟಿ	೨೯೦
೪೭	ಸೋನಕ್ಕಾ ಕುಲಕರ್ಣಿ	೩೦೭
೪೮	ಸುಭದ್ರಾ ಬಡಿಗೇರ	೩೧೭
೪೯	ಸುಶೀಲಾ ದೇಸಾಯಿ	೩೪೬
೬೦	ತುಂಗಭದ್ರವ್ವ ಬೆಟಗೇರಿ	೩೦೩

ವಿಜಾಪುರ ಕೇಂದ್ರ (ಉರ್ದು)

೧	ಐಶಾಬಿ ಅತ್ತಾರ	೨೯೪
೨	ಬಿಬಿಜಹೇರಾ ಇನಾಮದಾರ	೨೮೭
೩	ಫಾತಿಮಾಬಿ ರೋಣ	೨೮೯
೪	ಗೋರೀಬಿ ನಾಜೀರ	೩೩೪
೫	ಹಬೀಬಸಾಬಿ ಹುಂಡೇಕಾರ	೩೩೩
೮	ಮಹಾಬೂಬ ಬಾಗವಾನ	೩೩೭
೯	ಮರಿಯಾಂಬಿ ಗೊಕಾಕಕರ	೩೨೮
೧೦	ರಬನಬಿ ತಾಸೇವಾಲೆ	೩೦೬

ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜ
ಸರ್ಟಿಫಿಕೇಟ್ ಪರೀಕ್ಷೆಯ ಪರಿಣಾಮ

೧೯೪೩ನೆಯ ಇಸ್ವಿಯ ಎಪ್ರಿಲ್ ತಿಂಗಳಲ್ಲಾದ ಮೊದಲನೆಯ ವರ್ಷದ ಸೀನಿಯರ ವರ್ಗದ ಪರೀಕ್ಷೆಗೆ ಕುಳಿತವರಲ್ಲಿ ಕೆಳಗಿನವರು ಉತ್ತೀರ್ಣರಾಗಿರುವರು.

ಮೊದಲನೆಯ ವರ್ಷ (ಸೀನಿಯರ ಕ್ಲಾಸ)

ನಂಬರು	ಹೆಸರು
೧	ಮುತ್ತವ್ವ ಷಣ್ಮುಖಾಚಾರ್ಯ ಪಂಚಾಳ
೨	ಅನ್ನವ್ವ ಚಂದ್ರಪ್ಪ ರಘುಳಕಿ
೩	ಲೀಲಕಾಬಾಯಿ ಮುತ್ತಯ್ಯಪ್ಪ ಮುಷ್ಟಿಗೇರಿ
೪	ತಿಪ್ಪವ್ವ ವೀರಪ್ಪ ಹೊಸೂರಕರ
೫	ಕೇಸೂಬಾಯಿ ಅನಾಜಿ ಲಮಾಣಿ
೬	ಕಾಳವ್ವ ಗೋವಿಂದರಾವ ಟಂಕಸಾಲಿ
೭	ಲಕ್ಷ್ಮೀಬಾಯಿ ಮಲ್ಲಪ್ಪ ಬೆನಾಡಿ
೮	ಮಹಾಲಿಂಗವ್ವ ಬಸಪ್ಪ ಗೌಡರ
೯	ಸರಸ್ವತಿ ಭಗವಂತ ಶಿರೋಡಕರ
೧೦	ಗಂಗೂಬಾಯಿ ಸಿದಲಿಂಗಪ್ಪ ಪಾಟೀಲ
೧೧	ಮಲ್ಲವ್ವ ನಾಗೇಶ ಒಕ್ಕುಂದ
೧೨	ಲಕ್ಷ್ಮವ್ವ ರುದ್ರಪ್ಪ ಕಮ್ಮಾರ
೧೩	ಜೀವುಬಾಯಿ ಬಾನೆಲಪ್ಪ ಬೇಳಿ
೧೪	ಸಾವಿತ್ರವ್ವ ಹನುಮಂತಪ್ಪ ಅಂತರ್ವಳ್ಳಿ
೧೫	ಬಸವಣ್ಣೆವ್ವ ಹನುಮಂತಪ್ಪ ಪೂಜಾರ
೧೬	ತಾಯವ್ವ ಶಿವರಾಯ ಅರಳೀಕಟ್ಟಿ
೧೭	ಲಕ್ಷ್ಮೀಬಾಯಿ ಶಾಂತಪ್ಪ ಜಿರಗ್ಯಾಳ
೧೮	ಗಂಗೂಬಾಯಿ ನಾರಾಯಣಭಟ್ಟ ಪ್ರಸಾದ
೧೯	ಸಾವಿತ್ರವ್ವ ಬಸಪ್ಪ ಮಣಕವಾಡ
೨೦	ಹೇಮಾದ್ರಿಬಾಯಿ ದೇವೇಂದ್ರ ಭಸ್ಮೇ
೨೧	ಹುಚ್ಚವ್ವ ಕಾಳಪ್ಪ ಹೊಸಮನಿ
೨೨	ಪದ್ಮಾವತಿ ಹನುಮಂತರಾವ ವೈದ್ಯ
೨೩	ಶಿವಗಂಗವ್ವ ಫಕೀರಪ್ಪ ಪಟ್ಟಣಶೆಟ್ಟಿ

೧೯೨೨ನೆಯ ಇಸ್ವಿಯ ಎಪ್ರಿಲ್ ತಿಂಗಳಲ್ಲಾದ ಎರಡನೆಯ ವರ್ಷದ ಸರ್ಟಿಫಿಕೇಟು ಪರೀಕ್ಷೆಗೆ ಕುಳಿತವರಲ್ಲಿ ಕೆಳಗಿನವರು ಉತ್ತೀರ್ಣರಾಗಿರುವರು.

ಎರಡನೆಯ ವರ್ಷ

ನಂಬರು	ಹೆಸರು
೧	ಭೀಮವ್ವ ಬಾಳಪ್ಪ ಆಸಂಗಿ
೨	ಯಲ್ಲವ್ವ ಯಲ್ಲಪ್ಪ ಕರೆಮ್ಮನವರ
೩	ಸತ್ಯವ್ವ ವೀರಭದ್ರ ಧಾಂದಲಿ
೪	ರೇವಕ್ಕ ಶಂಕರೆಪ್ಪ ಕುಣಮಿಂಚಿ
೫	ಗೌರವ್ವ ಹನುಮಂತಪ್ಪ ಬೆಣ್ಣಿ
೬	ಚಂದ್ರಕಲಾ ರಾಮಕೃಷ್ಣ ಪಡಿಯಾರ
೭	ಅಂಬಕ್ಕ ಭೀಮಪ್ಪ ಬಡಿಗೇರ
೮	ಯಮನವ್ವ ರಾಮಚಂದ್ರ ಘಟಕಾಂಬಳಿ
೯	ಬಸಲಿಂಗವ್ವ ಗಂಗಾಧರ ಕುರಿ
೧೦	ಲಿಂಗವ್ವ ಸೋಮಪ್ಪ ಕೇರಣ್ಣವರ
೧೧	ರೇವಣೆವ್ವ ಸಿದ್ರಾಮಯ್ಯ ಜಮನಾಳ
೧೨	ಗಂಗೂಬಾಯಿ ಉಡಪಿನಾಥ ಹೊದಲೂರ
೧೩	ಚೂಡಾಮಣಿ ರಾಮದಾಸ ಬೆಂಗಳೂರ
೧೪	ಟೋಪವ್ವ ಕೃಷ್ಣರಾವ ಪಾಸ್ತೆ
೧೫	ಗಂಗವ್ವ ಗುಡ್ಡನಗೌಡ ಕುರಗುಂದ
೧೬	ರೋಝಾಬಾಯಿ ಶಾಂತವೀರಪ್ಪ ಬಾರಾಟಕ್ಕೆ
೧೭	ಚಿನ್ನವ್ವ ಜೋಸೇಫ್ ಮುತ್ತಲಗೇರಿ
೧೮	ಥೋಂಡೂಬಾಯಿ ಗೋಪಾಳರಾವ ಶಾಲವರ್
೧೯	ವೆಂಕೂಬಾಯಿ ತುಳಜಾಸಾ ಕಾಟವೆ
೨೦	ಪ್ರೇಮಾಬಾಯಿ ದೇವೇಂದ್ರಪ್ಪ ಹೆಬ್ಬಾಳ
೨೧	ಜಾನೂಬಾಯಿ ಓಂಕಾರೆಪ್ಪ ಕನ್ನಾಳ
೨೨	ಪಾರ್ವತೆವ್ವ ಗುರಪ್ಪ ಕುರ್ಲಿ
೨೩	ತಾರಾಬಾಯಿ ಕೃಷ್ಣರಾವ ಜೋಶಿ
೨೪	ಲಕ್ಷ್ಮಿಬಾಯಿ ಅಪ್ಪಯ್ಯ ಹೊಸೂರ

(*Sd.*) E. S. Elizah,
ಲೆಡೀ ಸುಪರಿಟೆಂಡೆಂಟ ಟ್ರೇ ಕಾ.
ಫಾರ್ ಮಿಸೆನ್, ಧಾರವಾಡ.

ವರ್ಧಾ ರಾಷ್ಟ್ರೀಯ ಅಧ್ಯಾಪನ ಕೇಂದ್ರದ

ಪರೀಕ್ಷೆಯ ಪರಿಣಾಮ

೧೯೪೨ ನೆಯ ಇಸವಿಯ ಎಪ್ರೀಲ ತಿಂಗಳಲ್ಲಿ ಆದ ಸರ್ಟಿಫಿಕೇಟ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರ ಹೆಸರುಗಳೂ ಹಾಗು ಅವರು ಪಡೆದ ಒಟ್ಟು ಗುಣಗಳೂ ಗುಣಾನುಕ್ರಮವಾಗಿ ಕೆಳಗೆ ಕೊಟ್ಟ ಪ್ರಕಾರ ಇರುವವು.

ನಂ.	ಹೆಸರು	ಗುಣ
೧	ಸೋಲಾಪೂರ ಎಸ್. ಎಂ.	೮೪೩
೨	ಕಾಶಿನಕುಂಟಿ ಡಿ. ಆರ್.	೮೪೦
೩	ಗಾಣಿಗೇರ ವ್ಹಿ. ಕೆ.	೮೩೮
೪	ಪಾಟೀಲ ಎ. ಟಿ.	೮೨೧
೫	ಪುರೋಹಿತ ಎಸ್. ಬಿ.	೮೨೧
೬	ಮೊಹರೀರ ಜೆ. ಆರ್.	೮೧೩
೭	ಮಠ ಕೆ. ಪಿ.	೮೧೨
೮	ಸಗರ ಜಿ. ಎಸ್.	೮೧೦
೯	ಕಾಮತ ಎಲ್. ಎಂ.	೮೦೧
೧೦	ದಾನಪ್ಪನವರ ವ್ಹಿ. ವ್ಹಿ.	೭೯೨
೧೧	ಮುಳಗುಂದ ಕೆ. ಆರ್	೭೯೯
೧೨	ಕುಲಕರ್ಣಿ ಎಸ್. ಎನ್.	೭೯೮
೧೩	ಮೋದಿ ಎಚ್. ಎ.	೭೯೪
೧೪	ಮಾಡಲಗೇರಿ ಎನ್. ವ್ಹಿ.	೭೮೯
೧೫	ಕಟ್ಟಿ ಎ. ಜಿ.	೭೮೬
೧೬	ಮಠದ ಎಸ್. ಜಿ.	೭೦೮
೧೭	ಪುರಾಣೀಕ ಆರ್. ಡಿ.	೭೦೫
೧೮	ಹೆಬ್ಬಾಳದ ಸಿ. ಜಿ.	೬೯೮
೧೯	ಹೊಂಬಳ ಬಿ. ವ್ಹಿ.	೬೯೭

ನಂ.	ಹೆಸರು	ಗುಣ
೨೦	ನಸ್ರ್ರದ ಎಸ್. ಎಸ್.	೬೯೦
೨೧	ನಾಯಿಕವಾಡಿ ಟಿ. ಆರ್.	೬೮೯
೨೨	ಬೆಂಗೇರಿ ಸಿ. ಬಿ.	೬೮೭
೨೩	ಕಾಡದೇವರಮಠ ಎ. ಎ.	೬೭೭
೨೪	ಪಾಲೇಕರ ವಾಯ್,ಆರ್.	೬೬೭
೨೫	ಪಾಟೀಲ ಬಿ. ಯು.	೬೬೫
೨೬	ನೇಕಾರ ಕೆ. ಎಲ್.	೬೬೫
೨೭	ಗಾಣಿಗೇರ ಎಮ್. ಆರ್	೬೬೫
೨೮	ಕುಲಕರ್ಣಿ ಜಿ. ಎಂ.	೬೪೪
೨೯	ಜಂಗಲಿಪ್ಪನವರ ಜೆ.ಎಫ್.	೬೩೯
೩೦	ಕಟಗಿ ಎನ್. ಸಿ.	೬೩೯
೩೧	ಡಮ್ಮಳ್ಳಿ ಡಿ. ಎಂ.	೬೩೦
೩೨	ಪಾಂಡ್ರೆ ಎ. ಬಿ.	೬೨೮
೩೩	ಮೊರಬ ಎಸ್. ವ್ಹಿ.	೬೦೯
೩೪	ಲಲಿತಾಬಾಯಿ ಅಂಬಿಗೇರ	೬೦೯
೩೫	ಜಿಗಳೂರ ಎಲ್. ಆರ್.	೫೯೯
೩೬	ದೊಡ್ಡಮನಿ ಸಿ. ವಾಯ್.	೫೯೯
೩೭	ವಡ್ಡರ ಎಚ್. ಎನ್.	೫೮೮
೩೮	ಬಸವಣ್ಣೆವ್ವ ಹೊಂಬಳ	೫೮೮
೩೯	ಮೂದರ ಎಲ್. ಎಂ.	೫೬೬

ವರ್ಧಾ ರಾಷ್ಟ್ರೀಯ ಅಧ್ಯಾಪನ ಕೇಂದ್ರ, ಧಾರವಾಡ.

(*Sd.*) **R. V. Desai,**
Head Master, Basic Training Centre, Dharwar.

ಕನ್ನಡ "ವರ್ಧ ಪ್ರಾಯೋಜ" ಪರೀಕ್ಷೆ ೧೯೪೩

೧. **ಪರೀಕ್ಷೆಯ ವಿಷಯಗಳು:—**

(ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯಪದ್ಯ ಭಾಗಗಳ ಅರ್ಥ ವಿವರಣೆ ಮಾಡಲಿಕ್ಕೂ ಅವುಗಳಿಗೆ ಟೀಕೆ ಟಿಪ್ಪಣಿಗಳನ್ನು ಬರೆಯಲಿಕ್ಕೂ ಹಳೆಯ ಮತ್ತು ಹೊಸ ಕನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ಉಮೇದವಾರರು ಸಮರ್ಥರಾಗಿರಬೇಕು

(ಬ) ವರ್ಧಸಾಹೇಬರು ರಚಿಸಿರುವ ಪ್ರಾಕ್ಟಿಕ್ಯಮಾಲೆ ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯಲ್ಲಿ ಅರ್ಥ ವಿವರಣೆ ; ಟೀಕೆ ಟಿಪ್ಪಣಿ ; ಸ್ವತಂತ್ರ ನಿಬಂಧ ; ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವದು.

೨. **ಬಹುಮಾನ:—** ಈ ಮೊದಲು ಇದ್ದ ೮೦ ರೂ. ಯ ಒಂದೇ ಬಹುಮಾನದ ಬದಲಾಗಿ ಈಗ ಬಹುಮಾನಗಳು ಎರಡು ಎಂದುಗೊತ್ತಾಗಿದೆ. **ಮೊದಲನೆಯ ಬಹುಮಾನ ೫೦ ರೂ. ೨ ನೆಯ ಬಹುಮಾನ ೩೦ ರೂ.**

ಮೊದಲನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ಕ್ಕೆ ೭೫ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಎರಡನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ ಕ್ಕೆ ೫೦ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಪಡೆದಿರಬೇಕು ಈ ಉಮೇದವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಾಪಾಸಾಗಿರಕೂಡದು.

ಒಂದುವೇಳೆ ಒಬ್ಬನಿಗಿಂತ ಹೆಚ್ಚು ಉಮೇದವಾರರು ಸಮಾನ ಗುಣಗಳನ್ನು ಪಡೆದು ಸಮಾಧಾನಕರವಾಗಿ ಪಾಸಾಗಿದ್ದರೆ ಬಹುಮಾನಗಳನ್ನು ಸರಿಯಾಗಿ ವಿಭಜಿಸಿ ಹಂಚಲಾಗುವದು.

೩. **ಅರ್ಜಿಮಾಡತಕ್ಕ ಅವಧಿ:—**

ಪರೀಕ್ಷೆಗೆ ಕೂಡ್ರಲಿಚ್ಚಿಸುವವರು ೧೯೪೩ ನೆಯ ಇಸವಿಯ ಜೂನ್ ತಿಂಗಳ ೧ ನೆಯ ತಾರೀಖಿನೊಳಗಾಗಿ ಮೆ॥ ಎಜ್ಯುಕೇಶನಲ್ ಇನಸ್ಪೆಕ್ಟರ ಸಾ॥ ದಕ್ಷಿಣಭಾಗ ಇವರಿಗೆ ಮುಟ್ಟುವಂತೆ ಅಪೇಕ್ಷಾಪತ್ರವನ್ನು ಕಳುಹಿಸತಕ್ಕದ್ದು.

೪. **ಪರೀಕ್ಷೆಯ ಸ್ಥಳ ದಿವಸ ಹಾಗು ವೇಳೆ:—**

ಧಾರವಾಡ ಗಂಡುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಈ ಪರೀಕ್ಷೆಯು ನಡೆಯುವದು, ತಾರೀಖು ವೇಳೆ ಮೊದಲಾದವುಗಳನ್ನು ಹಿಂದಿನಿಂದ ಪ್ರಕಟಿಸಲಾಗುವದು.

೫. **ಪ್ರಶ್ನೆಗಳ ಕಾಗದಗಳು ಕೆಳಗೆ ಬರೆದಂತೆ ಇವೆ:—**

ಪ್ರತಿಯೊಂದು ಕಾಗದಕ್ಕೆ ೩ ತಾಸು ಅವಧಿಯೂ ೧೦೦ ಗುಣಗಳೂ ಉಂಟು.

ಮೊದಲನೆಯದು:—	ಪ್ರಕ್ಟಿಕ್ಯಮಾಲೆ	೭೦	ಗುಣ
	ವ್ಯಾಕರಣ ಮತ್ತು ಛಂದಸ್ಸು	೩೦	೧೦೦
ಎರಡನೆಯದು:—	ಹಳೆಗನ್ನಡ ನಿಬಂಧ	೫೦	
	ಕನ್ನಡ ಬಾವುಟದಲ್ಲಿಯ ಕವಿತಾ ಭಾಗ	೩೦	೧೦೦
	ಹಳೆಗನ್ನಡ ಅಪರಿಚಿತ ಗದ್ಯಭಾಗಗಳು	೨೦	
ಮೂರನೆಯದು:—	ಹೊಸಗನ್ನಡ ನಿಬಂಧ ; ಹನ್ನೆರಡನೆಯ	೭೫	೧೦೦
	ಶತಮಾನದ ಕನ್ನಡ ಸಾಹಿತ್ಯ ಪರಿಚಯ	೨೫	

ಕನ್ನಡ ಬುಕ್ ಕಮೀಟಿಯವರಿಂದ ಮಂಜೂರಾದ ಪುಸ್ತಕಗಳು

ಟಿಪ್ಪಣಿ :— ಪ್ರಾ. ಪ್ರಾಥಮಿಕ ; ಮಾ. ಮಾಧ್ಯಮಿಕ ; ಟ್ರೇ. ಟ್ರೇನಿಂಗ್ ; ಶಿ. ಶಿಕ್ಷಕ ; ವಿ. ವಿದ್ಯಾರ್ಥಿ ; ವಾ. ವಾಚನಾಲಯ ; ಶಾ. ಶಾಲೆ.

ಅ. ನಂ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ ?
೧	**ಅಣ್ಣನ ಸೂಳ್ನುಡಿ** ೧ ನೆಯ ಆ. ೧೯೪೦	ವ್ಹಿ. ಆರ್. ಕೊಪ್ಪಳ, ಆರ್. ಎಲ್. ಎಸ್. ಹಾಯಸ್ಕೂಲ್, ಧಾರವಾಡ	೦—೪–೦	ಪ್ರಾ. ಮಾ. ಟ್ರೇ. ವಿ. ಶಿ. ವಾ.
೨	**ಉದುರ್ ಕಥಾವಲಿ** ೧ ನೆಯ ಆ. ೧೯೪೨	ಭಾರತೀಯ ಸಾಹಿತ್ಯ ಪ್ರಕಟನಾಲಯ ಧಾರವಾಡ	೦—೪–೦	ಪ್ರಾ. ಮಾ. ಟ್ರೇ. ಶಿ. ವಾ.
೩	**ಕನ್ನಡ ಏಳನೆಯ ಪುಸ್ತಕ** ೧ ನೆಯ ಆ. ೧೯೪೨ ಬುಕ್ ಕಮೀಟಿಯವರು ಸೂಚಿಸಿದಂತೆ ತಿದ್ದಬೇಕು.	ಪಬ್ಲಿಶರ ಗೌರೀಶ ವಾಚನ ಮಾಲೆ ಧಾರವಾಡ	೦–೧೪–೦	ಪ್ರಾ. ಶಾ. ಪಠ್ಯಪುಸ್ತಕ
೪	**ಮಕ್ಕಳ ಶಿಕ್ಷಣ ಪಟವು** ೧ ನೆಯ ಆ. ೧೯೩೩	ಸಿ. ಬಿ. ಹೊಳೆಪ್ಪನವರ ಹಾವೇರಿ	೦—೬–೦	ಪ್ರಾ. ಮಾ. ಟ್ರೇ. ಶಿ. ವಾ.
೫	**ಸುಳುವು ಹೊಳವು** ೧ ನೆಯ ಆ. ೧೯೩೯	ಮನೋಹರ ಗ್ರಂಥಮಾಲಾ ಧಾರವಾಡ	೧—೦–೦	ಪ್ರಾ. ಮಾ. ಟ್ರೇ. ವಿ. ಶಿ. ವಾ.

೬	**ಸೊಗಸಿನ ಒದು** ನಾಲ್ಕನೆಯ ಪುಸ್ತಕ ೧ನೆಯ ಆ. ೧೯೪೨ ಕಮಿಟಿಯವರು ತೋರಿಸಿದ ತಪ್ಪುಗಳನ್ನು ತಿದ್ದಬೇಕು.	ಸ್ಟೂಡಂಟ್ಸ ಓನ್ ಬುಕ್ ಡಿಪೊ ಧಾರವಾಡ	೦—೬–೦	ಪ್ರಾ. ಶಾ. ಪಠ್ಯಪುಸ್ತಕ
೭	**ಶಿಕ್ಷಣ ಶಾಸ್ತ್ರ** ೧ನೆಯ ಆ. ೧೯೪೨	ಪ್ರೊಪ್ರಾಯಟರ ರಾಮಾಶ್ರಯ ಬುಕ್ ಡಿಪೊ ಧಾರವಾಡ	೧—೪–೦	ಟ್ರೇ. ಸಂ. ಪಠ್ಯಪುಸ್ತಕ ಪ್ರಾ. ಮಾ. ಶಿ. ವಾ.
೮	**ವಿರಾಗಿಣಿ** ೧ನೆಯ ಆ. ೧೯೪೧ ಪೇಟೆಯಲ್ಲಿ ಮಾರಾಟವಾಗುವ ಪೂರ್ವದಲ್ಲಿ ಪುಸ್ತಕಗಳ ಮೇಲೆ ಬೆಲೆ ಬರೆಯಬೇಕು.	ಎಮ್. ಎಸ್. ಬಂದರಗೋಳ, ಬಾಗಲಕೋಟೆ ಪ್ರಿಂಟಿಂಗ್ ವರ್ಕ್ಸ ಬಾಗಲಕೋಟೆ	೦–೧೪–೦	ಪ್ರಾ. ಮಾ. ಟ್ರೇ. ವಿ. ಶಿ. ವಾ.
೯	**ನಮ್ಮ ಹಿಂದುಸ್ತಾನ** ೧ನೆಯ ಆ. ೧೯೪೨ ಮಾರಾಟದ ಪೂರ್ವದಲ್ಲಿ ಪುಸ್ತಕಗಳ ಮೇಲೆ ಬೆಲೆ ಬರೆಯಬೇಕು.	ಅಕ್ಸಫೋರ್ಡ ಯುನಿವ್ಹರ್ಸಿಟಿ ಪ್ರೆಸ್ ಮುಂಬಯಿ	೧—೦–೦	ಸದರ
೧೦	**ಶೂರ್ಪಾಲಿಯ ಆಚಾರ್ಯರು** ೧ನೆಯ ಆ. ೧೯೪೧	ಎಸ್. ಜಿ. ಕಟ್ಟಿ, ವಕೀಲರು, ಅನಂತ ಶಯನಗಲ್ಲಿ ಬೆಳಗಾವಿ	೦–೧೨–೦	ಪ್ರಾ. ಮಾ. ಟ್ರೇ. ವಿ. ವಾ.
೧೧	**ಮಿಲನ** ೧ನೆಯ ಆ. ೧೯೩೬	ಬಿ. ಡಿ. ಅಕ್ಕಿ, ಬಿ. ಏ. ಎಲ್ಎಲ್. ಬಿ. ಅರವಿಂದ ಗ್ರಂಥಮಾಲೆ ಹಲಸಂಗಿ ಜಿ. ವಿಜಾಪುರ	೦–೧೨–೦	ಪ್ರಾ. ಮಾ. ಟ್ರೇ. ವಿ. ಶಿ. ವಾ.

ಕನ್ನಡ ಬುಕ್ ಕಮೀಟಿಯವರಿಂದ ಮಂಜೂರಾದ ಪುಸ್ತಕಗಳು

ಟಿಪ್ಪಣಿ:— ಪ್ರಾ. ಪ್ರಾಥಮಿಕ; ಮಾ. ಮಾಧ್ಯಮಿಕ; ಟ್ರೇ. ಟ್ರೇನಿಂಗ್; ಶಿ. ಶಿಕ್ಷಕ; ವಿ. ವಿದ್ಯಾರ್ಥಿ; ವಾ. ವಾಚನಾಲಯ; ಶಾ. ಶಾಲೆ.

ಅ. ನಂ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ?
೧	**ಅಣ್ಣನ ಸೂಳ್ನುಡಿ** ೧ ನೆಯ ಆ. ೧೯೪೦	ವ್ಹಿ. ಆರ್. ಕೊಪ್ಪಳ, ಆರ್. ಎಲ್. ಎಸ್. ಹಾಯಸ್ಕೂಲ್, ಧಾರವಾಡ	೦—೪–೦	ಪ್ರಾ. ಮಾ. ಟ್ರೇ. ವಿ. ಶಿ. ವಾ
೨	**ಉದುರ್ ಕಥಾವಲಿ** ೧ ನೆಯ ಆ. ೧೯೪೨	ಭಾರತೀಯ ಸಾಹಿತ್ಯ ಪ್ರಕಟನಾಲಯ ಧಾರವಾಡ	೦—೪–೦	ಪ್ರಾ. ಮಾ. ಟ್ರೇ. ಶಿ. ವಾ.
೩	**ಕನ್ನಡ ಏಳನೆಯ ಪುಸ್ತಕ** ೧ ನೆಯ ಆ. ೧೯೪೨ ಬುಕ್ ಕಮೀಟಿಯವರು ಸೂಚಿಸಿದಂತೆ ತಿದ್ದಬೇಕು.	ಪಬ್ಲಿಶರ ಗೌರೀಶ ವಾಚನ ಮಾಲೆ ಧಾರವಾಡ	೦–೧೪–೦	ಪ್ರಾ. ಶಾ. ಪಠ್ಯಪುಸ್ತಕ
೪	**ಮಕ್ಕಳ ಶಿಕ್ಷಣ ಪಟವು** ೧ ನೆಯ ಆ. ೧೯೩೩	ಸಿ. ಬಿ. ಹೊಳೆಪ್ಪನವರ ಹಾವೇರಿ	೦—೬–೦	ಪ್ರಾ. ಮಾ. ಟ್ರೇ. ಶಿ. ವಾ.
೫	**ಸುಳುವು ಹೊಳವು** ೧ ನೆಯ ಆ. ೧೯೩೯	ಮನೋಹರ ಗ್ರಂಥಮಾಲಾ ಧಾರವಾಡ	೧—೦–೦	ಪ್ರಾ. ಮಾ. ಟ್ರೇ. ವಿ. ಶಿ. ವಾ.

೬	**ಸೊಗಸಿನ ಓದು** ನಾಲ್ಕನೆಯ ಪುಸ್ತಕ ೧ನೆಯ ಆ. ೧೯೪೨ ಕಮೀಟಿಯವರು ತೋರಿಸಿದ ತಪ್ಪುಗಳನ್ನು ತಿದ್ದಬೇಕು.	ಸ್ಟೂಡಂಟ್ಸ ಒನ್ ಬುಕ್ ಡಿಪೊ ಧಾರವಾಡ	೦—೬—೦	ಪ್ರಾ. ಶಾ. ಪಠ್ಯಪುಸ್ತಕ
೭	**ಶಿಕ್ಷಣ ಶಾಸ್ತ್ರ** ೧ನೆಯ ಆ. ೧೯೪೨	ಪ್ರೊಪ್ರಾಯಟರ ರಾಮಾಶ್ರಯ ಬುಕ್ ಡಿಪೊ ಧಾರವಾಡ	೧—೪—೦	ಟ್ರೇ. ಸಂ. ಪಠ್ಯಪುಸ್ತಕ ಪ್ರಾ. ಮಾ. ಶಿ. ವಾ.
೮	**ವಿರಾಗಿಣಿ** ೧ನೆಯ ಆ. ೧೯೪೧ ಪೇಟೆಯಲ್ಲಿ ಮಾರಾಟವಾಗುವ ಪೂರ್ವದಲ್ಲಿ ಪುಸ್ತಕಗಳ ಮೇಲೆ ಬೆಲೆ ಬರೆಯಬೇಕು.	ಎಮ್. ಎಸ್. ಬಂದರಗೋಳ, ಬಾಗಲಕೋಟಿ ಪ್ರಿಂಟಿಂಗ್ ವರ್ಕ್ಸ್ ಬಾಗಲಕೋಟಿ	೦-೧೪-೦	ಪ್ರಾ. ಮಾ. ಟ್ರೇ. ವಿ. ಶಿ. ವಾ.
೯	**ನಮ್ಮ ಹಿಂದುಸ್ತಾನ** ೧ನೆಯ ಆ. ೧೯೪೨ ಮಾರಾಟದ ಪೂರ್ವದಲ್ಲಿ ಪುಸ್ತಕಗಳ ಮೇಲೆ ಬೆಲೆ ಬರೆಯಬೇಕು.	ಅಕ್ಸಫೋರ್ಡ ಯುನಿವ್ಹರ್ಸಿಟಿ ಪ್ರೆಸ್ ಮುಂಬಯಿ	೧—೦—೦	ಸದರ
೧೦	**ಶೂರ್ಪಾಲಿಯ ಆಚಾರ್ಯರು** ೧ನೆಯ ಆ. ೧೯೪೧	ಎಸ್. ಜಿ. ಕಟ್ಟಿ, ವಕೀಲರು, ಅನಂತಶಯನಗಲ್ಲಿ ಬೆಳಗಾವಿ	೦-೧೨-೦	ಪ್ರಾ. ಮಾ. ಟ್ರೇ. ವಿ. ವಾ.
೧೧	**ಮಿಲನ** ೧ನೆಯ ಆ. ೧೯೩೬	ಬಿ. ಡಿ. ಅಕ್ಕಿ, ಬಿ. ಏ. ಎಲ್‌ಎಲ್. ಬಿ. ಅರವಿಂದ ಗ್ರಂಥಮಾಲೆ ಹಲಸಂಗಿ ಜಿ. ವಿಜಾಪುರ	೦-೧೨-೦	ಪ್ರಾ. ಮಾ. ಟ್ರೇ. ವಿ. ಶಿ. ವಾ.

ನಂ.	ಪುಸ್ತಕಗಳ ಹೆಸರಗಳು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ?
೧೨	**ಶೈಕ್ಷಣಿಕ ಮಾನಸಶಾಸ್ತ್ರ** ೧ ನೆಯ ಆ. ೧೯೪೨	ಕರ್ನಾಟಕ ಸಾಹಿತ್ಯ ಮಂದಿರ ಧಾರವಾಡ	೧—೪–೦	ಟ್ರೇ. ಸಂ. ಪಠ್ಯಪುಸ್ತಕ ಪ್ರಾ. ಮಾ. ಶಿ. ವಾ.
೧೩	**ತಮಿಳು ಕಥೆಗಳು** ೧ ನೆಯ ಆ. ೧೯೪೧	ಸದರ	೦–೧೨–೦	ಪ್ರಾ. ಮಾ. ಟ್ರೇ. ಶಿ. ವಾ.
೧೪	**ಸಚಿತ್ರ ನಿಬಂಧ ಮಾಲೆ** ೧ ನೆಯ ಆ. ೧೯೪೧	ಮ್ಯಾನೇಜರ ವಿದ್ಯಾವಿಲಾಸ ಬುಕ್ ಡಿಪೊ ಗದಗ	೦–೧೪–೦	ಪ್ರಾ. ಶಾ. ಪಠ್ಯಪುಸ್ತಕ
೧೫	**ಕನ್ನಡ ಭಾಷಾಭ್ಯಾಸ** ೧ ನೆಯ ಆ. ೧೯೪೨	ಸದರ	೦–೧೪–೦	ಪ್ರಾ. ಶಾ. ವಿ. ವಾ.
೧೬	**ಐವರು ಶಿಕ್ಷಣ ಸುಧಾರಕರು** ೧ ನೆ ಆ. ೧೯೪೧	ಸಿ. ಬಿ. ಹರಿಹರ, ತೋಂಟದಾರ್ಯ ಮುದ್ರಣಾಲಯ ಧಾರವಾಡ	೦—೫–೦	ಪ್ರಾ. ಮಾ. ಟ್ರೇ. ವಿ. ಶಿ. ವಾ.
೧೭	**ತಾರಾಮಂಡಲ** ೧ ನೆಯ ಆ. ೧೯೪೨	ಪಿ. ಏ. ಹುನಗುಂದ ಶಾಂತಿನಿಕೇತನ ಸ್ಟೇಶನರೋಡ ವಿಜಾಪುರ	ಸಾದಾ ೧—೨–೦ ಉತ್ತಮ ೧–೧೦–೦	ಸದರ

ಪತ್ರಗಳ ಮುಖ್ಯಾಂಶಗಳು

ತೆಲಂಗಾರ :—(ಕಾರವಾರ ಜಿಲ್ಲೆ) ಈ ಊರ ಶಾಲೆಗೆ ಶ್ರೀ. ಸು. ತಿ. ದೇಸಾಯಿ ಎಂಬವರು ಶಿಕ್ಷಕರಾಗಿದ್ದಾರೆ. ಶಾಲೆಯ ಕೆಲಸವು ಸಮಾಧಾನಕರವಾಗಿ ಸಾಗಿದೆ. ತಾ. ೨–೫–೪೨ ನೆಯ ದಿವಸ ಊರ ಜನರು ಸಭೆ ಕೂಡಿಸಿ ಶಿಕ್ಷಕರನ್ನು ಗೌರವಿಸಿ, ವಿದ್ಯಾರ್ಥಿಗಳಿಗೆ ಒಂದು ಭೋಜನವನ್ನು ಮಾಡಿಸಿದರು.

ತಿಳಿಸಿದವರು :– ಶ್ರೀ. ಗೋಪಾಲ ಅಣ್ಣಪ್ಪ ಕಂಚೀಪಾಲು, ತೆಲಂಗಾರ

ಗುಲ್ಹೊಸೂರು :— (ಬೆಳಗಾವಿ ಜಿಲ್ಲೆ) ಪ್ರತಿ ವರ್ಷದಂತೆ ಇಲ್ಲಿಯ ಶ್ರೀ. ಮೊ. ಹ. ಖರೆ, ಎಲ್. ಸಿ. ಈ. ಅವರು ಕೊಟ್ಟ ೨೮ ರೂಪಾಯಿಗಳ ಪಾಟಿ, ಪುಸ್ತಕ, ಟೊಪ್ಪಿಗೆ ಮೊದಲಾದವುಗಳನ್ನು ಇಲ್ಲಿಯ ಶಾಲೆಯ ವಿದ್ಯಾರ್ಥಿಗಳಲ್ಲಿ ಹಲವರಿಗೆ ತಾ. ೧–೫–೪೨ ನೆಯ ದಿವಸ ಬಹುಮಾನವೆಂದು ಕೊಡಲಾಯಿತು. ಶ್ರೀ. ಖರೆ ಅವರು ಮುಂದಿನ ವರ್ಷದಿಂದ ೩೫ ರೂ. ಕೊಡುವೆವೆಂದು ಆಶ್ವಾಸನ ವನ್ನು ಕೊಟ್ಟಿರುವರು.

ತಿಳಿಸಿದವರು :– ಶ್ರೀ. ಬಾ. ದೇ. ಜೋಶಿ, ಹೆ. ಮಾಸ್ತರ.

ಉರುಬಿನಹಟ್ಟಿ :—(ಬೆಳಗಾವಿ ಜಿಲ್ಲೆ) ಇಲ್ಲಿಯ ವಿದ್ಯಾರ್ಥಿಗಳು ಬಸವ-ಜಯಂತಿಯ ಸಮಾರಂಭದಲ್ಲಿ ಸಾಕಷ್ಟು ಚಟುವಟಿಕೆಗಳನ್ನು ತೋರಿಸಿದ್ದರಿಂದ ಊರ ಹಿರಿಯರು ಸಂತೋಷಬಟ್ಟು ಶಾಲೆಯ ಉಪಯೋಗಕ್ಕಾಗಿ ದೊಡ್ಡದೊಂದು ಕನ್ನಡಿಯನ್ನು ತರಿಸಲು ನಾಲ್ಕು ರೂಪಾಯಿಗಳನ್ನು ಕೊಟ್ಟರು.

ತಿಳಿಸಿದವರು :– ಶ್ರೀ. ಬ. ಗು. ಹಾರೋಗೇರಿ, ಆ. ಮಾ.

ಬಾಗೇವಾಡಿ :— (ವಿಜಾಪುರ ಜಿಲ್ಲೆ) ತಾ. ೨೫–೪–೪೨ ನೆಯ ದಿವಸ ಇಲ್ಲಿಯ ಹೆಣ್ಣುಮಕ್ಕಳ ಶಾಲೆಯಲ್ಲಿ ಪಾಲಕರ ದಿನವನ್ನು ಆಚರಿಸಿ ಬಾಲಿಕೆಯರಿಗೆ ಮೆಚ್ಚುಗೆಯನ್ನು ಕೊಡಲಾಯಿತು.

ತಿಳಿಸಿದವರು :– ಶ್ರೀ. ವೆ. ಕೃ. ಬಾಡಗಂಡಿ, ಹೆ. ಮಾ

ಐದನೆಯ ನಂಬರ ಕನ್ನಡ ಗಂಡುಮಕ್ಕಳ ಶಾಲೆ, ಧಾರವಾಡ :— ತಾ. ೧೫–೪–೪೨ನೆಯ ದಿವಸ ಶಾಲೆಯ ವಾರ್ಷಿಕ ಸಮಾರಂಭವು ನೆರವೇರಿತು.

ಶ್ರೀ. ವ್ಹಿ. ಆರ್. ಕೊಪ್ಪಳ ಎಮ್. ಎ. ಬಿ, ಟಿ. ಅವರು ವಿದ್ಯಾರ್ಥಿಗಳ ಆಟಗಳನ್ನು ಕಂಡು ಆನಂದಿತರಾಗಿ ಬೆಳ್ಳಿಯ ವಸ್ತುವನ್ನು ಕಾಣಿಕೆಯಾಗಿ ಕೊಟ್ಟರು. ಅಧ್ಯಕ್ಷರಾದ ಶ್ರೀ. ಎಲ್. ಆರ್. ಮಂಕಣಿ, ಚೇಅರಮನ್ನರ ಹಸ್ತದಿಂದ ಮೆಚ್ಚುಗೆಗಳನ್ನು ಕೊಡಿಸಲಾಯಿತು. ನವಕಲ್ಯಾಣ ಮಠದ ಶ್ರೀ. ಕುಮಾರ ಸ್ವಾಮಿಗಳು ಬಿ. ಎ. ಅವರು ೧೨ ಖಾದಿ ಟೊಪ್ಪಿಗೆ, ೧೧ ಗಂಜೀಫ್ರಾಕ್‌ಗಳನ್ನು ಬಾಲಕರಿಗಾಗಿ ಕೊಟ್ಟರು. ಅಧಿಕಾರಿಗಳು ಶಾಲೆಯ ಪ್ರಗತಿಯನ್ನು ಕಂಡು ಸಮಾಧಾನ ವ್ಯಕ್ತಮಾಡಿದ್ದಾರೆ.

ತಿಳಿಸಿದವರು :— ಶ್ರೀ. ಸ್ವಾ. ಅ. ಕೊರ್ಲಹಳ್ಳಿ ಅ. ಮಾಸ್ತರ

ಗದಗ :— ಕನ್ನಡ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯಲ್ಲಿ ಪಾಸಾಗಿ ಮೊದಲನೆಯ ನಂಬರದಲ್ಲಿ ಬಂದ ಗದಗ ಬೆಟಗೇರಿಯ ವಿದ್ಯಾರ್ಥಿ-ವಿದ್ಯಾರ್ಥಿನಿಯಯರಿಗೆ ಐದೈದು ರೂಪಾಯಿಗಳ ಬಹುಮಾನ ಕೊಡುವದಾಗಿ ಶ್ರೀಮಾನ್ ಸಿ. ಎಸ್. ಪಾಟೀಲ, ವ್ಹಾಯಿಸ್ ಚೇಅರಮನ್ ಗದಗ ಸ್ಕೂಲಬೋರ್ಡ ಅವರು; ಉರ್ದು ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯಲ್ಲಿ ಪಾಸಾಗಿ ಮೊದಲನೆಯ ನಂಬರು ಪಡೆದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಐದೈದು ರೂಪಾಯಿಗಳ ಬಹುಮಾನ ಕೊಡುವದಾಗಿ ಶ್ರೀಮಾನ್ ಗೌಸಮೋಹದೀನಸಾಹೇಬ ಅಕ್ಕಿ ಮ್ಯುನಸಿಪಲ್ ಕೌನ್ಸಿಲರ ಅವರು; ಕೂಡಿ ೨೦ ರೂ. ಗಳ ಬಹುಮಾನ ಕೊಡುವದಾಗಿ ಇಲ್ಲಿಯ ಮೊದಲನೆಯ ನಂಬರ ಹೆಣ್ಣುಮಕ್ಕಳ ಶಾಲೆಯವರು ಏರ್ಪಡಿಸಿದ ಪಾಕರಚನೆಯ ನೀರೀಕ್ಷಣೆಯ ಕಾಲದಲ್ಲಿ ಎಡ್ಮಿನಿಸ್ಟ್ರೇಟಿವ್ವ ಆಫೀಸರದಾದ ಮೆ| ಪಠಾಣ ಸಾಹೇಬರ ಬಳಿಯಲ್ಲಿ ತಿಳಿಸಿದ್ದಾರೆ.

ತಿಳಿಸಿದವರು :— ಹೆ|| ಮಾ|| ಕ. ಗ. ಮ. ಶಾ. ನ. ೧ ಗದಗ

ಮಂಕಣಿ :— (ವಿಜಾಪುರ ಜಿಲ್ಲೆ) ತಾ|| ೧೮-೪-೧೯೩೨ ನೆಯ ದಿವಸ ಇಲ್ಲಿಯ ಶಾಲೆಯಲ್ಲಿ ಈ ಭಾಗದ ಶಿ. ಶಿ. ಸಮ್ಮೇಲನವು ಮೆ|| ಎನ್. ಕೆ. ಸಂಗನಾಳ ಮಠ ಅ. ಡಿ. ಎ. ಇ. ಅವರ ಅಧ್ಯಕ್ಷತೆಯಲ್ಲಿ ಚೆನ್ನಾಗಿ ಸಾಗಿತು. ೩೦ ಶಿಕ್ಷಕರು ೧೫೦ ವಿದ್ಯಾರ್ಥಿಗಳು ಕೂಡಿದ್ದರು.

ತಿಳಿಸಿದವರು :— ಶ್ರೀ. ಬಿ. ಎಸ್. ಹುರಕಡ್ಲಿ ಹೆ|| ಮಾ||

ಸಾಕ್ಷರಿಗಳಾದ ಪ್ರಬುದ್ಧರಿಗಾಗಿ

ಉರಿಯುತ್ತಿರುವ ಬಾಂಬು ಆರಿಸಲು ಕಲಿಯಿರಿ

ಶ್ರೀಮಾನ್ ಎಸ್. ಆರ್. ತಾವಡೆ, ಎಮ್. ಎ., ಎ. ಇ. ದ. ಫಾ. ಧಾರವಾಡ ಅವರಿಂದ

ಎಷ್ಟೋ ಬಾಂಬುಗಳು ಉರಿ ಹಚ್ಚುವವು. ತೋಪಿನ ಗುಂಡುಗಳೂ ಉರಿ ಹಚ್ಚುವದುಂಟು. ನೆಲಕ್ಕೆ ಅಪ್ಪಳಿಸಿದ ಕೂಡಲೆ ಇವುಗಳ ಮೇಲಿನ ಕವಚವು ಕರಗಿ ಉಗ್ರವಾದ ಉಷ್ಣತೆಯು ಹುಟ್ಟುವದು. ಅದು ಹವೆಯ ಸಂಗಡ ಕೂಡಿ ಬೆಂಕಿಯು ಉರಿಯಹತ್ತುವದು. ಬಾಂಬುಗಳ ಅಥವಾ ತೋಪಿನ ಗುಂಡುಗಳ ಒಳಗಿರುವ ಧಾತುಗಳ ತುಂಡುಗಳು ಕೆಂಡದಂತಾಗಿ ಸುತ್ತಲೂ ಹಾರಿ ಉರಿಯನ್ನು ಹಬ್ಬಿಸುವವು.

ಬಾಂಬುಗಳು ಮನೆಯ ಮೇಲೆ ಬಿದ್ದರೆ ಮನೆಯು ಉರಿಯಹತ್ತುವದು. ಕಟ್ಟಿಗೆ ಇಟ್ಟಂಗಿ ಹಂಚುಗಳಿಂದ ಆದ ಮನೆಗಳು ಬಹು ತೀವ್ರವಾಗಿ ನಾಶವಾಗುವವು. ಒಂದೊಂದು ಬಾಂಬಿನಿಂದ ೭೦–೮೦ ಕಡೆಗಳಲ್ಲಿ ಉರಿಹತ್ತಬಹುದು. ಆದುದರಿಂದ ನೀರಿನ ಬಂಬುಗಳು ಬಂದು ಬೆಂಕಿಯನ್ನು ಆರಿಸುವದು ದುಸ್ಸಾಧ್ಯವಾಗುವದು. ಕಾರಣ ಬಾಂಬು ಬಿದ್ದ ಕೂಡಲೆ ಅದನ್ನು ಮುಚ್ಚಿ ಬಿಡುವದು ಒಳಿತು. ಅದಕ್ಕಾಗಿ ಪ್ರತಿಯೊಬ್ಬನೂ ಈ ಕೆಲಸವನ್ನು ಮಾಡುವದಕ್ಕೆ ಕಲಿತಿರಬೇಕು. ಐ. ಆರ್. ಪಿ. ಸಂಘದವರು ಬಹು ಜನರಿಗೆ ಈ ಕೆಲಸವನ್ನು ಕಲಿಸಿರುವರು. ಆ ಸಂಘದವರು ಬೆಂಕಿಯನ್ನು ಆರಿಸುವದಕ್ಕಾಗಿ ನಿಮಗೆ ನೆರವಾಗುವರು. ಆದರೆ ಇಷ್ಟರಿಂದಲೇ ಸಂಪೂರ್ಣ ಕೆಲಸವಾಗದು. ನೀವೂ ಅವರಿಗೆ

ಶ್ರೀ. ಪ್ಪಿ. ಆರ್. ಕೊಪ್ಪಳ ಎಮ್. ಎ. ಬಿ, ಟಿ. ಅವರು ವಿದ್ಯಾರ್ಥಿಗಳ ಆಟಗಳನ್ನು ಕಂಡು ಆನಂದಿತರಾಗಿ ಬೆಳ್ಳಿಯ ವಸ್ತುವನ್ನು ಕಾಣಿಕೆಯಾಗಿ ಕೊಟ್ಟರು. ಅಧ್ಯಕ್ಷರಾದ ಶ್ರೀ. ಎಲ್. ಆರ್. ಮಂಕಣಿ, ಚೇಅರಮನ್ನರ ಹಸ್ತದಿಂದ ಮೆಚ್ಚುಗೆಗಳನ್ನು ಕೊಡಿಸಲಾಯಿತು. ನವಕಲ್ಯಾಣ ಮಠದ ಶ್ರೀ. ಕುಮಾರ ಸ್ವಾಮಿಗಳು ಬಿ. ಎ. ಅವರು ೧೨ ಖಾದಿ ಟೊಪ್ಪಿಗೆ, ೧೧ ಗಂಜೀಫ್ರಾಕ್‌ಗಳನ್ನು ಬಾಲಕರಿಗಾಗಿ ಕೊಟ್ಟರು. ಅಧಿಕಾರಿಗಳು ಶಾಲೆಯ ಪ್ರಗತಿಯನ್ನು ಕಂಡು ಸಮಾಧಾನ ವ್ಯಕ್ತಮಾಡಿದ್ದಾರೆ.

ತಿಳಿಸಿದವರು :— ಶ್ರೀ. ಸ್ಪಾ. ಅ. ಕೊರ್ಲಹಳ್ಳಿ ಅ. ಮಾಸ್ತರ

ಗದಗ :— ಕನ್ನಡ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯಲ್ಲಿ ಪಾಸಾಗಿ ಮೊದಲನೆಯ ನಂಬರದಲ್ಲಿ ಬಂದ ಗದಗ ಬೆಟಗೇರಿಯ ವಿದ್ಯಾರ್ಥಿ–ವಿದ್ಯಾರ್ಥಿನಿಯಯರಿಗೆ ಐದೈದು ರೂಪಾಯಿಗಳ ಬಹುಮಾನ ಕೊಡುವದಾಗಿ ಶ್ರೀಮಾನ್ ಸಿ. ಎಸ್. ಪಾಟೀಲ, ವ್ಹಾಯಿಸ್ ಚೇಅರಮನ್ ಗದಗ ಸ್ಕೂಲಬೋರ್ಡ ಅವರು; ಉರ್ದು ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯಲ್ಲಿ ಪಾಸಾಗಿ ಮೊದಲನೆಯ ನಂಬರು ಪಡೆವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಐದೈದು ರೂಪಾಯಿಗಳ ಬಹುಮಾನ ಕೊಡುವದಾಗಿ ಶ್ರೀಮಾನ್ ಗೌಸಮೋಹದೀನಸಾಹೇಬ ಅಕ್ಕಿ ಮ್ಯುನಸಿಪಲ್ ಕೌನ್ಸಿಲರ ಅವರು ; ಕೂಡಿ ೨೦ ರೂ. ಗಳ ಬಹುಮಾನ ಕೊಡುವದಾಗಿ ಇಲ್ಲಿಯ ಮೊದಲನೆಯ ನಂಬರ ಹೆಣ್ಣುಮಕ್ಕಳ ಶಾಲೆಯವರು ಏರ್ಪಡಿಸಿದ ಪಾಕರಚನೆಯ ನೀರೀಕ್ಷಣೆಯ ಕಾಲದಲ್ಲಿ ಎಡ್ಮಿನಿಸ್ಟ್ರೇಟಿವ್ವ ಆಫೀಸರದಾದ ಮೆ| ಪಠಾಣ ಸಾಹೇಬರ ಬಳಿಯಲ್ಲಿ ತಿಳಿಸಿದ್ದಾರೆ.

ತಿಳಿಸಿದವರು :— ಹೆ|| ಮಾ|| ಕ. ಗ. ಮ. ಶಾ. ನ. ೧ ಗದಗ

ಮಂಕಣಿ :— (ವಿಜಾಪುರ ಜಿಲ್ಲೆ) ತಾ|| ೧೮–೪–೧೯೪೨ ನೆಯ ದಿವಸ ಇಲ್ಲಿಯ ಶಾಲೆಯಲ್ಲಿ ಈ ಭಾಗದ ಶಿ. ಶಿ. ಸಮ್ಮೇಲನವು ಮೆ|| ಎನ್. ಕೆ. ಸಂಗನಾಳ ಮಠ ಅ. ಡಿ. ಎ. ಇ. ಅವರ ಅಧ್ಯಕ್ಷತೆಯಲ್ಲಿ ಚೆನ್ನಾಗಿ ಸಾಗಿತು. ೩೦ ಶಿಕ್ಷಕರು ೧೫೦ ವಿದ್ಯಾರ್ಥಿಗಳು ಕೂಡಿದ್ದರು.

ತಿಳಿಸಿದವರು :— ಶ್ರೀ. ಬಿ. ಎಸ್. ಹುರಕಡ್ಲಿ ಹೆ|| ಮಾ

ಸಾಕ್ಷರಿಗೆಳಾದ ಪ್ರಬುದ್ಧರಿಗಾಗಿ

ಉರಿಯುತ್ತಿರುವ ಬಾಂಬು ಆರಿಸಲು ಕಲಿಯಿರಿ

ಶ್ರೀಮಾನ್ ಎಸ್. ಆರ್. ತಾವಡೆ, ಎಮ್. ಎ., ಎ. ಇ. ದ. ಭಾ. ಧಾರವಾಡ ಅವರಿಂದ

ಎಷ್ಟೋ ಬಾಂಬುಗಳು ಉರಿ ಹಚ್ಚುವವು. ತೋಪಿನ ಗುಂಡುಗಳೂ ಉರಿ ಹಚ್ಚುವದುಂಟು. ನೆಲಕ್ಕೆ ಅಪ್ಪಳಿಸಿದ ಕೂಡಲೆ ಇವುಗಳ ಮೇಲಿನ ಕವಚವು ಕರಗಿ ಉಗ್ರವಾದ ಉಷ್ಣತೆಯು ಹುಟ್ಟುವದು. ಅದು ಹವೆಯ ಸಂಗಡ ಕೂಡಿ ಬೆಂಕಿಯು ಉರಿಯಹತ್ತುವದು. ಬಾಂಬುಗಳ ಅಥವಾ ತೋಪಿನ ಗುಂಡುಗಳ ಒಳಗಿರುವ ಧಾತುಗಳ ತುಂಡುಗಳು ಕೆಂಡದಂತಾಗಿ ಸುತ್ತಲೂ ಹಾರಿ ಉರಿಯನ್ನು ಹಬ್ಬಿಸುವವು.

ಬಾಂಬುಗಳು ಮನೆಯ ಮೇಲೆ ಬಿದ್ದರೆ ಮನೆಯು ಉರಿಯಹತ್ತುವದು. ಕಟ್ಟಿಗೆ ಇಟ್ಟಂಗಿ ಹಂಚುಗಳಿಂದ ಆದ ಮನೆಗಳು ಬಹು ತೀವ್ರವಾಗಿ ನಾಶವಾಗುವವು. ಒಂದೊಂದು ಬಾಂಬಿನಿಂದ ೭೦–೮೦ ಕಡೆಗಳಲ್ಲಿ ಉರಿಹತ್ತಬಹುದು. ಆದುದರಿಂದ ನೀರಿನ ಬಂಬುಗಳು ಬಂದು ಬೆಂಕಿಯನ್ನು ಆರಿಸುವದು ದುಸ್ಸಾಧ್ಯವಾಗುವದು. ಕಾರಣ ಬಾಂಬು ಬಿದ್ದ ಕೂಡಲೆ ಅದನ್ನು ಮುಚ್ಚಿ ಬಿಡುವದು ಒಳಿತು. ಅದಕ್ಕಾಗಿ ಪ್ರತಿಯೊಬ್ಬನೂ ಈ ಕೆಲಸವನ್ನು ಮಾಡುವದಕ್ಕೆ ಕಲಿತಿರಬೇಕು. ಐ. ಆರ್. ಪಿ. ಸಂಘದವರು ಬಹು ಜನರಿಗೆ ಈ ಕೆಲಸವನ್ನು ಕಲಿಸಿರುವರು. ಆ ಸಂಘದವರು ಬೆಂಕಿಯನ್ನು ಆರಿಸುವದಕ್ಕಾಗಿ ನಿಮಗೆ ನೆರವಾಗುವರು. ಆದರೆ ಇಷ್ಟರಿಂದಲೇ ಸಂಪೂರ್ಣ ಕೆಲಸವಾಗದು. ನೀವೂ ಅವರಿಗೆ

ನೆರವಾಗಬೇಕು. ಬಾಂಬು ಅದೇ ಆಗ ಬಿದ್ದಾಗ ಅದನ್ನು ಬಹು ಸುಲಭವಾಗಿ ಆರಿಸಿಬಿಡಬಹುದು. ಇದಕ್ಕಾಗಿ ಹಲ-ಕೆಲವು ಸಾಮಗ್ರಿಗಳನ್ನು ಅಲ್ಲಲ್ಲಿ ಸಂಗ್ರಹಿಸಿಕೊಂಡಿರಬೇಕು. ಎರಡು ನೀರಿನ ಪಾತ್ರೆಗಳು, ಎರಡು ಉಸುಕಿನ ಚೀಲಗಳು ಇಷ್ಟಾದರೂ ಅಲ್ಲಲ್ಲಿಗೆ ಇರಲೇಬೇಕು.

೧. ಬಾಂಬನ್ನೇ ಹುಗಿದುಬಿಡುವದು

ಬಾಂಬು ಬಿದ್ದ ಕೂಡಲೆ ಅದರ ಮೇಲೆ ಉಸುಕಿನ ಚೀಲವನ್ನು ಚಲ್ಲಿರಿ. ಇದರಿಂದ ಬಾಂಬು ಬಿದ್ದಲ್ಲಷ್ಟೇ ಉರಿ ಏಳುವದು. ಸುತ್ತಲೂ ಹಬ್ಬಲಾರದು.

೨. ಉರಿಯನ್ನು ಅಡಗಿಸುವದು

ಉಸುಕಿನ ಚೀಲದ ಮೇಲೆ ಸಾವಕಾಶ ನೀರು ಸುರಿಯಿರಿ ಬಾಂಬಿನ ಮೇಲೆ ಅಥವಾ ತೋಷಿನ ಗುಂಡಿನ ಮೇಲೆ ನೀರು ಸುರಿಯಬಾರದು. ಪ್ರತ್ಯಕ್ಷ ಬಾಂಬಿನ ಮೇಲೆಯೇ ನೀರು ಬಿದ್ದರೆ ಉರಿಯು ತೀವ್ರವಾಗಿ ಹಬ್ಬುವದು. ಒಳಗಿನ ರಾಸಾಯನಿಕ ದ್ರವ್ಯಗಳು ನೀರಿನಿಂದ ಉಜ್ವಲವಾಗಿ ಉರಿಯ ಹತ್ತುವವು. ಬಾಂಬು ಬಿದ್ದ ಸ್ಥಳದಲ್ಲಿ ಓಡಾಡುವಾಗ ಎಚ್ಚರ ದಿಂದಿರಬೇಕು. ಮೆಲ್ಲಗೆ ಬಗ್ಗಿಕೊಂಡು ಅಥವಾ ಕುಳಿತು ಕೊಂಡು ಉಸುಕಿನ ಚೀಲವನ್ನು ಅದರ ಹತ್ತರ ಸರಿಸಬೇಕು. ಬಾಂಬಿನ ಜ್ವಾಲೆಯು ಮೇಲ್ಮುಖವಾಗಿ ಪಸರಿಸುವದು. ಆದುದರಿಂದ ನೆಲಕ್ಕೆ ಹತ್ತಿ ಸರಿಯುತ್ತ ಮುಂದೆ ಹೋದರೆ ಅದರಿಂದ ಭಯವಿಲ್ಲ.

ಬಾಂಬು ಬಿದ್ದಕೂಡಲೆ ನಿಮ್ಮ ವಾರ್ಡಿನ ಎ. ಆರ್. ಸಂಘದ ಚಾಲಕರಿಗೆ ತಿಳಿಸುವದಕ್ಕೆ ಮರೆಯಬಾರದು.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ಸಂಪುಟ ೮೧	ಜೂನ್ ೧೯೪೨	ವರ್ಷ ೧೫. ಸಂ. ೩

ವಿದ್ಯಾಖಾತೆಯ ವೃತ್ತಾಂತಗಳು

೧. ಎರಡು ಟ್ರೇನಿಂಗ್ ಕಾಲೇಜಗಳು

ಕರ್ನಾಟಕದಲ್ಲಿ ಈ ವರೆಗೆ ಒಂದು ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜ ಇನ್ನೊಂದು ಗಂಡುಮಕ್ಕಳ ಟ್ರೇನಿಂಗ್ ಕಾಲೇಜ ಹೀಗೆ ಎರಡು ಸರಕಾರೀ ಟ್ರೇನಿಂಗ್ ಕಾಲೇಜಗಳೂ ಧಾರವಾಡದಲ್ಲಿ ಕರ್ನಾಟಕ ಎಜ್ಯುಕೇಶನ್ ಸೊಸಾಯಿಟಿಯವರೂ ಬೆಳಗಾಂವಿಯಲ್ಲಿ ಲಿಂಗಾಯತ ಎಜ್ಯುಕೇಶನ್ ಸೊಸಾಯಿಟಿಯವರೂ ಸ್ಥಾಪಿಸಿದ ಎರಡು ಖಾಸಗಿ ಕಾಲೇಜಗಳೂ ಇದ್ದವು. ಈ ವರ್ಷ ಇನ್ನೆರಡು ಕಾಲೇಜಗಳು ಪ್ರಾರಂಭವಾಗಿವೆ.

(೧) ಬೆಳಗಾವಿಯಲ್ಲಿ ಬೆಳಗಾವ ಜಿಲ್ಲಾ ಪ್ರಾಥಮಿಕ ಶಿಕ್ಷಣ ಸಮಿತಿಯವರು ಮರಾಠಿ ಶಿಕ್ಷಕ ಶಿಕ್ಷಕಿಯರಿಗಾಗಿ ಒಂದು ಖಾಸಗಿ ಕಾಲೇಜವನ್ನು ಪ್ರಾರಂಭಿಸಿರುವರು. ಒಟ್ಟಿಗೆ ೩೫ ವಿದ್ಯಾರ್ಥಿಗಳನ್ನು ಆರಿಸಿಕೊಳ್ಳಲು ಅವರಿಗೆ ಸರಕಾರದಿಂದ ಮಾನ್ಯತೆ ದೊರೆತಿದೆ. ಧಾರವಾಡ ಬೆಳಗಾವಿ ಹೈಸ್ಕೂಲುಗಳಲ್ಲಿ ಹೆಡ್‌ಮಾಸ್ತರರಾಗಿದ್ದು ಸೇವಾನಿವೃತ್ತರಾದ ಶ್ರೀ. ಬೀಡಿಕರ ಮಂಗೇಶರಾಯರು ಅದರ ಪ್ರಿನಿಪಾಲರಾಗಿದ್ದಾರೆ. ನಮ್ಮ ಇಲಾಖೆಯ ಡೈರೆಕ್ಟರರಾದ ಮೆ. ಮೂಸ ಸಾಹೇಬರವರು ತಾ. ೧೭-೬-೧೯೪೨ನೆಯ ದಿನ ಅದರ ಪ್ರಾರಂಭೋತ್ಸವವನ್ನು ನೆರವೇರಿಸಿದರು.

(೨) ಬಾಗಿಲುಕೋಟೆಯಲ್ಲಿ ಬಸವೇಶ್ವರ ವಿದ್ಯಾವರ್ಧಕ ಸಂಘದವರು ಇನ್ನೊಂದು ಪ್ರಾಥಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜನನ್ನು ಈ ವರ್ಷ ಜೂನ್

ತಿಂಗಳಿನಿಂದ ಪ್ರಾರಂಭಿಸಿದ್ದಾರೆ. ಈ ವರ್ಷ ೩೫ ವಿದ್ಯಾರ್ಥಿಗಳ ಮೊದಲನೆಯ ವರ್ಷದ ಒಂದು ವರ್ಗವನ್ನು ನಡೆಯಿಸಲು ಅವರಿಗೆ ಸರಕಾರದ ಮಾನ್ಯತೆ ದೊರೆದಿರುವದು. ಶ್ರೀ. ಬ್ಯಾಹಟ್ಟಿ ವಿ. ಸಿ. ಇವರು ಅದರ ಪ್ರಿನ್ಸಿಪಾಲರಾಗಿರುವರು.

ಧಾರವಾಡದ ಕರ್ನಾಟಕ ಎಜ್ಯುಕೇಶನ್ ಸೊಸಾಯಿಟಿಯ ಕಾಲೇಜಕ್ಕೆ ಈ ವರೆಗೆ ಶಿಕ್ಷಕರನ್ನಷ್ಟೇ ಆರಿಸಿಕೊಳ್ಳಲು ಮಾನ್ಯತೆ ದೊರೆದಿತ್ತು. ೪ ವರ್ಷದಿಂದ ಅವರಿಗೆ ಶಿಕ್ಷಕಿಯರನ್ನೂ ಆರಿಸಿಕೊಳ್ಳಲು ಅನುಮತಿ ದೊರೆತಿದೆ.

ಗಂಡುಮಕ್ಕಳ ಟ್ರೇನಿಂಗ್ ಕಾಲೇಜಕ್ಕೆ ಸೇರುವ ಶಿಕ್ಷಕಿಯರಿಗಾಗಿ ಒಂದೆರಡು ಹೆಚ್ಚಿನ ನಿರ್ಬಂಧಗಳನ್ನು ಹಾಕಲಾಗಿದೆ. ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ೧ನೆಯ ವರ್ಷದಲ್ಲಿ ಜ್ಯೂನಿಯರ್ ಮತ್ತು ಸೀನಿಯರ್ ಎಂದು ಎರಡು ವರ್ಗಗಳಿರುವವಷ್ಟೇ? ಗಂಡುಮಕ್ಕಳ ಕಾಲೇಜದಲ್ಲಿ ಇಂಥ ವರ್ಗಗಳಿಲ್ಲ. ಆದುದರಿಂದ ಗಂಡುಮಕ್ಕಳ ಕಾಲೇಜಕ್ಕೆ ಸೇರಲಿಚ್ಛಿಸುವ ಶಿಕ್ಷಕಿಯರು ಗಂಡುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯಲ್ಲಿ ಪಾಸಾದವರಿರಬೇಕಾಗುವದು. ಇಲ್ಲವೆ ಹೊಸ ಅಭ್ಯಾಸಕ್ರಮದಂತೆ ಹೆಣ್ಣುಮಕ್ಕಳ ೭ನೆಯ ಇಯತ್ತೆಯಲ್ಲಿ ಕಲಿತು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ ಕುಳಿತವರೂ ಆ ಪರೀಕ್ಷೆಯಲ್ಲಿ ೧೦೦ಕ್ಕೆ ೫೦ರಷ್ಟು ಅಥವಾ ಹೆಚ್ಚು ಗುಣಗಳನ್ನು ದೊರಕಿಸಿ ಪಾಸಾದವರೂ ಇರಬೇಕಾಗುವದು. ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪಾಸಾಗಿದ್ದರೆ ಅಂಥವರು ಶಿಕ್ಷಕರಂತೆಯೇ ಒಮ್ಮೆಲೆ ಎರಡನೆಯ ವರ್ಷದ ವರ್ಗಕ್ಕೆ ಸೇರಬಹುದು. ಶಿಕ್ಷಕರ ಟ್ರೇನಿಂಗ್ ಕಾಲೇಜದಲ್ಲಿ ಕಲಿ ಶಿಕ್ಷಿಕೆಯರ ಒಂದನೆಯ ವರ್ಷದ ಸರ್ಟಿಫಿಕೇಟ ಪರೀಕ್ಷೆಯು ಹೆಣ್ಣುಮಕ್ಕಳ ಸರ್ಟಿಫಿಕೇಟ ಪರೀಕ್ಷೆಯಂತೆಯೇ ತೆಗೆದುಕೊಳ್ಳಲ್ಪಡುವದು. ಮತ್ತು ಎರಡನೆಯ ವರ್ಷದ ಸರ್ಟಿಫಿಕೇಟ ಪರೀಕ್ಷೆಯಲ್ಲಿ ಶಿಕ್ಷಣ (೨ ಕಾಗದಗಳು) ಭಾಷಾ (೨ ಕಾಗದಗಳು) ಇತಿಹಾಸ ಈ ವಿಷಯಗಳಲ್ಲಿ ಗಂಡುಮಕ್ಕಳ ಅಭ್ಯಾಸಕ್ರಮದಂತೆಯೇ ಇರುತ್ತಿದ್ದು, ಮಿಕ್ಕ ವಿಷಯಗಳಲ್ಲಿ ಹೆಣ್ಣುಮಕ್ಕಳ ೭ನೆಯ ವರ್ಷದ ಸರ್ಟಿಫಿಕೇಟ ಪರೀಕ್ಷೆಯಂತೆ ತೆಗೆದುಕೊಳ್ಳಲ್ಪಡುವದು.

೨. ಇಬ್ಬರು ಜನಪ್ರಿಯ ಅಧಿಕಾರಿಗಳು ಸೇವಾನಿವೃತ್ತರಾದರು

ಧಾರವಾಡ ಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀ. ಕೊಪ್ಪಳ ಗುಂಡೇರಾಯರು ಇದೇ ಜೂನ್ ತಿಂಗಳ ನಾಲ್ಕನೆಯ ತಾರೀಖಿನ ದಿನ ತಮ್ಮ ಅಧಿಕಾರ ಸೂತ್ರಗಳನ್ನು ತಮ್ಮ ಮೊದಲನೆಯ ಅಸಿಸ್ಟಂಟರಾದ ಶ್ರೀ. ನಾಡಿಗೇರರವರಿಗೆ ಒಪ್ಪಿಸಿ ಕಾರ್ಯ ನಿವೃತ್ತರಾದರು. ಸರಕಾರದ

ನಿಯಮದಂತೆ ೫೫ ವರ್ಷ ವಯಸ್ಸಾದ್ದರಿಂದಲೇ ಕಾರ್ಯನಿವೃತ್ತರಾಗ ಬೇಕಾಯಿತಲ್ಲದೆ ಅವರ ಸದೃಢವಾದ ಶರೀರ ಉತ್ಸಾಹಪೂರ್ಣವಾದ ಮನಸ್ಸು ಇತರ ಚಟುವಟಿಕೆಗಳು ಇವನ್ನು ನೋಡಿದವರಲ್ಲಿ ಯಾರೂ ಅವರು ಇಷ್ಟು ಬೇಗನೆ ಕಾರ್ಯನಿವೃತ್ತರಾಗಬಹುದೆಂದು ಊಹಿಸುವಂತಿರಲಿಲ್ಲ. ಧಾರವಾಡದ ಸೂಲ್ಕ್‌ಬೊರ್ಡಿನ ಚೇರಮನ್ನರು ಕೆಲ ದಿನಗಳ ಹಿಂದೆ ಒಂದು ಸಾರ್ವಜನಿಕ ಸಭೆಯಲ್ಲಿ ಶ್ರೀ. ಕೊಪ್ಪಳರಾಯರ ಕಾರ್ಯೋತ್ಸಾಹವನ್ನು ಪ್ರಶಂಸಿಸುವಾಗ ಇವರು ಸದ್ಯದಲ್ಲಿಯೇ ಸೇವಾನಿವೃತ್ತರಾಗಲಿರುವರಾದರೂ ಮೊನ್ನೆ ಮೊನ್ನೆ ನೌಕರಿಯನ್ನು ಪ್ರಾರಂಭಿಸಿದ ತರುಣರಿಗಿಂತಲೂ ಹೆಚ್ಚು ಉತ್ಸಾಹ ಆಸಕ್ತಿಗಳಿಂದ ಕೆಲಸ ಮಾಡುತ್ತಿದ್ದಾರೆ' ಎಂದು ಹೇಳಿದ್ದು ನಮ್ಮ ನೆನಪಿನಲ್ಲಿದೆ. ಈ ಮಹನೀಯರು ಹೈಸ್ಕೂಲು ಗಂಡುಮಕ್ಕಳ ಮತ್ತು ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜಗಳಲ್ಲಿ ಹೆಚ್ಚು ಕಾಲ ಕೆಲಸಮಾಡಿದ ಅನುಭವಶಾಲಿಗಳಾಗಿದ್ದರು. ಕನ್ನಡದ ಅಭ್ಯಾಸವನ್ನು ಹೆಚ್ಚು ಪರಿಶ್ರಮ ಪೂರ್ವಕವಾಗಿ ಮಾಡಿಕೊಂಡ ಅಭಿಮಾನಿಗಳಾಗಿದ್ದರು. ದೇವರು ಇವರ ಶೇಷಾಯುಷ್ಯವು ಸುಖಕರವಾಗುವಂತೆ ಕರುಣಿಸಲಿ.

ವಿಜಾಪುರ ಜಿಲ್ಹೆಯ ಸ್ಕೂಲ್‌ಬೋರ್ಡ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾದ ಶ್ರೀ. ಆರ್. ಕೆ. ನಾಯಕರವರು ಇದೇ ಜೂನ ತಿಂಗಳ ೧೯ನೆಯ ತಾರೀಖಿನಿಂದ ರಜೆಯಮೇಲೆ ಹೋಗಿರುವರು. ರಜೆಯ ಅವಧಿಯು ಮುಗಿದ ಕೂಡಲೆ ಸೇವಾನಿವೃತ್ತರಾಗುವರು. ಇವರು ಹೈಸ್ಕೂಲುಗಳಿಗಿಂತಲೂ ಹೆಚ್ಚಾಗಿ ಟ್ರೇನಿಂಗ್ ಕಾಲೇಜಗಳಲ್ಲಿ ಶಿಕ್ಷಕರಾಗಿಯೂ ತಪಾಸಣೆಯ ಅಧಿಕಾರಿಗಳಾಗಿಯೂ ಕೆಲಸ ಮಾಡಿ ನಮ್ಮ ಶಿಕ್ಷಕ ವರ್ಗಕ್ಕೆ ಹೆಚ್ಚು ಪರಿಚಿತರಾಗಿರುವರು. ಬೆಳಗಾವ ಧಾರವಾಡ ವಿಜಾಪುರ ಜಿಲ್ಹೆಗಳಲ್ಲಿ ಸ್ಕೂಲಬೊರ್ಡಿನ ಆಡಳಿತೆಯ ಅಧಿಕಾರಿಗಳಾಗಿ ಕೆಲಸಮಾಡಿ ಈಗ ಕಾರ್ಯನಿವೃತ್ತರಾಗಲಿರುವರು. ಸದ್ಯಕ್ಕೆ ವಿಜಾಪುರ ಜಿಲ್ಹೆಯ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿರುವ ಶ್ರೀ. ಕೆ. ವಿ. ಕುಲಕರ್ಣಿ ಇವರಿಗೆ ತಮ್ಮ ಅಧಿಕಾರಸೂತ್ರಗಳನ್ನು ಒಪ್ಪಿಸಿ ಹೋಗಿದ್ದಾರೆ. ಶ್ರೀ. ನಾಯಿಕ ಸಾಹೇಬರು ಶಾಸ್ತ್ರೀಯ ವಿಷಯವನ್ನು ಅಭ್ಯಾಸಮಾಡಿದವರು. ಕನ್ನಡವು ಇವರ ಪ್ರೀತಿಯ ವಿಷಯ. ಕೆಲಕಾಲ ಸುಧಾರಕ ಎಂಬ ತ್ರೈಮಾಸಿಕವನ್ನು ನಡೆಯಿಸುತ್ತಿದ್ದರು. ಇವರ ಆಡಳಿತೆಯಲ್ಲಿ ಶಿಕ್ಷಕ ಶಿಕ್ಷಿಕೆಯರಲ್ಲಿ ಕನ್ನಡದ ಅಭಿಮಾನವು ತಲೆದೋರಿತ್ತೆಂದು ವಿಜಾಪುರದ ವಾರಪತ್ರಿಕೆಯೊಂದರಲ್ಲಿ ಮೊನ್ನೆ ಮೊನ್ನೆ ಪ್ರಕಟವಾಗಿದೆ. ವಿದ್ಯಾಲಾಲಸೆಯುಳ್ಳವರೂ ದೇಶ-ಭಾಷಾಭಿಮಾನಿಗಳೂ ಆದ ಈ ಮಹಾನುಭಾವರ ಮುಂದಿನ ಜೀವನವು ಸುಖಕರವಾಗುವಂತೆ ಭಗವಂತನು ಅನುಗ್ರಹಿಸಲಿ.

೩. ನಮ್ಮ ಭಾಗದೊಳಗಿನ ಅಸಿಸ್ಟಂಟ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಮತ್ತು ಇನ್‌ಸ್ಪೆಕ್ಟ್ರಸರ ಬದಲಾವಣೆಗಳು—

೧. ಶ್ರೀ. ಕಳಸೂರ ಟಿ. ಡಿ. ಇವರು ಬೆಳಗಾವ ಜಿಲ್ಹೆಯಿಂದ ಧಾರವಾಡಕ್ಕೆ ಹೋದರು.

೨. ಶ್ರೀ. ಹುಯಿಲಗೋಳ ಎಸ್. ಎಚ್. ಇವರು ಬೆಳಗಾವಿಯಿಂದ ವಿಜಾಪುರಕ್ಕೆ ಹೋದರು.

೩. ಶ್ರೀ. ಕಾಸಾರ ಬಿ. ಎಸ್. ಇವರು ವಿಜಾಪುರದಿಂದ ಬೆಳಗಾವಿಗೆ ಹೋದರು.

೪. ಶ್ರೀ. ಶೇಖ ಎಸ್. ಎ. ಇವರು ಧಾರವಾಡದಿಂದ ಬೆಳಗಾವಿಗೆ ಹೋದರು.

೫. ಶ್ರೀ. ಜೇರೆ ಬಿ. ಎನ್. ಇವರು ಧಾರವಾಡದಿಂದ ವಿಜಾಪುರಕ್ಕೆ ಹೋದರು.

೬. ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಶಿಕ್ಷಕರಾಗಿದ್ದ ಶ್ರೀ. ಆಯ್. ಬಿದರಿ ಎಸ್. ಇವರು ಧಾರವಾಡ ಜಿಲ್ಹೆಯಲ್ಲಿ ಅಸಿ|| ಡೆ. ಎ. ಇನ್‌ಸ್ಪೆಕ್ಟರರಾದರು.

೭. ಧಾರವಾಡ ಜಿಲ್ಹೆಯ ಅಸಿ|| ಡೆ. ಎ. ಇನ್‌ಸ್ಪೆಕ್ಟ್ರಸರಾಗಿದ್ದ ಮಿಸ್ ವಾಚ್ಹಾ ಇವರು ಠಾಣೆಯ ಗರ್ಲ್ಸಹೈಸ್ಕೂಲಿನಲ್ಲಿ ಶಿಕ್ಷಿಕೆಯರಾದರು.

೮. ಮಿಸ್. ಇ. ಮಥಾಯಿ ಅವರು ವಿಜಾಪುರದಿಂದ ಧಾರವಾಡಕ್ಕೆ ಹೋದರು.

೯. ಮಿಸೆಸ್. ಕವಾಲ ಇವರು ಧಾರವಾಡದಿಂದ ವಿಜಾಪುರಕ್ಕೆ ಹೋದರು.

೧೦. ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಶಿಕ್ಷಿಕೆಯರಾಗಿದ್ದ ಮಿಸೆಸ್ ಎಮ್. ರಾವ್ ಇವರು ಧಾರವಾಡದ ಅಸಿ|| ಡೆ. ಎ. ಇನ್‌ಸ್ಪೆಕ್ಟ್ರಸರಾದರು.

ಮೆಡಮ್ ಮೇರಿ ಕ್ಯೂಅರಿ

ಸಾಹಸದ ಕೆಲಸವೆಲ್ಲವೂ ಗಂಡುಸರಿಗೇ ಸೇರಿದುವು, ಶಾರೀರಿಕ ಬೌದ್ಧಿಕ ಶಕ್ತಿಗಳಲ್ಲಿ ಗಂಡುಸರೇ ಮೇಲು, ಎಂದು ಹೇಳುವವರ ಮಾತನ್ನು ಅನೇಕ ಮಹಿಳೆಯರು ಸುಳ್ಳೆಂದು ಸಾಧಿಸಿ ತೋರಿಸಿದ್ದಾರೆ. ಮೆಡಮ್ ಕ್ಯೂಅರಿಯು ಅಂಥ ಮಹಿಳೆಯರ ಮುಂದಾಳು. ಪ್ರಪಂಚದಲ್ಲೆಲ್ಲ ಹೆಚ್ಚಿನ ಗೌರವಕ್ಕೆ ಅರ್ಹರೆಂದು ತೋರಿಸುವ ನೋಬಲ್ ಪಾರಿತೋಷಕವನ್ನು ಗಂಡುಸರು ಒಂದೊಂದು ಬಾರಿ ಪಡೆದಿದ್ದರೆ ಮೆಡಮ್ ಕ್ಯೂಅರಿಯು ಎರಡು ಸಾರಿ ಪಡೆದಿರುವಳು.

ಈಗ ನಡೆದಿರುವ ಯುರೋಪದ ಮಹಾಯುದ್ಧವು ಮೊದಲಾದದ್ದು ಪೋಲಂಡ ದೇಶದಲ್ಲಿ. ಪ್ರಪಂಚದ ಶಾಂತಿಭಂಗಕ್ಕೆ ಕಾರಣನೆನಿಕೊಂಡ ಹಿಟ್ಲರನು ತನ್ನ ರಾಜ್ಯತೃಷ್ಣೆಯ ತೃಪ್ತಿಗಾಗಿ ಮೊದಲನೆಯ ಗುಟುಕು ನೀರನ್ನು ಕುಡಿದದ್ದು ಪೋಲಂಡದಲ್ಲಿ. ಆ ಪೋಲಂಡವು ಮೆಡಮ್ ಮೇರಿ ಕ್ಯೂಅರಿಯ ಹೆಸರಿನಿಂದ ಪುನೀತವಾಗಿದೆ.

ಕತ್ತಲೆಯಲ್ಲಿ ಬೆಳಕನ್ನು ಬೀರುವ ಧಾತುವನ್ನು ನೀವು ಕಂಡಿರುವಿರೇನು? ಕತ್ತಲೆಯಲ್ಲಿಯೂ ನೋಡಬಹುದಾದ ಗಡಿಯಾಳವು ನಿಮಗೆ ಗೊತ್ತಿದೆಯಷ್ಟೇ? ಆ ಗಡಿಯಾಳದ ಅಂಕೆಗಳಿಗೂ ಮುಳ್ಳುಗಳಿಗೂ ಹಚ್ಚಿರುವ 'ರೇಡಿಯಮ್' ಎಂಬ ಅಮೌಲ್ಯವಾದ ಅದ್ಭುತ ಧಾತುವಿನ ಶೋಧಮಾಡಿದ ಶ್ರೇಯಸ್ಸು ಮೆಡಮ್ ಕ್ಯೂಅರಿಯದು.

ಮೇಡಮ್ ಮೇರಿ ಕ್ಯೂಅರಿಯ ಮೊದಲಿನ ಹೆಸರು ಮೇರಿ ಎಂದು. ಅವಳು ೧೮೬೭ ನೆಯ ಇಸ್ವಿಯಲ್ಲಿ **ವಾರ್ಸಾ** ನಗರದಲ್ಲಿ ಹುಟ್ಟಿದಳು. ಈಕೆಯ ತಂದೆಯು ಭೌತಿಕ ಶಾಸ್ತ್ರದಲ್ಲಿ ಪಾರಂಗತನಾದ ಒಬ್ಬ ಅಧ್ಯಾಪಕನು. ಶಿಕ್ಷಕನ ಮಗಳಾದುದರಿಂದಲೂ ಚುರುಕು ಬುದ್ಧಿಯವಳಾದುದರಿಂದಲೂ ವಿದ್ಯಾಭ್ಯಾಸದಲ್ಲಿ, ಅದರಲ್ಲಿಯೂ ತಂದೆಯ ಪ್ರೀತಿಯ ವಿಷಯವಾದ ಭೌತಿಕ ಶಾಸ್ತ್ರದ ಅಭ್ಯಾಸದಲ್ಲಿ, ಇವಳಿಗೆ ಮೊದಲಿನಿಂದಲೂ ಹೆಚ್ಚು ಆಸಕ್ತಿಯಿದ್ದಿತು.

ಯುರೋಪದ ರಾಜಕಾರಣದ ಮೂಲಕ ಪೋಲಂಡ ದೇಶವು ಬಹುಕಾಲದಿಂದಲೂ ಬಗೆಬಗೆಯ ಕಷ್ಟನಷ್ಟಗಳಿಗೆ ಗುರಿಯಾಗುತ್ತ ಬಂದಿದೆ. ಮೇರಿಯು ಕಾಲೇಜದ ತರಗತಿಯಲ್ಲಿ ಓದುತ್ತಿದ್ದಾಗ ಅಲ್ಲಿಯ ರಾಜಕೀಯ ಆಂದೋಲನವು ಉಗ್ರ ಸ್ವರೂಪಕ್ಕೆ ಬಂದಿತ್ತು. ಸರಕಾರದ ದಬ್ಬಾಳಿಕೆಯನ್ನು ಎದುರಿಸುವುದಕ್ಕಾಗಿ ಯತ್ನಿಸಿದ ಪೋಲಂಡದ ಬಹುಜನ ತರುಣ ತರುಣಿಯರು ಕ್ರಾಂತಿಕಾರಕರೆಂಬ ಪಂಗಡಕ್ಕೆ ಸೇರಿಸಲ್ಪಟ್ಟು ಅವರಲ್ಲಿ ಹಲವರು ಕೊಲೆಗಲ್ಲಿಗೆ ಏರಿಸಲ್ಪಟ್ಟರು; ಹಲವರು ಹದ್ದುಪಾರಿನ ಶಿಕ್ಷೆಗೆ ಗುರಿಯಾದರು. ತನ್ನ ದೇಶಬಾಂಧವರಿಗಾಗುವ ಅನ್ಯಾಯವನ್ನು ತಾಳಲಾರದೆ ಅವರಿಗೆ ಅನುಕೂಲಳಾಗಿ ಕಾರ್ಯನಡೆಯಿಸತೊಡಗಿದ್ದರಿಂದ ಸರಕಾರದ ಕ್ರೂರವೃಷ್ಟಿಯು ಮೇರಿಯ ಮೇಲೆ ಬಿದ್ದಿತು. ಕ್ರಾಂತಿಕಾರಕರ ಪಂಗಡಕ್ಕೆ ಸೇರಿದವಳೆಂಬ ಆರೋಪಕ್ಕೆ ಗುರಿಯಾದ ಅವಳು ವೇಷವನ್ನು ಬದಲಿಸಿಕೊಂಡು ಯುಕ್ತಿಯಿಂದ ಪಾರಾಗಿ ಆಸ್ಟ್ರೀಯಾ ದೇಶಕ್ಕೆ ಹೋಗಿ "ಕ್ರಾಕೋ" ನಗರದಲ್ಲಿ ಕೆಲಕಾಲ ವಿದ್ಯಾಭ್ಯಾಸ ನಡೆಯಿಸಿದಳು. ತರುವಾಯ ಫ್ರಾನ್ಸಿನ ರಾಜಧಾನಿಯಾದ ಪಾರಿಸ ನಗರಕ್ಕೆ ಹೋದಳು. ಭೌತಿಕ ಶಾಸ್ತ್ರವು ಮೇರಿಯ ಪ್ರೀತಿಯ ವಿಷಯವೆಂದು ಹಿಂದೆ ಹೇಳಿದೆ. ಆದ್ದರಿಂದ ಅವಳು ಸೊರ್ಬೋರ್ನ

ವಿಶ್ವವಿದ್ಯಾನಿಲಯವನ್ನು ಸೇರಿ ಆ ವಿಷಯದ ಅಭ್ಯಾಸವನ್ನು ಮುಂದುವರಿಸಿದಳು. ಪಿ. ಆರ್. ಕ್ಯೂರಿ ಎಂಬ ಆ ವಿದ್ಯಾನಿಲಯದ ಮುಖ್ಯಾಧ್ಯಾಪಕನ ಪರಿಚಯವಾಗುವವರೆಗೂ ಮೇರಿಯು ಬಹುವಿಧದಿಂದ ಕಷ್ಟಪಡಬೇಕಾಯಿತು. ಕಾಲೇಜಿನ ಸಂಶೋಧನ ಶಾಖೆಯಲ್ಲಿ ಕೆಲಸಮಾಡುವವರಿಗೆ ನೆರವಾಗಿ ಕಾಚಿನ ಪಾತ್ರೆಗಳನ್ನು ತೊಳೆಯುವದು, ಅಧ್ಯಾಪಕರಿಗೆ ಅವರು ಮಾಡತಕ್ಕ ಪ್ರಯೋಗಗಳಿಗೆ ಸಲಕರಣೆಗಳನ್ನು ಸರಿಪಡಿಸಿಕೊಡುವುದು ಮುಂತಾದ ಕೆಲಸಗಳನ್ನು ಮಾಡಿಕೊಟ್ಟು ತನ್ನ ಉಪಜೀವನಕ್ಕೆ ಬೇಕಾದಷ್ಟು ಹಣವನ್ನು ಗಳಿಸಿಕೊಳ್ಳುತ್ತಿದ್ದಳು. ಬಿಡುವು ದೊರೆದಾಗ ನಗರದೊಳಗಿನ ಶ್ರೀಮಂತರ ಮಕ್ಕಳಿಗೆ ಪಾಠಕಲಿಸಿ ಜೀವನ ಸಾಗಿಸುತ್ತಿದ್ದಳು.

ಸೊರ್ಬೊನ್ನ ವಿದ್ಯಾನಿಲಯದ ಮುಖ್ಯಾಧ್ಯಾಪಕನಾದ ಪಿಅರ ಕ್ಯೂರಿಯು ಮೇರಿಯ ವಿದ್ಯಾಲಾಲಸೆಯನ್ನೂ ಶ್ರೇಷ್ಠತರಗತಿಯ ಬುದ್ಧಿಶಕ್ತಿಯನ್ನೂ ಕಂಡು ಮನಮೆಚ್ಚಿ ಅವಳ ಕಷ್ಟಮಯ ಪರಿಸ್ಥಿತಿಯನ್ನು ತಿಳಿದು ಮನಕರಗಿ ಅವಳಿಗೆ ಸಹಾಯಮಾಡಲು ಮುಂದೆ ಬಂದನು. ದೈವಗತಿಯು ವಿಚಿತ್ರವಾದುದು. ಆ ದೈವಗತಿಯಿಂದಲೇ ಮೇರಿಗೂ ಪಿಅರ ಕ್ಯೂರಿಗೂ ಪ್ರೇಮ ಕೂಡಿತು. ಇಲ್ಲಿಗೆ ಇವರಿಬ್ಬರೂ ದಂಪತಿಗಳಾದರು! ಅಂದಿನಿಂದ ಮೇರಿಯು ಮೇಡಮ್ ಮೇರಿ ಕ್ಯೂರಿಯಾದಳು. ಸಮಾನಶೀಲ ವ್ಯಸನಿಗಳಲ್ಲಿ ಸ್ನೇಹವು ಬೇಗನೆ ಕೂಡುವದೆಂದು ಹೇಳುವದುಂಟು. ಭೌತಿಕ ಶಾಸ್ತ್ರಾಭ್ಯಾಸದಲ್ಲಿ ಅತ್ಯಾಸಕ್ತಿಯುಳ್ಳ ಈ ದಂಪತಿಗಳು ಅಂದಿನಿಂದ ಏಕಜೀವ ಏಕಶರೀರವಾಗಿ ಕೆಲಸ ಮಾಡತೊಡಗಿದರು.

ತಾನು ವಿದ್ಯಾವತಿಯೆಂಬ ಹೆಮ್ಮೆಯು ಮೇರಿಗೆ ಎಳ್ಳಷ್ಟೂ ಇರಲಿಲ್ಲ. ಪತಿಸೇವೆ ಗೃಹವ್ಯವಸ್ಥೆ ಇವನ್ನೆಲ್ಲ ತಾನೇ ನೋಡಿಕೊಂಡು ಉಳಿಯುವ ಸ್ವಲ್ಪ ವೇಳೆಯಲ್ಲಿ ಪತಿಯೊಡನೆ ವಿಜ್ಞಾನಶಾಸ್ತ್ರಗಳ ಗೂಢ ರಹಸ್ಯಗಳನ್ನು ಕುರಿತು ಚರ್ಚೆ ಮಾಡುವಳು. ಅವನು ಮಾಡುವ ಪ್ರಯೋಗಗಳಿಗೆ ಸಲಕರಣೆಗಳನ್ನು ಒದಗಿಸಿಕೊಡುವಳು. ತಾನೂ ಸ್ವತಂತ್ರವಾಗಿ ಹಲವು ಪ್ರಯೋಗಗಳನ್ನು ನಡೆಯಿಸುವಳು. ಈ ದಂಪತಿಗಳು ಕಂಡುಹಿಡಿದ ಹಲವು ಶಾಸ್ತ್ರೀಯ ಶೋಧಗಳಿಂದ ಪ್ರಪಂಚಕ್ಕೆ ಅನಂತ ಉಪಕಾರವಾಗಿದೆ, "ರೇಡಿಯಮ್" ಎಂಬ ಅತ್ಯಾಶ್ಚರ್ಯಕರವಾದ ಧಾತುವಿನ ಶೋಧವು ಈ ದಂಪತಿಗಳ ಬಹುಕಾಲದ ಬಹುಕಷ್ಟಕರವಾದ ಪರಿಶ್ರಮದ ಫಲವಾಗಿದೆ.

ಕೆಲವು ಪದಾರ್ಥಗಳು ಕತ್ತಲೆಯಲ್ಲಿಯೂ ಪ್ರಕಾಶಮಾನವಾಗಿ ತೋರುವವು ಎಂಬದು ಅಗಿನಕಾಲದ ಶಾಸ್ತ್ರಜ್ಞರಿಗೆ ಗೊತ್ತಾಗಿದ್ದರೂ ಅವು ಹೇಗೆ ಸ್ವಪ್ರಕಾಶವೆನಿಸುವವೆಂಬದು ಮಾತ್ರ ಅವರಿಗೆ ಇನ್ನೂ ಗೊತ್ತಿರಲಿಲ್ಲ. 'ಯುರೆನಿಯಮ್' ಎಂ

ಒಂದು ಬಗೆಯ ಉಪ್ಪನ್ನು ಸೂರ್ಯಪ್ರಕಾಶದಲ್ಲಿ ಕೆಲವು ಹೊತ್ತು ಇಟ್ಟು ಆ ಮೇಲೆ ಕತ್ತಲೆಯಲ್ಲಿ ಒಯ್ದು ಇಟ್ಟರೂ ಸಹ ಅದು ಆಲ್ಲಿಯೂ ಸ್ವಪ್ರಕಾಶಕ ವಾಗಿರುವದೆಂಬದನ್ನೂ ಈ ಯುರೇನಿಯಮ್ ಲವಣಗಳು ತಮ್ಮಿಂದ ದೂರದಲ್ಲಿರಿಸಿದ ಫೊಟೋಗ್ರಾಫಿಯ ಪ್ಲೇಟುಗಳನ್ನು ಸಹ ತಮ್ಮ ಪ್ರಕಾಶದಿಂದ ಕೆಡಿಸುವವೆಂಬದನ್ನೂ 'ಬೆರೆಕೆಲ್' ಎಂಬ ಶಾಸ್ತ್ರಜ್ಞನು ಕಂಡುಹಿಡಿದಿದ್ದನು. ಆದರೆ ಯುರೆನಿಯಮ್ಮಿನ ಅದುರಿನೊಳಗಿನ ಯಾವ ದ್ರವ್ಯದ ಮೂಲಕ ಅದಕ್ಕೆ ಈ ಬಗೆಯ ಸ್ವಪ್ರಕಾಶಕ ಧರ್ಮವುಂಟಾಗುವದೆಂಬದು ಅವನಿಗೆ ಗೊತ್ತಿರಲಿಲ್ಲ.

ಕ್ಯೂರಿ ದಂಪತಿಗಳು ಈ ಸ್ವಯಂಪ್ರಕಾಶಿತ ದ್ರವ್ಯದ ಶೋಧನೆಗಾಗಿ ಅವಿಶ್ರಾಂತ ಶ್ರಮಪಡಬೇಕಾಯಿತು. ಅವರು ಬಹು ಕಷ್ಟದಿಂದ ನೆರವೇರಿಸಿದ ಯುರೆನಿಯಮ್ ಅದುರಿನ ಪೃಥಕ್ಕರಣದಿಂದ ಮೂರು ಸ್ವಯಂಪ್ರಕಾಶಿತ ದ್ರವ್ಯಗಳು ಹೊರಟುವು. ಅವುಗಳಲ್ಲಿ ಒಂದು ದ್ರವ್ಯವು ಹೆಚ್ಚಿನ ಪ್ರಮಾಣದಲ್ಲಿದ್ದರೆ ಎರಡನೆಯದು ಅತ್ಯಂತ ಪ್ರಕಾಶಮಾನವಾಗಿದ್ದಿತು. ಮೆಡಮ್ ಕ್ಯೂರಿಯು ಮೊದಲನೆಯದಕ್ಕೆ 'ರೇಡಿಯಮ್' ಎಂದೂ ಎರಡನೆಯದಕ್ಕೆ ತನ್ನ ಮಾತೃಭೂಮಿಯ (ಪೋಲಂಡ) ನಾಮನಿರ್ದೇಶಮಾಡುವದಕ್ಕಾಗಿ 'ಪೋಲಿನಿಯಮ್' ಎಂದೂ ಮೂರನೆಯದಕ್ಕೆ 'ಎಕ್ಟೆನಿಯಮ್, ಎಂದೂ ಹೆಸರಿಟ್ಟಳು.

ಪ್ರಪಂಚದಲ್ಲಿ ದುರ್ಮಿಲವಾದ ಉಪಯುಕ್ತ ವಸ್ತುವಿಗೆ ಬೆಲೆ ಹೆಚ್ಚು. ಆದುದರಿಂದ ತೀರ ದುರ್ಲಭವೂ ಅತ್ಯಂತ ಪ್ರಯೋಜನಕಾರಿಯೂ ಆದ ರೇಡಿಯಮ್ ಧಾತುವಿಗೆ ಬಂಗಾರದ ಲಕ್ಷಾನವಧಿ ಪ್ರನೂಾಣದಿಂದ ಬೆಲೆ ಬೀಳುವದು. ಇಂಥ ಅಮೌಲ್ಯ ಧಾತುವಿನ ಶೋಧಮಾಡಿದ ಕ್ಯೂರಿ ದಂಪತಿಗಳನ್ನು ಪೃಥ್ವಿಯ ಎಲ್ಲ ಭಾಗಗಳ ಶಾಸ್ತ್ರಜ್ಞರು ಅಭಿನಂದಿಸಿದರು; ಹಲವು ಸರಕಾರಗಳು ತಮ್ಮಲ್ಲಿ ದೊರೆಯುವ ಅದುರುಗಳನ್ನೂ ಸಹಾಯದ್ರವ್ಯಗಳನ್ನೂ ಅವರಿಗೆ ಕಳುಹಿಸಿ ಕೊಟ್ಟರು. ೧೯೧೧ ರಲ್ಲಿ ಪ್ರಪಂಚಕ್ಕೆಲ್ಲ ಸನ್ಮಾನ್ಯವಾದ ನೋಬೆಲ್ ಪಾರಿತೋಷಕವು ಇವರಿಗೆ ದೊರೆಯಿತು. ಆದರೆ ಮೇರಿಯ ಅಥವಾ ಪ್ರಪಂಚದ ದುರ್ದೈವದಿಂದ ಮರುವರ್ಷವೇ ಪಿಅರನು ಮೋಟಾರಿನ ಅಪಘಾತದಿಂದ ಮರಣ ಹೊಂದಿದನು.

ಪತಿನಿಧನದಿಂದ ಮೇರಿಯ ಬಲಗೈ ಹೋದಂತಾಯಿತು. ಶಾಸ್ತ್ರಾಭ್ಯಾಸದಲ್ಲಿ ಗುರುವಾಗಿಯೂ ಪ್ರಪಂಚದಲ್ಲಿ ಅನನ್ಯ ಪ್ರೀತಿಯ ಪತಿಯಾಗಿಯೂ ಇದ್ದ ತನ್ನ ಪ್ರಿಯತಮನ ವಿಯೋಗದಿಂದ ಮೇರಿಗಾದ ದುಃಖವನ್ನು ಬಣ್ಣಿಸಲಳವಲ್ಲ. ಅದನ್ನವಳು ಮರೆಯಲು ಸಾಧ್ಯವಿರಲಿಲ್ಲ. ಆದರೆ ಮನಸ್ಸನ್ನು ಬೇರೆ ವಿಷಯದಲ್ಲಿ ತೊಡಗಿಸಿದರೆ ದುಃಖದ ಪ್ರಾಬಲ್ಯವು ಕುಂದುವದೆಂಬ ವಿಚಾರದಿಂದ ಅವಳು ತನ್ನ

ಶೋಧನ ಕಾರ್ಯದಲ್ಲಿ ಹೆಚ್ಚು ಆಸಕ್ತಿಯನ್ನು ತೋರ್ಪಡಿಸಿದಳು ; ಸೊರ್ಬೊನ್ನ ವಿದ್ಯಾನಿಲಯದವರು ಪತಿಯ ಗೌರವದ ಸ್ಥಾನವನ್ನು ಆಕೆಗೆ ಕೊಟ್ಟರು. ಮೆಡಮ್ ಮೇರಿಯು ಸ್ವತಂತ್ರವಾಗಿ ಪ್ರಯೋಗ ನಡೆಯಿಸಿ ಕಂಡುಹಿಡಿದ ಹಲವು ರಾಸಾಯನಿಕ ಶೋಧಗಳಿಗಾಗಿ ಅವಳಿಗೆ ೧೯೧೧ರಲ್ಲಿ ಎರಡನೆಯ ಸಾರಿ ನೋಬಲ್ ಪಾರಿತೋಷಕವು ದೊರೆಯಿತು.

ಸ್ವಯಂಪ್ರಕಾಶಿತವಾದ ರೇಡಿಯಮ್ ಧಾತುವಿನ ಪ್ರಯೋಗದಿಂದ ವೈದ್ಯ ಶಾಸ್ತ್ರದ ಬಲದಿಂದ ಗುಣಪಡಿಸಲು ಅಸಾಧ್ಯವೆನಿಸಿದ ಹಲವು ರೋಗಗಳನ್ನು ಸುಲಭವಾಗಿ ನಿವಾರಿಸಬಹುದೆಂದು ಮೇರಿಯು ಭಾವಿಸಿದ್ದಳು. ಇದನ್ನು ಪ್ರತ್ಯಕ್ಷ ಪ್ರಯೋಗದಿಂದ ಸಿದ್ಧಪಡಿಸುವದಕ್ಕಾಗಿ ಅವಳು ಹಿಂದಣ ಯುರೋಪದ ಮಹಾ ಯುದ್ಧದ ಕಾಲದಲ್ಲಿ ರೆಡ್‌ಕ್ರಾಸ ದಳದಲ್ಲಿ ಸೇರಿದಳು ; ರಣಭೂಮಿಯಲ್ಲಿಯ ಅತಿ ಭಯಂಕರವಾದ ಪರಿಸ್ಥಿತಿಯಲ್ಲಿಯೂ ಕೂಡ ಕಂಗೆಡದೆ ತಾಳ್ಮೆಯನ್ನು ಕಳೆದು ಕೊಳ್ಳದೆ ತನ್ನ ಪ್ರಯೋಗವನ್ನು ಮುಂದುವರಿಸಿದಳು. ಕೊನೆಗೆ ಈ ಮಹನೀಯಳ ಬಯಕೆಯು ಕೈಗೂಡಿತು.

ಸಂಪತ್ತನ್ನೂ ಸತ್‌ಕೀರ್ತಿಯನ್ನೂ ಗಳಿಸುವ ಜನರೇ ವಿರಳ. ಹಾಗೆ ತಾವು ಗಳಿಸಿದ ಸಂಪತ್ತು-ಸತ್ಕೀರ್ತಿಗಳನ್ನು ಕೇವಲ ನಿರಪೇಕ್ಷಬುದ್ಧಿಯಿಂದ ಜನಹಿತದ ಸತ್ಕಾರ್ಯಗಳಿಗಾಗಿ ವಿನಿಯೋಗಿಸುವವರು ಇನ್ನೂ ವಿರಳ. ಮೆಡಮ್ ಮೇರಿ ಕ್ಯೂರಿಯು ಇಂಥ ವಿರಳ ವ್ಯಕ್ತಿಗಳಲ್ಲಿ ಅಗ್ರಗಣ್ಯಳಾಗಿರುವಳು. ಅವಳು ತಾನು ಪಡೆದ ವಿಜ್ಞಾನವನ್ನೂ ಸಂಪತ್ತನ್ನೂ ವಿನಿಯೋಗಿಸಿ ಜನತೆಯ ಹಿತಕ್ಕಾಗಿ ಎರಡು ರೇಡಿಯಮ್ ಚಿಕಿತ್ಸಾಲಯಗಳನ್ನು ಸ್ಥಾಪಿಸಿ ಅವು ಶಾಶ್ವತವಾಗಿ ನಡೆದು ಬರುವ ಯೋಜನೆಯನ್ನು ಮಾಡಿಟ್ಟಿರುವಳು.

ನಾವು ಜಪಾನದೊಡನೆ ಯಾಕೆ ಯುದ್ಧ ಹೂಡಿದ್ದೇವೆ?

(Why we are fighting Japan ?) ಎಂಬ ಪುಸ್ತಕದ ಆಧಾರದಿಂದ

ಎರಡನೆಯ ಭಾಗ—ಜಪಾನಕ್ಕೆ ಏನು ಬೇಕಾಗಿದೆ?

ಹಿಂದಣ ಪ್ರಾಸ್ತಾವಿಕ ವಿಭಾಗದಲ್ಲಿ ಉದಯೋನ್ಮುಖವಾದ ರಾಷ್ಟ್ರಗಳ ಮನೋವೃತ್ತಿಯಲ್ಲಿ ಸಾಮ್ರಾಜ್ಯವನ್ನು ಕಟ್ಟಬೇಕೆನ್ನುವ ಹಂಬಲವು ಹೇಗೆ ಹುಟ್ಟುವದೆಂಬದನ್ನು ವಿವರಿಸಲಾಗಿದೆ. ಜಪಾನವು ಈ ಬಗೆಯ ಮನೋವೃತ್ತಿಯಿಂದಷ್ಟೇ ಅಲ್ಲ, ವ್ಯಾವಹಾರಿಕ ಅಡಚಣೆಗಳಿಗಾಗಿಯೂ ಪೂರ್ವ ಏಶಿಯಾದಲ್ಲಿ

ದೊಡ್ಡ ಸಾಮ್ರಾಜ್ಯವನ್ನು ಕಟ್ಟಿಕೊಂಡ ಹೊರತು ತನ್ನ ಉತ್ಕರ್ಷವು ಅಸಾಧ್ಯವೆಂದು ನಂಬುತ್ತಿದೆ.

(ಅ) ಬೆಳೆಯುತ್ತಿರುವ ಪ್ರಜಾ ನಂಖ್ಯೆಗೆ ತಕ್ಕಂತೆ ವಿಶಾಲವಾದ ಸ್ಥಳಾಭಾವ.

(ಬ) ಕಚ್ಚಾ ನರಕುಗಳನ್ನು ದೊರಕಿಸುವ ಆಶೆ.

(ಕ) ತಾನು ಹುಟ್ಟಿಸುವ ಕೈಗಾರಿಕೆಯ ಸಾಮಾನುಗಳನ್ನು ಕೊಂಡುಕೊಳ್ಳುವ ಜನರುಳ್ಳ ಪ್ರದೇಶ.

ಈ ಮೂರು ಮಾತಿನ ನಲುವಾಗಿ ಜಪಾನವು ತನ್ನದೇ ಆದ ಒಂದು ದೊಡ್ಡ ಸಾಮ್ರಾಜ್ಯವನ್ನು ಕಟ್ಟಿಕೊಳ್ಳದೆ ಗತ್ಯಂತರವಿಲ್ಲದಂತಾಗಿದೆ.

(ಅ) **ಬೆಳೆಯುತ್ತಿರುವ ಪ್ರಜಾ ಸಂಖ್ಯೆ**ಯು ಆಧುನಿಕ ರಾಜಕೀಯ ರಂಗದಲ್ಲಿ ಒಂದು ದೊಡ್ಡ ಸಮಸ್ಯೆಯಾಗಿರುವದೆಂದೂ ಪರಾಕ್ರಮಣಶೀಲವಾದ ಎಲ್ಲ ರಾಷ್ಟ್ರಗಳು ತಮ್ಮ ಆಕ್ರಮಣಕ್ಕೆ ಈ ಸಮಸ್ಯೆಯನ್ನು ಮುಂದೊಡ್ಡುತ್ತಿರುವರೆಂದೂ ನನಗೆ ಗೊತ್ತಿದೆ. ಮತ್ತು ಪ್ರಜಲಿತ ರಾಜಕಾರಣದ ಅಭ್ಯಾಸ ಮಾಡುವವರೆಲ್ಲರೂ ಇದನ್ನು ಒಪ್ಪಿಕೊಳ್ಳುವದೂ ಉಂಟು. ಪರಾಕ್ರಮಣ ಶೀಲರಲ್ಲಿ ಅಗ್ರಸ್ಥಾನವನ್ನು ಪಡೆದ ಜರ್ಮನಿಯು ಕೂಡ ತನ್ನಲ್ಲಿ ದಿನದಿನಕ್ಕೆ ಹೆಚ್ಚುತ್ತ ಸಾಗಿರುವ ಜನಸಂಖ್ಯೆಗೆ ತಕ್ಕಷ್ಟು ಸ್ಥಳವು ಬೇಕೇಬೇಕು ಎನ್ನುವ ನೆವವನ್ನು ಮುಂದೊಡ್ಡಿ ತನಗೆ ಸಾಧ್ಯವಿದ್ದ ನೆರೆಹೊರೆಯ ಪ್ರದೇಶವನ್ನೆಲ್ಲ ಆಕ್ರಮಿಸಿಕೊಂಡಿತು. ಹೀಗೆ ಇತ್ತ ಜನಸಂಖ್ಯೆಯ ಹೆಚ್ಚುವಿಕೆಯ ನೆವವನ್ನು ಜಗತ್ತಿನ ಮುಂದೆ ಒಡ್ಡುತ್ತಿರುವಾಗಲೇ ಅತ್ತ ನಾರ್ವಿುಗಳ ಪ್ರಜಾ ಸಂಖ್ಯೆಯನ್ನು ಬೆಳಿಸುವದಕ್ಕೆ ಸಾಧ್ಯವಿದ್ದ ಎಲ್ಲ ಉಪಾಯಗಳನ್ನು ಕೈಕೊಂಡಿತ್ತು. ಮೇಲಾಗಿ ಪರಕೀಯ ಕೂಲಿಕಾರರನ್ನು ಹೆಚ್ಚು ದೊಡ್ಡ ಪ್ರಮಾಣದಿಂದ ತನ್ನಲ್ಲಿಗೆ ಬರಮಾಡಿಕೊಂಡಿತು. ಯಾವದೊಂದು ರಾಷ್ಟ್ರವು ಜಗತ್ತಿನ ಇತರ ದೇಶಗಳ ಸಂಬಂಧದ ತನ್ನ ಮನೋವೃತ್ತಿಯನ್ನಾಗಲಿ ಅದಕ್ಕನುಗುಣವಾದ ಕಾರ್ಯವನ್ನಾಗಲಿ ಗೊತ್ತುಪಡಿಸುವಾಗ ತನ್ನಲ್ಲಿ ಬೆಳೆಯುತ್ತ ಸಾಗಿರುವ ಜನಸಂಖ್ಯೆಯನ್ನಾಗಲಿ ಪ್ರಕೃತದ ಜನದಟ್ಟಣೆಯ ಮಾನವನ್ನಾಗಲಿ ಮುಂದೆ ಮಾಡಿದರಷ್ಟೇ ಸಾಲದು. ಯಾವದೊಂದು ದೇಶವು ಹೆಚ್ಚು ಜನದಟ್ಟಣೆಯುಳ್ಳದ್ದಾಗಿರುವಾಗ ಅದು ಹೆಚ್ಚು ಔದ್ಯೋಗಿಕ ಜೀವನದಲ್ಲಿ ತೊಡಗಿದರೆ ಒಳಿತಾಗುವದು. ಇಲ್ಲವಾದರೆ ಅದು ತನ್ನ ಜೀವನ ಸಾಧನಗಳ ಬೆಲೆಯನ್ನು ಕಡಿಮೆಮಾಡಿಕೊಂಡು ಕಡಿಮೆ ತರಗತಿಯಲ್ಲಿ ಜೀವನವನ್ನು ಸಾಗಿಸಲು ಒಪ್ಪಿಕೊಳ್ಳಬೇಕಾಗುವದು. ಯಾವದೊಂದು ರಾಷ್ಟ್ರವು ಮೊದಲೇ ಜನದಟ್ಟಣೆಯುಳ್ಳ ಪ್ರದೇಶ

ವಾಗಿದ್ದು, ಪ್ರಜಾಸಂಖ್ಯೆಯು ದಿನದಿನಕ್ಕೆ ಬಹು ತೀವ್ರವಾಗಿ ಬೆಳೆಯುತ್ತ ಸಾಗಿರುವ ಸಂದರ್ಭದಲ್ಲಿ ಅದು ತನ್ನ ರಾಜ್ಯವಿಸ್ತಾರಮಾಡಿಕೊಳ್ಳದೆ ಗತ್ಯಂತ ಉಳಿಯಲಾರದು. ಮುಂದೆ ಹೇಳುವ ಮೂರು ದೇಶಗಳು ಜಗತ್ತಿನಲ್ಲಿ ಅ. ಜನದಟ್ಟಣೆಯುಳ್ಳ ಪ್ರದೇಶಗಳೆಂದು ಗೊತ್ತಾಗಿದೆ.

ದೇಶಗಳು	ಪ್ರತಿ ಚೌರಸ ಕಿಲೋಮೀಟರದಲ್ಲಿರುವ ಜನವಸ
ಜರ್ಮನ್ ಸಾಮ್ರಾಜ್ಯ	೧೩೮
ಹೋಲಂಡ	೮೯
ಜಪಾನ	೬೯

ಇಡಿಯ ಜಗತ್ತಿನ ಪ್ರಜಾಸಂಖ್ಯೆಯನ್ನು ಎಣಿಸಿನೋಡಿ ಜನದಟ್ಟಣೆಯ ಸರಾಸರಿ ಮಾನವನ್ನು ಕಂಡುಹಿಡಿದಿದ್ದಾರೆ. ಅದು ಪ್ರತಿ ಚೌರಸ ಕಿಲೋ ಮೀಟರಕ್ಕೆ ೧೬ ಎಂದು ಹೊರಟಿದೆ. ಇದನ್ನು ಮೇಲೆ ಹೇಳಿರುವ ಮೂರು ರಾಷ್ಟ್ರಗಳ ಜನದಟ್ಟಣೆಯ ಮಾನಕ್ಕೆ ಹೋಲಿಸಿ ನೋಡಿದರೆ ಆ ರಾಷ್ಟ್ರಗಳ ಕೊರತೆಯು ನಮ್ಮ ಲಕ್ಷ್ಯಕ್ಕೆ ಬರಬಹುದು. ಈ ಕೆಳಗಿನ ಪ್ರಜಾಸಂಖ್ಯೆಯನ್ನು ನೋಡಿರಿ.

ಬ್ರಿಟಿಷ ಸಾಮ್ರಾಜ್ಯ	....	....	೧೫
ಸಂಯುಕ್ತ ಸಂಸ್ಥಾನಗಳು	....	....	೧೯೫
ಬೆಲ್ಜಿಯಮ್	....	....	೨೪೭
ಸ್ವಾಧೀನ ಪ್ರದೇಶಗಳನ್ನು ಬಿಟ್ಟುಳಿದ ಜಪಾನ	....	....	೧೪೬

ಸಾಮಾನ್ಯವಾಗಿ ಜಪಾನವನ್ನು ಪಶ್ಚಿಮ ಯುರೋಪದೊಳಗಿನ ಔದ್ಯೋಗಿಕ ಜೀವಿಗಳಾದ ರಾಷ್ಟ್ರಗಳಿಗೆ ಹೋಲಿಸಬಹುದು. ಆದರೆ ಅದು ತೀರ ಗುಡ್ಡಗಾಡು ಪ್ರದೇಶಗಳಿಂದ ತುಂಬಿಹೋಗಿದೆ. ಇಡಿಯ ಕ್ಷೇತ್ರದ ಶೇ ೧೬ ಮಾತ್ರ ಜನವಸತಿಗೆ ತಕ್ಕದ್ದಾಗಿದೆ. ಗ್ರೇಟಬ್ರಿಟನ್ನಿನಲ್ಲಿ ನೂರರಲ್ಲಿ ೭೨ ಜನರು ಮಾತ್ರ ಒಕ್ಕಲುತನದಿಂದ ಜೀವಿಸುವರು. ಆದರೆ ಜಪಾನದಲ್ಲಿ ನೂರರಲ್ಲಿ ೬೫ ಜನರು ಒಕ್ಕಲುತನದ ಮೇಲೆ ಅವಲಂಬಿಸುವರು. ಜಪಾನದಲ್ಲಿ ಜನವಸತಿಗೆ ತಕ್ಕದ್ದಾದ ಪ್ರದೇಶವನ್ನಷ್ಟೇ ಎಣಿಕೆಗೆ ತಕ್ಕೊಂಡರೆ ಜನದದಟ್ಟಣೆಯ ಮಾನವು ಪ್ರತಿ ಚೌರಸ ಕಿಲೋಮೀಟರ ಪ್ರದೇಶಕ್ಕೆ ೨೭೫ ರಂತೆಯೂ ಸಂಯುಕ್ತ ಸಂಸ್ಥಾನಗಳಲ್ಲಿ ೨೧೦ ರಂತೆಯೂ ಹೊರಡುವದು. ಆದ್ದರಿಂದ ಜಪಾನವು ಒಕ್ಕಲುತನದಿಂದ ಜೀವಿಸುವ ರಾಷ್ಟ್ರವೆಂದು ಕಲ್ಪಿಸಿಕೊಂಡರೆ ಅದರ ಪ್ರಜಾಸಂಖ್ಯೆಯು ಮಿತಿಮೀರಿ ಬೆಳೆದು ಸುಖಕರವಾದ ಜನಜೀವನಕ್ಕೆ ಕೊರತೆ ಬರುವ ಸ್ಥಿತಿಯಲ್ಲಿದೆಯೆಂದು ಹೇಳಬೇಕಾಗುವದು.

ಜನದಟ್ಟಣೆಯು ಮಾನವನ್ನು ನಿರ್ಣಯಿಸುವಾಗ ಅದರ ಪ್ರಜೋತ್ಪಾದನ ಶಕ್ತಿಯ ಪ್ರಮಾಣ (Reproductive index) ವನ್ನು ನೋಡಬೇಕಾಗುವದು. ಪ್ರತಿಯೊಬ್ಬ ತಾಯಿಯು ಹಡೆಯುವ ಮಕ್ಕಳಲ್ಲಿ ಸರ್ವಸಾಧಾರಣ ಜೀವನದಲ್ಲಿ ಬದುಕಿ ಉಳಿಯುವ ಕೂಸುಗಳ ಸಂಖ್ಯೆಯನ್ನು ಅನುಲಕ್ಷಿಸಿ ಈ ಪ್ರಮಾಣವನ್ನು ಗೊತ್ತುಪಡಿಸುವರು. ಈ ಪ್ರಮಾಣವು ಒಂದು ಎಂದು ಗೊತ್ತಾದರೆ ಆ ದೇಶದ ಪ್ರಜಾಸಂಖ್ಯೆಯು ಬೆಳೆವಣಿಗೆಯ ಮಾನವು ಸಮಾಧಾನಕರವಾಗಿದೆ; ತಕ್ಕಷ್ಟಕ್ಕಿಂತ ಹೆಚ್ಚು ಅಲ್ಲ; ಕಡಿಮೆಯೂ ಅಲ್ಲ, ಎಂದು ತಿಳಿಯಲ್ಪಡುವದು. ಜರ್ಮನಿಯಲ್ಲಿ ಪ್ರಜಾಭಿವೃದ್ಧಿಗಾಗಿ ವಿಶ್ವಪ್ರಯತ್ನ ನಡಿಸಿರುವದು ಎಲ್ಲರಿಗೂ ಗೊತ್ತಿದ್ದ ಮಾತು. ಆದರೂ ಆ ದೇಶದ ಪ್ರಜೋತ್ಪಾದನ ಶಕ್ತಿಯ ಪ್ರಮಾಣವು ಒಂದಕ್ಕಿಂತ ಕಡಿಮೆಯೇ ಆಗಿರುವದು. ಸಂಯುಕ್ತ ಸಂಸ್ಥಾನಗಳಲ್ಲಿಯ ಈ ಮಾನವು ೭೫ ಮಾತ್ರ ಇರುವದು. ಆದರೆ ಜಪಾನದಲ್ಲಿ ಇದು ೧೩೫ ದ ವರೆಗೆ ಬೆಳೆದಿರುವದು. ಅರ್ಥಾತ್ ಜಪಾನದಲ್ಲಿ ಪ್ರಜಾಸಂಖ್ಯೆಯು ಒಂದು ತಲೆಗಳಿಯಲ್ಲಿ (in-each generation) ೧೦೦ಕ್ಕೆ ೫೦ ರಷ್ಟು ಹೆಚ್ಚುತ್ತ ಸಾಗಿರುವದು. ಆದುದರಿಂದ ಆ ದೇಶದಲ್ಲಿ ಕೈಗಾರಿಕೆಯನ್ನು ಬೆಳೆಯಿಸಿ ತೀವ್ರಗತಿಯಂದ ಬೆಳೆಯುತ್ತಿರುವ ಪ್ರಜಾಸಂಖ್ಯೆಗೆ ತಕ್ಕಂತೆ ದೇಶದ ಸಂಪತ್ತನ್ನು ಅಭಿವೃದ್ಧಿಗೊಳಿಸಿಕೊಂಡು ಬಾಳುವದು ಅಸಾಧ್ಯವೆನಿಸಿದೆ. ಈ ಎಲ್ಲ ಕಾರಣಗಳಿಂದ ಪ್ರಕೃತಕ್ಕೆ ತನ್ನಲ್ಲಿ ಬೆಳೆಯುತ್ತಿರುವ ಪ್ರಜಾಸಂಖ್ಯೆಯು ಸುಖಜೀವನಕ್ಕಾಗಿ ಅದು ಹೊಸ ಹೊಸ ಪ್ರದೇಶಗಳನ್ನು ವಶಪಡಿಸಿಕೊಂಡ ಹೊರತು ಬೇರೆ ಉಪಾಯವು ಉಳಿದಿಲ್ಲ. ಹಿಂದೊಮ್ಮೆ ಜಪಾನವು ವಸಾಹತು ಮಾಡಿಕೊಳ್ಳುವದಕ್ಕಾಗಿ ಮಂಚೂಕೂವೊ ಪ್ರದೇಶವನ್ನು ವಶಪಡಿಸಿಕೊಂಡಾಗ ಅಮಿತ ಪ್ರಜಾಭಿವೃದ್ಧಿಯಿಂದ ತನಗಾಗುವ ತೊಂದರೆಯನ್ನು ಕೆಲಕಾಲದ ಮಟ್ಟಿಗಾದರೂ ನೀಗಿಸಿಕೊಳ್ಳಬಹುದೇನೋ ಎಂದು ಭಾವಿಸಲಾಗಿತ್ತು. ಆದರೆ ಮಂಚೂಕೂವೋ ಪ್ರದೇಶದ ಶೀತವೂ ನಿರುತ್ಸಾಹಕರವೂ ಆದ ಹವಾಮಾನವು ಉಷ್ಣಪ್ರದೇಶದಲ್ಲಿ ಬೆಳೆದ ಜಪಾನೀಯರಿಗೆ ತಡೆಯದಾಯಿತು. ಆದುದರಿಂದಲೇ ಜಪಾನವು ಈಗ ದಕ್ಷಿಣ ದಿಕ್ಕಿಗೆ ತನ್ನ ದೃಷ್ಟಿಯನ್ನು ಹೊರಳಿಸಿರುವದು.

(ಬ) ಜಪಾನಕ್ಕೆ ಕಚ್ಚಾ ಸರಕುಗಳ ಕೊರತೆಯಿರುವದು. ಪೂರ್ವಕಾಲದಲ್ಲಿ ಚೀನವೂ ಜಪಾನವೂ ಸ್ವಸಂಪೂರ್ಣ ರಾಷ್ಟ್ರಗಳೆನಿಸಿಕೊಂಡಿದ್ದವು. ಆದರೆ ಆಧುನಿಕ ಸುಧಾರಣೆಯ ಕಾಲದಲ್ಲಿ, ಅದರಲ್ಲಿಯೂ ಸಾಂಪ್ರತ ಕಾಲದ ಪರಾಕ್ರಮಣಶೀಲ ರಾಷ್ಟ್ರಗಳ ದುರಾಕಾಂಕ್ಷೆಯ ಫಲವೆನಿಸಿದ ಮಹಾಯುದ್ಧಗಳ ಯುಗದಲ್ಲಿ, ಆ ದೇಶಗಳು ಬಗೆಬಗೆಯ ಕಚ್ಚಾ ಸರಕುಗಳಿಗಾಗಿ

ವಾಗಿದ್ದು, ಪ್ರಜಾಸಂಖ್ಯೆಯು ದಿನದಿನಕ್ಕೆ ಬಹು ತೀವ್ರವಾಗಿ ಬೆಳೆಯುತ್ತ ಸಾಗಿರುವ ಸಂದರ್ಭದಲ್ಲಿ ಅದು ತನ್ನ ರಾಜ್ಯವಿಸ್ತಾರಮಾಡಿಕೊಳ್ಳದೆ ಗತ್ಯಂತರ ಉಳಿಯಲಾರದು. ಮುಂದೆ ಹೇಳುವ ಮೂರು ದೇಶಗಳು ಜಗತ್ತಿನಲ್ಲಿ ಅತಿ ಜನದಟ್ಟಣೆಯುಳ್ಳ ಪ್ರದೇಶಗಳೆಂದು ಗೊತ್ತಾಗಿದೆ.

ದೇಶಗಳು	ಪ್ರತಿ ಚೌರಸ ಕಿಲೋಮೀಟರದಲ್ಲಿರುವ ಜನವಸತಿ
ಜರ್ಮನ್ ಸಾಮ್ರಾಜ್ಯ	೧೩೮
ಪೋಲಂಡ	೮೯
ಜಪಾನ	೬೯

ಇಡಿಯ ಜಗತ್ತಿನ ಪ್ರಜಾಸಂಖ್ಯೆಯನ್ನು ಎಣಿಸಿನೋಡಿ ಜನದಟ್ಟಣೆಯ ಸರಾಸರಿ ಮಾನವನ್ನು ಕಂಡುಹಿಡಿದಿದ್ದಾರೆ. ಅದು ಪ್ರತಿ ಚೌರಸ ಕಿಲೋಮೀಟರಕ್ಕೆ ೧೬ ಎಂದು ಹೊರಟಿದೆ. ಇದನ್ನು ಮೇಲೆ ಹೇಳಿರುವ ಮೂರು ರಾಷ್ಟ್ರಗಳ ಜನದಟ್ಟಣೆಯ ಮಾನಕ್ಕೆ ಹೋಲಿಸಿ ನೋಡಿದರೆ ಆ ರಾಷ್ಟ್ರಗಳ ಕೊರತೆಯು ನಮ್ಮ ಲಕ್ಷ್ಯಕ್ಕೆ ಬರಬಹುದು. ಈ ಕೆಳಗಿನ ಪ್ರಜಾಸಂಖ್ಯೆಯನ್ನು ನೋಡಿರಿ.

ಬ್ರಿಟಿಷ ಸಾಮ್ರಾಜ್ಯ	....	....	೧೫
ಸಂಯುಕ್ತ ಸಂಸ್ಥಾನಗಳು	....	....	೧೯೫
ಬೆಲ್ಜಿಯಮ್	....	....	೬೪೭
ಸ್ವಾಧೀನ ಪ್ರದೇಶಗಳನ್ನು ಬಿಟ್ಟುಳಿದ ಜಪಾನ	....	....	೧೪೬

ಸಾಮಾನ್ಯವಾಗಿ ಜಪಾನವನ್ನು ಪಶ್ಚಿಮ ಯುರೋಪಿನೊಳಗಿನ ಔದ್ಯೋಗಿಕ ಜೀವಿಗಳಾದ ರಾಷ್ಟ್ರಗಳಿಗೆ ಹೋಲಿಸಬಹುದು. ಆದರೆ ಅದು ತೀರ ಗುಡ್ಡಗಾಡು ಪ್ರದೇಶಗಳಿಂದ ತುಂಬಿಹೋಗಿದೆ. ಇಡಿಯ ಕ್ಷೇತ್ರದ ಶೇ ೧೬ ಮಾತ್ರ ಜನವಸತಿಗೆ ತಕ್ಕದ್ದಾಗಿದೆ. ಗ್ರೇಟಬ್ರಿಟನ್ನಿನಲ್ಲಿ ನೂರರಲ್ಲಿ ೭ ಜನರು ಮಾತ್ರ ಒಕ್ಕಲುತನದಿಂದ ಜೀವಿಸುವರು. ಆದರೆ ಜಪಾನದಲ್ಲಿ ನೂರರಲ್ಲಿ ೪೫ ಜನರು ಒಕ್ಕಲುತನದ ಮೇಲೆ ಅವಲಂಬಿಸುವರು. ಜಪಾನದಲ್ಲಿ ಜನವಸತಿಗೆ ತಕ್ಕದ್ದಾದ ಪ್ರದೇಶವನ್ನಷ್ಟೇ ಎಣಿಕೆಗೆ ತಕ್ಕೊಂಡರೆ ಜನದದಟ್ಟಣೆಯ ಮಾನವು ಪ್ರತಿ ಚೌರಸ ಕಿಲೋಮಿಟರ ಪ್ರದೇಶಕ್ಕೆ ೨೭೭ ರಂತೆಯೂ ಸಂಯುಕ್ತ ಸಂಸ್ಥಾನಗಳಲ್ಲಿ ೨೧೭೦ ರಂತೆಯೂ ಹೊರಡುವದು. ಆದ್ದರಿಂದ ಜಪಾನವು ಒಕ್ಕಲುತನದಿಂದ ಜೀವಿಸುವ ರಾಷ್ಟ್ರವೆಂದು ಕಲ್ಪಿಸಿಕೊಂಡರೆ ಅದರ ಪ್ರಜಾಸಂಖ್ಯೆಯು ಮಿತಿಮೀರಿ ಬೆಳೆದು ಸುಖಕರವಾದ ಜನಜೀವನಕ್ಕೆ ಕೊರತೆ ಬರುವ ಸ್ಥಿತಿಯಲ್ಲಿದೆಯೆಂದು ಹೇಳಬೇಕಾಗುವದು.

ಜನದಟ್ಟಣೆಯ ಮಾನವನ್ನು ನಿರ್ಣಯಿಸುವಾಗ ಅದರ ಪ್ರಜೋತ್ಪಾದನ ಶಕ್ತಿಯ ಪ್ರಮಾಣ (Reproductive index) ವನ್ನು ನೋಡಬೇಕಾಗುವದು. ಪ್ರತಿಯೊಬ್ಬ ತಾಯಿಯು ಹಡೆಯುವ ಮಕ್ಕಳಲ್ಲಿ ಸರ್ವಸಾಧಾರಣ ಜೀವನದಲ್ಲಿ ಬದುಕಿ ಉಳಿಯುವ ಕೂಸುಗಳ ಸಂಖ್ಯೆಯನ್ನು ಅನುಲಕ್ಷಿಸಿ ಈ ಪ್ರಮಾಣವನ್ನು ಗೊತ್ತುಪಡಿಸುವರು. ಈ ಪ್ರಮಾಣವು ಒಂದು ಎಂದು ಗೊತ್ತಾದರೆ ಆ ದೇಶದ ಪ್ರಜಾಸಂಖ್ಯೆಯ ಬೆಳೆವಣಿಗೆಯ ಮಾನವು ಸಮಾಧಾನಕರವಾಗಿದೆ; ತಕ್ಕಷ್ಟಕ್ಕಿಂತ ಹೆಚ್ಚು ಅಲ್ಲ; ಕಡಿಮೆಯೂ ಅಲ್ಲ, ಎಂದು ತಿಳಿಯಲ್ಪಡುವದು. ಜರ್ಮನಿಯಲ್ಲಿ ಪ್ರಜಾಭಿವೃದ್ಧಿಗಾಗಿ ವಿಶ್ವಪ್ರಯತ್ನ ನಡಿಸಿರುವದು ಎಲ್ಲರಿಗೂ ಗೊತ್ತಿದ್ದ ಮಾತು. ಆದರೂ ಆ ದೇಶದ ಪ್ರಜೋತ್ಪಾದನ ಶಕ್ತಿಯ ಪ್ರಮಾಣವು ಒಂದಕ್ಕಿಂತ ಕಡಿಮೆಯೇ ಆಗಿರುವದು. ಸಂಯುಕ್ತ ಸಂಸ್ಥಾನಗಳಲ್ಲಿಯ ಈ ಮಾನವು ·೭೫ ಮಾತ್ರ ಇರುವದು. ಆದರೆ ಜಪಾನದಲ್ಲಿ ಇದು ೧·೫ ದ ವರೆಗೆ ಬೆಳೆದಿರುವದು. ಅರ್ಥಾತ್ ಜಪಾನದಲ್ಲಿ ಪ್ರಜಾಸಂಖ್ಯೆಯು ಒಂದು ತಲೆಗಳಿಯಲ್ಲಿ (in-each generation) ೧೦೦ ಕ್ಕೆ ೫೦ ರಷ್ಟು ಹೆಚ್ಚುತ್ತ ಸಾಗಿರುವದು. ಆದುದರಿಂದ ಆ ದೇಶದಲ್ಲಿ ಕೈಗಾರಿಕೆಯನ್ನು ಬೆಳೆಯಿಸಿ ತೀವ್ರಗತಿಯಂದ ಬೆಳೆಯುತ್ತಿರುವ ಪ್ರಜಾಸಂಖ್ಯೆಗೆ ತಕ್ಕಂತೆ ದೇಶದ ಸಂಪತ್ತನ್ನು ಅಭಿವೃದ್ಧಿಗೊಳಿಸಿಕೊಂಡು ಬಾಳುವದು ಅಸಾಧ್ಯವೆನಿಸಿದೆ. ಈ ಎಲ್ಲ ಕಾರಣಗಳಿಂದ ಪ್ರಕೃತಕ್ಕೆ ತನ್ನಲ್ಲಿ ಬೆಳೆಯುತ್ತಿರುವ ಪ್ರಜಾಸಂಖ್ಯೆಯು ಸುಖಜೀವನಕ್ಕಾಗಿ ಅದು ಹೊಸ ಹೊಸ ಪ್ರದೇಶಗಳನ್ನು ವಶಪಡಿಸಿಕೊಂಡ ಹೊರತು ಬೇರೆ ಉಪಾಯವು ಉಳಿದಿಲ್ಲ. ಹಿಂದೊಮ್ಮೆ ಜಪಾನವು ವಸಾಹತು ಮಾಡಿಕೊಳ್ಳುವದಕ್ಕಾಗಿ ಮಂಚೂಕೂವೊ ಪ್ರದೇಶವನ್ನು ವಶಪಡಿಸಿಕೊಂಡಾಗ ಅಮಿತ ಪ್ರಜಾಭಿವೃದ್ಧಿಯಿಂದ ತನಗಾಗುವ ತೊಂದರೆಯನ್ನು ಕೆಲಕಾಲದ ಮಟ್ಟಿಗಾದರೂ ನೀಗಿಸಿಕೊಳ್ಳಬಹುದೇನೋ ಎಂದು ಭಾವಿಸಲಾಗಿತ್ತು. ಆದರೆ ಮಂಚೂಕೂವೋ ಪ್ರದೇಶದ ಶೀತವೂ ನಿರುತ್ಸಾಹಕರವೂ ಆದ ಹವಾಮಾನವು ಉಷ್ಣಪ್ರದೇಶದಲ್ಲಿ ಬೆಳೆದ ಜಪಾನೀಯರಿಗೆ ತಡೆಯದಾಯಿತು. ಆದುದರಿಂದಲೇ ಜಪಾನವು ಈಗ ದಕ್ಷಿಣ ದಿಕ್ಕಿಗೆ ತನ್ನ ದೃಷ್ಟಿಯನ್ನು ಹೊರಳಿಸಿರುವದು.

(ಬ) ಜಪಾನಕ್ಕೆ ಕಚ್ಚಾ ಸರಕುಗಳ ಕೊರತೆಯಿರುವದು. ಪೂರ್ವಕಾಲದಲ್ಲಿ ಚೀನವೂ ಜಪಾನವೂ ಸ್ವಸಂಪೂರ್ಣ ರಾಷ್ಟ್ರಗಳೆನಿಸಿಕೊಂಡಿದ್ದವು. ಆದರೆ ಆಧುನಿಕ ಸುಧಾರಣೆಯ ಕಾಲದಲ್ಲಿ, ಅದರಲ್ಲಿಯೂ ಸಾಂಪ್ರತ ಕಾಲದ ಪರಾಕ್ರಮಣಶೀಲ ರಾಷ್ಟ್ರಗಳ ದುರಾಕಾಂಕ್ಷೆಯ ಫಲವೆನಿಸಿದ ಮಹಾಯುದ್ಧಗಳ ಯುಗದಲ್ಲಿ, ಆ ದೇಶಗಳು ಬಗೆಬಗೆಯ ಕಚ್ಚಾ ಸರಕುಗಳಿಗಾಗಿ

ಅನ್ಯರ ಮೇಲೆ ಅವಲಂಬಿಸಲೇಬೇಕಾಗಿರುವದು. ಯುದ್ಧೋನ್ಮುಖವಾದ ಅಥವಾ ಸೈನ್ಯ ಬಲವನ್ನು ಅವಲಂಬಿಸಿ ರಾಜ್ಯವಾಳುವ ಯಾವದೊಂದು ರಾಷ್ಟ್ರವು ಬಾಳಿ ಬದುಕಬೇಕಾದರೆ ಅದು ಸ್ವಸಂಪೂರ್ಣವಾದದ್ದಾಗಿ ತನಗೆ ಬೇಕಾಗುವ ಎಲ್ಲ ಸಾಮಗ್ರಿಗಳನ್ನು ತನ್ನಲ್ಲಿಯೇ ಹುಟ್ಟಿಸಿಕೊಳ್ಳುವಷ್ಟು ವಿಶಾಲವೂ ಪ್ರಾಕೃತಿಕ ಪರಿಸ್ಥಿತಿಯುಳ್ಳದ್ದೂ ಆಗಿರಬೇಕು. ಇಲ್ಲವೆ ನೆರೆಹೊರೆಯ ಪ್ರದೇಶಗಳನ್ನು ಆಕ್ರಮಿಸಿಕೊಂಡು ಯುದ್ಧ ಕಾಲದಲ್ಲಿಯೂ ಕೂಡ ತನ್ನ ವ್ಯಾಪಾರ ಉದ್ಯೋಗಗಳಿಗೂ ಆವಶ್ಯಕವಾಗಿರುವ ಕಚ್ಚಾ ಸರಕುಗಳ ಪೂರೈಕೆಗೂ ತೊಂದರೆಯಾಗದಂತೆ ತಕ್ಕ ಸಿದ್ಧತೆ ಮಾಡಿಕೊಂಡಿರಬೇಕು; ಅದಕ್ಕೆ ಬೇಕಾಗುವ ಭೂಮಾರ್ಗ ಜಲಮಾರ್ಗಗಳನ್ನು ಭದ್ರವಾಗಿಟ್ಟುಕೊಳ್ಳುವಷ್ಟು ಬಲಶಾಲಿಯಾಗಿರಬೇಕು. ಗ್ರೇಟಬ್ರಿಟನ್ನವು ಸ್ವಸಂಪೂರ್ಣವಾದ ರಾಷ್ಟ್ರವಲ್ಲ. ಆದರೆ ಅದು ಸಮುದ್ರದ ಮೇಲೆ ಅಖಂಡವಾದ ಪ್ರಭುತ್ವವನ್ನು ಸ್ಥಾಪಿಸಿಕೊಂಡಿದೆ. ಆದುದರಿಂದ ಗ್ರೇಟಬ್ರಿಟನ್ನವು ತನ್ನ ವಿಶಾಲವಾದ ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಿಂದ ಯುದ್ಧಕಾಲದಲ್ಲಿಯೂ ಕೂಡ ಯಾವ ಪ್ರತಿಬಂಧವೂ ಇಲ್ಲದೆ ತನಗೆ ಬೇಕಾಗುವ ಎಲ್ಲ ಸಾಧನಸಾಮಗ್ರಿಗಳನ್ನು ಪಡೆಯುವದು ಸಾಧ್ಯವಾಗಿದೆ. ಜರ್ಮನಿಗೆ ಮಹಾಸಾಗರಗಳ ಮೇಲೆ ಪ್ರಭುತ್ವವೂ ಇಲ್ಲ. ವಿಶಾಲವಾದ ಸಾಮ್ರಾಜ್ಯವೂ ಇಲ್ಲ. ಮತ್ತು ಅದರ ಬಗಲುಗೂಸೆನಿಸುವ ಚಿಕ್ಕ ಪುಟ್ಟ ರಾಷ್ಟ್ರಗಳಿಗೂ ಕೂಡ ಈ ಬಗೆಯ ಅನುಕೂಲತೆಯು ಇಲ್ಲವೇ ಇಲ್ಲ. ಜಪಾನಕ್ಕಂತೂ ಇಂಥ ಸ್ವಸಂಪೂರ್ಣತೆಗೆ ಅದರ ಪ್ರಾಕೃತಿಕ ಪರಿಸ್ಥಿತಿಯೇ ಪ್ರತಿಕೂಲವಾಗಿದೆ. ಆದುದರಿಂದ ಯುದ್ಧಾಸಕ್ತ ಜಪಾನವು ತನಗೆ ಬೇಕಾಗುವ ಸಾಮಗ್ರಿಗಳ ಪೂರೈಕೆಯಾಗಬಹುದಾದ ದೇಶಗಳನ್ನು ಆಕ್ರಮಿಸಿಕೊಂಡ ಹೊರತು ಅನ್ಯ ಮಾರ್ಗವೇ ಉಳಿದಿಲ್ಲ. ಶಾಂತತೆಯ ಸಮಯದಲ್ಲಿ ವ್ಯಾಪಾರದ ದೃಷ್ಟಿಯಿಂದ ಇಂಥ ದೇಶಗಳು ಜಪಾನಕ್ಕೆ ಆ ಸಾಮಗ್ರಿಗಳನ್ನು ಒದಗಿಸಬಹುದು. ಆದರೆ ಯುದ್ಧಕಾಲದಲ್ಲಿ ಅದು ಸಾಧ್ಯವಾಗಲಾರದು. ಯುದ್ಧಕಾಲದಲ್ಲಿ ಅತ್ಯಾವಶ್ಯಕವಾಗಿ ಬೇಕೇಬೇಕೆನ್ನಿಸುವ ಇಂಥ ಕೆಲವು ಸಾಮಗ್ರಿಗಳ ವಿಷಯದಲ್ಲಿ ಜಪಾನದ ಸ್ಥಿತಿಗತಿಗಳು ಹೇಗಿವೆಯೆಂಬದನ್ನು ನಿರೀಕ್ಷಿಸೋಣ.

(೧) **ಆಹಾರ ಸಾಮಗ್ರಿಗಳು**— ಈ ವಿಷಯದಲ್ಲಿ ಜಪಾನವು ಸ್ವಸಂಪೂರ್ಣವೆನಿಸಿಕೊಳ್ಳಬಹುದು. ಏಕೆಂದರೆ ಮಂಚುಕೂವೊ, ಫೊರ್ಮೊಸಾ ಕೋರಿಯಾಗಳನ್ನು ಒಳಗೊಂಡ ಜಪಾನಕ್ಕೆ ಅಕ್ಕಿ, ಸೊಯಾಬೀನ ಸಕ್ಕರೆ ಮೊದಲಾದ ಸಾಮಗ್ರಿಗಳಿಗಾಗಿ ಪರರ ಮೇಲೆ ಅವಲಂಬಿಸುವ ಕಾರಣವಿಲ್ಲ. ಫೋರ್ಮೊಸಾ ಕೋರಿಯಾಗಳಲ್ಲಿ ಅಕ್ಕಿ ಸಕ್ಕರೆಗಳು ವಿಪುಲವಾಗಿ ಹುಟ್ಟುವವು.

ಮತ್ತು ಮಂಚುಕೂವೊದಲ್ಲಿ ಸೋಯಾಬೀನವು ಸಮೃದ್ಧವಾಗಿ ಬೆಳೆಯುವದು. ಜಪಾನದ ಅತಿ ಮಹತ್ವದ ಆಹಾರ ಸಾಮಗ್ರಿಯಾದ ಸೋಯಾಬೀನಕ್ಕಾಗಿಯೇ ಅದು ಮಂಚುಕೂವೊವನ್ನು ಆಕ್ರಮಿಸಿಕೊಂಡಿತೆಂಬದನ್ನು ಮರೆಯುವಂತಿಲ್ಲ.

(೨) **ಕಬ್ಬಿಣ**— ಈ ವಿಷಯದಲ್ಲಿ ಜಪಾನವು ತೀರ ಪಶಾವಲಂಬಿಯಾಗಿದೆ. ಜಪಾನ ಸರಕಾರದ ವರದಿಯ ಮೇರೆಗೆ ೧೯೩೭ನೆ ಇಸ್ವಿಯಲ್ಲಿ ಅದು ನೂರರಲ್ಲಿ ೩೩ ರಷ್ಟು ಕಬ್ಬಿಣವನ್ನೂ ೨೩ ರಷ್ಟು ಬೀಡನ್ನೂ ೫೦ ರಷ್ಟು ಕಬ್ಬಿಣದ ಚಿಲ್ಲರ ಸಾಮಾನುಗಳನ್ನೂ ಪರದೇಶದಿಂದ ತರಿಸಿಕೊಂಡಿತ್ತೆಂದು ಗೊತ್ತಾಗಿದೆ. ಜಪಾನವು ತನಗೆ ಬೇಕಾಗುವ ಕಬ್ಬಿಣದಲ್ಲಿ ಕೆಲವು ಅಂಶವನ್ನು ಮಂಚುಕೂವೋದಿಂದ ಪಡೆಯಬಹುದಾಗಿದ್ದರೂ ಅಲ್ಲಿ ದೊರೆಯುವ ಅದುರಿನಲ್ಲಿ ನೂರಕ್ಕೆ ೩೦ ರಷ್ಟು ಮಾತ್ರ ಕಬ್ಬಿಣವು ಹೊರಡುವದರಿಂದ ಅದು ಕಡಿಮೆತರಗತಿಯದೆನಿಸಿಕೊಂಡಿದೆ. ಮತ್ತು ಕಬ್ಬಿಣವು ದೊರೆಯುವ ಪ್ರದೇಶದಲ್ಲಿ ಅದನ್ನು ಕರಗಿಸಲಿಕ್ಕೆ ಬೇಕಾಗುವ ಕಲ್ಲಿದ್ದಲಿಯು ದೊರೆಯುವದಿಲ್ಲ. ಒಟ್ಟಿಗೆ ಯುದ್ಧಕಾಲದಲ್ಲಿ ಜಪಾನವು ತನಗೆ ಬೇಕಾಗುವ ಕಬ್ಬಿಣವನ್ನು ಕೆಲಮಟ್ಟಿಗೆ ಪೂರೈಸಿಕೊಳ್ಳಬಹುದೆಂದು ಕಲ್ಪಿಸಿಕೊಳ್ಳಬಹುದಾದರೂ ಇದಕ್ಕಾಗಿ ಜಪಾನವು ತಕ್ಕಷ್ಟಕ್ಕಿಂತ ಹೆಚ್ಚು ವೆಚ್ಚ ಮಾಡಬೇಕಾಗುವದು. ಏನೇ ಇದ್ದರೂ ಜಪಾನವು ತನಗೆ ಬೇಕಾಗುವ ಕಬ್ಬಿಣವನ್ನು ದೊರಕಿಸುವದಕ್ಕಾಗಿ ದಕ್ಷಿಣದ ನಾಡುಗಳನ್ನು ಆಕ್ರಮಿಸಿಕೊಳ್ಳಲೇ ಬೇಕೆನ್ನುವ ಸಂದರ್ಭವೇನೂ ಇಲ್ಲ.

(೩) **ರಬ್ಬರು**— ಆಧುನಿಕ ಯುದ್ಧ ಸಾಮಗ್ರಿಗಳಲ್ಲಿ ರಬ್ಬರಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಯಾಕೆಂದರೆ ಎಲ್ಲ ಬಗೆಯ ವಿದ್ಯುದ್ಯಂತ್ರಗಳಿಗೆ ಈ ರಬ್ಬರಿನ ಒಂದಿಲ್ಲೊಂದು ಪ್ರಕಾರವು ಬೇಕೇಬೇಕು. ಜಪಾನದಲ್ಲಿ ರಬ್ಬರು ಹುಟ್ಟುವದೇ ಇಲ್ಲ. ಜಗತ್ತಿಗೆ ಬೇಕಾಗುವ ರಬ್ಬರಿನ ಬಹುಭಾಗವು ನೆದರ್ಲಂಡ ಈಸ್ಟ ಇಂಡಿಯನ್ ದ್ವೀಪಗಳು ಮಲಾಯಾ ಇವುಗಳಿಂದಲೂ ಅಲ್ಪಸ್ವಲ್ಪ ಭಾಗವು ಇಂಡೋ ಚಾಯಿನಾ ಥಾಯಲಂಡ ಸಿಂಹಲ ದ್ವೀಪಗಳಿಂದಲೂ ಪೂರೈಸಲ್ಪಡುವದು. ಕೃತ್ರಿಮ ರಬ್ಬರಿನ ಹುಟ್ಟುವಳಿಯ ತೀರ ಅಲ್ಪ ಪ್ರಮಾಣದಿಂದಾಗುವದು. ಹೀಗಿರುವದರಿಂದ ಜಪಾನವು ತನಗೆ ಬೇಕಾಗುವ ರಬ್ಬರನ್ನು ದೊರಕಿಸುವದಕ್ಕಾಗಿ ಮಲಾಯಾ ನೆದರ್ಲಂಡ ಈಸ್ಟ ಇಂಡಿಯನ್ ದ್ವೀಪಗಳನ್ನು ಆಕ್ರಮಿಸಿಕೊಳ್ಳಬೇಕಾಗಿದೆ. ಇದರಿಂದ ಜಪಾನವು ದಕ್ಷಿಣ ದಿಕ್ಕಿಗೆ ದಂಡೆತ್ತಿ ಹೊರಟಿರುವದರ ಮುಖ್ಯ ಕಾರಣವೇನೆಂಬದು ಸಹಜವಾಗಿ ತಿಳಿಯುವಂತಿದೆ.

(೪) **ಎಣ್ಣೆ**— ಆಧುನಿಕ ಯುದ್ಧದಲ್ಲಿ ಟ್ಯಾಂಕುಗಳೂ ವಿಮಾನಗಳೂ ಅತಿ ಮಹತ್ವದ ಭಾಗವನ್ನು ವಹಿಸುವವು. ಮತ್ತು ಈ ಸಾಧನಗಳು ಎಣ್ಣೆಯಿ

ಲ್ಲದೆ ನಡೆಯಲಾರದೆಂಬುದಂತೂ ಜನಜನಿತವಾಗಿದೆ. ಆದು ಸಾವಿರ ವಿಮಾನಗಳುಳ್ಳ ಒಂದು ವಿಮಾನದಲಕ್ಕೆ ಒಂದು ವರ್ಷಕ್ಕೆ ತೀರ ಕಡಿಮೆಯೆಂದರೆ ೨೦ಲಕ್ಷ ಟನ್ನು ಪೆಟ್ರೋಲು ಬೇಕೆಂದು ಲೆಕ್ಕದಿಂದ ಗೊತ್ತಾಗಿದೆ. ಜಗತ್ತಿನಲ್ಲಿ ಹುಟ್ಟುವ ಒಟ್ಟು ಪೆಟ್ರೋಲಿನಲ್ಲಿ ನೂರರಲ್ಲಿ ೯೦ ರಷ್ಟು ಭಾಗವು ಅಮೇರಿಕಾ, ರಶಿಯಾ, ಇರಾಣ, ಇರಾಕಗಳಿಂದ ಬರುವದು. ಆದುದರಿಂದ ಅಚ್ಚಿನ ರಾಷ್ಟ್ರಗಳು ರಶಿಯವನ್ನು ಆಕ್ರಮಿಸಿಕೊಂಡ ಹೊರತು ಜಪಾನಕ್ಕೆ ಯುದ್ಧವನ್ನು ಮುಂದುವರಿಸುವದು ಅಸಾಧ್ಯವಾಗಿದೆ. ಇನ್ನುಳಿದ ಅಲ್ಪ ಸ್ವಲ್ಪ ಎಣ್ಣೆಯು ನೆದರ್ಲಂಡ ಈಸ್ಟ್ ಇಂಡಿಯನ್ ದ್ವೀಪಗಳು ರೂಮೂನಿಯಾಗಳಿಂದ ಬರುವದು. ಆದುದರಿಂದಲೇ ಜಪಾನವು ದಕ್ಷಿಣಕ್ಕೆ ದಂಡೆತ್ತಿ ಹೋಗಿ ಆ ದೇಶಗಳನ್ನು ಆಕ್ರಮಿಸಿಕೊಳ್ಳಲು ಹವಣಿಸಿತು.

(೫) **ತವರು**— ಜಪಾನದಲ್ಲಿ ತವರು ಅತ್ಯಲ್ಪ ಪ್ರಮಾಣದಿಂದ ದೊರೆಯುವದು. ಏಶಿಯಾಖಂಡದಲ್ಲಿ ಹೆಚ್ಚು ಪ್ರಮಾಣದಿಂದ ತವರು ದೊರೆಯುವ ದೇಶಗಳೆಂದರೆ ಚೀನ, ನೆದರ್ಲಂಡ, ಈಸ್ಟ್ ಇಂಡಿಯನ್ ದ್ವೀಪಗಳು, ಮಲಾಯಾ. ಇದರಿಂದಲೂ ಜಪಾನವು ದಕ್ಷಿಣ ದಿಕ್ಕಿಗೆ ದಂಡೆತ್ತಿ ಹೊರಟಿದ್ದರ ಇನ್ನೊಂದು ಕಾರಣವನ್ನು ಊಹಿಸಬಹುದು.

(೬) **ಬಾಕ್ಸಾಯಿಟ್** (Bauxite)— ಇದು ಅಲ್ಯುಮಿನಮ್ ವನ್ನು ತಯಾರಿಸುವದಕ್ಕೆ ಬೇಕಾಗುವ ಆವಶ್ಯಕ ಪದಾರ್ಥವು. ಆಧುನಿಕ ರಣಕೋಲಾಹಲದ ಯುಗದಲ್ಲಿ ಯುದ್ಧ ಸಾಧನಗಳನ್ನು ತಯಾರಿಸುವದಕ್ಕೆ ಅಲ್ಯುಮಿನಮ್ಮವು ಅವಶ್ಯವಾಗಿ ಬೇಕೇಬೇಕು. ರಣಭೂಮಿಯಲ್ಲಿ ಮುಖ್ಯ ಕಾರ್ಯಗಳನ್ನು ನಡೆಯಿಸುವ ಹಲವು ಮಹತ್ವದ ಯಂತ್ರಗಳನ್ನು ತಯಾರಿಸುವ ಕಾರ್ಯವು ಅಲ್ಯುಮಿನಮ್ಮಿಲ್ಲದೆ ನಡೆಯಲಾರದು.

ಇಡಿಯ ಜಗತ್ತಿನಲ್ಲಿ ಹುಟ್ಟುವ ಬಾಕ್ಸಾಯಿಟಿನ ಸಂಗ್ರಹವು ಮಾತ್ರ ಏಶಿಯಾಖಂಡದಲ್ಲಿ ಎಂದರೆ ನೆದರ್ಲಂಡ ನುತ್ತು ಈಸ್ಟ್ ಇಂಡಿಯನ್ ದ್ವೀಪಗಳಲ್ಲಿ ಮಾತ್ರ ಉಪಲಬ್ಧವಾಗಿದೆ. ಇದರ ಸಲುವಾಗಿಯೂ ಜಪಾನವು ಈ ಪ್ರದೇಶಗಳ ಮೇಲೆ ದಾಳಿಮಾಡಿದೆಯೆಂದು ಊಹಿಸಬಹುದು.

ಈ ಮೇಲಿನ ವಿವರಣೆಯಿಂದ ಜಪಾನವು ಅನೇಕ ಕಚ್ಚಾ ಸರಕುಗಳಿಗಾಗಿ ಅವುಗಳಲ್ಲಿಯೂ ಆಧುನಿಕ ಯುದ್ಧ ಸಾಮಗ್ರಿಗಳಲ್ಲಿ ಅತ್ಯವಶ್ಯವೆನಿಸುವ ಎಣ್ಣೆ, ರಬ್ಬರು, ತವರು ಮತ್ತು ಬಾಕ್ಸಾಯಿಟ ಇವುಗಳಿಗಾಗಿ ತೀರ ಪರಾಪಲಂಬಿಯಾಗಿದೆ. ಆದುದರಿಂದ ಅದು ತನ್ನ ಪರಾಕ್ರಮಣ ಧೋರಣೆಯನ್ನು ಬಿಟ್ಟು ಬಿಡಬೇಕು, ಇಲ್ಲವೆ ಈ ವಸ್ತುಗಳು ದೊರೆಯುವ ಪ್ರದೇಶಗಳನ್ನು ತನ್ನ ಅಂಕಿತದಲ್ಲಿ ತಂದು

ಕೊಳ್ಳಬೇಕು, ಎಂಬ ಪರಿಸ್ಥಿತಿಯುಂಟಾಗಿದೆ. ಏಶಿಯಾ ಖಂಡದೊಳಗಿನ ಮಲಾಯಾ ನೆದರ್ಲಂಡ ಮತ್ತು ಈಸ್ಟ ಇಂಡಿಯನ್ ದ್ವೀಪಗಳು ಇವುಗಳಲ್ಲಿಯೇ ಈ ಸಾಮಗ್ರಿಗಳು ಹೆಚ್ಚಾಗಿ ದೊರೆಯುವವು. ಜಪಾನವು ಈ ಪ್ರದೇಶಗಳನ್ನು ಆಕ್ರಮಿಸುವದಕ್ಕಿಂತ ಮೊದಲು ಅಮೇರಿಕೆಯ ವಶದಲ್ಲಿರುವ ಫಿಲಿಪಾಯಿನ ದ್ವೀಪಗಳನ್ನು ಆಕ್ರಮಿಸಿಕೊಳ್ಳಬೇಕಾಯಿತು.

ಮೂರನೆಯ ಭಾಗ–ಉಪಸಂಹಾರ

೧೯ನೆಯ ಶತಮಾನದ ಮಧ್ಯಭಾಗದಲ್ಲಿ ಆಧುನಿಕ ಯುರೋಪ ಖಂಡದ ಭೌತಿಕ ಜೀವನದ ಪ್ರಗತಿಪಥದಲ್ಲಿ ಆಕಸ್ಮಿಕ ಬದಲಾವಣೆಯಾಗಿ ಕೇವಲ ಖಡ್ಗದ ಬಲದಿಂದಲೇ ಸಾಮ್ರಾಜ್ಯವನ್ನು ಕಟ್ಟಿ ಆಳಬಹುದೆಂಬ ಭಾವನೆಯುಳ್ಳ ಜನ-ಸಮೂಹವೊಂದು ಉದ್ಭವಿಸಿತು. ಮುಂದಿನ ಐವತ್ತು ವರ್ಷಗಳಲ್ಲಿ ಹಲವು ಸಾರಿ ಯುರೋಪದೊಳಗಿನ ಬೇರೆ ಬೇರೆ ರಾಷ್ಟ್ರಗಳ ತಿಕ್ಕಾಟವುಂಟಾಗುವ ಮಹಾ-ಯುದ್ಧದಂಥ ಪ್ರಕ್ಷುಬ್ಧ ವಾತಾವರಣವುಂಟಾಗುವದಕ್ಕೆ ಈ ಕೆಟ್ಟ ಭೌತಿಕವಾದದ ಜನಾಂಗವೇ ಕಾರಣವೆನಿಸಿತು. ಮತ್ತು ಅನಿವಾರ್ಯವಾಗಿ ಪರಾಕ್ರಮಣ ಶೀಲವಾಗಿ ಸಾಮ್ರಾಜ್ಯ ಸ್ಥಾಪನೆಯ ಲಾವಸೆಯು ಅವರಲ್ಲಿ ಹುಟ್ಟಿ ಬೆಳೆದು ನೆಲೆಗೊಂಡಿತು. ಜನಸಂಖ್ಯೆಯ ಬೆಳವಣಿಗೆ, ಕಚ್ಚಾಸರಕುಗಳ ಅಭಾವ ಈ ಎರಡು ಸಮಸ್ಯೆಗಳು ಈ ಕಾಲಾವಧಿಯಲ್ಲಿಯೇ ಏಶಿಯಾ ಖಂಡದಲ್ಲಿಯ ಜಪಾನವನ್ನೂ ಇದ್ದಂತೆ ಇರಗೊಡಲಿಲ್ಲ. ಮತ್ತು ತನ್ನ ಕೈಗಾರಿಕೆಯನ್ನು ಬೆಳಿಸಿಕೊಂಡು ಮತ್ತು ವಸಾಹತುಗಳನ್ನು ಹುಡುಕಿಕೊಂಡು ಜಪಾನವು ತನ್ನ ಮುಂದಿರುವ ಸಮಸ್ಯೆಯನ್ನು ಬಿಡಿಸಿಕೊಳ್ಳಬಹುದಾಗಿತ್ತು. ಆದರೆ ಅದರ ಪರಾಕ್ರಮಣಶೀಲವು ಇಂಥ ಸುಕರವಾದ ಮತ್ತು ಸಾವಕಾಶವಾಗಿ ಸಾಧಿಸಬಹುದಾದ ಶಾಂತಿ ಮಾರ್ಗದಲ್ಲಿ ಸಾಗ-ಗೊಡದೆ ರಣರಂಗದಲ್ಲಿಳಿದು ಅತಿ ತೀವ್ರವಾಗಿ ತನ್ನ ಉದ್ದೇಶವನ್ನು ಸಾಧಿಸಿಕೊಂಡು ಬಿಡಬೇಕೆಂಬ ದೂರಾಶೆಗೆ ಎಳೆದೊಯ್ದು ಬಿಟ್ಟಿತು. "ಮೈಯಲ್ಲಿ ಕಸುವಿದ್ದವನು ಬೇಕಾದದ್ದನ್ನೆಲ್ಲ ಆಕ್ರಮಿಸಬಹುದು" "ಬಲಶಾಲಿಯಾದವರಿಗೆ ಜಗತ್ತೆಲ್ಲ ಬಗ್ಗಿ ನಡೆಯಬೇಕು; ಅವರಿಗೆ ಬೇಕಾದ್ದನ್ನೆಲ್ಲ ಕೊಡಬೇಕು" ಎಂಬದು ಜಪಾನಿಗಳ ಮತ್ತು ಜರ್ಮನ್ ನಾಯಿಗಳ ಹೇಳಿಕೆ. ಈ ಅವರ ದುರಾಶೆ ದುರಾಕಾಂಕ್ಷೆಗಳಿಗೆ ಕಾರಣವಾಗಿರುವ ತತ್ವಪ್ರತಿಪಾದನೆಯನ್ನು ಜಗತ್ತು ಸಹಿಸಲಾರದೆಂಬದು ಅವರ ತಿಳಿವಳಿಕೆಯಲ್ಲಿರಬೇಕು. ಇಂದು ಅಮೇರಿಕಾ, ಚೀನ, ರಶಿಯಾ, ಬ್ರಿಟಿಷ ಸಾಮ್ರಾಜ್ಯಕ್ಕೊಳಗಾದ ಹಲವು ದೇಶಗಳು, ಇವೆಲ್ಲ ಒಂದಾಗಿ ಒಮ್ಮನಸ್ಸಿನಿಂದ ಅವರ ಈ ತತ್ವವನ್ನು ಖಂಡಿಸಲು ಎದುರು ನಿಂತಿರುವವು.

ದುಃಖವಾರ್ತೆ

ಕೈ. ನಾ. ವೆಂಕಟೇಶ ತಿರಕೋ ಕುಲಕರ್ಣಿಯವರು

ನಮ್ಮ ಶಿಕ್ಷಕ ಬಂಧುಗಳಲ್ಲಿ ಗಳಗನಾಥ ಮಾಸ್ತರರನ್ನು ಅರಿಯದವರಿಲ್ಲ ಎಂದರೆ ಅತಿಶಯೋಕ್ತಿಯಾಗದು. ವಿದ್ಯಾಖಾತೆಗೂ ಅವರಿಗೂ ಅಷ್ಟು ನಿಕಟ ಹಿತ ಸಂಬಂಧವಿದೆ. ಅವರು ಒಬ್ಬ ಒಳ್ಳೆಯ ಟ್ರೇಂಡ ಶಿಕ್ಷಕರು. ಆರಂಭದಲ್ಲಿ ಕೆಲಕಾಲ ಧಾರವಾಡದ ಟ್ರೇನಿಂಗ್ ಕಾಲೇಜದ ಪ್ರ್ಯಾಕ್ಟಿಸಿಂಗ್‌ಸ್ಕೂಲಿನಲ್ಲಿ ಶಿಕ್ಷಕರಾಗಿದ್ದರು. ಆಗಿನ ಟ್ರೇನಿಂಗ ಕಾಲೇಜವು ಕನ್ನಡದ ಸಾಹಿತ್ಯ ಭಕ್ತರನ್ನೂ ಕವಿಗಳನ್ನೂ ಲೇಖಕರನ್ನೂ ಹುಟ್ಟಿಸುವ ಧೋರಣೆಯುಳ್ಳದ್ದಾಗಿದ್ದಿತೆಂದು ಹೇಳುವದುಂಟು. ಶ್ರೀ. ಗಳಗನಾಥರು ಬರೆದ ಕಥೆ ಕಾದಂಬರಿಗಳು ಇಲ್ಲದ ಓದುಬರೆಹವನ್ನು ಬಲ್ಲ ಕನ್ನಡಿಗರ ಮನೆಯಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಸದ್ಬೋಧಚಂದ್ರಿಕೆಯೆಂಬ ಕನ್ನಡ ಮಾಸಪತ್ರಿಕೆಯನ್ನು ಹತ್ತು ಸಾವಿರ ಚಂದಾದಾರರನ್ನು ಕೂಡಿಸಿಕೊಂಡು ಸಾಗಿಸಿದ ಅತುಲ ಶ್ರೇಯಸ್ಸಾಧಕರಿವರು. ಕನ್ನಡ ತಾಯಿಯ ಈ ಬಗೆಯ ಸೇವೆಗಾಗಿ ತಮಗೆ ಅನುವು ದೊರೆಯಬೇಕೆಂದು ಟ್ರೇನಿಂಗ್ ಕಾಲೇಜದಲ್ಲಿ ತಮಗೆ ದೊರೆದ ಕನ್ನಡ ಅಧ್ಯಾಪಕರ ಕೆಲಸವನ್ನೂ ಕೂಡ ಕಡೆಗೆಣಿಸಿ ಸ್ವತಂತ್ರ ಕಾರ್ಯರಂಗಕ್ಕೆ ಇಳಿದ ಧೀರೋದಾತ್ತರಿವರು. ಕೇವಲ ಕನ್ನಡದ ಪ್ರೇಮಕ್ಕಾಗಿ ಕನ್ನಡಿಗರಲ್ಲಿ ವಾಚನಾಭಿರುಚಿಯನ್ನು ಹರಡುವದಕ್ಕಾಗಿ ತಮ್ಮ ಅಪರ ವಯಸ್ಸಿನಲ್ಲಿಯೂ ಪುಸ್ತಕದ ಗಂಟುಗಳನ್ನು ಹೊತ್ತು ಊರೂರು ಅಲೆಯುತ್ತಿರುವ ಈ ಪುಣ್ಯಾತ್ಮರ ಚಿತ್ರವು ಇನ್ನೂ ನಮ್ಮ ಕಣ್ಣ ಮುಂದೆ ಕಟ್ಟಿರುವದು. ಇಂಥ ಧೀರ ಉದಾರ ನಿಸ್ಸೀಮ ಭಾಷಾ ಭಕ್ತರು—ಹತ್ತು ಹತ್ತು, ನೂರು ನೂರು, ಸಾವಿರ ಸಾವಿರ ಜನರು ಉದಯಿಸಿದಾಗಲೆ ಕನ್ನಡ ನುಡಿ ನಾಡುಗಳ ಉದ್ಧಾರವಾಗಬಹುದು. ಅಖಂಡ ಕರ್ನಾಟಕದಿಂದಲೂ ಸನ್ಮಾನ ಪಡೆದು ನಮ್ಮ ಶಾಲಾ ಬಾಲಕ ಬಾಲಿಕೆಯರಿಗೂ ತರುಣ-ತರುಣಿಯರಿಗೂ ಪಂಡಿತ ಪಾಮರರಿಗೂ ವಯೋವೃದ್ಧರಿಗೂ ಭಾಷಾಭಿಮಾನಿಗಳಿಗೂ ಓದಿ ಆನಂದಪಡಲು ತಕ್ಕವಾದ ಹೊಸಬಗೆಯ ಕಥಾ ಸಾಹಿತ್ಯವನ್ನು ಒದಗಿಸಿಕೊಟ್ಟ ಉಜ್ವಲ ಕಥಾಲೇಖಕರಾದ ಮಹಾನುಭಾವರಿವರು. ಇವರ ವಿಯೋಗದಿಂದ ಅಖಿಲ ಕರ್ನಾಟಕಕ್ಕೇ ಅತ್ಯಂತ ವಿಷಾದವಾಗಿದೆ. ಇಂಥ ಸದಾ ಕಾರ್ಯಾಸಕ್ತ ಸ್ವಸಂತುಷ್ಟ ಮಹಾನುಭಾವರ ಶಾಂತದಾಂತ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲೆಂದು ಕೋರುವದು ಕೇವಲ ನಮ್ಮ ಸಮಾಧಾನಕ್ಕಲ್ಲವೇ ?

ಗಂಡುಮಕ್ಕಳ ಟ್ರೇನಿಂಗ್ ಕಾಲೇಜ, ಧಾರವಾಡ
ಸರ್ಟಿಫಿಕೇಟ ಪರೀಕ್ಷೆಯ ಪರಿಣಾಮ ೧೯೪೨.

ಒಟ್ಟು ಗುಣಗಳು ೯೫೦

ನಂ.	ಹೆಸರು	ಗುಣಗಳು	ನಂ.	ಹೆಸರು	ಗುಣಗಳು
	ಡಿ. ಎಸ್. ಬಿ ಧಾರವಾಡ		೨೩	ನ. ರಾ. ಆರೇರ	೪೫೧
೧	ಅ. ರಾ. ಕಿಲ್ಲೇದಾರ	೫೪೬	೨೪	ನಾ. ಲಿ. ಪಾಟೀಲ	೪೭೯
೨	ಬ. ಫ. ತಳವಾರ	೫೨೪	೨೫	ನಿ. ಬಿ. ಬೀರಣ್ಣವರ	೫೬೪
೩	ಬ. ಮ. ಬೆಂತೂರ	೫೧೩	೨೬	ಪ. ಸಿ. ನಾಯಿಕ	೪೬೯
೪	ಬ. ಗು. ಆಲದಕಟ್ಟಿ	೪೪೩	೨೭	ರ. ಶಿ. ಹಿರೇಗೌಡರ	೪೯೧
೫	ಬ. ವೆಂ. ನಾವಳ್ಳಿ	೫೬೦	೨೮	ರಾ. ಎ. ಕಮಡೊಳ್ಳಿ	೫೦೭
೬	ಬಾ. ನ. ಪ್ಯಾಟಿ	೪೪೪	೨೯	ರೇ. ಶಿ. ಪುರಾಣಿಕಮಠ	೪೫೭
೭	ಭೀ. ಹ. ಪಾಟೀಲ	೫೪೧	೩೦	ಶ. ಕೃ. ಕುಲಕರ್ಣಿ	೫೬೬
೮	ದು. ಹ. ಮಾದರ	೪೦೦	೩೧	ಸಿ. ಫ. ಬಡಫಕೀರಪ್ಪನವರ	೫೨೭
೯	ದೇ. ಟಾ. ಲಮಾಣಿ	೪೨೪	೩೨	ಸಿ. ಫ. ಕರೂಡಿ	೪೭೯
೧೦	ಧ. ಪ. ಜವಳಿ	೫೦೦	೩೩	ಶೇ. ಸು. ಬಿದರಹಳ್ಳಿ	೫೩೩
೧೧	ಗು. ಗು. ಚವಟಿ	೫೨೩	೩೪	ಶ್ರೀ. ಅ. ಶೀರನಹಳ್ಳಿ	೫೪೨
೧೨	ಗು. ಲಿ. ತಳವಾರ	೫೩೭	೩೫	ಶ್ರೀ. ಮ. ವನಹಳ್ಳಿ	೪೪೯
೧೩	ಗೋ. ಅ. ಕುರಹಟ್ಟಿ	೪೯೦	೩೬	ಶ್ರೀ. ನಾ. ದೀಕ್ಷಿತ	೬೦೧
೧೪	ಗೌ. ಹ. ಕುಡಚೀಕರ	೫೮೫	೩೭	ಉ. ನ. ಹರಪನಹಳ್ಳಿ	೪೬೩
೧೫	ಹ. ಬೀ. ಮುಂಕಣಿ	೪೬೦	೩೮	ವೀ. ಮ. ಕುಲಕರ್ಣಿ	೫೪೨
೧೬	ಜೀ. ಫ. ತಳವಾರ	೪೭೬		**ಡಿ. ಎಸ್. ಬಿ. ಬೆಳಗಾವಿ**	
೧೭	ಲೀ. ಸಿ. ನಾಯಿಕ	೫೬೫	೩೯	ಅ. ಬ. ತೋಟಗಿ	೫೯೬
೧೮	ಮೋ. ಹು. ಶಿವಮೊಗ್ಗಾ	೪೭೯	೪೦	ಅ. ರಾ. ದಾದಾಗೋಳ	೫೪೭
೧೯	ಮ. ರ. ಮೂಲಂಗಿ	೪೦೩	೪೧	ಅ ಬ. ಬಿಜ್ಜೂರ	೪೫೩
೨೦	ಮ. ಮ. ಭಾವಿ	೫೩೨	೪೨	ಅ. ಸಿ. ಮಾಸ್ತಮರಡಿ	೪೪೩
೨೧	ಮ. ಗೋ. ಸಿಡಿಗಿನಹಾಳ	೫೨೦	೪೩	ಬ. ಫ. ತೋಟಗಿ	೫೧೫
೨೨	ಮ. ಮಾ. ಜೋಶಿ	೫೯೧	೪೪	ಬ. ಸ. ಹೊಳೆಪ್ಪಗೋಳ	೪೯೪

೪೫	ಬ. ಚ. ಕುಂಕೂರ	೪೬೮
೪೬	ಬಾ. ಗು. ಜೋಶಿ	೬೦೪
೪೭	ಬೀ. ನಾ. ಬೆಟಗೇರಿ	೫೧೦
೪೮	ಚಿ. ಮು. ಕೊಟಗಿ	೪೪೪
೪೯	ಫ. ಬ. ಶಿಂತ್ರೆ	೪೪೬
೫೦	ಫ. ಹ. ನಾಯಕರ	೫೨೨
೫೧	ಗ. ರಾ. ಖೆಬೂಡೆ	೩೯೫
೫೨	ಗ. ಬ. ಮಳಗಿ	೪೯೧
೫೩	ಗು. ಸಿ. ಸಿದ್ರಾಮಯ್ಯನ-ಮಠ	೫೧೬
೫೪	ಗೋ. ಬ. ಕುಲಕರ್ಣಿ	೪೪೬
೫೫	ಗೋ. ಫ. ಕೋನೇರಿ	೪೬೭
೫೬	ಇ. ಮೋ. ಕಾಗತಿ	೫೧೩
೫೭	ಕ. ಭೀ. ಕುಲಕರ್ಣಿ	೪೯೭
೫೮	ಕ. ಸ. ಖಡಬಡಿ	೫೦೭
೫೯	ಕೃ. ರಾ. ಜೀವಣ್ಣವರ	೫೩೩
೬೦	ಲ. ಭೀ. ಕಂಚಗಾರ	೪೫೩
೬೧	ಮ. ಭ. ನಾಯಿಕ	೫೫೩
೬೨	ಮ. ರಾ. ಕುಲಕರ್ಣಿ	೪೪೯
೬೩	ಮು. ಫ. ಪಿಂಜಾರ	೫೪೩
೬೪	ನಾ. ಗ. ಘಾಟೆ	೫೪೪
೬೫	ನಿ. ಗ. ಗೌರಿ	೪೪೩
೬೬	ಠಾ. ಹ. ಪತ್ತಾರ	೫೨೧
೬೭	ರಾ. ಪ. ಘಟಕಾಂಬಳಿ	೩೫೭
೬೮	ಸ. ಯ. ಲಚ್ಚವ್ಯ-ನಾಯಕರ	೪೯೦
೬೯	ಸ. ಪ. ಧೂಪ	೪೩೦
೭೦	ಶ. ಫ. ಮಿರಜಕರ	೪೯೧
೭೧	ಶ್ರೀ. ದಾ. ಕುಲಕರ್ಣಿ	೫೧೪
೭೨	ತಿ. ರು. ಗಡದ	೪೫೪
೭೩	ವೀ. ಬ. ಸಿದ್ನಾಳ	೫೪೭
೭೪	ವೀ. ಮ. ಕತ್ತಿ	೪೭೩

ಡಿ. ಎಸ್. ಬಿ. ವಿಜಾಪುರ

೭೫	ಅ. ರಾ. ಕುಲಕರ್ಣಿ	೫೦೧
೭೬	ಅ. ಹ. ಲಮಾಣಿ	೫೪೪
೭೭	ಭೀ. ಬ. ಯಂಕಟಿ	೫೧೨
೭೮	ಭೀ. ಸ. ಡೊಂಬರ	೪೫೦
೭೯	ದಾ. ಬಾ. ಬೆನ್ನೂರ	೪೪೩
೮೦	ಗ. ಅ. ಲೋಕಯ್ಯನವರ	೪೪೫
೮೧	ಗ. ಶ. ಪಾಟೀಲ	೪೫೨
೮೨	ಗೋ. ಹ. ಕುಲಕರ್ಣಿ	೫೦೯
೮೩	ಗೌ. ಚ. ಕಮತಗಿ	೫೩೧
೮೪	ಹ. ಬೀ. ಭೂತಳ	೫೧೪
೮೫	ಕ. ಭೀ. ಗೊಂಗಡಿ	೫೨೫
೮೬	ಲಿ. ಮು. ಚಲವಾದಿ	೪೫೨
೮೭	ಮು. ಮು. ಬಗಲಿ	೫೫೬
೮೮	ಮ. ಶೆ. ಅಂಗಡಿ	೪೪೬
೮೯	ಮು. ವೀ. ಕಲಕೇರಿ	೫೬೭
೯೦	ನಾ. ಪಾ. ಕಾರಕೂನ	೪೭೦
೯೧	ನಾ. ಶಿ. ಸಿಂಪಿ	೬೬೫
೯೨	ರಾ. ಕಾ. ಹೊಲೇರ	೪೬೦
೯೩	ರಾ. ಸ. ಹಬ್ಬು	೬೦೩
೯೪	ರ. ಶಿ. ಪೂಜಾರಿ	೪೩೯
೯೫	ಶಿ. ಬ. ಸಜ್ಜನ	೫೨೬
೯೬	ಶಿ. ಶಿ. ಇಂಗಳೇಶ್ವರ	೫೩೪
೯೭	ಶಿ. ಸಾ. ಗುಳೇದ	೪೪೪
೯೮	ಶಿ. ವಿ. ಹಿರೇಮಠ	೫೧೯
೧೦೦	ಶಿ. ಕ. ಹಂಚಿನಾಳ	೪೫೭
೧೦೧	ಶ್ರೀ. ಗೋ. ಕುಲಕರ್ಣಿ	೪೭೦

೧೦೨ ವಾ. ದಾ. ಕರ್ಜಗಿ ೪೪೯
೧೦೩ ವೀ. ಬ. ಪರಗಿ ೪೨೫

ಡಿ. ಎಸ್. ಬಿ. ಕಾರವಾರ

೧೦೪ ಅ. ಅ. ಭಟ್ಟ ೪೭೭
೧೦೫ ಭ. ವೆ. ಶಿರೋಡಕರ ೪೩೧
೧೦೬ ದ. ಅ. ಮಯೇಕರ ೪೨೫
೧೦೭ ಮಾ. ರಾ. ಐಗಳ ೪೧೪
೧೦೯ ಪ. ವಾ. ಶಟ್ಟ ೪೯೭
೧೧೦ ಪಾ. ಜಿ. ನಾಯಿಕ ೪೩೦
೧೧೧ ರಾ. ಸೋ. ನಾಯಿಕ ೪೭೪
೧೧೩ ಶಾ. ಹೊ. ನಾಯಿಕ ೪೭೦
೧೧೪ ಶೇ. ಮ. ಭಟಕಳ ೪೪೩
೧೧೫ ವಿ. ಕೃ. ರಾಯಕರ ೪೧೬
೧೧೬ ವಿ. ಸ. ಪವಾರ ೪೯೨

ಎಸ್. ಬಿ. ಎಲ್. ಏ. ಮ್ಯು. ಧಾರವಾಡ

೧೧೭ ಗ. ಶಿ. ತುರಮುರಿಮಠ ೪೭೭
೧೧೮ ಲಿ. ವೆ. ಮಾಡೊಳ್ಳಿ ೪೪೧
೧೧೯ ರು. ಫ. ಪಳವಟಿ ೪೪೦
೧೨೦ ವೀ. ಸ. ಜಮ್ಮಿಹಾಳ ೪೪೬
ಎಸ್. ಬಿ. ಎಲ್. ಏ. ಮ್ಯು. ಹುಬ್ಬಳ್ಳಿ
೧೨೧ ಚ. ಸಿ. ಚಿಕ್ಕಮಠ ೪೭೦
೧೨೨ ಕೃ. ಶ್ರೀ. ಕಾಟೋಟಿ ೬೦೯
೧೨೩ ಪು. ಫ. ಎಲೆಸೂರ ೪೬೪
೧೨೪ ಸಿ. ಗ. ಶಿರಹಟ್ಟಿಮಠ ೪೫೫
೧೨೫ ವಿ. ಚ. ಪಾಣಿಗಟ್ಟಿ ೪೫೦
ಎಸ್. ಬಿ. ಎಲ್. ಏ. ಮ್ಯು. ಗದಗ
೧೨೬ ಬ. ಫ. ಸಂಕನಗೌಡರ ೪೭೨
೧೨೭ ಫ. ತೊ. ಕಲ್ಯಾಣಶೆಟ್ಟಿ ೪೬೧
೧೨೮ ಲಿ. ದು. ಸಾಲಮನಿ ೪೫೩
೧೨೯ ಶ. ಅ. ಪಾಟೀಲ ೪೬೪
ಎಸ್. ಬಿ. ಎಲ್. ಏ. ಮ್ಯು. ವಿಜಾಪುರ
೧೩೦ ಚ. ಚ. ಜುಗತಿ ೪೭೬
೧೩೧ ಕಾ. ಮು. ದೀಕ್ಷಿತ ೪೯೭
೧೩೨ ನಿ. ಶಿ. ನಿಂಬಾಳ ೪೪೪
ಎಸ್. ಬಿ ಎಲ್. ಎ. ಮ್ಯು. ಸೊಲ್ಲಾಪುರ
೧೩೩ ವೆಂ. ಗು. ಅಣ್ಣೀಗೇರಿ ೪೩೦
ಎಡೆಡ್ ಪ್ರಾ. ಸ್ಕೂ. ಫೈ. ಹೈ. ಧಾರವಾಡ
೧೩೪ ಬಾ. ನಾ. ಲೋಣಕಡೆ ೪೪೦
೧೩೫ ಶ್ರೀ. ಭೀ. ಕುಲಕರ್ಣಿ ೪೦೦

ಎಡೆಡ್ ಪ್ರಾ. ಕೆ. ಎಲ್. ಈ. ಸೊ. ಧಾರವಾಡ

೧೩೬ ಶಿ. ಮು. ಸುಭೇದಾರ ೪೪೭
ಮಾ. ಎ. ಸೊ. ಸಾರಸ್ವತಪುರ ಧಾರವಾಡ
೧೩೭ ರಾ. ವೆ. ಕುಲಕರ್ಣಿ ೪೯೫
ಬಾ. ಮಿ. ಟೌನ್ ಧಾರವಾಡ
೧೩೮ ಶ್ರೀ. ಯೊ. ಸಕ್ಕರಿ ೪೦೦
ಎ. ಸೋ. ಹುಲಕೋಟ
೧೩೯ ಬ. ಗ. ಸಿದ್ದನಗೌಡರ ೪೩೦
ಎ. ಸೊ. ಹುಬ್ಬಳ್ಳಿ
೧೪೦ ಗ. ಮಾ. ಜಂತಲಿ ೪೭೭
೧೪೧ ರಾ. ಅ. ಉಳ್ಳಿಗಡ್ಡಿ ೪೪೪
೧೪೨ ವಿ. ಕೊ. ಕಮಡೊಳ್ಳಿ ೪೯೧
ಪ್ರಾ. ಶಿ. ಮ. ಹುಬ್ಬಳ್ಳಿ
೧೪೩ ತ. ಮಾ. ಜೋಶಿ ೪೭೦
ಮಾಡೆಲ್ ಸ್ಕೂಲ್ ಹುಬ್ಬಳ್ಳಿ
೧೪೪ ಯ. ಮ. ಜೈನರ ೪೪೯

ಎಡೆಡ್ ಪ್ರಾ. ರಾಚೋಟಿ ಟಂಪಲ್ ಗದಗ

೧೪೫ ಅ. ವೆ. ಕುಲಕರ್ಣಿ ೫೧೯

ಎಡೆಡ್ ಪ್ರಾಯಮರಿ ನ. ೨ ಅಥಣಿ

೧೪೬ ದೇ. ಮೇ. ಮಾರಾಪುರ ೪೫೦

ಎಡೆಡ್ ಪ್ರಾ. ಗ್ರಾ ಸೇ. ಸ. ಮನ್ನೊಳಿ

೧೪೪ ಗ. ಬ. ಅಹಿರಸಂಗ ೫೭೯

ಕುಂದಪನಾಡ ಎನ್ ಪಿ. ಮುಂಡಳ ಅಂಕಲಗಿ

೧೪೯ ರಾ. ಅ. ಅಕ್ಕತಂಗೇರಹಾಳ ೪೪೪

ಎಡೆಡ್ ಕ. ಗರ್ಲ ಸ್ಕೂ. ಜೂಗಳ

೧೫೦ ಸ. ಗೋ. ಜೋಶಿ ೫೧೭

ಎಮ್. ಈ. ಮಿಶನ್ ಧೂಪದಾಳ

೧೫೧ ಯ. ಭೀ. ಹುಣಶ್ಯಾಳ ೪೫೫

ದರ್ಬಾರ ಹೈ. ಪ್ರಾ. ಸ. ವಿಜಾಪುರ

೧೫೨ ಭೀ. ಅ. ಗುಡಿ ೫೫೭

ತಾ|| ೩-೬-೪೨

ಎಡೆಡ್ ಪ್ರಾ. ಸ್ಕೂ. ಸೆಟಲಮೆಂಟ ವಿಜಾಪುರ

೧೫೩ ಅ. ಕ. ಮೇಟಿ ೪೯೬

ಮು. ವಿ. ಮು. ನ. ೩ ಬಾಗಲಕೋಟ

೧೫೪ ಬ. ಖ. ಪತ್ತಾರ ೪೫೯
೧೫೫ ಹ. ನಾ. ಭಾಸಲಾಪುರ ೫೩೧

ಪ್ರಾ. ಶಿ. ಪ್ರ. ಮು. ಬಾಗಲಕೋಟ

೧೫೬ ರಾ. ಕೃ. ಪುರೋಹಿತ ೫೨೪

ಹೊರಗಿನಿಂದ ಪರೀಕ್ಷೆಗೆ ಕುಳಿತವರು

ವಿ. ಎಸ್. ಬಿ. ಧಾರವಾಡ

೧೫೭ ಗ. ಸೊ. ಕೆರೂರ ಪಾಸ

ಡಿ. ಎಸ್. ಬಿ. ವಿಜಾಪುರ

೧೫೮ ಶೇ. ಹ. ಕುಲಕರ್ಣಿ ೪೧೩

ಡಿ. ಎಸ್. ಬಿ. ಧಾರವಾಡ

೧೬೦ ಚ. ಲ. ನಾಯಿಕ ೪೩೫

ಎಸ್. ಬಿ. ಎಲ್. ಏ. ಮ್ಯು. ವಿಜಾಪುರ

೧೬೧ ಬ. ಸಿ. ಪಾಟೀಲ ೪೪೨

(Sd.) **H. S. Torgal,**
ಪ್ರಿನ್ಸಿಪಾಲ
ಟ್ರೇ. ಕಾ. ಫಾರಮೆನ್, ಧಾರವಾಡ.

ಸಾದರ ಸ್ವೀಕಾರ

೧. ಗೃಹ ವಿಜ್ಞಾನ ಶಾಸ್ತ್ರ
೨. ರೋಣ ತಾಲೂಕ ಭೂಗೋಲ
೩. ನವಲಗುಂದ ತಾಲೂಕ ಭೂಗೋಲ
೪. ಗದಗ ತಾಲೂಕ ಭೂಗೋಲ
೫. ಒಗಟಿನ ಮಾಲೆ

ಪ್ರಕಾಶಕರು:
ಪಶುಪತಯ್ಯ
ಚಿನ್ನಯ್ಯಾ
ಶಾಬಾದಿಮಠ
ಬುಕ್‌ಸೇಲರ ಗದಗ

೧೯೪೨ ರ ಎಪ್ರಿಲ್‌ದಲ್ಲಿ ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಆದ 'ಸರ್ಟಿಫಿಕೇಟ' ಪರೀಕ್ಷೆಯಲ್ಲಿ ಪಾರಿತೋಷಕಗಳನ್ನು ಪಡೆದವರು.

ಪಾರಿತೋಷಕದ ಹೆಸರು	ಪಾರಿತೋಷಕ ರೂ. ಆ. ಪೈ.	ಪಡೆದವರು	
ಗಾಯಿಲ್ಸ ಪ್ರಾಯಿಝು— ಶಿಕ್ಷಣದಲ್ಲಿ ಮೊದಲನೆಯ ನಂಬರು ಬಂದುದಕ್ಕಾಗಿ	೧೬—೮—೦	ಎನ್. ಎಸ್. ಸಿಂಪಿ ಡಿ. ಎಸ್. ಬಿ. ವಿಜಾಪುರ	
ಜನರಲ್ ಪ್ರಾಯಿಝು—ಮೊದಲನೆಯದು ಶಿಕ್ಷಣದಲ್ಲಿ ಎರಡನೆಯ ನಂಬರು ಬಂದುದಕ್ಕಾಗಿ	೧೨—೦—೦	೧. ಜಿ.ಎಚ್. ಕುಡಚಿಕರ, ಡಿ.ಎಸ್.ಬಿ. ಧಾರವಾಡ ೨. ಎಸ್.ಕೆ. ಕುಲಕರ್ಣಿ, ಡಿ.ಎಸ್.ಬಿ. ಧಾರವಾಡ ೩. ಪಿ.ಪ್ಹಿ ಶೆಟ್ಟಿ, ಡಿ.ಎಸ್.ಬಿ. ಕಾರವಾರ	ಸಮನಾಗಿ ಹಂಚಲ್ಪಡುವುದು.
ಸರ್ ಜೇಮ್ಸ ಮಾಂಟೇಥ ಪ್ರಾಯಿಝು— ಮೊದಲನೆಯದು—ಕನ್ನಡದಲ್ಲಿ ಮೊದಲನೆಯ ನಂಬರು ಬಂದುದಕ್ಕಾಗಿ	೧೫—೦—೦	ಎನ್. ಎಸ್. ಸಿಂಪಿ, ಡಿ. ಎಸ್. ಬಿ. ಬಿಜಾಪುರ	
ಸರ್ ಜೇಮ್ಸ ಮಾಂಟೇಥ ಪ್ರಾಯಿಝು— ಎರಡನೆಯದು ಕನ್ನಡದಲ್ಲಿ ಎರಡನೆಯ ನಂಬರು ಬಂದುದಕ್ಕಾಗಿ	೧೩—೦—೦	೧. ಎಂ. ಎಂ. ಜೋಶಿ, ಡಿ.ಎಸ್.ಬಿ. ಧಾರವಾಡ ೨. ಎಸ್.ಎನ್. ದಿಕ್ಷಿತ, ಡಿ.ಎಸ್.ಬಿ. ಧಾರವಾಡ	ಸಮನಾಗಿ ಹಂಚಲ್ಪಡುವದು.
ಜನರಲ್ ಪ್ರಾಯಿಝು—ಎರಡನೆಯದು ಗಣಿತ ಮತ್ತು ಶಾಸ್ತ್ರೀಯ ವಿಷಯಗಳಲ್ಲಿ ಮೊದಲನೆಯದು ನಂಬರು ಬಂದುದಕ್ಕಾಗಿ	೧೨—೦—೦	ಎನ್. ಎಸ್. ಸಿಂಪಿ, ಡಿ. ಎಸ್. ಬಿ. ವಿಜಾಪುರ	
ಜನರಲ್ ಪ್ರಾಯಿಝು— ಮೂರನೆಯದು ಚಿತ್ರಕಲೆ ಮತ್ತು ಕೈಕೆಲಸಗಳಲ್ಲಿ ಮೊದಲನೆಯ ನಂಬರು ಬಂದುದಕ್ಕಾಗಿ	೧೨—೦—೦	ಏ.ಪ್ಹಿ. ಕುಲಕರ್ಣಿ ಎಡೆಡ್ ಪ್ರಾ. ಸ್ಕೂ. ರಾಜೋಟಿ ಟೆಂಪಲ್ ಗದಗ	
ಚಾಟಫೀಲ್ಡ ಮೆಮೋರಿಯಲ್ ಪ್ರಾಯಿಝು— ಜನರಲ್ ಪ್ರೊಫಿಸಿಯನ್ಸಿ	೧೬—೦—೦	ಎನ್. ಎಸ್. ಸಿಂಪಿ, ಡಿ. ಎಸ್. ಬಿ. ವಿಜಾಪುರ	

ಕರ್ನಾಟಕ ಎಜ್ಯುಕೇಶನ್ ಬೋರ್ಡಿನ
ಪ್ರಾಥಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜ ಧಾರವಾಡ ಇಲ್ಲಿಯ
ಸರ್ಟಿಫಿಕೇಟ ಪರೀಕ್ಷೆಯ ಪರಿಣಾಮ ೧೯೪೨

ಒಟ್ಟು ಗುಣಗಳು ೯೫೦

ಸಿ. ನಂ.	ಹೆಸರು	ಗುಣಗಳು
೧	ಕೆ. ಜಿ. ಅಕ್ಕಿ	೫೦೪
೨	ವಿ. ಜಿ. ಅಣ್ಣಿಗೇರಿ	೬೨೬
೩	ಜಿ. ಬಿ. ಅರಳಿ	೫೩೯
೪	ಎಸ್. ಬಿ. ಅರಹುಣಸಿ	೪೨೯
೫	ಎಸ್. ಎಸ್. ಬಾಗವಾಡ	೪೬೩
೬	ಕೇ. ಸಿ. ಬಿದರಿ	೫೨೭
೭	ಎನ್. ಸಿ. ಬಿದರಿ	೪೭೪
೮	ಎಮ್. ಸಿ. ಬಿನ್ನಾಳ	೪೪೩
೯	ಎಲ್. ಆರ್. ಬಿಸರಹಳ್ಳಿ	೫೦೩
೧೦	ಎನ್. ಟಿ. ದೇವಾಂಗದ	೫೫೭
೧೧	ಆರ್. ಎಚ್. ಗಿವಾಣಜಿ	೫೬೩
೧೨	ಎಮ್. ಅಯ್. ದೀಕ್ಷಿತ	೫೭೩
೧೩	ಕೇ. ಟಿ. ಗಂಗಳಿ	೫೬೨
೧೪	ಬಿ. ಜಿ. ಗಿರಿಮಠ	೪೬೨
೧೫	ಎಫ್. ಜಿ. ಹರಳಹಳ್ಳಿ	೫೪೦
೧೬	ಎಸ್. ಎಮ್. ಹೆಗಡೆ	೫೪೫
೧೭	ಆರ್. ಕೆ. ಹೊಸಮನಿ	೫೪೫
೧೮	ಎಚ್. ಎಚ್. ಹೊಸಮಠ	೫೯೨
೧೯	ಎಸ್. ಎಸ್. ಹುಲಮನಿ	೫೧೫
೨೦	ಎಸ್. ಎನ್. ಜೋಶಿ	೪೯೩
೨೧	ವ್ಹಿ. ಬಿ. ಕಲ್ಲಾಪುರ	೪೬೯
೨೨	ಎಮ್. ಎಮ್.– ಕಾಮಗೊಂಡ	೫೦೬
೨೩	ಕೆ. ವ್ಹಿ. ಕರ್ಪೂರ	೫೪೪
೨೪	ವ್ಹಿ. ಎಚ್. ಕುಲಿಗೋಡ	೪೯೫
೨೫	ವಾಯ್. ಎಸ್.– ಕುನ್ನೂರ	೫೨೭
೨೬	ಎಸ್. ಎಮ್.– ಮೂಲಿಮನಿ	೪೬೭
೨೭	ಬಿ. ಎಸ್. ಮುರಗೋಡ	೪೭೧
೨೮	ಬಿ. ಎನ್. ಮುತಾಲಿಕ– ದೇಸಾಯಿ	೫೪೬
೨೯	ವ್ಹಿ. ಎಸ್. ನಾಯಿಕ	೪೪೫
೩೦	ಎನ್. ಎಚ್. ನೀಲಗಾರ	೫೦೭
೩೧	ಎಸ್. ವ್ಹಿ. ಪಾಟೀಲ	೪೪೩
೩೨	ವ್ಹಿ. ಜಿ. ಪೇಡ್ನೇಕರ	೪೬೨
೩೩	ಎಸ್. ಬಿ. ಸಂಕಣ್ಣವರ	೪೭೭
೩೪	ಎಚ್. ಜಿ. ದಾಸರ	೪೬೭
೩೬	ಸಿ. ಎಮ್. ಕುಲಕರ್ಣಿ	೬೨೦
೩೭	ಎನ್. ಏ. ಕಾರಕೂನ	೫೭೦
೩೮	ಜಿ. ಎಚ್. ಹೇಜೀಬ	೫೦೨
೩೯	ಎಮ್. ಪಿ. ಜೋಶಿ	೫೬೫

ಹೊರಗಿನಿಂದ ಕುಳಿತವರು

೪೦	ಬಿ. ಪಿ. ಹೊಂಗಲ	೪೧೯
೪೧	ಸಿ. ಆರ್. ಕುಲಕರ್ಣಿ	೪೫೩

ಕೆ. ಎಲ್. ಈ. ಸೊಸಾಯಿಟಿಯ
ಟ್ರೇನಿಂಗ್ ಕಾಲೇಜ ಫಾರ್‌ಮೆನ್ ಬೆಳಗಾಂವಿ ಇಲ್ಲಿಯ
ಸರ್ಟಿಫಿಕೇಟ ಪರೀಕ್ಷೆಯ ಪರಿಣಾಮ ೧೯೪೨

ಒಟ್ಟು ಗುಣಗಳು ೯೫೦

ಸಿ. ನಂ.	ಹೆಸರು	ಗುಣಗಳು	ಸಿ. ನಂ.	ಹೆಸರು	ಗುಣಗಳು
೧	ಎಸ್. ಏ. ಅಲ್ಮೇಡಾ	೪೩೫	೧೮	ಡಿ. ಆರ್. ಕುಲಕರ್ಣಿ	೫೨೦
೨	ಸಿ. ಬಿ. ಐಹೊಳಿ	೫೪೪	೧೯	ಬಿ. ವ್ಹಿ. ಕಲ್ಲಾಳ	೪೯೪
೩	ಬಿ. ಆರ್. ಅಲಗುಂಡಿ	೪೫೨	೨೦	ಸಿ. ಎಸ್. ಕೋರಿ	೫೪೬
೪	ಎಚ್. ಎನ್. ಬಜಂತ್ರಿ	೪೪೩	೨೧	ಎನ್. ಕೆ. ಕುಲಕರ್ಣಿ	೪೫೯
೬	ಆರ್. ಪಿ. ದೊಡ್ಡವಾಡ-ಮಠ	೫೦೫	೨೩	ಎಸ್. ಎಮ್. ಕೊಣ್ಣೂರ	೪೪೧
೭	ಎಸ್. ಕೆ. ಗುರವ	೪೭೧	೨೪	ವಾಯ್. ಸಿ. ಕಮತರ	೪೪೭
೮	ಎಸ್. ಜಿ. ಗೌಡರ	೫೩೬	೨೬	ಕೆ. ಎಮ್. ಮನಗೋಳಿ	೫೪೧
೯	ಪಿ. ಜಿ. ಹೂಗಾರ	೪೭೦	೨೭	ವ್ಹಿ ಆರ್. ನಾಯಿಕ	೫೩೯
೧೦	ಬಿ. ಪಿ. ಹಾರೋಗೊಪ್ಪ	೪೪೩	೨೮	ಎಸ್. ಕೆ. ನಾಯಿಕ	೪೭೭
೧೧	ಸಿ. ಏ. ಹುಂಡೇಕಾರ	೪೪೯	೨೯	ಎಸ್. ಡಿ. ನರಸಣ್ಣವರ	೪೭೯
೧೨	ಪಿ. ಪಿ. ಹಿರೇಮಠ	೪೯೭	೩೦	ಡಿ. ಜೆ. ಪೂಜಾರ	೪೬೭
೧೩	ಎಸ್. ಎಮ್.-ಹೊಟ್ಟಗಿಮಠ	೪೪೩	೩೧	ಬಿ. ಎಸ್. ಪಾಟೀಲ	೪೭೩
೧೪	ಎಸ್. ವ್ಹಿ. ಜೇವೂರ	೫೨೩	೩೨	ಆರ್. ಜೆ. ಪಾರಿಶವಾಡ	೪೪೬
೧೬	ಜಿ. ಎಮ್. ಕಂಬಳೀಮಠ	೪೯೯	೩೪	ಎಸ್. ಎಮ್. ಶಲ್ಲೀಕೇರಿ	೫೨೩
೧೭	ಎಮ್. ವ್ಹಿ. ಕರಡಿ	೪೬೨	೩೬	ಎಸ್. ಜಿ. ತೋಟಗೇರ	೫೪೪
			೩೮	ಆರ್. ಎಲ್. ಯರಗಟ್ಟಿ	೪೪೪

ಉರ್ದು ಬುಕ್ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು

ಮೆ. ಸೆಕ್ರೆಟರಿ ಉರ್ದು ಸ್ಕೂಲ್ ಬುಕ್ ಕಮಿಟಿ ಮುಂಬಯಿ ಅವರಿಂದ ಪ್ರಕಟನೆಗಾಗಿ ಬಂದಿದೆ

ಟಿಪ್ಪಣಿ :— ಪ್ರಾ. ಪ್ರಾಥಮಿಕ; ಮಾ. ಮಾಧ್ಯಮಿಕ; ಟ್ರೇ. ಟ್ರೇನಿಂಗ್; ಶಿ. ಶಿಕ್ಷಕ; ವಿ. ವಿದ್ಯಾರ್ಥಿ; ವಾ. ವಾಚನಾಲಯ; ಶಾ. ಶಾಲೆ

ಅ.ನಂ.	ಪುಸ್ತಕಗಳ ಹೆಸರು ಮತ್ತು ಲೇಖಕರು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂ.
೧	ಕಾಮುಕಿ ಕಿತಾಬ ಮೊದಲನೆಯ ಭಾಗ ಮಿ. ಎಚ್. ವಾಹಿದಾಖಾನಮ್, ೨ನೆಯ ಆ. ೧೯೪೨	ಲೇಖಕಿಯವರು	೦—೩—೦	ಪ್ರಾಥಮಿಕ ಶಿಕ್ಷಣಪದ್ಧತಿಯನುಸಾರ ಪ್ರಾಥಮಿಕ ಶಾಲೆಗಳಲ್ಲಿ ನಿರ್ಣಯಿಸಲಾಗಿದ್ದು ಶಾಲೆಗಳಲ್ಲಿ ಓದಲು ಮಂಜೂರಾಗಿದೆ.
೨	ಕಾಮುಕಿ ಕಿತಾಬ ಎರಡನೆಯ ಭಾಗ	,,	ಸದರ	೦—೪—೦
೩	ಕಾಮುಕಿ ಕಿತಾಬ ಮೂರನೆಯ ಭಾಗ	,,	ಸದರ	೦—೭—೦
೪	ಕಾಮುಕಿ ಕಿತಾಬ ನಾಲ್ಕನೆಯ ಭಾಗ	,,	ಸದರ	೦—೮—೦
೫	ಕಾಮುಕಿ ಕಿತಾಬ ಐದನೆಯ ಭಾಗ	,,	ಸದರ	೦—೮—೦
೬	ಕಾಮುಕಿ ಕಿತಾಬ ಆರನೆಯ ಭಾಗ	,,	ಸದರ	೦—೮—೦
೭	ಕಾಮುಕಿ ಕಿತಾಬ ಏಳನೆಯ ಭಾಗ	,,	ಸದರ	೦—೮—೦
೮	ಕಾಮುಕಿ ಕಿತಾಬ ಎಂಟನೆಯ ಭಾಗ	,,	ಸದರ	೦—೮—೦

ಅ. ನಂ.	ಪುಸ್ತಕಗಳ ಹೆಸರು ಮತ್ತು ಲೇಖಕರು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮುಂಜೂರಿ?
೯	**ಮುಹಮ್ಮದುರ್-ರಸೂಲುಲ್ಲಾಹ್** ಮಿ. ಮಕಬೂಲ್ ಅಹಮ್ಮದ ಸೋರೋಹಿ ೧೩ನೆಯ ಆ. ೧೯೪೧	ಮಕ್ತಬಾಯೆ ಜಾಮೆಅ ದೇಹಲಿ	೧—೦–೦	ಎಲ್ಲ ಸಂಸ್ಥೆಗಳಲ್ಲಿಯೂ ವಿದ್ಯಾರ್ಥಿ ವಾಚನಾಲಯಗಳಿಗೆ
೧೦	**ಮುಖ್ತಸರ-ಜುಗ್ರಾಫಿಯುಯಿ ಜಿಲ್ಲಾ ಬೆಲಗಾವು** ಮಿ. ಮಿರ್ಝಾ ಅಬ್ದುಲ್ಲಾಬೇಗ ಇಸ್ಹಾಕಬೇಗ ನಿರ್ಝಾಮಿ ೬ನೆ ಆ. ೧೯೪೨	ಮೌಲ್ವಿ ಮಹಮ್ಮದ ಮಜೀದ ಹುಸೈನಸಾಹೇಬ	೦—೫–೦	ಪ್ರಾಥಮಿಕ ಶಾಲೆಗಳ ಶಿಕ್ಷಕರ ವಾಚನಾಲಯ- ಗಳಿಗೆ
೧೧	**ರಹನೂಮಾಯಿ ಸೂಜನಕಾರಿ** ಮಿ. ಜಮಿಲಾಬಿ ಏ. ಪಾರಕರ ೧೩ನೆ ಆ. ೧೯೪೧	ಲೇಖಕಿಯರು	೦–೧೨–೦	ಎಲ್ಲ ಸಂಸ್ಥೆಗಳಲ್ಲಿ ವಿದ್ಯಾರ್ಥಿ ವಾಚನಾಲಯಗಳಿಗೆ
೧೨	**ಜದೀದ ಕಾಯಿದಾ** ಮಿ. ಮುನಸಿ ಅಬ್ದುರ್ ರಹಿಮಾನ್ ಅಹಮ್ಮದ ೫ನೆಯ ಆ. ೧೯೪೨	ಲೇಖಕರು	೦—೧–೦	ಪ್ರಾ. ಶಾ. ಗಳಲ್ಲಿಯ ವಿದ್ಯಾರ್ಥಿ ವಾಚನಾಲಯಗಳಿಗೆ

ಪುಸ್ತಕ ಪರಿಚಯ

ಗೃಹವಿಜ್ಞಾನ ಶಾಸ್ತ್ರ

ಅಥವಾ

ಗೃಹಶಿಕ್ಷಣದ ಕೈಗನ್ನಡಿ

ಬರೆಹಗಾರರು :— ಶ್ರೀ. ಬಸವ ಕುಮಾರ ಕೌಜಗೇರಿ.

ಪ್ರಕಾಶಕರು :— ಶ್ರೀ. ಪಶುಪತಯ್ಯಾ ಚಿನ್ನಯ್ಯಾ ಶಾಬಾದಿಮಠ.

ಕ್ರೌನ್ ಆಕಾರದ ೧೫೨ ಪುಟಗಳು (ರಫ್ ಕಾಗದ) ಬೆಲೆ ೦–೮–೦.

ಇದು ಹೆಣ್ಣುಮಕ್ಕಳಿಗಾಗಿ ಬರೆದ ಪುಸ್ತಕ : ಇದರಲ್ಲಿ (೧) ಪಾಕಶಾಸ್ತ್ರ (೨) ಶಾರೀರ ಶಾಸ್ತ್ರ (೩) ಆರೋಗ್ಯ ಶಾಸ್ತ್ರ (೪) ಆಹಾರವಿಜ್ಞಾನ ಶಾಸ್ತ್ರ (೫) ಮರ್ಮಶಾಸ್ತ್ರ (೬) ಗೃಹವೈದ್ಯ ಶಾಸ್ತ್ರ (೭) ಕಲಾತರಂಗದ ವಿಭಾಗ (೮) ಸಂಗೋಪನಶಾಸ್ತ್ರ (೯) ರೋಗಿಗಳ ಉಪಚಾರ ಎಂಬ ಒಂಬತ್ತು ಮುಖ್ಯ ವಿಭಾಗಗಳಿವೆ. ಪ್ರತಿ ವಿಭಾಗದಲ್ಲಿಯೂ ಆಯಾ ವಿಷಯಗಳ ಅಲ್ಪಸ್ವಲ್ಪ ವಿವೇಚನೆ ಇರುವದು. ಇಷ್ಟೊಂದು ಮಹತ್ವದ ವಿಷಯಗಳನ್ನು ಒಂದೇ ಚಿಕ್ಕ ಪುಸ್ತಕದಲ್ಲಿ ಸಂಗ್ರಹಿಸಿ ಹೇಳಲು ಯತ್ನಿಸಿರುವದರಿಂದ ವಿಷಯವಿವೇಚನೆಯು ಸಂಕ್ಷಿಪ್ತವಾಗುವದು ಸಹಜವೇ ಸರಿ. ಪ್ರತಿ ಪುಟದ ತಲೆಯಮೇಲೆ ಒಂದೊಂದು ಒಳ್ಳೆಯ ನೀತಿವಾಕ್ಯವನ್ನು ಸೇರಿಸಲಾಗಿದೆ.

ಪಾಚಕಾಂಗಳೂ (ಪುಟ ೬೯) ಹಸೆ ಕುಂಕುಮ (ಪುಟ ೧೦೬) ಮುಂತಾದ ಮುದ್ರಣದೋಷಗಳು ಕೆಲವಿವೆ.

ಹಲಕೆಲವು ವ್ಯಾಕರಣ ದೋಷಗಳನ್ನು ಅಲ್ಲಲ್ಲಿ ಕಾಣಬಹುದು.

(ಆಕ್ಸಿಜನ್) ಶುದ್ಧಹವೆಯಲ್ಲಿ ನೂರಕ್ಕೆ ೨೦ ಅಥವಾ ೨೬ ಈ ಪ್ರಮಾಣದಲ್ಲಿರುವದು (ಪುಟ ೪೮); (ಹಾವು) ಕಡಿದ ಭಾಗವನ್ನು ಹದನವಾದ ಚಾಕುವಿನಿಂದ ವಿಷ ತೆಗೆಯಬೇಕು. ಇಲ್ಲವೆ ಬೆಡಲ ಗಿಡದ ಎಲೆಯ ರಸ ೨ ತೊಲಿ, ನಾಲ್ಕುಪಾಲು ನೀರು ಸೇರಿಸಿ ಕಲಸಿಡಬೇಕು. ಅದರ ಸೊಪ್ಪನ್ನು ಘಾಯದಮೇಲೆ ಲೇಪಿಸಬೇಕು. (ಪುಟ ೧೦೦–೧೦೧) ಮುಂತಾದ ಕೆಲಕೆಲವು ಮಾತುಗಳಿಗೆ ಸ್ಪಷ್ಟವಾಗಿ ಅರ್ಥವಾಗುವದಿಲ್ಲ.

ಮುಂದಣ ಮುದ್ರಣದಲ್ಲಿ ಇಂಥ ದೋಷಗಳನ್ನು ಸರಿಪಡಿಸಿ ಒಳ್ಳೆಯ ಕಾಗದದಲ್ಲಿ ಮುದ್ರಿಸಿದರೆ ಇಂಥ ಉಪಯುಕ್ತ ವಿಷಯಗಳುಳ್ಳ ಈ ಪುಸ್ತಕವು ಹೆಚ್ಚು ಜನಪ್ರಿಯವಾಗಬಹುದು.

N. V.

ಪ್ರಕಟನೆ

ಈವರ್ಷ ಕನ್ನಡ ವರ್ಥ ಪ್ರಾಯೀಜ ಪರೀಕ್ಷೆಯು ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಬರುವ ಜುಲೈ ತಿಂಗಳ ೨೨, ೨೩, ಮತ್ತು ೨೫ ನೆಯ (ಬುಧವಾರ ಗುರುವಾರ ಶನಿವಾರ) ದಿವಸಗಳಲ್ಲಿ ೧೦ ಗಂಟೆಯಿಂದ ೩ ಗಂಟೆಯ ವರೆಗೆ ನಡೆಯುವದು.

ಟ್ರೇನಿಂಗ್ ಕಾಲೇಜ ಫಾರಮೆನ್
ಧಾರವಾಡ
೧೮-೫-೧೯೪೨

H. S. Torgal
ಪ್ರಿನ್ಸಿಪಾಲ

ಪತ್ರಗಳ ಮುಖ್ಯಾಂಶಗಳು

ಗುಳೇದಗುಡ್ಡ— ಸೇಂಟ ಝೇವಿಯರ್ಸ ಸ್ಕೂಲ್, ಇಲ್ಲಿಯ ವಾರ್ಷಿಕೋತ್ಸವವು ತಾ| ೨೫-೫-೧೯೪೨ ನೆಯ ದಿವಸ ಆನರರಿ ಮ್ಯಾಜಿಸ್ಟ್ರೇಟರಾದ ಶ್ರೀಮಾನ್ ಎನ್. ಪಿ. ಸಿಂಗ್ರಿ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮ್ಯಾನೇಜರರಾದ ಶ್ರೀಮಾನ್ ಜಿ. ಎಫ್. ಡೀಸಾ ಅವರು ಬಾಲಬಾಲಿಕೆಯರಿಗೆ ಸುಮಾರು ೫೦ ರೂ. ಬೆಲೆಬಾಳುವ ಪಾಟಿ ಪುಸ್ತಕ ಮೊದಲಾದವುಗಳನ್ನು ಅಧ್ಯಕ್ಷರ ಹಸ್ತದಿಂದ ಕೊಡಿಸಿದರು. ಇಲ್ಲಿಯ ಎಲ್ಲ ಚಟುವಟಿಕೆಗಳನ್ನು ಕಂಡು ರೆ. ಫಾ. ಮ್ಯಾ. ಸಾಹೇಬರು ಆನಂದಿತರಾಗಿ ಬಾಲಬಾಲಿಕೆಯರಿಗೆ ೫ ರೂ. ಮೆಚ್ಚುಗೆ ಕೊಟ್ಟರು.

ತಿಳಿಸಿದವರು— ಶ್ರೀ. ಹೆಡ್‌ಮಾಸ್ತರ ಸೇಂಟಝೇವಿಯರ್ಸ ಸ್ಕೂಲ್ ಗುಳೇದಗುಡ್ಡ

ಆಲೂರು (ತಾಲೂಕ ಹಾನಗಲ್ಲು)— ತಾರೀಖು ೧೯-೫-೧೯೪೨ ನೆಯ ದಿವಸ ಈ ಭಾಗದ ಶಿ. ಶಿ. ಸಮ್ಮೇಲನವು ಮೆ| ಎಡ್ಮಿನಿಸ್ಟ್ರೇಟಿವ್ಹ ಆಫೀಸರ ಡಿ.ಸ್ಕೂ. ಬೋರ್ಡ ಧಾರವಾಡ ಇವರ ಅಧ್ಯಕ್ಷತೆಯಲ್ಲಿ ನೆರೆವೇರಿತು. ಲೋ.ಬೋ. ಹಾಗು, ಸಮಿತಿ, ಮತ್ತು ವ್ಹಾಲಂಟರಿ ಶಾಲೆಗಳ ಶಿಕ್ಷಕರು ಮಿಲಿತರಾಗಿದ್ದರು. ತಾ. ೨೦-೫-೪೨ ನೆಯ ದಿವಸ ಪಾಲಕರ ದಿನವನ್ನು ಆಚರಿಸಲಾಯಿತು.

ತಿಳಿಸಿದವರು— ಶ್ರೀ. ನಾ ಗು ಸವಣೂರ, ಅ. ಮಾ. ಕ. ಗ. ಶಾ. ಆಲೂರು

ಅನಂತಪುರ (ಬೆಳಗಾವಿ ಜಿಲ್ಲೆ)— ಇಲ್ಲಿಯ ಲೋಕಪ್ರಿಯ ಮಾಸ್ತರರಾದ ಶ್ರೀಮಾನ್ ರಾ. ಕೃ. ಅಯ್ಯಾಚಿತರು ತಾ. ೧೯-೫-೪೨ ನೆಯ ದಿವಸ ಸೇವಾನಿವೃತ್ತರಾದರು. ಈ ಸಮಯದಲ್ಲಿ ಊರ ಹಿರಿಯರೂ ಆ. ಮಾ. ರರೂ. ದೇವರು ಇವರಿಗೆ ಆಯುರಾರೋಗ್ಯಗಳನ್ನು ದಯಪಾಲಿಸಲೆಂದು ಪ್ರಾರ್ಥಿಸಿದರು.

ತಿಳಿಸಿದವರು— ಶ್ರೀ. ಕ. ಗು. ಗೋಂಧಳಿ, ಆ. ಮಾಸ್ತರ

ಕೊಡಗಾನೂರು (ವಿಜಾಪುರ ಜಿಲ್ಲೆ)— ಇಲ್ಲಿಯ ಶಾಲೆಯ ವಾಚನಾಲಯಕ್ಕೆ ಮುದ್ದೇಬಿಹಾಳ ತಾಲೂಕಿನ ಮಾಮಲೇದಾರರಾದ ಮೆಹಬ್ಬಾನ ಕಾಜಿ ಸಾಹೇಬರು ಸಂದರ್ಶನವಿತ್ತು ಸಮಾಧಾನವನ್ನು ವ್ಯಕ್ತಮಾಡಿದರು.

ತಿಳಿಸಿದವರು—ಶ್ರೀ. ಚಿ. ತು. ವಾಳವೇಕರ, ಕಾರ್ಯದರ್ಶಿಗಳು

ನೇಸರಗಿ (ಬೆಳಗಾವಿ ಜಿಲ್ಲೆ)— ಬೆಳಗಾವಿ ಜಿಲ್ಲೆಯಲ್ಲಿ ಕಳೆದ ಎಪ್ರಿಲ್ ತಿಂಗಳಲ್ಲಿ ಆದ ಒಕ್ಕಲತನದ ಒಲವಿನ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಗೆ ಈ ಶಾಲೆಯಿಂದ ಕುಳಿತ ಆರು ವಿದ್ಯಾರ್ಥಿಗಳೆಲ್ಲರೂ ಪಾಸಾದರು. ಇದರ ಶ್ರೇಯಸ್ಸು ಹೆಡ್‌ಮಾಸ್ತರರಿಗೆ ಸಲ್ಲುವದು.

ತಿಳಿಸಿದವರು— ಶ್ರೀ. ಸೋ. ವೀ. ಚೌಬಾರಿ, ಆ. ಮಾ.

ಪಟ್ಟದ ಕಲ್ಲು (ವಿಜಾಪುರ ಜಿಲ್ಲೆ)— ಈ ಊರಲ್ಲಿ ತಾ| ೨೯-೫-೧೯೪೨ ನೆಯ ದಿವಸ ಶ್ರೀಮಾನ್ ಪಾಟೀಲ ನಿಂಗನಗೌಡರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಹಿರಿಯರಾದ ರೈತರು ನೆರೆದಿದ್ದರು. ಶ್ರೀ. ಅಂಗಡಿ ಮಾಸ್ತರರು, ಶ್ರೀ. ಸಾವಳಗಿಮಠ ಮಾಸ್ತರರು, ಡಾ. ಕುರಿ ಅವರು, ಹತ್ತಿಯನ್ನು ಬಿತ್ತಲೆ ಕಾಳುಕಡಿಗಳನ್ನೇ ಹೆಚ್ಚಾಗಿ ಬೆಳೆಯಿಸಬೇಕೆಂದು ಕಳಕಳಿಯಿಂದ ಭಾಷಣ ಮಾಡಿದರು. ಶಾಲೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರು "ಬಾಂಧವರೆ ಬಂದಿಹುದು ಪರೀಕ್ಷೆಯ ಕಾಲ" ಎಂಬ ಪದ್ಯವನ್ನು ಪರಿಣಾಮಕರವಾಗಿ ಅಂದು ತೋರಿಸಿದರು. ಕೊನೆಗೆ ಈಗ ನಡೆದಿರುವ ಯುದ್ಧದಲ್ಲಿ ನಮ್ಮ ಬ್ರಿಟಿಷ ಸರಕಾರಕ್ಕೆ ಜಯವಾಗಲೆಂದು ಎಲ್ಲರೂ ಪ್ರಾರ್ಥನೆ ಮಾಡಿದರು.

ತಿಳಿಸಿದವರು— ಶ್ರೀ. ತು. ಕಾ. ಲಮಾಣಿ, ಆ. ಮಾಸ್ತರ

ಸಾಕ್ಷರಿಗಳಾದ ಪ್ರಬುದ್ಧರಿಗಾಗಿ

ಕೇವಲ ಬಾಯಿಬಡಾಯಿಂದ ಜಪಾನರ ಹಾವಳಿಯನ್ನು ಹಿಮ್ಮೆಟ್ಟಿಸಬಹುದೊ? ಹಾಗಾದರೆ ನಾವೇನು ಮಾಡಬೇಕು?

ಶ್ರೀಮಾನ್ ಎಸ್. ಆರ್. ತಾವಡೆ, ಎಮ್. ಎ., ಎ. ಇ. ಡ. ಭಾ. ಧಾರವಾಡ ಅವರಿಂದ

ನಾವು ನಾಲ್ವತ್ತು ಕೋಟಿ ಜನರಿದ್ದೇವೆ. ಎಲ್ಲರೂ ಒಂದಾಗಿ ಯತ್ನಿಸಿದರೆ ಅದೇನು ಅಸಾಧ್ಯ ವಿಷಯವಲ್ಲ. ಪ್ರತಿ ಗಂಡುಸೂ ಹೆಂಗುಸೂ ನಿರ್ಧಾರಮಾಡಿಕೊಂಡು ಕೆಲಸ ಮಾಡ ಬೇಕು. ಮುಂದೆ ಕೆಲವು ಸಂಗತಿಗಳನ್ನು ಹೇಳಿದೆ. ಅವುಗಳಲ್ಲಿ ನಮಗೆ ಸಾಧ್ಯವಿದ್ದವುಗಳನ್ನು ನಾವು ಮಾಡಬೇಕು.

"ಇಂದು ನಾನು ನನ್ನ ದೇಶಹಿತಕ್ಕಾಗಿ ಯಾವ ಕಾರ್ಯ ವನ್ನು ಮಾಡಬಹುದು?" ಎಂದು ಪ್ರತಿದಿನ ಬೆಳಿಗ್ಗೆ ಎದ್ದ ಕೂಡಲೆ ಆಲೋಚನೆ ಮಾಡಬೇಕು.

ವೈರಿಯು ಮೋಸಗಾರನಿದ್ದಾನೆ. ನಿರ್ದಯನಾಗಿದ್ದಾನೆ. ನಾವು ಅವನ ಹಿಡಿತದಿಂದ ಪಾರಾಗಬೇಕಾಗಿದೆ. ಅದಕ್ಕಾಗಿ ನಾವು ಅಲ್ಪ ಸ್ವಲ್ಪ ಶ್ರಮವಹಿಸಬೇಕಾಗಿದೆ. ಪ್ರತಿಫಲದ ಮಾನದಿಂದ ಈ ಶ್ರಮವು ಅಷ್ಟು ದೊಡ್ಡದೆನಿಸಲಾರದು.

೧. ಧಾನ್ಯಗಳನ್ನೂ ಆಹಾರದ ಪದಾರ್ಥಗಳನ್ನೂ ಹೆಚ್ಚಾಗಿ ಬೆಳೆಯಿರಿ.

ನಮ್ಮಲ್ಲಿ ಗಟ್ಟದ ಮೇಲೆ ಗೋದಿ ಜೋಳಗಳು ಹೆಚ್ಚಾಗಿ ಬೆಳೆಯುವವು. ಗಟ್ಟದ ಕೆಳಗೆ ಹೆಚ್ಚು ಬತ್ತವೂ ಅಲ್ಪಸ್ವಲ್ಪ

ರಾಗಿಯೂ ಬೆಳೆಯುವದು. ಅಕ್ಕಿ, ಗೋದಿ, ಜೋಳಗಳು ನಮ್ಮಲ್ಲಿ ಬೆಳೆದಷ್ಟು ನಮಗೆ ಸಾಲುವದಿಲ್ಲ. ಅಕ್ಕಿಯು ಬ್ರಹ್ಮ-ದೇಶ ಬಂಗಾಲಗಳಿಂದ ನಮ್ಮಲ್ಲಿಗೆ ಬರುವದು. ಬ್ರಹ್ಮದೇಶವು ಈಗ ಹಗೆಗಳ ವಶವಾಗಿದೆ. ಅದಕ್ಕಾಗಿ ರಂಗೂನಅಕ್ಕಿಯು ನಮ್ಮಲ್ಲಿಗೆ ಬರುವದಿಲ್ಲ. ಉಗಿಬಂಡಿ ಮೋಟಾರುಗಳು ಯುದ್ಧದ ಸಾಮಗ್ರಿಗಳನ್ನು ಸಂಗ್ರಹಿಸಲು ತೊಡಗಿರುವವು. ಆದ್ದರಿಂದ ಆಹಾರಸಾಮಗ್ರಿಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವದಕ್ಕೆ ತೊಂದರೆಯಾಗಿದೆ.

ನಾವು ಉಂಡು ಬದುಕಬೇಕಷ್ಟೆ? ಅದಕ್ಕಾಗಿ ನಮಗೆ ಬೇಕಾಗುವ ಧಾನ್ಯವನ್ನು ನಾವೇ ಬೆಳೆಯಬೇಕು. ಸರಕಾರವೂ ನಮಗೆ ನೆರವಾಗುವದು. ಬೀಜ, ಗೊಬ್ಬರ, ದನಗಳು, ಮುಂತಾದವುಗಳನ್ನು ಕೊಂಡುಕೊಳ್ಳಲು ಸರಕಾರದಿಂದ ಹಣದ ಸಹಾಯವು ದೊರೆಯುವದು.

(ಅ) ಗಟ್ಟದ ಮೇಲೆ ಹತ್ತಿಯನ್ನು ಬೆಳೆಯುವದರ ಬದಲು ಧಾನ್ಯವನ್ನು ಬೆಳೆಯುವದು ಒಳಿತು.

ಈಗ,

"ಹತ್ತಿಯನ್ನು ಬಿತ್ತಿದರೆ ಹಾಳಾಗುವಿರಿ.
ಧಾನ್ಯವನ್ನು ಬೆಳೆದರೆ ಹಣವಂತರಾಗುವಿರಿ."

ಎಂಬ ಪರಿಸ್ಥಿತಿ ಬಂದಿರುವದು.

(ಬ) ಹೊಲಕ್ಕೆ ಸಾಕಾದಷ್ಟು ಗೊಬ್ಬರ ಹಾಕಿರಿ.
ಬದುವು ಬದಿಗಳನ್ನು ಸರಿಪಡಿಸಿರಿ.
ಒಳ್ಳೆಯ ಬೀಜಗಳನ್ನು ಬಿತ್ತಿರಿ.

(ಕ) ಬೀಳುಬಿದ್ದ ಭೂಮಿಯನ್ನು ಸಾಗುಮಾಡಿರಿ. ಅಂಥ ಭೂಮಿಯನ್ನು ಸುಧಾರಿಸಲು ಯತ್ನಿಸಿರಿ.

ಸರಕಾರವು ನಮಗೆ ಮುಂದೆ ಹೇಳುವ ರೀತಿಯಿಂದ ನೆರವಾಗುವದು.

(೧) ಕಾಲುವೆಯ ನೀರನ್ನು ಸುಲಭ ಬೆಲೆಗೆ ಒದಗಿಸುವದು.

(೨) ಬೀಜ ಗೊಬ್ಬರಗಳಿಗಾಗಿ ಬಡ್ಡಿಯಿಲ್ಲದೆ ತಗಾಯಿ ಕೊಡುವದು.

(೩) ಬಾವಿ ಕೆರೆಗಳನ್ನು ಕಟ್ಟಲು ಕಡಿಮೆ ಬಡ್ಡಿಯ ತಗಾಯಿ ಕೊಡುವದು.

(೪) ಅದರಂತೆಯೆ ಭೂಮಿಯನ್ನು ಸುಧಾರಿಸಲು ತಗಾಯಿ ಕೊಡುವದು.

(೫) ಧಾನ್ಯ ಗೊಬ್ಬರಗಳನ್ನು ಒಯ್ಯುವದಕ್ಕೆ ವಾಹನ-ಗಳನ್ನು ಒದಗಿಸುವದು.

೨. ಹೆಚ್ಚು ಕಷ್ಟದ ಕೆಲಸಗಳನ್ನು ಮಾಡಿ ಹೆಚ್ಚು ಹಣವನ್ನು ಗಳಿಸಿರಿ.

೩. ಜನರ ಸಂರಕ್ಷಣೆಯ ಕಾರ್ಯಕ್ಕೆ ನೆರವಾಗಿರಿ. ವೈರಿಗಳು ದಾಳಿ ಮಾಡಿದಾಗ ಜನರನ್ನೂ ಅವರ ಸೊತ್ತನ್ನೂ ಸಂರಕ್ಷಿಸಲು ನೆರವಾಗಿರಿ.

೪. ಹಾರಿಕೆಯ ಸುದ್ದಿಗಳನ್ನು ನಂಬಬೇಡಿರಿ.

೫. ಯುದ್ಧದ ಸಲುವಾಗಿ ನಿಮಗೆ ಸಾಧ್ಯವಾದಷ್ಟು ಹಣದ ಸಹಾಯ ಮಾಡಿರಿ. ಸರಕಾರಕ್ಕೆ ಸಾಲಕೊಡಿರಿ.

೬. ಪ್ರವಾಸವನ್ನು ಕಡಿಮೆ ಮಾಡಿರಿ. ಜನರಿಗೆ ಆಹಾರ ಸಾಮಗ್ರಿಗಳನ್ನು ಒದಗಿಸುವದು, ಯುದ್ಧ ಸಾಮಗ್ರಿಗಳನ್ನೂ ಸೈನಿಕರನ್ನೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವದು, ಇವು ಹೆಚ್ಚು ಮಹತ್ವದ ಕಾರ್ಯಗಳು. ನಿಮ್ಮ ಪ್ರವಾಸವು ಇದಕ್ಕಿಂತ ಹೆಚ್ಚಿನದೋ ಹೇಗೆಂಬದನ್ನು ಯೋಚಿಸಿ ನೋಡಿರಿ. ಅಂಥ ಪ್ರಸಂಗವೇ ಇದ್ದು ಪ್ರವಾಸ ಮಾಡುವದಾದರೆ ತೀರ ಸ್ವಲ್ಪ ಸಾಮಾನುಗಳನ್ನು ಸಂಗಡ ಒಯ್ಯಿರಿ.

೭. ಎಲ್ಲಕ್ಕೂ ಮಹತ್ವದ ಮಾತೆಂದರೆ ಹೆದರಬೇಡಿರಿ. 'ಬಂದದ್ದು ಬರಲಿ' ಎಂದು ಗಟ್ಟಿ ಮನಸ್ಸು ಮಾಡಿಕೊಳ್ಳಿರಿ. ಸೈನ್ಯದ ಚಾಲಕರ ಮೇಲೆ ವಿಶ್ವಾಸವಿಡಿರಿ. ಆಪತ್ತು ಒದಗಿದಾಗ ಮನಸ್ಸನ್ನು ಶಾಂತವಾಗಿಟ್ಟುಕೊಳ್ಳಿರಿ. ಯಾಕೆಂದರೆ ಹೆದರಿದವರ ಮೇಲೆ ಹಾವು ಬೀಳುವದು. ಹೆದರಿಕೆಯೇ ಎಲ್ಲ ಆಪತ್ತುಗಳಿಗೆ ಮೂಲಕಾರಣವಾಗಿದೆ. ನಿಮ್ಮ ಹಿತಾಹಿತಗಳಷ್ಟೇ ಅಲ್ಲ, ದೇಶದ ಭವಿತವ್ಯವೇ ನಿಮ್ಮ ಇಂದಿನ ಕಾರ್ಯಗಳನ್ನು ಅವಲಂಬಿಸಿರುವದು.

ಅಖಂಡ ಭರತಖಂಡವು ಯುದ್ಧೋನ್ಮುಖವಾಗಲಿ.

ಹೊಸ ಪದ್ಧತಿಯ ಹಿಂದೀ ಜಮಾಖರ್ಚು ಭಾಗ ೧

(ಮನೆಯ ಜಮಾಖರ್ಚು)

ಶ್ರೀ. ರಾ. ಸಿ. ಸಜ್ಜನ ಇವರು ಹೊಸ ಅಭ್ಯಾಸಪತ್ರಿಕೆಯ ಪ್ರಕಾರ ಈ ಪುಸ್ತಕವನ್ನು ರಚಿಸಿರುವರು. ಸರಕಾರದವರು ಇದನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಟೆಕ್ಸ್ಟಬುಕ್ ಎಂದು ಮುಂಜೂರು ಮಾಡಿರುವರು. ಹುತ್ತು ಸ್ಕೂಲಬೋರ್ಡುಗಳ ಅಧಿಕಾರಿಗಳೂ ಮಾನ್ಯಮಾಡಿದ್ದಾರೆ. ಇದರಲ್ಲಿ ಇಯತ್ತೆವಾರ ಜಮಾಖರ್ಚಿನ ಅಭ್ಯಾಸಕ್ರಮದಂತೆ ಆರಂಭದ ಜಮಾಖರ್ಚು, ಕೀರ್ದಿ, ಖತಾವಣಿ, ಬಾಕಿಗಳ ತಾಳೆ, ಉತ್ಪನ್ನ ಖರ್ಚಿನ ಖಾತೆ, ಅಢಾವೆ, ತೋಂಡಮಿಳವಣಿ ಮತ್ತು ಶಾಲಾ ಸಹಕಾರಿ ಸಂಘದ ಅಂಗಡಿ (ಸೊಸಾಯಿಟಿ) ಯ ಜಮಾಖರ್ಚು ಮುಂತಾದ ವಿಷಯಗಳೂ, ಪ್ರಾಮಿಸರಿ ನೋಟು, ಮನಿಯಾರ್ಡರ, ಇನ್ಸುಅರನ್ಸ, ಚೆಕ್ಕು, ಹುಂಡಿ, ಬಡ್ಡೀ ಆಕರಣೆ ಮೊದಲಾದ ವ್ಯವಹಾರದೊಳಗಿನ ಮಾಹಿತಿಗಳೂ, ಪ್ರಶ್ನಗಳೂ, ಅವುಗಳ ಉತ್ತರಗಳೂ ಕೊನೆಗೆ ಪರೀಕ್ಷೆಯ ಪ್ರಶ್ನಕಾಗದಗಳೂ ಇರುವವು. ಇದು ಈಗಿನ ಪರೀಕ್ಷೆಯ ಪದ್ಧತಿಯಂತೆ ಬರೆದಿರುವದರಿಂದ ಹೆಣ್ಣು ಮಕ್ಕಳ ಮತ್ತು ಗಂಡುಮಕ್ಕಳ ಪ್ರಾ. ಶಾ. ಪ್ರ. ಪ. ಪರೀಕ್ಷೆಯ ಉಮೇದವಾರರಿಗೂ ಬಹು ಉಪಯುಕ್ತವಾದುದಿರುತ್ತದೆ ಆದಕಾರಣ ಎಲ್ಲ ಮಹನೀಯರು ಇದರ ಲಾಭವನ್ನು ಪಡೆಯಬೇಕೆಂದು ಆಶಿಸುತ್ತೇವೆ. **ಬೆಲೆ : ೮ ಆಣೆ**

ಪತ್ತೆ :- **ರಾ. ಸಿ. ಸಜ್ಜನ ಮಾಸ್ತರ,** ಜೋರಾಪುರ ಪೇಟಿ, ವಿಜಾಪುರ.

ಕನ್ನಡ ೫-೬-೭ನೆಯ ಇಯತ್ತೆಯ ವಿದ್ಯಾರ್ಥಿನಿಯರಿಗೆ

ಒಳ್ಳೇ ಸುಸಂಧಿ! ★ **ಸುಲಭ ಬೆಲೆ!!**

ಗೃಹ-ವಿಜ್ಞಾನ-ಶಾಸ್ತ್ರ

ಅಥವಾ

ಗೃಹಶಿಕ್ಷಣದ ಕೈಗನ್ನಡಿ

(ಶ್ರೀ. ಬಸವಕುಮಾರ ಕೃತ)

ಇದು ಶಾಲೋಪಯೋಗಿ ಪುಸ್ತಕವಿದ್ದು ಮುಂಬ್ಯೆ ವಿದ್ಯಾಖಾತೆಯವರಿಂದ ಮಂಜೂರಾಗಿದೆ. ಇದರಲ್ಲಿ ಪಾಕಶಾಸ್ತ್ರ, ಶರೀರಶಾಸ್ತ್ರ, ಆರೋಗ್ಯಶಾಸ್ತ್ರ, ಆಹಾರ ವಿಜ್ಞಾನಶಾಸ್ತ್ರ, ಮರ್ಮಶಾಸ್ತ್ರ, ಗ್ಭಹವೈದ್ಯಶಾಸ್ತ್ರ, ಸಂಗೋಪನಶಾಸ್ತ್ರ ಇವುಗಳ ಮಾಹಿತಿ ಅಲ್ಲದೆ ಇನ್ನೂ ಎಷ್ಟೋ ಪರೀಕ್ಷೆಯ ವಿಷಯಗಳಿವೆ. ಪ್ರಸಿದ್ಧ ಸಾಹಿತಿಗರೂ, ಡಾಕ್ಟರೂ, ಪಂಡಿತರೂ ಸಹ ಇದು "ಪ್ರತಿಯೊಬ್ಬರು ಮನೆಯಲ್ಲಿ ಸಂಗ್ರಹಿಸಲು ಯೋಗ್ಯವಾಗಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.

ಬೆಲೆ ೦—೮—೦

ಪ್ರಕಾಶಕರು

ಪಶುಪತಯ್ಯಾ ಚಿನ್ನಯ್ಯಾ ಶಾಬಾದಿಮಠ ಬುಕ್ ಡಿಪೋ, ಗದಗ.

Reg. No. B. 3691

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ತಮ್ಮ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕವಿಾಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಅರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೬ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು

ಜುಲೈ ೧೯೪೨ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಲೋಕಶಾಲೆಗಳು	೧
೨.	ಶಾರೀರಿಕ ಶಿಕ್ಷಣ	೪
೩.	ಕನ್ನಡ ಶಿಲ್ಪಿ ಸರ್ ವಿಶ್ವೇಶ್ವರಯ್ಯನವರು	೯
೪.	ಅಮಾವಾಸ್ಯೆಯ ರಾತ್ರಿಯಲ್ಲಿ	೧೩
೫.	ಸಿಂಹಲದ್ವೀಪ	೧೪
೬.	ಪ್ರಾಕ್ಕಾವ್ಯಮಾಲಿಕೆ (ಪುಸ್ತಕ ಪರಿಚಯ)	೧೭
೭.	ಪ್ರಕಟನೆ (ಕನ್ನಡ ವರ್ಧಪ್ರಾಯೋಜ ಪರೀಕ್ಷೆ ೧೯೪೨)	೨೩
೮.	ಮುಂಜೂರಾದ ಕನ್ನಡ ಪುಸ್ತಕಗಳು	೨೫
೯.	ಪತ್ರಗಳ ಮುಖ್ಯಾಂಶಗಳು	೨೭
೧೦	ಹೆಣ್ಣು ಹಣ್ಣಲ್ಲ ; ಗಂಡು ಗುಂಡಲ್ಲ (ಪ್ರಬುದ್ಧರಿಗಾಗಿ)	೪೦

Printed by V. Y. Jathar at the Karnatak Printing Works, Dharwar and Published by H. S. Torgal, Esq. M. A., Principal Training College For-Men, Dharwar, at his Office.

Reg. No. B. 3691

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕಮಿಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯುಮಿಸಿರುವರು. ಪ್ರತಿ ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ ಕೋಶಗಳನ್ನೂ ಮಹತ್ತದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು

ಜುಲೈ ೧೯೪೨ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಲೋಕಶಾಲೆಗಳು	೧
೨.	ಶಾರೀರಿಕ ಶಿಕ್ಷಣ	೪
೩.	ಕನ್ನಡ ಶಿಲ್ಪಿ ಸರ್ ವಿಶ್ವೇಶ್ವರಯ್ಯನವರು	೯
೪.	ಅಮಾವಾಸ್ಯೆಯ ರಾತ್ರಿಯಲ್ಲಿ	೧೩
೫.	ಸಿಂಹಲದ್ವೀಪ	೧೪
೬.	ಪ್ರಾಕ್ಕಾವ್ಯಮಾಲಿಕೆ (ಪುಸ್ತಕ ಪರಿಚಯ)	೧೭
೭.	ಪ್ರಕಟನೆ (ಕನ್ನಡ ವರ್ಷಪ್ರಾಯಿಜ ಪರೀಕ್ಷೆ ೧೯೪೨)	೨೩
೮.	ಮುಂಜೂರಾದ ಕನ್ನಡ ಪುಸ್ತಕಗಳು	೨೫
೯.	ಪತ್ರಗಳ ಮುಖ್ಯಾಂಶಗಳು	೨೭
೧೦	ಹೆಣ್ಣು ಹಣ್ಣಲ್ಲ ; ಗಂಡು ಗುಂಡಲ್ಲ (ಪ್ರಬುದ್ಧರಿಗಾಗಿ)	೪೦

ನಾಶಿಕ ಚಂದಾ ಹಣ ಎರಡು ರೂಪಾಯಿಗಳು ಮಾತ್ರ

Printed by V. Y. Jathar at the Karnatak Printing Works, Dharwar and Published by H. S. Torgal, Esq. M. A., Principal Training College For-Men, Dharwar, at his Office.

ಪುರೋಗಾಮಿ ಶಿಕ್ಷಕ

★

(ಲೇಖಕರು : ಶ್ರೀ. ಎಸ್. ಬಿ. ಗಜೇಂದ್ರಗಡ, ಬಿ.ಎ., ಬಿ.ಟಿ., ವಿಜಾಪುರ)

ಪ್ರಾಥಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ವರವ ದೈನಂದಿನ ಅಭ್ಯಾಸದಲ್ಲಿ— ಕಲಿಸುವ ಕಾರ್ಯದಲ್ಲಿ ಅತ್ಯಂತ ಉಪಯುಕ್ತವಾಗುವಂತೆ, ವಿದ್ಯಾಖಾತೆಯ ಅಭ್ಯಾಸಪತ್ರಿಕೆಯನ್ನು ಸಂಪೂರ್ಣವಾಗಿ ಅನುಸರಿಸಿ ಬರೆಯಲ್ಪಟ್ಟಿದೆ.

ಪುಟಗಳು ೩೩೬ ★ **ಬೆಲೆ ೨-೪-೦**

ಇದು ಮೂರು ಮುಖ್ಯ ಭಾಗಗಳನ್ನೊಳಗೊಂಡಿದೆ:

(೧) ಶೈಕ್ಷಣಿಕ ಮನಃಶಾಸ್ತ್ರವನ್ನು ೧೫೫ ಪುಟಗಳಲ್ಲಿ ವಿವೇಚಿಸಿದೆ. (೨) ಶಿಕ್ಷಣಶಾಸ್ತ್ರದ ಮೂಲತತ್ವಗಳನ್ನೂ ಪ್ರತ್ಯಕ್ಷವಾಗಿ ಕಲಿಸುವ ಶಾಸ್ತ್ರೀಯ ಪದ್ಧತಿಯನ್ನೂ ವಿವರಿಸಿದೆ. (೩) ಆಧುನಿಕ ಶಿಕ್ಷಣ ಕ್ರಮದ ಮಹತ್ವದ ಅಂಗಗಳಾದ ಶಾರೀರಿಕ ಶಿಕ್ಷಣ, ಶಿಸ್ತು, ಸಂಘಟನೆ ಮೊದಲಾದ ವಿಷಯಗಳನ್ನು ತಿಳಿಸಿದೆ.

ಶಿಕ್ಷಣದ ಸರ್ವಾಂಗಗಳನ್ನೂ ಸುಲಲಿತವಾದ ಭಾಷೆಯಲ್ಲಿ ಒತ್ತಟ್ಟಿಗೇ ಸುಂದರವಾಗಿ ಮಂಡಿಸಿದ ಶಾಸ್ತ್ರೀಯ ಗ್ರಂಥವು

ಕನ್ನಡದಲ್ಲಿ ಇದೊಂದೇ!

★

ಕನ್ನಡ-ಇಂಗ್ಲಿಷ್ ಶಾಲೆ-ಕಾಲೇಜುಗಳ ಎಲ್ಲಾ ಪಠ್ಯಪುಸ್ತಕಗಳೂ ಇತರ ಪುಸ್ತಕ ಸ್ಕೂಲ್ ಸ್ಟೇಷನರಿ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ.

ಸ್ಟೂಡಂಟ್ಸ್ ಓನ್ ಬುಕ್ ಡಿಪೋ, ಧಾರವಾಡ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ಸಂಪುಟ ೮೧	ಜುಲೈ ೧೯೪೨	ವರ್ಷ ೧೫. ಸಂ. ೪

ಲೋಕ ಶಾಲೆಗಳು

ಮುಂಬಯಿ ಇಲಾಖೆಯಲ್ಲಿ ಲೋಕಶಾಲೆಗಳನ್ನು ಸ್ಥಾಪಿಸುವ ವಿಷಯವಾಗಿ ಸರಕಾರದವರು ಮೊನ್ನೆ ಮೊನ್ನೆ ಒಂದು ಪ್ರಕಟನೆಯನ್ನು ಹೊರಡಿಸಿ ಲೋಕ ಶಿಕ್ಷಣಕಾರ್ಯದಲ್ಲಿ ತೊಡಗಿದ ಜನಸಮೂಹದ ದೃಷ್ಟಿಯನ್ನು ಅತ್ತಕಡೆಗೆ ಆಕರ್ಷಿಸಿದ್ದಾರೆ. ಸರಕಾರದ ಆ ಪ್ರಕಟನೆಯ ಮುಖ್ಯಾಂಶವನ್ನು ನಮ್ಮ ವಾಚಕರಿಗಾಗಿ ಇದರಡಿಯಲ್ಲಿ ಕೊಡಲಾಗಿದೆ.

ನಮ್ಮ ಇಲಾಖೆಯೊಳಗಿನ ಶಿಕ್ಷಕರ ಟ್ರೇನಿಂಗಿನ ಪ್ರಶ್ನೆಯನ್ನು ವಿಮರ್ಶಿಸಿ ತಕ್ಕ ಸಲಹೆಸೂಚನೆಗಳನ್ನು ಸರಕಾರದ ಮುಂದಿಡುವದಕ್ಕಾಗಿ ಸನ್ ೧೯೩೮ನೆಯ ಇಸ್ವಿಯ ಜನವರಿ ತಿಂಗಳಲ್ಲಿ ಶ್ರೀಮಾನ್ ಎಸ್. ಎಸ್. ಮೋರೆ ಬಿ. ಎ., ಎಲ್ ಎಲ್. ಬಿ. ಅವರ ಅಧ್ಯಕ್ಷತೆಯಲ್ಲಿ ಒಂದು ವಿಚಾರಣಾ ಸಮಿತಿಯು ನಿಯಮಿಸಲ್ಪಟ್ಟಿತ್ತು. ಆ ಸಮಿತಿಯವರು ಸದ್ಯಕ್ಕೆ ಕೆಲಸಮಾಡುತ್ತಿರುವ ಶಿಕ್ಷಕರ ಟ್ರೇನಿಂಗಿನ ವಿಷಯದ ಸೂಚನೆಗಳನ್ನು ಮುಂದಿಡುವಾಗ ಮತ್ತೆ ಕೆಲವು ಮಹತ್ವದ ವಿಚಾರಗಳನ್ನು ಸರಕಾರದ ಮುಂದಿಟ್ಟಿರುವರು. ಸದ್ಯದ ಪಿ. ಎಸ್. ಸಿ. ಪರೀಕ್ಷೆಯಲ್ಲಿ ಪಾಸಾದವರು ಇಂಗ್ಲಿಷು ಶಿಕ್ಷಣದ ಆವಶ್ಯಕತೆಯಿಲ್ಲದಿರುವ ಇತರ ನೌಕರಿಗಳಲ್ಲಿ ಅಥವಾ ಪ್ರಾಥಮಿಕ ಶಾಲಾಶಿಕ್ಷಕರ ಸ್ಥಳದಲ್ಲಿ ಕೆಲಸ ಮಾಡುವದಕ್ಕೆ ತಕ್ಕ ಯೋಗ್ಯತೆಯುಳ್ಳವರೆಂದು ತಿಳಿಯಲ್ಪಡುತ್ತಾರೆ. ಆದರೆ ಈ

ತರಗತಿಯಲ್ಲಿ ಸಾಮಾನ್ಯ ಶಿಕ್ಷಣದ ಮಟ್ಟವು ತೀರ ಕಡಿಮೆಯಿರುವದರಿಂದ ಈ ಪರೀಕ್ಷೆಯಲ್ಲಿ ಪಾಸಾದವರು ಶಿಕ್ಷಕರ ಕೆಲಸಕ್ಕೆ ತಕ್ಕವರೆಂದು ತಿಳಿಯುವದು ಸರಿಯಾಗಲಾರದು. ಆದ್ದರಿಂದ ಇಂಥವರ ಎಂದರೆ ಹೆಚ್ಚಿನ ಇಂಗ್ಲಿಷು ಶಿಕ್ಷಣವನ್ನು ಪಡೆಯಲು ತಕ್ಕಷ್ಟು ಅನುಕೂಲವಿಲ್ಲದಿರುವ ಮತ್ತು ಸದ್ಯದ ಪಿ.ಎಸ್.ಸಿ. ಪರೀಕ್ಷೆಯಲ್ಲಿ ಪಾಸಾದ ಉಮೇದುವಾರರ ಸಲುವಾಗಿ ಲೋಕ–ಶಾಲೆಗಳೆಂಬ ಹೊಸತರದ ಶಾಲೆಗಳನ್ನು ಸ್ಥಾಪಿಸಬೇಕೆಂದು ಸರಕಾರಕ್ಕೆ ಸೂಚಿಸಲಾಗಿದೆ.

(೨) ಲೋಕ ಶಾಲೆಗಳನ್ನು ಪ್ರಾರಂಭಿಸಬೇಕೆಂಬ ಸೂಚನೆಯನ್ನು ಸರಕಾರವು ಒಪ್ಪಿಕೊಂಡು ಇಂಥ ಶಾಲೆಗಳನ್ನು ಪ್ರಾರಂಭಿಸುವದಕ್ಕೆ ಸಾರ್ವಜನಕರಿಗೆ ಉತ್ತೇಜನಕೊಡಬೇಕೆಂದು ನಿರ್ಣಯಿಸಿರುವದು. ಈ ಶಾಲೆಗಳಲ್ಲಿ ಎಲ್ಲ ಶಿಕ್ಷಣವು ಪ್ರಾಂತಿಕ ಭಾಷೆಯ ಮೂಲಕವಾಗಿಯೇ ಕೊಡಲ್ಪಡುವದು; ಅಲ್ಲಿ ಇಂಗ್ಲೀಷನ್ನು ಕಲಿಸಲಾಗುವದಿಲ್ಲ. ಪ್ರಾಥಮಿಕ ಶಾಲೆಗಳ ಅಭ್ಯಾಸವನ್ನು ಮುಗಿಸಿದವರೇ ಈ ಶಾಲೆಗಳಿಗೆ ಕಲಿಯಲು ಬರುತ್ತಿರುವದರಿಂದ ಇವನು ಮಾಧ್ಯಮಿಕ ಶಾಲೆಗಳಲ್ಲಿ ಎಣಿಸಲಾಗುವದು. ಇಲ್ಲಿ ಕಲಿತ ಉಮೇದುವಾರರಿಗಾಗಿ "ಲೋಕ ಶಾಲಾಪರೀಕ್ಷೆ" ಎಂಬ ವಿಶಿಷ್ಟವಾದೊಂದು ಪರೀಕ್ಷೆಯು ನಡೆಯಿಸಲ್ಪಡುವದು; ಮತ್ತು ಈ ಪರೀಕ್ಷೆಯು ತರಗತಿಯು ಸಾಮಾನ್ಯವಾಗಿ 'ಸೆಕಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ ಪರೀಕ್ಷೆ (ಮೆಟ್ರಿಕ್ಯೂಲೇಶನ್ ಪರೀಕ್ಷೆ) ಯಷ್ಟೇ ಇರುವದು.

(೩) ಸ್ಥಾನಿಕ ಅಧಿಕಾರೀ ಸಂಘಗಳಾಗಲಿ ಖಾಸಗಿ ಸಂಸ್ಥೆಗಳು ಮತ್ತು ಮಾಧ್ಯಮಿಕ ಶಾಲೆಗಳಾಗಲಿ ಈ ಬಗೆಯ ಲೋಕಶಾಲೆಗಳ ವರ್ಗಗಳನ್ನು ಪ್ರಾರಂಭಿಸಲು ಅಡ್ಡಿಯಿಲ್ಲ. ಸ್ಥಾನಿಕ ಅಧಿಕಾರೀ ಸಂಘಗಳು ಇಂಥ ಶಾಲೆಗಳನ್ನು ಪ್ರಾರಂಭಿಸಿದರೆ ಅವರಿಗೆ ಪ್ರಾಥಮಿಕ ಶಿಕ್ಷಣದ ಇತರ ಬಾಬುಗಳಿಗೆ ದೊರೆಯುವಷ್ಟೇ ಪ್ರಮಾಣದಿಂದ ಸಹಾಯದ್ರವ್ಯವು ದೊರೆಯುವದು. ಮತ್ತು ಖಾಸಗಿ ಸಂಸ್ಥೆಗಳ ಮತ್ತು ಮಾಧ್ಯಮಿಕ ಶಾಲೆಗಳ ಚಾಲಕರಿಗೆ ಈ ವಿಷಯದಲ್ಲಿ ಮಾಡಿದ ಯೋಗ್ಯ ವೆಚ್ಚಕ್ಕೆ ಗಂಡುಮಕ್ಕಳ ಶಾಲೆಗಳಿಗೆ ನೂರಕ್ಕೆ ೨೦ ರಷ್ಟಕ್ಕಿಂತಲೂ ಹೆಣ್ಣುಮಕ್ಕಳ ಶಾಲೆಗಳಿಗೆ ನೂರಕ್ಕೆ ೨೫ ರಷ್ಟಕ್ಕಿಂತಲೂ ಹೆಚ್ಚಲ್ಲದಷ್ಟು ಹಣವು ಸಹಾಯ ರೂಪವಾಗಿ ಸಿಗುವದು.

ಸಹಾಯ ದ್ರವ್ಯವನ್ನು ಪಡೆಯುವದಕ್ಕೆ ಅವುಗಳ ಚಾಲಕರು ಈ ಕೆಳಗಿನ ಕರಾರುಗಳಂತೆ ನಡೆಯಬೇಕಾಗುವದು.

(ಅ) ಪ್ರಾಯ್ಮರಿ ಸ್ಕೂಲ್ ಲಿವ್ವಿಂಗ್ ಸರ್ಟಿಫಿಕೇಟ ಪರೀಕ್ಷೆಯಲ್ಲಿ ಅಥವಾ

ಇಂಗ್ಲಿಷು ೩ನೆಯ ಇಯತ್ತೆಯ ಪರೀಕ್ಷೆಯಲ್ಲಿ ಪಾಸಾದಂಥವರನ್ನಷ್ಟೇ ಈ ಶಾಲೆಗಳಿಗೆ ಸೇರಿಸಿಕೊಳ್ಳಬೇಕು.

(ಆ) ಲೋಕಶಾಲೆಗಳ ಅಭ್ಯಾಸ ಕ್ರಮವು ಮೂರು ವರ್ಷಗಳದಿರಬೇಕು.

(ಇ) ಆಯಾ ಶಾಲೆಗೆ ಅವಶ್ಯಕವಿರುವಷ್ಟು ಶಿಕ್ಷಕರಿರಬೇಕಲ್ಲದೆ ಮುಖ್ಯಾಧ್ಯಾಪಕನು ಟ್ರೇಂಡ್ ಗ್ರಾಜ್ಯುಏಟನಿರಬೇಕು.

(ಈ) ಈ ಶಾಲೆಗಳಲ್ಲಿ 'ಲೋಕ ಶಾಲಾ ಲೀವ್ವಿಂಗ್ ಸರ್ಟಿಫಿಕೇಟ ಪರೀಕ್ಷೆಗೆ' ತಕ್ಕ ಯ್ಯೋಗ್ಯತೆಯನ್ನು ತಂದು ಕೊಡುವಂಥ ಅಭ್ಯಾಸ ಕ್ರಮವನ್ನು ಅನುಸರಿಸಬೇಕು.

(ಉ) ಸಾಮಾನ್ಯ ಅಭ್ಯಾಸ ಕ್ರಮದ ಜೊತೆಗೆ ಶಾರೀರಿಕ ಶಿಕ್ಷಣಕ್ಕೂ ತಕ್ಕ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿರಬೇಕು.

(ಳ) 'ಲೋಕಶಾಲಾ ಪರೀಕ್ಷೆ' ಎಂಬ ಹೆಸರಿನ ಮೊದಲನೆಯ ಪರೀಕ್ಷೆಯು ೧೯೪೩ನೆಯ ಇಸ್ವಿಯ ಎಪ್ರಿಲ್ ತಿಂಗಳಲ್ಲಿ ನಡೆಯುವದು. ಆ ಪರೀಕ್ಷೆಯು ಅಭ್ಯಾಸಕ್ರಮ, ನಿಶ್ಚಿತವಾದ ತಾರೀಖು, ಸ್ಥಳ ಮುಂತಾದವುಗಳನ್ನು ಹಿಂದಿನಿಂದ ತಿಳಿಸಲಾಗುವದು. ಈ ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದುವಾರರು ಪ್ರಾಯ್ಮರಿ ಸ್ಕೂಲ್ ಲೀವ್ವಿಂಗ ಸರ್ಟಿಫಿಕೇಟ ಪರೀಕ್ಷೆಯಲ್ಲಿ ಪಾಸಾದವರಿದ್ದು ಪರೀಕ್ಷೆಗೆ ಗೊತ್ತುಪಡಿಸಿದ ಫೀಯನ್ನು ಕೊಡಬೇಕಾಗುವದು. ಮತ್ತು ಲೋಕ ಶಾಲೆಗಳನ್ನು ನಡೆಯಿಸುವದಕ್ಕೆ ಸರಕಾರದ ಮಾನ್ಯತೆಯನ್ನು ಪಡೆದಂಥ ಶಾಲೆಯ ಮುಖ್ಯಾಧಿಕಾರಿಯಿಂದ "ಈತನು ಈ ಪರೀಕ್ಷೆಗೆ ಕೂಡ್ರಲು ತಕ್ಕ ಯೋಗ್ಯತೆಯುಳ್ಳವನಿದ್ದಾನೆ." ಎಂಬ ಸರ್ಟಿಫಿಕೇಟನ್ನು ಪಡೆದಿರಬೇಕು. ಸರಕಾರದಿಂದ ಮಾನ್ಯತೆ ಪಡೆದ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರೂ ಸಹ ಈ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಪರೀಕ್ಷೆಯ ಮುಖ್ಯ ವಿಷಯಗಳ ಗುಂಪುಗಳನ್ನೂ, ಈ ಪರೀಕ್ಷೆಯಲ್ಲಿ ಪಾಸಾಗಿ ಸರ್ಟಿಫಿಕೇಟು ಪಡೆಯಲಿಕ್ಕೆ ತೀರ ಅವಶ್ಯಕವಾಗಿರುವ ಯೋಗ್ಯತೆ, ವಿವರಣಾತ್ಮಕವಾದ ಅಭ್ಯಾಸಪತ್ರಿಕೆ ಇವನ್ನೂ ಸದ್ಯದಲ್ಲಿಯೇ ಪ್ರಕಟಿಸಲಾಗುವದು.

(ಋ) ಲೋಕಶಾಲಾ ಪರೀಕ್ಷೆಯಲ್ಲಿ ಪಾಸಾದವರಿಗೆ ಒಂದು ಸರ್ಟಿಫಿಕೇಟನ್ನು ಕೊಡಲಾಗುವದು. ಮತ್ತು ಟ್ರೇನಿಂಗ್ ಕಾಲೇಜಕ್ಕೆ ಆರಿಸುವಾಗಲೂ ಪ್ರಾಥಮಿಕ ಶಾಲಾ ಶಿಕ್ಷಕರಂತೆ ನಿಯಮಿಸಲ್ಪಡುವಾಗಲೂ ಇಂಥವರ ಯೋಗ್ಯತೆಯು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯಲ್ಲಿ ಪಾಸಾದವರಿಗಿಂತಲೂ ಹೆಚ್ಚಿನದೆಂದು ತಿಳಿಯಲ್ಪಡುವರು.

ಶಾರೀರಿಕ ಶಿಕ್ಷಣ

ಈ ಪ್ರಪಂಚದಲ್ಲಿ ಜನ್ಮತಾಳಿದ ಮಾನವಪ್ರಾಣಿಯು ತಂದೆತಾಯಿಗಳು ಅರಸರು ಗುರುಗಳು ಎಂಬ ಈ ಮೂರು ಮಾನ್ಯ ಸ್ಥಾನಗಳನ್ನು ಅನುಸರಿಸಿ ಇಲ್ಲವೆ ವಿರೋಧಿಸಿ ತನ್ನ ಉತ್ಕರ್ಷಾಪಕರ್ಷಗಳನ್ನು ಹೊಂದುವನೆಂದು ಹೇಳುವ ದುಂಟು. ಹಡೆದ ತಂದೆತಾಯಿಗಳನ್ನು ಮನ್ನಿಸುವದೂ ಅವರ ಉಪದೇಶದಂತೆ ನಡೆಯುವದೂ ಅವಶ್ಯ ಕರ್ತವ್ಯವೆಂಬದನ್ನು ಯಾವ ರಾಷ್ಟ್ರವೇ ಆಗಲಿ ಯಾವ ಧರ್ಮವೇ ಆಗಲಿ ಅಲ್ಲಗಳೆದಿಲ್ಲ. ರಾಜನನ್ನು ದೇವತಾಪ್ರತಿನಿಧಿಯೆಂದು ಭಾವಿಸುವ ಜನಾಂಗಗಳೆಷ್ಟೋ ಈಗಿನ ಭೌತಿಕಮನ್ವಂತರದಲ್ಲಿಯೂ ಉಳಿದು ಕೊಂಡಿವೆ. ಅದರಂತೆಯೇ ಗುರುವಿನ ಸ್ಥಾನವನ್ನು ಯಾವ ರಾಷ್ಟ್ರವೂ ಯಾವ ಧರ್ಮವೂ ಯಾವ ಜನಾಂಗದ ನಿಯಮನಿರ್ಬಂಧಗಳೂ ಇಂದಿನ ವರೆಗೂ ಕೆಳಗೆ ಎಳೆಯಲು ಹವಣಿಸಿಲ್ಲ. ನಮ್ಮ ಹಿಂದೂ ಧರ್ಮದ ಪ್ರಚಾರಕರಂತೂ "ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುಃಸಾಕ್ಷಾನ್ಮಹೇಶ್ವರಃ ಗುರುರೇವ ಜಗತ್ಸರ್ವಂ ತಸ್ಮೈಶ್ರೀ ಗುರವೇನಮಃ" ಎಂದು ಪ್ರತಿಪಾದಿಸಲು ಎಳ್ಳಷ್ಟೂ ಹಿಂದೆಮುಂದೆ ನೋಡಿಲ್ಲ. ನಮ್ಮ ಪುರಾತನಕಾಲದ ಗುರುಪರಂಪರೆಯು ಎಷ್ಟು ಮಹತ್ವದ ಸ್ಥಾನವನ್ನು ಆಕ್ರಮಿಸಿದ್ದಿತೆಂಬದು ಇದರಿಂದ ಸಿದ್ಧವಾಗುವದು.

ನಮ್ಮ ಪುರಾತನ ಕಾಲದ ಗುರುಗಳು ಶಾರೀರ ಸಂಪತ್ತಿನ ಪೋಷಕರೂ ಮನಃಸಂಸ್ಕಾರಗಳ ನಿಯಾಮಕರೂ ಆತ್ಮೋದ್ಧಾರದ ಮಾರ್ಗದರ್ಶಿಗಳೂ ಆಗಿದ್ದರು. ಅವರು ಭಿಷಗ್ವರ್ಯರಾದ ಧನ್ವಂತರಿಗಳೂ ಸಂಸ್ಕಾರ ಪರಾಯಣರಾದ ಶಿಕ್ಷಣಕರ್ತರೂ ಆತ್ಮೋನ್ನತಿಯ ದಾರಿಯಲ್ಲಿ ಕೈಹಿಡಿದು ಕರೆದೊಯ್ಯುವ ಪುರೋಗಾಮಿಗಳೂ ಆಗಿದ್ದರು. ಅವರು ಆಜನ್ಮ ಮರಣಾಂತ್ಯದವರೆಗೂ ಸ್ವಾರ್ಥರಹಿತವಾದ ಪರೋಪಕಾರ ಕಾರ್ಯದಲ್ಲಿ ನಿರತರಾಗಿರುತ್ತಿದ್ದರು. ಮತ್ತು ಅದಕ್ಕಾಗಿ ಪೂರ್ವ ವಯಸ್ಸಿನಲ್ಲಿ ತಕ್ಕ ಶಿಕ್ಷಣಸಂಸ್ಕಾರಗಳನ್ನು ಹೊಂದಿರುತ್ತಿದ್ದರು. ಇಂಥ ಎಷ್ಟೋ ವ್ಯಕ್ತಿಗಳು ಸಂನ್ಯಾಸಿಗಳೂ ಸಂಸಾರ ಭಾರವನ್ನು ವಹಿಸದಿರುವ ಬ್ರಹ್ಮಚಾರಿಗಳೂ ಆಗಿರುತ್ತಿದ್ದರು. ಇಂಥವರ ಮನೆ ಮಠಗಳೆಂದರೆ ಮಹಾ ದೇವಾಲಯಗಳು; ನಿರಾಶ್ರಿತರೂ ಚಿಂತಾಕುಲರೂ ಆದವರ ಆಶ್ರಯ ಸ್ಥಾನಗಳು; ಮುಂದೆ ಉದಯವಾಗುತ್ತಿರುವ ಪ್ರಜಾ ಪ್ರಮುಖರಿಗೆ ಜ್ಞಾನದಾನವನ್ನು ನೀಡುವ ಧರ್ಮಛತ್ರಗಳು. ಪಾರ್ವಾತ್ಯ ಪಾಶ್ಚಿಮಾತ್ಯ ದೇಶಗಳೊಳಗಿನ ಧರ್ಮಪೀಠ ವಿದ್ಯಾಪೀಠಗಳು ಅವರ ಅಂದಿನ ಮಹತ್ಕಾರ್ಯ

ಗಳ ನಿದರ್ಶಕಗಳಾದ ಜಯಸ್ತಂಭಗಳಿಂತಿವೆ. ಮುಂದಿನ ಪೀಳಿಗೆಯ ಈ ಬಗೆಯ ಶಾರೀರ ಬಲಪೋಷಣ, ಮನಃಸಂಸ್ಕಾರವರ್ಧನ, ಆತ್ಮೋದ್ಧಾರ ಮಾರ್ಗದರ್ಶನ ಎಂಬ ತ್ರಿವಿಧ ಕಾರ್ಯಕಲಾಪಗಳನ್ನು ಸಾಗಿಸಿಕೊಂಡು ಹೋಗುವದು ಒಬ್ಬೊಬ್ಬರಿಗೇ ಕಷ್ಟಸಾಧ್ಯವೆನಿಸುತ್ತಿದ್ದರೂ ಅಂತಹ ಘನತರವಾದ ಕಾರ್ಯ ಭಾರವನ್ನು ಸುಸಂಗತವಾಗಿ ನಿರ್ವಹಿಸಿಕೊಂಡು ಹೋದ ಮಹಾನುಭಾವರು ಅಲ್ಲಲ್ಲಿ ಕಂಡು ಬರುತ್ತಿದ್ದರು. ಆದರೆ ಇಂದಿನ ಕಾಲವು ತೀರ ಬದಲಾಗಿದೆ.

ಶಾರೀರ ಬಲಸಂವರ್ಧನೆಯ ಮತ್ತು ಆರೋಗ್ಯರಕ್ಷಣೆಯ ಕಾರ್ಯವು ವೈದ್ಯರ ಗುಂಪಿಗೆ ಸೇರಿತು. ಧಾರ್ಮಿಕ ಉಪದೇಶಗಳಿಂದ ಆತ್ಮೋನ್ನತಿಯ ದಾರಿಯನ್ನು ತೋರಿಸುವ ಪುರೋಹಿತರು ಧರ್ಮೋಪದೇಶಕರಾದರು. ಮನಃ ಸಂಸ್ಕಾರ ಕಾರ್ಯದ ಹೊರೆಯನ್ನು ಶಿಕ್ಷಕ ವರ್ಗವು ಹೊತ್ತಿತು. ಬರಬರುತ್ತ ಈ ಒಂದೊಂದು ಗುಂಪಿನವರು ಇನ್ನೆರಡು ಗುಂಪಿನವರ ಕಾರ್ಯಭಾರಗಳನ್ನು ಮರೆತುಬಿಟ್ಟರು. ಶಿಕ್ಷಕರು ವಿದ್ಯಾದಾನಿಗಳಾದರು. ವೈದ್ಯರು ಆರೋಗ್ಯ ದಾಯಕರಾದರು. ಧರ್ಮೋಪದೇಶಕರು ಸ್ವಾರ್ಥತ್ಯಾಗ ಪರೋಪಕಾರಗಳ ದಾರಿಯನ್ನು ಹಿಡಿದರು. ಮೊತ್ತಮೊದಲು ಏಕತ್ರವಾಗಿದ್ದ ಈ ತ್ರಿವಿಧ ಕಾರ್ಯ ಘಟನೆಯು ಕವಲೊಡೆದು ಮೂರು ದಾರಿಗಳಲ್ಲಿ ಸಾಗಿತು. ಆದರೆ ದುರ್ದೈವದಿಂದ ಈ ಕವಲುಗಳೂ ಕೂಡ ಅಡ್ಡತಿಡ್ಡ ಬೆಳೆದು ಸಾಗಿಬಂದು ಮೂಲವನ್ನೇ ಮರೆತು ಬಿಡುವಂತಾಯಿತು. ವೈದ್ಯಕ ವೃತ್ತಿಯವರು ತಮ್ಮ ಅಖಂಡ ಆರೋಗ್ಯರಕ್ಷಣವರ್ಧನಗಳ ಕರ್ತವ್ಯವನ್ನು ಮರೆತು ಬೇನೆಯವರಿಗೆ ಉಪಚಾರ ಮಾಡುವದನ್ನಷ್ಟೇ ಉಳುಸಿಕೊಂಡು ನಿರೋಗಿಗಳಾದವರ ಶಾರೀರ ಬಲಸಂವರ್ಧನೆಯ ಮಾತನ್ನು ಅಲ್ಲಗಳೆದರು. ಪುರೋಹಿತರೂ ಧರ್ಮೋಪದೇಶ ಕರೂ ನಿಜವಾದ ಆತ್ಮೋನ್ನತಿಯ ತತ್ವಗಳನ್ನು ಮರೆತು ಪೂರ್ವದ ವೇದಮಂತ್ರ ಗಳನ್ನೋ ದೇವರ ಪ್ರಾರ್ಥನೆಯ ಸೂತ್ರಗಳನ್ನೋ ಧರ್ಮಗ್ರಂಥಗಳನ್ನೋ ಅಂದು ತೋರಿಸುವ ನಿರ್ಜೀವ ಗ್ರಾಮೋಫೋನೋಗಳಂತಾದರು. ಗೊತ್ತಾದ ಪುಸ್ತಕಗಳನ್ನು ಓದಿ ಕಂಠಪಾಠ ಮಾಡಿ ಪರೀಕ್ಷೆಗಳನ್ನು ಕೊಟ್ಟು ಪಾಸಾಗಿ ಪದವಿಗಳನ್ನೂ ಪದಕಗಳನ್ನೂ ಪಡೆದವರು ಮನಃಸಂಸ್ಕಾರಕರ್ತರಾದ ಶಿಕ್ಷಕರ ಸ್ಥಳವನ್ನು ಆಕ್ರಮಿಸಿದರು. ಈ ಬಗೆಯ ದುರ್ದಶೆ ಇಲ್ಲಿಗೇ ನಿಲ್ಲಲಿಲ್ಲ. ಸರಕಾರದಿಂದ ಹಣ ಕೊಟ್ಟು ನಿಯಮಿಸಲ್ಪಟ್ಟಿರುವ, ಇದೊಂದು ಹಣ ಗಳಿಸುವ ಮತ್ತು ತಮ್ಮ ಜೀವನವನ್ನು ಸಾಗಿಸುವ ಕೂಲಿಯ ಹೋರೆಯೆಂದು ತಿಳಿಯುವ ಜನರೇಹೆಚ್ಚಾಗಿ ಈ ಮೂರು ವಿಭಾಗಗಳಲ್ಲಿಯೂ ಸೇರ್ಪಡೆಯಾದರು. ಇದೀಗ ಇಂದಿನ ಭೌತಿಕ ಯುಗದ ಸುಧಾರಣೆಯ ಪರಮಾವಧಿಯ ನಿದರ್ಶನ.

ಮೇಲೆ ಹೇಳಿದ ಶರೀರ ಮನಸ್ಸು ನೀತಿ ಇವುಗಳ ಬೆಳೆವಣಿಗೆ ಪರಿಷ್ಕಾರಗಳ ಕಾರ್ಯದಲ್ಲಿ ಐಕ್ಯವುಳಿಯದೆ ಅದು ಬೇರೆ ಬೇರೆ ವಿಭಾಗಗಳಲ್ಲಿ ಹಂಚಿ ಹೋಗಿ ದಿನದಿನಕ್ಕೆ ಅವನತಿ ಹೊಂದುತ್ತ ಸಾಗಿರುವದನ್ನು ನಾವು ಈಚೆಗೆ ಕಂಡು ಹಿಡಿದಿದ್ದೇವೆ. ವೈದ್ಯರು ರೋಗನಿವಾರಣೆಗೂ ಸ್ಥಿರವಾದ ಆರೋಗ್ಯರಕ್ಷಣೆಗೂ ಮಾನಸಿಕ ಸಂಸ್ಕಾರದ ನೆರವಿನ ಮಹತ್ವವೆಷ್ಟೆಂಬದನ್ನು ಅರಿತಿದ್ದಾರೆ. ಶಾರೀರ ಸೌಖ್ಯವಿಲ್ಲದೆ ಮಾನಸಿಕ ಉನ್ನತಿಯಾಗಲಾರದೆಂಬದಂತೂ ಎಂದೋ ಸಿದ್ಧವಾಗಿಹೋಗಿದೆ. ಶರೀರ ಮನಸ್ಸು ಇವುಗಳ ಸುಸಂಪನ್ನತೆಯಿಂದಲೆ ಮನುಷ್ಯನ ನೈತಿಕ ಉನ್ನತಿಯುಂಟಾಗುವದೆಂಬದನ್ನು ಎಲ್ಲರೂ ಒಪ್ಪಿಕೊಂಡಿರುವರು. ಇನ್ನೂ ಹೆಚ್ಚಾಗಿ ವಿವರಿಸಬೇಕೆಂದರೆ—ಗಿಳಿಪಾಠದ ಬಲದಿಂದ ಪದವೀಧರರಾದ ತರುಣರು ಪುಸ್ತಕದ ಕ್ರಿಮಿಗಳಂತೆ ಎಲುವಿನ ಹಂದರದಂತಿರುವ ಶರೀರವನ್ನು ಎತ್ತಿಕೊಂಡು ಸರಕಾರದ ನೌಕರಿಗಾಗಿ ಅಲೆದಾಡುವದನ್ನು ದೇಶದ ತುಂಬ ಬೇಕಾದಲ್ಲಿ ಕಾಣಬಹುದಾದ ಪರಿಸ್ಥಿತಿಗೆ ಇಂದಿನ ಶಿಕ್ಷಣ ಸಂಸ್ಥೆಗಳು ಶಾರೀರಿಕ ಶಿಕ್ಷಣದತ್ತ ಅಲಕ್ಷ್ಯಮಾಡಿದುದೇ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ಬುದ್ಧ ಕೈಸ್ತರು ಪ್ರಪಂಚಕ್ಕೆ ಸಾರಿದ ಅಹಿಂಸೆ ಪರೋಪಕಾರ ಮುಂತಾದ ಅಮೋಘವಾದ ನೀತಿಮಾರ್ಗವು ಅಧುನಿಕ ಜೀವನಕಲಹದ ಕಾಲದಲ್ಲಿ ಆಯಾ ಧಾರ್ಮಿಕ ಗ್ರಂಥಗಳಲ್ಲಿ ಮಾತ್ರ ಉಳಿದಿದೆ. ಆಗ ಹುಟ್ಟಿದ ವಿಹಾರಗಳು ಚರ್ಚುಗಳು ದೇವಲೋಕದ ಅದೃಶ್ಯ ಮಾರ್ಗದಲ್ಲಿ ಸಾಗಿರುವ ಭಾವುಕರಿಗೆ ದಾರಿಯೊಳಗಿನ ಧರ್ಮಶಾಲೆ-ವಿಶ್ರಾಂತಿ ಗೃಹಗಳಂತೆ ಉಳಿದಿವೆ.

ಈ ಇಪ್ಪತ್ತನೆಯ ಶತಮಾನದಲ್ಲಿ ನಮ್ಮ ದೃಷ್ಟಿಯು ಯೋಗ್ಯ ದಿಶೆಗೆ ಹೊರಳಿರುವದೇನೋ ನಿಜ. ಶಿಕ್ಷಣ ಸಂಸ್ಥೆಗಳಲ್ಲಿ ಶಾರೀರಿಕ ಶಿಕ್ಷಣದ ವಿಷಯಕ್ಕೆ ತಕ್ಕಷ್ಟು ಮಾನ್ಯತೆ ದೊರೆಯಹತ್ತಿದ್ದು ತುಂಬ ಸುದ್ದಿವದ ಮಾತೆಂದು ಹೇಳುವ ಸಮಯವು ಬಂದಿರುವದು. ಇಪ್ಪತ್ತು ವರ್ಷಗಳ ಹಿಂದೆ 'ಶಿಕ್ಷಣವೆಂದರೇನು?" ಎಂಬ ಪ್ರಶ್ನೆಗೆ "ಬೌದ್ಧಿಕ ಸಂಸ್ಕಾರವೇ ಶಿಕ್ಷಣ" ಎಂದು ಉತ್ತರ ಹೇಳುವ ಪರಿಸ್ಥಿತಿಯಿದ್ದಿತು. ೧೯೩೭ ನೆಯ ಇಸ್ವಿಯಲ್ಲಿ ಕಾಂಗ್ರೆಸ ಸರಕಾರವು ಅಧಿಕಾರದಲ್ಲಿ ಬಂದಂದಿನಿಂದಲೂ ಶಾರೀರಿಕ ಶಿಕ್ಷಣಕ್ಕೆ ತಕ್ಕಷ್ಟು ಮನ್ನಣೆ ದೊರೆಯುತ್ತಿರುವದು.

ಸುಶಿಕ್ಷಿತರೆನ್ನಿಸಿಕೊಂಡವರೂ ಕೂಡ ಡಾಕ್ಟರರು ಯಾಕೆ ಬೇಕೆಂದರೆ ಬೇನೆಯನ್ನು ಕಳೆಯುವದಕ್ಕೆ ಎಂದು ಹೇಳುವದುಂಟು. ಬೇನೆಯು ಬಂದಬಳಿಕ ಅದನ್ನು ಕಳೆಯುವದು ಬೇರೆ—ಬೇರೆ ಬರದಂತೆ ಪೂರ್ವಸಿದ್ಧತೆಯಿಂದ ಇರುವದು ಬೇರೆ. ಸುಮಾರು ೪೦ ವರ್ಷಗಳ ಹಿಂದೆ ಮೈಲೀ ಬೇನೆಯನ್ನು ಪ್ರತಿಬಂಧಿಸುವ

ದಕ್ಕಾಗಿ ಪ್ಲೇಲಿ ತೆಗೆಯುವ ವ್ಯವಸ್ಥೆಯಾಯಿತು. ಈಚೆಗೆ ಪ್ಲೇಗ ಕಾಲರಾ ವಿಷಮಜ್ವರ ಮುಂತಾದ ಬಹಳ ಕಷ್ಟಕರವಾದ ಬೇನೆಗಳಿಗೂ ಇಂಥ ಪ್ರತಿಬಂಧಕ ಉಪಾಯಗಳನ್ನು ಕಂಡುಹಿಡಿದು ಆಚರಣೆಯಲ್ಲಿ ತರಲು ಯತ್ನಿಸಿದ್ದಾರೆ. ಆರೋಗ್ಯ ರಕ್ಷಣೆಯ ಉಪಾಯಗಳ ಕಡೆಗೂ ನಮ್ಮವರ ಲಕ್ಷ್ಯವು ಹೊರಳಿರುವದು. ಶರೀರವು ನಿರೋಗಿಯಾಗಿರುವಾಗ ಸ್ವಾಭಾವಿಕವಾಗಿ ಅದರ ಕಡೆಗೆ ಯಾರ ಲಕ್ಷ್ಯವೂ ಹೋಗುತ್ತಿರುವದಿಲ್ಲ. ಬೇನೆ ಬಂದು ಕೆಲಸಮಾಡಲಾರದಂತಾದಾಗಲೆ ಆಯಾ ಅವಯವಗಳ ಕಡೆಗೆ ನಮ್ಮ ಲಕ್ಷ್ಯವು ಹೋಗುವದು. ಇದು ತೀರ ತಪ್ಪು. ಜೀನಿಯರಲ್ಲಿ ಕುಟುಂಬದ ಆರೋಗ್ಯರಕ್ಷಣೆಗಾಗಿ ಡಾಕ್ಟರರನ್ನು ನಿಯಮಿಸಿರುವರಂತೆ. ಕುಟುಂಬದವರೆಲ್ಲರೂ ಆರೋಗ್ಯದಿಂದಿದ್ದರೆ ಆಡಾಕ್ಟರರಿಗೆ ತಕ್ಕ ವೇತನವು ದೊರೆಯುವದು. ಆದರೆ ಅವರಲ್ಲಿ ಯಾರಿಗಾದರೂ ಬೇನೆ ಬಂದರೆ ಡಾಕ್ಟರನಿಗೆ ಅದಕ್ಕೆ ತಕ್ಕಂತೆ ದಂಡಕಟ್ಟುವ ಪರಿಪಾಠವಿದೆಯಂತೆ. ಈ ಮಾತಿನಲ್ಲಿ ಸಂಪೂರ್ಣ ತಥ್ಯಾಂಶವಿದೆ. ಶರೀರವನ್ನು ನಿರೋಗಿಯಾಗಿಡಬೇಕಾದರೆ ಅದಕ್ಕೆ ಆಗಾಗ ತಕ್ಕಂತೆ ಆರೈಕೆ ಮಾಡುತ್ತಿರಬೇಕು. ಈ ಆರೈಕೆಯೇ ಶಾರೀರಿಕ ಶಿಕ್ಷಣವು.

ಆರೋಗ್ಯ ಶಾಸ್ತ್ರದ ವಿವರಣಾತ್ಮಕವಾದ ಪರಿಶೀಲನ ಅಭ್ಯಾಸಗಳಿಂದ ಶರೀರ–ಮನಸ್ಸು–ಆತ್ಮ ಈ ಮೂರರ ಪರಸ್ಪರಾವಲಂಬನವು ನಮ್ಮ ನಿದರ್ಶನಕ್ಕೆ ಬರುವದು. ಈ ಮೂರೂ ಆರೋಗ್ಯವಾಗಿದ್ದಾಗಲೆ ಮನುಷ್ಯನು ಆರೋಗ್ಯದಿಂದಿರುವನಲ್ಲದೆ ಈ ಮೂರರಲ್ಲಿ ಯಾವದು ಕೆಟ್ಟರೂ ಅವನ ಆರೋಗ್ಯವು ನಷ್ಟವಾಗೇ ಆಗುವದು ಎಂಬದು ಈಗಿನ ನೂತನ ಯುಗದ ಶೋಧದಿಂದ ಹೊರಟ ಒಂದು ಅಮೌಲ್ಯವಾದ ತತ್ತ್ವ. ಶರೀರ ಮನಸ್ಸು ಆತ್ಮ ಇವುಗಳ ಸಂಸ್ಕಾರ ಮಾರ್ಗಗಳಲ್ಲಿ ಒಂದನ್ನು ಬಿಟ್ಟು ಒಂದನ್ನು ಅನುಸರಿಸುವದು, ಎಂದರೆ ಇವು ಒಂದರಿಂದೊಂದು ಭಿನ್ನವಾಗಿರುವವೆಂದು ಭಾವಿಸುವದು, ಶಿಕ್ಷಣದ ಅಪಹಾಸ್ಯವೆನಿಸಬಹುದು. ಪೂರ್ವಕಾಲದಲ್ಲಿ ನಮ್ಮ ಶಿಕ್ಷಣ ಕಾರ್ಯವು ಗುರುಕುಲಕ್ಕೆ ಒಪ್ಪಿಸಲ್ಪಟ್ಟಿದ್ದಾಗ ಈ ಮಾತು ನಮ್ಮ ಗುರುಪರಂಪರೆಗೆ ಗೊತ್ತಿದ್ದಿತು. ಆದುದರಿಂದ ಅವರು ಈ ಮೂರರ ಸಂಸ್ಕಾರದ ವಿಷಯದಲ್ಲಿಯೂ ತುಂಬ ಮನಸ್ಸಿಟ್ಟು ಕೆಲಸಮಾಡುತ್ತಿದ್ದರು. ಉಪನಯನಾನಂತರದಲ್ಲಿ ಬಾಲಕರನ್ನು ಗುರುಕುಲವಾಸಕ್ಕಾಗಿ ತಪಸ್ವಿಗಳಾದ ಗುರುಗಳ ಆಶ್ರಮಕ್ಕೆ ಕಳುಹಿಸಲಾಗುತ್ತಿತ್ತು. ಯುರೋಪದ ದೊಡ್ಡ ದೊಡ್ಡ ಮಠ (Monastery) ಗಳಲ್ಲಿಯೂ ಈ ಬಗೆಯ ಶಿಕ್ಷಣಕ್ಕೆ ಅವಕಾಶವಿದ್ದಿತೆಂದು ಹೇಳುವದುಂಟು. ರಾಮ–ಲಕ್ಷ್ಮಣರು ತಮ್ಮ ಮುಂದಿನ ರಾಜ್ಯ ಕಾರ್ಯಭಾರಕ್ಕನುಗುಣವಾದ

ಶಾರೀರಿಕ ಮಾನಸಿಕ ಆಧ್ಯಾತ್ಮಿಕ ಶಿಕ್ಷಣವನ್ನು ಪಡೆಯುವದಕ್ಕಾಗಿ ಗುರುವಿಗೆ ಒಪ್ಪಿಸಲ್ಪಟ್ಟಿದ್ದರು. ಸಾಂದೀಪ ಋಷಿಯ ಬಳಿಯಲ್ಲಿ ಕೃಷ್ಣನು ವಿದ್ಯಾಭ್ಯಾಸ ಮಾಡಿದನು.

ಪೂರ್ವಕಾಲದಲ್ಲಿ ಶಿಕ್ಷಣವು ಈ ಮೂರು ಅಂಗಗಳಲ್ಲಿ ವಿಭಾಗಿಸಲ್ಪಟ್ಟಿದ್ದು ಈ ಮೂರೂ ಅಂಗಗಳು ಪರಸ್ಪರ ಪೋಷಕವಾದ ರೀತಿಯಲ್ಲಿ ಮುಂದುವರಿಯುತ್ತಿದ್ದುವು. ಶಿಕ್ಷಣ ಕ್ರಮವು ಬಾಲ್ಯದಿಂದ ಆರಂಭವಾಗಿ ಯೌವನ ತುಂಬುವ ವರೆಗೂ ನಡೆಯುತ್ತಿದ್ದಿತು. ಪ್ರತಿ ಗುರುವಿನ ಬಳಿಯಲ್ಲಿ ನಿಯಮಿತ ಸಂಖ್ಯೆಯ ಶಿಷ್ಯರಿರುತ್ತಿದ್ದು ಅವರೆಲ್ಲರ ವೈಯಕ್ತಿಕವಾದ ಸಂಸ್ಕಾರದ ವಿಷಯವನ್ನು ಅವನು ತುಂಬ ದಕ್ಷತೆಯಿಂದ ನೋಡಿಕೊಳ್ಳುತ್ತಿದ್ದನು. ಮತ್ತು ಅವರೆಲ್ಲರು ತಮ್ಮ ಮುಂದಿನ ಆಯುಷ್ಯದ ಕಷ್ಟಕರವಾದ ಮಾರ್ಗದಲ್ಲಿ ಸುಖಪ್ರವಾಸ-ಮಾಡಲು ಸಮರ್ಥರಾಗುವದಕ್ಕೆ ಬೇಕಾದ ಎಲ್ಲ ಬಗೆಯ ಶಿಕ್ಷಣವನ್ನು ಅವರಿಗೆ ಒದಗಿಸಿಕೊಡುತ್ತಿದ್ದನು. ನಾವು ನಮ್ಮ ವಿದ್ಯಾರ್ಥಿಗಳಿಗೆ ದೀರ್ಘಾಯುಷಿಗಳೂ ನಿರೋಗಿಗಳೂ ಆಗುವದಕ್ಕೆ ಬೇಕಾಗುವ ಶಿಕ್ಷಣವನ್ನು ಕೊಡುವದಕ್ಕೂ ಅವರ ಮೈಕಟ್ಟು ಸುಂದರವಾಗುವಂತೆ ಮಾಡುವದಕ್ಕೂ ಸಾಧ್ಯವಿದೆ. ತನ್ನನ್ನೂ ತನ್ನ ಕುಟುಂಬವನ್ನೂ ರಕ್ಷಿಸಿಕೊಳ್ಳುವದಕ್ಕೂ ತನ್ನ ಹಳ್ಳಿಯ, ನಗರದ ಅಥವಾ ದೇಶದ ರಕ್ಷಣೆಗೂ ಆವಶ್ಯಕವಾದ ಶಿಕ್ಷಣವನ್ನು ನಮ್ಮ ಬಾಲಕರಿಗೆ ನಾವು ಒದಗಿಸಿಕೊಡ ಬಹುದು. ಆದರೆ ಇಂಥ ಘನತರವಾದ ಧ್ಯೇಯವು ಮಾತ್ರ ಸದಾಸರ್ವದಾ ನಮ್ಮ ಕಣ್ಣ ಮುಂದೆ ಕಟ್ಟಿರಬೇಕು. ನಮಗೆ ಇಂದಿನ ಪರಿಸ್ಥಿತಿಯಲ್ಲಿ ಇಂಥ ಸೋಪಾನಾವಲಿಯ ಪ್ರಥಮಪದವನ್ನು ಮುಟ್ಟುವದೇ ಕಷ್ಟಸಾಧ್ಯವಾಗಿದೆ. ನಾವು ನಿರೋಗಿಗಳಾಗಿ ಬಾಳಿ ನಮ್ಮ ಬಂಧುಬಳಗದವರಿಗೂ ನೆರೆಹೊರೆಯವರಿಗೂ ಭಾರವಾಗದಂಥ ಸ್ಥಿತಿಯಲ್ಲಿರಲು ಯತ್ನಿಸುವದಕ್ಕೆ ನಮಗೆ ತಿಳಿಯದಾಗಿದೆ.

ಶಾರೀರಿಕ ಶಿಕ್ಷಣವು ಎಂದು ಪ್ರಾರಂಭವಾಗಬೇಕು? ಬೌದ್ಧಿಕ ಹಾಗು ಆಧ್ಯಾತ್ಮಿಕ ಶಿಕ್ಷಣಗಳು ಮಗುವು ತೊಟ್ಟಿಲಲ್ಲಿರುವಾಗಲೇ ಪ್ರಾರಂಭವಾಗುವವು. ಚಿಕ್ಕ ಮಗುವಿಗೆ ೫ನೆಯ ತಿಂಗಳಲ್ಲಿ ಹಲ್ಲು ಹುಟ್ಟುವದು. ಈ ಹಾಲ ಹಲ್ಲು ಬಿದ್ದು ಸ್ಥಿರವಾದ ಹಲ್ಲುಗಳು ಹುಟ್ಟುವ ಕಾಲವು ೭ನೆಯ ವರ್ಷ. ಈ ಕಾಲದಲ್ಲಿ ಹುಳಿತುಹೋದ ಹಲ್ಲುಗಳು ಮುಂದೆ ನೂರಾರು ಬ್ರುಶ್ಶುಗಳ ಅಥವಾ ಟೂಥ-ಪೇಸ್ಟುಗಳ ಉಪಯೋಗದಿಂದ ಕೂಡ ಸರಿಯಾಗುವ ಸಂಭವವಿಲ್ಲ. ಇಂಥ ಪ್ರಸಂಗಗಳು ಒದಗದಂತೆ ಮಗುವಿನ ಗರ್ಭವಾಸದಿಂದಲೇ ತಕ್ಕ ಪರಾಮರಿಕೆ-ಯನ್ನು ನೋಡಿಕೊಳ್ಳಬೇಕಾಗುವದು.

(ಮುಂದೆಸಾಗುವದು)

ಕನ್ನಡ ತಿಲ್ಲಿ-ಸರ್ ವಿಶ್ವೇಶ್ವರಯ್ಯನವರು

ಲೇ:— ಸಿಂಪಿ ಲಿಂಗಣ್ಣ ಆಸಿ. ಮಾಸ್ತರ ಇಂಡಿ

ಇಡೀಯ ಜಗತ್ತನ್ನೇ ತಮ್ಮ ಪ್ರತಿಭೆಯಿಂದ ಬೆರಗುಗೊಳಿಸಿದ ಆಧುನಿಕ ಕನ್ನಡಿಗರು ಯಾರಾದರೂ ಇದ್ದರೆ ಅವರು ಸರ್ ವಿಶ್ವೇಶ್ವರಯ್ಯನವರು. ಕನ್ನಡಿಗರಲ್ಲಿ ಇಂದಿಗೂ ಪಾರಂಪರ್ಯದ ತೇಜಸ್ಸು ಇದೆಯೆಂಬುದನ್ನು ಜಗತ್ತು ಅರಿತುದು ಮುಖ್ಯವಾಗಿ ಸರ್ ವಿಶ್ವೇಶ್ವರಯ್ಯನವರಿಂದ. ಆದರೆ ಆ ಮುತ್ತಯ್ಯನವರು ನಮ್ಮವರು– ಕನ್ನಡಿಗರು– ಎಂಬುದನ್ನು ನಮ್ಮಲ್ಲೆಷ್ಟು ಜನಕ್ಕೆ ಗೊತ್ತಿದೆ ಯಾರು ಬಲ್ಲರು ? ಇನ್ನು ಅವರು ಯಾರು, ಎಲ್ಲಿಯವರು ಎಂಬುದರ ತಿಳುವಳಿಕೆಯಂತೂ ದೂರ ಉಳಿಯಿತು.

ಇವರ ಜನ್ಮವಾದುದು ಚಿಕ್ಕ ಬಳ್ಳಾಪುರದ ಮೋಕ್ಷಗುಂಡಂ ಮನೆತನದಲ್ಲಿ. ೧೮೬೧ನೆಯ ವರುಷ; ಇವರ ತಂದೆ ಶ್ರೀನಿವಾಸಶಾಸ್ತ್ರಿ; ಕಾಶಿಯಲ್ಲಿ ನಿಂತು ೧೦ ವರುಷ ಯೋಗಾಭ್ಯಾಸ ಸಾಧಿಸಿದವರು; ವಿದ್ಯಾ ವ್ಯಾಸಂಗಿಗಳು. ಆದರೆ ಬಡವರು. ಬಡವರಿದ್ದರೂ ಆತ್ಮಸಂಪತ್ತೇನು ಕಡಿಮೆ ಇರಲಿಲ್ಲ. ತಮ್ಮೂರ ಮುಂದಿನ ನದಿಯಲ್ಲಿ ಸ್ನಾನಮಾಡಿಕೊಂಡು ಮಡಿಯಿಂದ ಬರುತ್ತಿರುವಾಗ ದಾರಿಯಲ್ಲಿ ಬಾಯಾರಿ ನೀರು ಕೇಳಿದ ಒಬ್ಬ ಹೊಲೆಯನಿಗೆ ನೀರು ಕೊಟ್ಟದ್ದಕ್ಕಾಗಿ ಸಮಾಜವು ಇವರಿಗೆ ಬಹಿಷ್ಕಾರವನ್ನು ಹಾಕಿತು; ಆದರೆ ಶಾಸ್ತ್ರಿಗಳು ಅಸಮಿಸಿಗೊಳ್ಳಲಿಲ್ಲ ; ಅಂಥ ಧೈರ್ಯದವರು !

ಬಾಲ ವಿಶ್ವೇಶ್ವರನು ಚಿಕ್ಕಂದಿನಲ್ಲಿ ತನ್ನೂರಲ್ಲಿ ಶಾಲೆಗೆ ಹೋಗುತ್ತಿರುವಾಗ ಸಹಪಾಠಿಗಳಾದ ಶ್ರೀಮಂತ ಬಾಲಕರು ನಂದೀಬೆಟ್ಟಕ್ಕೆ ಅಲ್ಲೀಕೇರಿಗೆ ಹೊರಡಲು ಆತನು ಅವರ ಬುತ್ತಿಗಳನ್ನು ಹೊತ್ತೊಯ್ಯುವನು. ಬಡತನದ ಮೂಲಕ ಬುತ್ತಿ ತರಲಿಕ್ಕಾಗದೆ ಆ ಮೊಟ್ಟೆಹೊತ್ತು ಅವರೊಂದಿಗೆ ಊಟಮಾಡುವನು. ಧನ-ಸಂಪತ್ತಿನ ಕೊರತೆಯನ್ನು ವಿದ್ಯಾಸಂಪತ್ತು ಆಕ್ರಮಿಸಿತ್ತು. ಅಂತೆಯೇ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿ. ಏ. ಆದಾಗ ಅವರ ವಯಸ್ಸು ಇಪ್ಪತ್ತು. ಅವರ ಪ್ರತಿಭೆಯು ಆಗಿನ ಮೈಸೂರ ದಿವಾನರಾದ ರಂಗಾಚಾರ್ಯರ ಮನವನ್ನು ಸೆಳೆಯಿತು. ದಿವಾನರು ಅವರಿಗೆ ವಿದ್ಯಾರ್ಥಿವೇತನವನ್ನಿತ್ತು ಪುಣೆಯ ಎಂಜನಿಯರಿಂಗ್ ಕಾಲೇಜಿಗೆ ಓದಲು ಕಳಿಸಿದರು. ಅಲ್ಲಿಯೂ ಮೊದಲನೆಯ ತರಗತಿಯಲ್ಲಿ

ಮೊದಲನೆಯ ನಂಬರು ದೊರೆಕಿಸಿ ತೇರ್ಗಡೆ ಹೊಂದಿದರು. ಆ ಯಶಸ್ಸು ಅವರಿಗೆ ಕೂಡಲೇ ಅಸಿಸ್ಟಂಟ ಇಂಜನಿಯರ ಕೆಲಸವನ್ನು ಕೊಡಿಸಿಬಿಟ್ಟಿತು. ಅದೇನು ಸಣ್ಣ ಮಾತಲ್ಲ; ಮೊದಲನೆಯ ಸ್ವದೇಶಿ ಇಂಜನಿಯರು ಅವರೇ ! ಅವರ ವಯಸ್ಸು ಆ ಹೊತ್ತಿಗೆ ೨೩ ಮಾತ್ರ. ಹೀಗೆ ಸರ್ಕಾರೀ ಸೇವಾವೃತ್ತಿಯನ್ನು ನಿರ್ವಹಿಸಿ ಸಾಗಿಸುತ್ತಿರಲು ೧೮೯೪ ರಲ್ಲಿ ಅಂದರೆ, ಅವರ ೩೭ ನೇ ವಯಸ್ಸಿಗೆ ಚೀನ-ಜಪಾನ ಗಳಿಗೆ ಹೇಗಿ ಬಂದವೇಲೆ ಮುಂಬೈಪ್ರಾಂತದ ನೀರಾವರಿ ಇಂಜನೀಯರರೂ ಆರೋಗ್ಯಾಧಿಕಾರಿಗಳೂ ಆದರು. ಆಗ ಸರ್ಕಾರದವರು ನಿಯಮಿಸಿದ "ನೀರಾವರಿ ವಿಚಾರಣಾ ಸಮಿತಿ" ಯ ಮುಂದೆ ಇವರಿತ್ತ ಸಾಕ್ಷಿಯನ್ನು ಕೇಳಿದವರು "ಇವರನ್ನು ಮೀರಿಸಿದ ಇಂಜನಿಯರು ಜಗತ್ತಿನಲ್ಲಿ ಒಬ್ಬರೊ–ಇಬ್ಬರೋ" ಅಂದರು. "ಸುಯೇಜ ಕಾಲುವೆಯ ಇಂಜನಿಯರರಿಂದ ಈಚೆಗೆ ಇವರೇ ಶ್ರೇಷ್ಠ ಇಂಜನಿಯರರು" ಎಂದು ದೇಶವೇ ಉಗ್ಗಡಿಸಿತು. ಆದರೆ ಅದರಿಂದ ಅವರ ಅಂತಸ್ತು ಏನೂ ಏರಲಿಲ್ಲ. ಬಿಳಿಯರಿಗೆ ಮಾತ್ರ ಕಾದಿಟ್ಟ ಪ್ರಧಾನ ಎಂಜನಿಯರ ಕೆಲಸವು ಇವರಿಗೆ ೨೪ ವರ್ಷ ಸರ್ವೀಸಾಗಿದ್ದರೂ ಸಿಗಲಿಲ್ಲ. ವಿಶ್ವೇಶ್ವರಯ್ಯನವರು ಬೇಸರಪಟ್ಟು ಕೊಂಡು ಕೆಲಸವನ್ನೇ ಬಿಟ್ಟುಕೊಡುವುದಕ್ಕೂ ಮೈಸೂರಿನ ಮಹಾರಾಜರಾಗಿದ್ದ ನಾಲ್ಮಡಿ ಕೃಷ್ಣರಾಜ ಒಡೆಯರ ಕರೆಬರುವದಕ್ಕೂ ಮೇಳವಿಸಿತು. ಆದರೆ, ಇವರು ಕೆಲಸ ಬಿಟ್ಟರೆಂದು ಮಹಾರಾಜರು ಆಮಂತ್ರಿಸಿದರೋ ಇಲ್ಲವೆ, ಮಹಾರಾಜರ ಆಮಂತ್ರಣ ಬಂತೆದು ಕೆಲಸಬಿಟ್ಟಿರೋ ನಿಶ್ಚಯವಾಗಿ ತಿಳಿಯದು. ಅಂತೂ ಮೈಸೂರಿಗೆ ಬಂದರು. ಅಲ್ಲಿ ಚೀಫ ಇಂಜನಿಯರಾದರು. ೧೯೦೯ ರಲ್ಲಿ ಮತ್ತೆ ಪರದೇಶ–ಪ್ರಯಾಣ ಕೈಕೊಂಡು ಇಜಿಪ್ತ, ಅಮೇರಿಕಾ ಮುಂತಾದ ದೇಶಗಳಿಗೆ ಹೋಗಿ ಬಂದರು. ಅಲ್ಲಿ ಕಂಡುಬಂದ ಸುಖ-ಸಮೃದ್ಧಿಗಳನ್ನು ನಮ್ಮ ನಾಡಿನಲ್ಲಿ ಕಾಣುವ ಹಂಬಲ ಬಹಳ ಅವರಿಗೆ.

ಹಿಂದುಸ್ತಾನದ ಯಾವ ಇಂಜನಿಯರಿಂಗ್ ಏರ್ಪಾಡಿಗೂ ಇವರ ಸಲಹೆ ಬೇಕು. ಮೂಸಾನದಿಯ ಮಹಾಪೂರದಿಂದ ಹೈದರಾಬಾದಕ್ಕಾಗುತ್ತಿದ್ದ ಅನಾಹೂತವನ್ನು ತಪ್ಪಿಸಬೇಕೆಂದು ಪರದೇಶಸಂಚಾರದಲ್ಲಿದ್ದ ಇವರು ಕರೆಯಿಸಲ್ಪಟ್ಟರು. ಉತ್ತರ-ದಕ್ಷಿಣ ಅಮೇರಿಕಾಗಳನ್ನು ವಿಂಗಡಿಸಿದ ಅದ್ಭುತ ಕಾಲುವೆಯಾದ ಪನಾಮಾದ ರಚನೆಯು ಇವರು ಕಂಡುಹಿಡಿದ ಯುಕ್ತಿಯ ಫಲವೇ ಅಂತೆ. ೧೯೨೧ ರಲ್ಲಿ ರಚಿಯದ ಮುಖಂಡನಾದ ಲೇನಿನ್ನನು ಕಂಡು ಸಾರಿದ– "ದೇಶದ ದಾರಿದ್ರ್ಯನಿವಾರಣೆಯು ವಿದ್ಯುತ್‌ಶಕ್ತಿಯ ಸಹಾಯವಿಲ್ಲದೆ ಶಕ್ಯವಿಲ್ಲ" ಎಂಬ ತತ್ವವನ್ನು ವಿಶ್ವೇಶ್ವರಯ್ಯನವರು ೧೯೨೧ ರಲ್ಲಿಯೇ ಬರೆದಿಟ್ಟಿದ್ದಾರೆ.

ಮುಂದೆ ಮೈಸೂರ ದಿವಾನಗಿರಿಯ ಸ್ಥಳವು ಬರಿದಾಯ್ತು. ಭಾರತ ಮಂತ್ರಿಗಳ ಸೂಚನೆ ಬಂತು ಮಹಾರಾಜರಿಗೆ; ವಿಶ್ವೇಶ್ವರಯ್ಯನವರು ದಿವಾನ ಗಿರಿಯ ಪಟ್ಟವನ್ನೇರಿದರು. (೧೯೧೯) ಆ ಮೇಲೆ ಅವರು ಮಾಡಿದ ಕೆಲಸ ಒಂದಲ್ಲ– ಎರಡಲ್ಲ, ನೂರಾರು! ಅವರು ಆಗ ಮಾಡಿಟ್ಟ ಲಿಸ್ಟಿನಂತೆಯೇ ಈ ವರೆಗೂ ಅಲ್ಲಿ ಕೆಲಸ ನಡೆದಿದೆಯೆಂದು ಹೇಳುತ್ತಾರೆ.

ಗ್ರಾಮೋದ್ಧಾರವು ಅವರ ಜೀವದುಸಿರು. ಗ್ರಾಮಗಳ ಜೀವಾಳವಾದ ಬೇಸಾಯಕ್ಕೆ ಆಧಾರಗಳೆಂದರೆ ದನಗಳು. ಅವುಗಳ ಸುಧಾರಣೆಗೆ ಸಹಾಯ-ಪ್ರೋತ್ಸಾಹಗಳು ಬೇಡವೇ? ಅಂತೆಯೇ ಅಲ್ಲಲ್ಲಿ ದನಗಳ ಪ್ರದರ್ಶನಗಳೂ, ಜಾತ್ರೆಗಳೂ ಮೈವೆತ್ತವು. ಒಕ್ಕಲಿಗರಿಗೆ ಬೀಜ-ಬೆಳೆಗಳನ್ನು ಬೆಳೆಸುವಿಕೆ ಮೊದಲಾದ ತಿಳುವಳಿಕೆಯು ಅತ್ಯಾವಶ್ಯಕವೆಂದು ಪ್ರಚಾರೋಪನ್ಯಾಸಕರು ನಿಯಮಿತರಾದರು. ಮಾಯಾದೀಪಗಳಲ್ಲಿ ಉಪನ್ಯಾಸಗಳಾಗುವಂತೆ ವ್ಯವಸ್ಥೆ ಆಯ್ತು. ಕಬ್ಬಿಣ ನೇಗಿಲುಗಳು ಕಂಗೊಳಿಸಿದವು; ತೋಟಗಳಿಗೆ ನೀರಿನ ಪಂಪುಗಳು ಪೂರಯಿಸಲ್ಪಟ್ಟವು, ಒಳ್ಳೆಯ ಬೀಜಗಳು ಒದಗಿಸಲ್ಪಟ್ಟವು; ಕೈಮಗ್ಗಗಳ ಬದಲು ಹಾರೋಲಾಳಿಗಳು ಬಂದವು. ಇವೆಲ್ಲ ಸುಧಾರಣೆಗಳು ಆಗಬೇಕಾದರೆ ಜನರಿಗೆ ಅಕ್ಷರಾಭ್ಯಾಸವಾಗಿರುವುದು ಒಳ್ಳೆಯದೆಂದು ಒತ್ತಾಯದ ಶಿಕ್ಷಣವೂ, ಅದರ ಬೆನ್ನಹಿಂದೆ ಪ್ರತಿ ಒಂದು ಗ್ರಾಮಕ್ಕೆ ವಾಚನಾಲಯವೂ ತಲೆಯೆತ್ತಿದವು. ಪತ್ರಿಕಾಪ್ರಕಟನೆಯು ಹೆಚ್ಚಳವನ್ನು ಪಡೆಯಿತು. ಸ್ವತಃ ವಿಶ್ವೇಶ್ವರಯ್ಯನವರು ಹಳ್ಳಿಗಳಿಗೆ ಹೋಗಿ– "ಇಲ್ಲಿ ತಿಪ್ಪೆಹಾಕಬಾರದು; ಮನೆ-ಗೋಡೆಗಳಿಗೆ ಸಗಣಿ ಬಳಿಯದೆ ಸುಣ್ಣ ಬಳಿದರೆ ಶೋಭೆ; ಗೋದಲೆ ಇಷ್ಟು ನಾತರೆ ಹೇಗೆ?" ಎಂದು ಕೇಳುವರು. ಒಳ್ಳೆಯ ಕೆಲಸಗಾರರಿಗೆ ಚಿನ್ನದ ಪದಕ ಮೆಚ್ಚುಗೊಟ್ಟು ಗೌರವಿಸುವರು. ಒಮ್ಮೆ ಒಂದು ಹಳ್ಳಿಗೆ ಹೋದಾಗ, ದಿವಾನರನ್ನು ಸನ್ಮಾನಿಸಬೇಕೆಂದು ಹೂಮಾಲೆ–ಹಣ್ಣು–ಹಂಪಲಗಳನ್ನು ಬೆಂಗಳೂರಿಂದ ತರಿಸಿ ಆ ಹಳ್ಳಿಗರು ಅಣಿಗೊಳಿಸಿದ್ದರು. ಅದನ್ನು ಕಂಡು– "ನಿಮ್ಮ ಹಿತ್ತಲಲ್ಲಿ ಬೆಳೆದಿದ್ದ ಹೂಗಳಿದ್ದರೆ ತನ್ನಿರಿ, ಹಣ್ಣುಗಳಿದ್ದರೆ ತನ್ನಿರಿ, ಬೆಂಗಳೂರಿಂದ ತರಿಸಿದ ಎರವು ನನಗೆ ಸುಖಕೊಡದು. ಮುಂದಿನಸಾರೆ ನಾನು ಬರುವಷ್ಟರಲ್ಲಿ ಬೆಳೆಯಿರಿ" ಎಂದು ಸೂಚಿಸಿದರು.

ಮೈಸೂರನಾಡಿನ ಅರಣ್ಯವೆಂದರೆ ಅಸಂಖ್ಯ ಸೃಷ್ಟವಸ್ತುಗಳ ನಿಧಿಯೇ. ಕಬ್ಬಿಣದ ಅದರು, ಬಿದರು, ಶ್ರೀಗಂಧ, ಪಾತ್ರೆಯ ಮಣ್ಣು, ನೀರಿನ ವಿಪುಲತೆ ಇವನ್ನೆಲ್ಲ ಹಾಗೆಯೇ ಬೀಳುಗೊಡುವುದು ಉಚಿತವಲ್ಲವೆಂದು ಇವರು ಬಗೆದರು, ಅದರ ಫಲವಾಗಿಯೇ ಭದ್ರಾವತಿಯಲ್ಲಿ ಕಬ್ಬಿಣ-ಕಾಗದ-ಸಿಮೆಂಟ ಕಾರ್ಖಾನೆ

ಗಳು ಬೆಳೆಯೆತ್ತಿ ನಿಂತಿವೆ. ಬೆಂಕಿಕಡ್ಡಿ, ಸಬಕಾರ, ಮಣ್ಣಿನಪಾತ್ರೆಗಳಿಗಾಗಿ ಮೈಸೂರು ಇಂದು ಅಭಿಮಾನಪಡುತ್ತಿದೆ. ಮೋಟಾರ-ವಿಮಾನಗಳ ಕಾರ್ಖಾನೆ ಸ್ಥಾಪಿಸಬೇಕೆಂದೂ, ಭಟಕಳವನ್ನು ಬಂದರಮಾಡಿಕೊಳ್ಳಬೇಕೆಂದೂ ಇವರ ಹಿರಿಯಾಶೆ. ಅದೇ ಮುಳುವಾಗಿ ಇವರು ದಿವಾನಗಿರಿಯಿಂದ ಕಡೆಗಾಗುವಂತೆ ಮಾಡಿತೆಂದು ಕೆಲವರು ಹೇಳುತ್ತಾರೆ. ಆದರೆ ಮೈಸೂರ ವಿಶ್ವವಿದ್ಯಾಲಯ, ಕರ್ನಾಟಕ ಸಾಹಿತ್ಯಪರಿಷತ್ತು, ಕೃಷ್ಣರಾಜಸಾಗರ ಮೊದಲಾದ ಅದ್ಭುತ ವಿಶ್ವಕರ್ಮಗಳು ಇವರಾಳಿಕೆಯಲ್ಲಿಯೇ ಜನ್ಮವೆತ್ತಿದ್ದು ಸಾಕಲ್ಲವೇ? ಸೃಷ್ಟವಸ್ತು ವಾವುದೂ ವ್ಯರ್ಥ ಹಾಳಾಗುವುದನ್ನು ನೋಡಿದರೆ ಇವರಿಗೆ ಹೊಟ್ಟೆಕಡಿಯುವದು. ಒಮ್ಮೆ ಗೆರಸಪ್ಪೆಯ ಜಲಪಾತವನ್ನು ನೋಡಿ ಕಣ್ಣೀರಿಟ್ಟರಂತೆ.— "ಎಲ್ಲಾ ವ್ಯರ್ಥವಾಗಿ ಹೋಗುತ್ತಿದೆಯಲ್ಲಾ! ಎಲಾ ದೇಶವೇ?" ಎಂದು ಅಲ್ಲಿನ ಭೆಟ್ಟಿಯ ಹೊತ್ತಿಗೆಯಲ್ಲಿ ಬರೆದಿದ್ದಾರಂತೆ! ಮಕ್ಕಳಿಲ್ಲದಿದ್ದರೂ ಇವರಲ್ಲಿ ಎಷ್ಟು ವಾತ್ಸಲ್ಯವು ತುಂಬಿದೆಯಲ್ಲ! ಇದೇನು ಸಾಮಾನ್ಯ ದೇಶಭಕ್ತಿಯೇ?

ತಂದೆಯ ರಕ್ತವು ಇವರಲ್ಲಿಳಿದು ಮುಂದುನರಿದು ಮಾಡಿದ ಕೆಲಸವೆಂದರೆ ಹರಿಜನ ಸೇವೆ. ಸರಿಯಾದ ಪ್ರತಿಫಲವಿಲ್ಲದೆ ಸರ್ಕಾರದ ಬಿಟ್ಟಿ ಕೆಲಸ ಮಾಡುವ ಹರಿಜನರಿಗೆ ಯೋಗ್ಯವಾದ ಒಂದೆರಡೆಕರೆ ಭೂಮಿಗಳನ್ನು ಕೊಟ್ಟು ಸಾಗು ಮಾಡಿಸಿದರು. ಸಾರ್ವಜನಿಕ ಜಲಾಶಯಗಳೂ, ವಿದ್ಯಾಲಯಗಳೂ ಮುಕ್ತ ದ್ವಾರವಾಗುವಂತೆ ಅನುಕೂಲ ಮಾಡಿಕೊಟ್ಟರು.

ವೇಳೆಯ ಬೆಲೆ, ಉಡುಪು-ತೊಡುಪು, ಜೆಲುವಾದ ಬರಹ ಇವು ಸಹ ತಿದ್ದುಪಡಿ ಹೊಂದಿದ್ದು ವಿಶ್ವೇರಯ್ಯನವರ ಪುಣ್ಯದಿಂದಲೇ. ಮೈಸೂರು ನಾಡಿನಲ್ಲಿ ಈಗ ಸಹ ಒಳ್ಳೆಯಅಚ್ಚುಕಟ್ಟಾಗಿ ಉಡುಪು ಮಾಡಿಕೊಂಡವನನ್ನು— "ಹೋ! ಇವನು ವಿಶ್ವೇಶ್ವರಯ್ಯನವರಂತೆ ಡ್ರೆಸ್ ಮಾಡಿ ಬಿಟ್ಟ" ಅನ್ನುವ ವಾಡಿಕೆ ಅದೆ.

"ಆರ್ಥಿಕ ಸ್ವಾತಂತ್ರ್ಯವಿಲ್ಲದೆ ರಾಜಕೀಯ ಸ್ವಾತಂತ್ರ್ಯವಿಲ್ಲ" ಎಂಬುದು, ಇವರು ಹೇಳುವ ದೇಶಕಲ್ಯಾಣದ ಸೂತ್ರ. "ನಾಡಿನಲ್ಲಿ ಹುಲ್ಲು ಗುಡಿಸಲು ಹೋಗಬೇಕು. ಮನೆಮನೆಗೆ ಮಂಗಳೂರು ಹಂಚು ಇರಬೇಕು. ಊರಿಗೊಂದು ಪಾಠಶಾಲೆ, ಅಚ್ಚುಕಟ್ಟಾದ ದಾರಿ, ಸೇದುವ ಬಾವಿ ಬೇಕು; ಸೋಮಾರಿತನ ಕಳೆದು ಜನ ದುಡಿತಕ್ಕೊಲಿಯಬೇಕು." ಎಂದು ಸಂಪದಭಿವೃದ್ಧಿಯ ಮಾರ್ಗವನ್ನು ಹೇಳುವರು.

ಅವರ ಶ್ರಮದ ಫಲವಾಗಿಯೇ ಮೈಸೂರ ರಾಜ್ಯವು ಮು. ಗಾಂಧಿ ಅವರಿಂದ 'ರಾಮರಾಜ್ಯ' ಅನಿಸಿಕೊಂಡಿತು. ಅವರನ್ನು ಕೈಗಾರಿಕೆಯ ಕಣ್ಣ

ಋಷಿಗಳೆಂದೂ, ಮೈಸೂರ ಜೀವಿಶಿಲ್ಪಿಯೆಂದೂ ಜನರು ಕರೆದರು. ಬ್ರಿಟಿಶ್ ಪ್ರಭುತ್ವದವರು "ಸರ್" ಎಂದು ಸಂಬೋಧಿಸಿದರು. ಅಂತೆಯೇ ಮೈಸೂರಿನ ಪೊಗದೆಯು ಕಡಿಮೆ ಆಗುವಂತೆ ತಳಹದಿ ಹಾಕಲು ಅವರಿಗೆ ಸಾಧ್ಯವಾಯ್ತು.

ಇಂದಿಗೆ ಅವರ ವಯಸ್ಸು ೮೧ರ ಮನೆ ದಾಟಲಿದೆ. ಆದರೂ ಅವರ ಸಲಹೆ ಕೇಳಲು ದೇಶ-ವಿದೇಶಗಳಿಂದ ಬಂದ ಜನರು ಕಿಕ್ಕಿರಿಯುತ್ತಾರೆ, ಈ ಕಾಟದಿಂದ ತಪ್ಪಿಸಿಕೊಳ್ಳಬೇಕೆಂದು ೧೦ ಸಾವಿರಕ್ಕೆ ಕಡಿಮೆ ಅಲ್ಲದಷ್ಟು ಫೀ ಇಟ್ಟರೂ ಅವಕಾಶ ಸಿಗದಷ್ಟು ಜನರು ಬರುತ್ತಿದ್ದಾರೆ. ಪ್ರಕೃತಿಯು ಆರೋಗ್ಯವಾಗಿದು ಅವರಲ್ಲಿ ತರುಣರನ್ನು ಮೀರಿಸುವ ತೇಜವಿದೆ; ಮೈಕಟ್ಟು ತೆಳುವಾದರೂ ಹಿಳೈಯ ಚಟುವಟಿಕೆಯುಳ್ಳವರು. ಇದಕ್ಕೆ ಕಾರಣವಾಗಿ ಅವರ ಜೀವನಸೂತ್ರ ಹೊಂದಿದೆ. ಅದಾವುದೆಂದರೆ—

ಎಂಟು ಗಂಟೆ ಕೆಲಸ
ಎಂಟು ಗಂಟೆ ವಿನೋದ
ಎಂಟು ಗಂಟೆ ನಿದ್ದೆ.

ಈ ಸೂತ್ರವು ಅವರನ್ನು ಸುಸೂತ್ರವಾಗಿ ಬಹುಕಾಲ ಬದುಕಿಸಲಿ; ಇವರಿಂದ ಕನ್ನಡ ನಾಡು ಜಗತ್ತಿನಲ್ಲಿ ಬೆಳಗಲಿ; ಅವರ ಜೀವನವು ನಮ್ಮೆಲ್ಲರ ಆದರ್ಶವಾಗಲಿ.

ಅಮಾವಾಸ್ಯೆಯ ರಾತ್ರಿಯಲ್ಲಿ

ಲೇಖಕ: ನಾರಾಯಣ ತೊರ್ಕೆ, ಶಿಕ್ಷಕ ಅಜ್ಜೀಬಳ

ಮಗು— ಕಾಣೆನು ಜೆಲುವಿನ ಚಂದಿರನಿಂದು |
ಕಾಣದೆಯೇತಕೆ ಅಡಗಿದನಮ್ಮಾ || ೧ ||
ಎಳವೆಳದಿಂಗಳ ತಂಪನು ನೀಡುವ
ಹಿಮಕರನೇತಕೆ ರಂಜಿಸನಮ್ಮಾ || ೨ ||
ನಭದೊಳು ನಲಿಯುವ ಉಡುಗಳ ನೋಡಲು
ಚಂದಿರ ನೆನಪಾಗುವನಮ್ಮಾ || ೩ ||
ಉದಯಾಕಾಶದಿ ಉಡುದೊರೆ ಬರದಿರೆ
ಭೂಮಿಗೆ ಬೀಸರು ಏಕಮ್ಮಾ || ೪ ||
ನೀಲಾಕಾಶದಿ ತಿಂಗಳು ಮೂಡಲು
ಜಗಕಾನಂದವು ಏಕಮ್ಮಾ || ೫ ||

ತಾಯಿ— ಎನಗಾನಂದವು ನಿನ್ನನು ನೋಡಿ
ಭೂಮಿಗೆ ಚಂದಿರ ಮಗನಯ್ಯಾ ॥ ೧ ॥
ಬೆಳಕದು ತೀರಲು ಗಳಿಸಲು ಹೋಗಿಹ
ನಾಳಿಗೆ ಬರುವನು ತಾಳಯ್ಯ ॥ ೨ ॥

ಸಿಂಹಲ ದ್ವೀಪ

ಲಂಕೆಯಲ್ಲಿ ಹುಟ್ಟಿದವರೆಲ್ಲರೂ ರಾವಣರೆಂಬ ಗಾದೆಯ ಮಾತು ನಮ್ಮ ನಾಡಿನಲ್ಲಿ ಬಳಕೆಯಲ್ಲಿದ್ದರೂ ಕೂಡ ಈಗ ಲಂಕೆಯಲ್ಲಿ ರಾವಣನಂಥವರು ಒಬ್ಬರೂ ಇಲ್ಲವೆಂದು ಖಂಡಿತವಾಗಿ ಹೇಳಬಹುದು. ಬ್ರಿಟಿಶ ಸಾಮ್ರಾಜ್ಯದಲ್ಲಿ ಲಂಕೆಯು (ಸಿಂಹಳ ದ್ವೀಪವು) ಬಹು ಮಹತ್ವದ ಸ್ಥಾನವಾಗಿರುವದು. ಇಲ್ಲಿ ಅನೇಕ ಇಂಗ್ಲಿಷರು ವಸಹಾತು ಮಾಡಿಕೊಂಡಿದ್ದಾರೆ. ಈ ದೇಶವು ವಿಷುವ ವೃತ್ತಕ್ಕೆ ಸಮೀಪವಾಗಿದ್ದರೂ ಕೂಡ ಎತ್ತರವಾಗಿದ್ದದರಿಂದ ಹವೆಯು ಸೊಗಸಾಗಿದೆ. ಭೂಮಿಯು ಬೆಳೆಯುಳ್ಳದ್ದು. ಇಂಥ ದೇಶದ ಮೇಲೆ ಈಗ ಜಪಾನಿಗಳ ದೃಷ್ಟಿ ಬಿದ್ದಿದೆ. ಸದ್ಯದ ಮಹಾಯುದ್ಧದ ಕ್ಷೇತ್ರವು ಬಲು ವಿಸ್ತಾರವಾಗಿರುವದು. ಅದು ಯಾವ ಸ್ಥಳದಲ್ಲಿ, ಯಾವಾಗ ವಿಕಟ ಸ್ವರೂಪವನ್ನು ಧರಿಸುವದೋ ಹೇಳಲಿಕ್ಕೆ ಬರುವದಿಲ್ಲ. ಕೋಲಂಬೋ, ತ್ರಿಂಕೋ ಮಾಲಿಗಳ ಮೇಲೆ, ಜಪಾನಿಗಳು ಮಾಡಿದ ವಿಮಾನ ದಾಳಿಗಳಿಂದ, ಜಗತ್ತಿನ ಜನರ ಲಕ್ಷ್ಯವೆಲ್ಲ ಸಿಂಹಲ ದ್ವೀಪದ ಕಡೆಗೆ ಹೊರಳಿದೆ. ಇದೇ ಸಮಯದಲ್ಲಿ ನಾವಾದರೂ ಈ ದೇಶದ ಮಹತ್ವವನ್ನು ಪುನರವಲೋಕಿಸುವದು ಅಗತ್ಯವಿದೆ.

ಇದು ಹಿಂದುಸ್ಥಾನದ ದಕ್ಷಿಣಕ್ಕೆ ಒಂದು ನಡುಗಡ್ಡೆಯಾಗಿದೆ. ಕ್ಷೇತ್ರ ಫಲವಾನದಿಂದ ನಮ್ಮ ಧಾರವಾಡ ಜಿಲ್ಲೆಯ ೫ ಪಟ್ಟು ದೊಡ್ಡದಾಗಿದ್ದರೂ; ಜನಸಂಖ್ಯೆಯ ಮಾನದಿಂದ ೪ ಪಟ್ಟು ದೊಡ್ಡದಾಗಿರುವದು. ಮಾನಾರದ ಆಖಾತ, ಪಾಲ್ಕ ಸಾಮುದ್ರಧುನಿಗಳು ನಮ್ಮ ದೇಶದಿಂದ ಇದನ್ನು ದೂರ ಮಾಡುತ್ತಿದ್ದರೂ, ರಾಮನ ಸೇತುವೆಗಳು ಹೊಂದಿಕೆ ಮಾಡುತ್ತಲಿವೆ. ಕೋಲಂಬೋ ಪಟ್ಟಣವು ಈ ದೇಶದ ರಾಜಧಾನಿಯು. ಇದು ಪೃಥ್ವಿಯಲ್ಲಿಯೇ ಹೆಸರಾದ ಬಂದರವಾಗಿದೆ. ಬ್ರಿಟಿಷರು ಈ ದೇಶವನ್ನು ಗೆದ್ದುಕೊಂಡ ಬಳಿಕ ಬಹಳ ಹಣವನ್ನು ವೆಚ್ಚಮಾಡಿ ಈ ಬಂದರವನ್ನು ಕಟ್ಟಿದ್ದಾರೆ. ಇಲ್ಲಿ

ಅಮೇರಿಕಾ, ದಕ್ಷಿಣ ಆಫ್ರಿಕಾ, ಪಶ್ಚಿಮ ಏಶಿಯಾ, ಪೂರ್ವ ಏಶಿಯಾ, ಆಸ್ಟ್ರೇಲಿಯಾ, ನ್ಯೂಝಿಲ್ಯಾಂಡಗಳಿಗೆ ಹೋಗುವ ಹಡಗಗಳು ಪ್ರತಿನಿತ್ಯವೂ ಬರುತ್ತಲಿವೆ. ಹಡಗುಗಳಿಗೆ ಬೇಕಾಗುವ ಕಲ್ಲಿದ್ದಲಿ, ನೀರು, ಆಹಾರಸಂಗ್ರಹ, ಬಟ್ಟೆಗಳು ಎಲ್ಲವೂ ಇಲ್ಲಿ ದೊರೆಯುತ್ತವೆ. ಇದರಿಂದ ಈ ಬಂದರವು ಹಿಂದೀ ಮಹಾಸಾಗರದೊಳಗೆ ಮಹತ್ವದ ಕೇಂದ್ರಸ್ಥಾನವಾಗಿರುವದು. ಸಿಂಗಾಪುರದ ನಂತರ ಕೋಲಂಬೋ ಬಂದರಕ್ಕಿರುವಷ್ಟು ಮಹತ್ವವು ಮತ್ತಾವ ಬಂದರ ಗಳಿಗೂ ಇಲ್ಲ. ತ್ರಿಂಕೋಮಾಲಿಯು ಈಶಾನ್ಯ ಬದಿಯಲ್ಲಿ ಹೆಸರಾದ ಬಂದರವೂ ಪಟ್ಟಣವೂ ಆಗಿರುವದು. ಕ್ಯಾಂಡಿ ಅನುರಾಧಾಪುರಗಳು ಒಳ ದೇಶದಲ್ಲಿ ಇದ್ದು ಹಿಂದಿನಕಾಲದ ರಾಜಧಾನಿಗಳಾಗಿವೆ.

ಇಲ್ಲಿಯ ಗುಡ್ಡಗಳ ಓರೆಗಳಲ್ಲಿ ಚಹದ ತೋಟಗಳಿರುವವು. ಯುರೋಪಿಯನ್ನರು ಈ ವ್ಯವಸಾಯದಲ್ಲಿ ಸುಮಾರು ೧೫ ಕೋಟಿ ರೂ. ಬಂಡವಾಳವನ್ನು ತೊಡಗಿಸಿರುವರು. ಒಡೆತನವು ಅವರ ಪಾಲಿಗಿದ್ದರೂ ಕೂಲೀ ಮಾಡುವದು ನಮ್ಮ ದಕ್ಷಿಣ ಹಿಂದುಸ್ಥಾನದವರ ಪಾಲಿಗಿದೆ. ಚಹದ ಗಿಡಗಳು ನಾಲ್ಕರಿಂದ ೬ ಫೂಟಿನವರೆಗೆ ಎತ್ತರವಾಗಿ ಬೆಳೆಯುವವು. ಸುಗ್ಗಿಯಲ್ಲಿ ಒಂದೊಂದು ಗಿಡದ ಎಲೆಗಳನ್ನೂ ಕತ್ತರಿಸಿ ಹರವಿದರೆ ೨೦ ಚೌರಸ ಫೂಟ ಸ್ಥಳ ತುಂಬುವಷ್ಟು ಪ್ರಫುಲ್ಲವಾಗಿ ಬೆಳೆಯುವವು. ಇಲ್ಲಿಯ ಭೂಮಿಯಲ್ಲಿ ಬತ್ತ, ತೆಂಗು, ಕೋಕೊ, ರಬ್ಬರು, ಸಿಂಕೋನಾ, ಅಡಿಕೆ ಯಾಲಕ್ಕಿಗಳು ಹುಲುಸಾಗಿ ಬೆಳೆಯುವವು. ಯುರೋಪಿಯನ್ನರು ಚಹವನ್ನು ಬೆಳೆಯಿಸುವದರಲ್ಲಿ ಹೆಚ್ಚು ಲಕ್ಷ್ಯವನ್ನು ಪೂರೈಸಿದಂತೆ, ಇತ್ತೀಚೆಗೆ ರಬ್ಬರವನ್ನು ಬೆಳೆಯಿಸುವದರಲ್ಲಿಯೂ ಹೆಚ್ಚಳವನ್ನು ಪಡೆಯಹತ್ತಿದ್ದಾರೆ. ಬ್ರಾಝಿಲ್‌ನಿಂದ ಉತ್ತಮ ಜಾತಿಯ ರಬ್ಬರದ ಅಗಿಗಳನ್ನು ತಂದು ಇಲ್ಲಿಯ ತೋಟಗಳಲ್ಲಿ ಹಚ್ಚಿದ್ದಾರೆ. ಕಸುವುಳ್ಳ ಭೂಮಿ, ಆರ್ದ್ರತೆ ಗೂಡಿದ ಉಷ್ಣಹವೆ, ವರ್ಷದಲ್ಲಿ ಏಳೆಂಟು ತಿಂಗಳು ಮಳೆ, ಇವೆಲ್ಲವು ದೊರ ಕಿದರೆ ಮಾತ್ರ ರಬ್ಬರದ ಗಿಡಗಳು ಚೆನ್ನಾಗಿ ಬೆಳೆಯುವವು. ಇಂಥ ಪರಿಸ್ಥಿತಿಯು ಸಿಂಹಲ ದ್ವೀಪದ ತುಂಬ ಇದ್ದದರಿಂದ ಇನ್ನು ತುಸ ದಿನಗಳಲ್ಲಿ ರಬ್ಬರವು ಈ ದೇಶದ ಮುಖ್ಯ ಬೆಳೆಯಾಗುವುದರಲ್ಲಿಯೂ ರಬ್ಬರದ ಮಹತ್ವವನ್ನು ಕಡಿಮೆ ಮಾಡುವಂಥ ವಸ್ತುವಿನ ಶೋಧವಾಗುವವರೆಗೆ, ರಬ್ಬರದ ಸಲುವಾಗಿ ಸಿಂಹಲ ದ್ವೀಪವು ಹೆಸರಾಗಿಯೇ ಉಳಿಯುವುದರಲ್ಲಿಯೂ ಸಂದೇಹವಿಲ್ಲ.

ಇಲ್ಲಿಯ ಹವಾಮಾನವು ನಮ್ಮಲ್ಲಿಯ ಕೊಂಕಣಪಟ್ಟಿಯಂತೆ ಇರುವದು. ಕೊಂಕಣದಲ್ಲಿ ಬೆಳೆಯುವಂಥ ವನಸ್ಪತಿಗಳು ಇಲ್ಲಿಯೂ ಬೆಳೆಯುವವು. ಇಲ್ಲಿ ತೆಂಗಿನ ಗಿಡಗಳು ೬೦ ರಿಂದ ೧೦೦ ಫೂಟುಗಳವರೆಗೆ ಎತ್ತರ

ತಾಯಿ— ಎನಗಾನಂದವು ನಿನ್ನನು ನೋಡಿ
ಭೂಮಿಗೆ ಚಂದಿರ ಮಗನಯ್ಯಾ ॥ ೧ ॥
ಬೆಳಕದು ತೀರಲು ಗಳಿಸಲು ಹೋಗಿಹ
ನಾಳಿಗೆ ಬರುವನು ತಾಳಯ್ಯ ॥ ೨ ॥

ಸಿಂಹಲ ದ್ವೀಪ

ಲಂಕೆಯಲ್ಲಿ ಹುಟ್ಟಿದವರೆಲ್ಲರೂ ರಾವಣರೆಂಬ ಗಾದೆಯ ಮಾತು ನಮ್ಮ ನಾಡಿನಲ್ಲಿ ಬಳಕೆಯಲ್ಲಿದ್ದರೂ ಕೂಡ ಈಗ ಲಂಕೆಯಲ್ಲಿ ರಾವಣನಂಥವರು ಒಬ್ಬರೂ ಇಲ್ಲವೆಂದು ಖಂಡಿತವಾಗಿ ಹೇಳಬಹುದು. ಬ್ರಿಟಿಶ ಸಾಮ್ರಾಜ್ಯದಲ್ಲಿ ಲಂಕೆಯು (ಸಿಂಹಳ ದ್ವೀಪವು) ಬಹು ಮಹತ್ವದ ಸ್ಥಾನವಾಗಿರುವದು. ಇಲ್ಲಿ ಅನೇಕ ಇಂಗ್ಲಿಷರು ವಸಹಾತು ಮಾಡಿಕೊಂಡಿದ್ದಾರೆ. ಈ ದೇಶವು ವಿಷುವ ವೃತ್ತಕ್ಕೆ ಸಮೀಪವಾಗಿದ್ದರೂ ಕೂಡ ಎತ್ತರವಾಗಿದ್ದದರಿಂದ ಹವೆಯು ಸೊಗ ಸಾಗಿದೆ. ಭೂಮಿಯು ಬೆಳೆಯುಳ್ಳದ್ದು. ಇಂಥ ದೇಶದ ಮೇಲೆ ಈಗ ಜಪಾನಿಗಳ ದೃಷ್ಟಿ ಬಿದ್ದಿದೆ. ಸದ್ಯದ ಮಹಾಯುದ್ಧದ ಕ್ಷೇತ್ರವು ಬಲು ವಿಸ್ತಾರವಾಗಿರುವದು. ಅದು ಯಾವ ಸ್ಥಳದಲ್ಲಿ, ಯಾವಾಗ ವಿಕಟ ಸ್ವರೂಪ ವನ್ನು ಧರಿಸುವದೋ ಹೇಳಲಿಕ್ಕೆ ಬರುವದಿಲ್ಲ. ಕೋಲಂಬೋ, ತ್ರಿಂಕೋ ಮಾಲಿಗಳ ಮೇಲೆ, ಜಪಾನಿಗಳು ಮಾಡಿದ ವಿಮಾನ ದಾಳಿಗಳಿಂದ, ಜಗತ್ತಿನ ಜನರ ಲಕ್ಷ್ಯವೆಲ್ಲ ಸಿಂಹಲ ದ್ವೀಪದ ಕಡೆಗೆ ಹೊರಳಿದೆ. ಇದೇ ಸಮಯದಲ್ಲಿ ನಾವಾದರೂ ಈ ದೇಶದ ಮಹತ್ವವನ್ನು ಪುನರವಲೋಕಿಸುವದು ಅಗತ್ಯವಿದೆ.

ಇದು ಹಿಂದುಸ್ಥಾನದ ದಕ್ಷಿಣಕ್ಕೆ ಒಂದು ನಡುಗಡ್ಡೆಯಾಗಿದೆ. ಕ್ಷೇತ್ರ ಫಲವಾನದಿಂದ ನಮ್ಮ ಧಾರವಾಡ ಜಿಲ್ಲೆಯ ೫ ಪಟ್ಟು ದೊಡ್ಡದಾಗಿದ್ದರೂ ಜನಸಂಖ್ಯೆಯ ಮಾನದಿಂದ ೪ ಪಟ್ಟು ದೊಡ್ಡದಾಗಿರುವದು. ಮಾನಾರ ಅಖಾತ, ಪಾಲ್ಕ ಸಾಮುದ್ರಧುನಿಗಳು ನಮ್ಮ ದೇಶದಿಂದ ಇದನ್ನು ದೂರ ಮಾಡುತ್ತಿದ್ದರೂ, ರಾಮನ ಸೇತುವೆಗಳು ಹೊಂದಿಕೆ ಮಾಡುತ್ತಲಿವೆ. ಕೋಲಂಬೋ ಪಟ್ಟಣವು ಈ ದೇಶದ ರಾಜಧಾನಿಯು. ಇದು ಪೃಥ್ವಿಯಲ್ಲಿಯೇ ಹೆಸರಾದ ಬಂದರವಾಗಿದೆ. ಬ್ರಿಟಿಷರು ಈ ದೇಶವನ್ನು ಗೆದ್ದುಕೊಂಡ ಬಳಿಕ ಬಹಳ ಹಣವನ್ನು ವೆಚ್ಚಮಾಡಿ ಈ ಬಂದರವನ್ನು ಕಟ್ಟಿದ್ದಾರೆ. ಇಲ್ಲಿ

ಅಮೇರಿಕಾ, ದಕ್ಷಿಣ ಆಫ್ರಿಕಾ, ಪಶ್ಚಿಮ ಏಶಿಯಾ, ಪೂರ್ವ ಏಶಿಯಾ, ಆಸ್ಟ್ರೇಲಿಯಾ, ನ್ಯೂಝಿಲ್ಯಾಂಡಗಳಿಗೆ ಹೋಗುವ ಹಡಗಗಳು ಪ್ರತಿನಿತ್ಯವೂ ಬರುತ್ತಲಿವೆ. ಹಡಗುಗಳಿಗೆ ಬೇಕಾಗುವ ಕಲ್ಲಿದ್ದಲಿ, ನೀರು, ಆಹಾರಸಂಗ್ರಹ, ಬಟ್ಟಿಗಳು ಎಲ್ಲವೂ ಇಲ್ಲಿ ದೊರೆಯುತ್ತವೆ. ಇದರಿಂದ ಈ ಬಂದರವು ಹಿಂದೀ ಮಹಾಸಾಗರದೊಳಗೆ ಮಹತ್ವದ ಕೇಂದ್ರಸ್ಥಾನವಾಗಿರುವದು. ಸಿಂಗಾಪುರದ ನಂತರ ಕೋಲಂಬೋ ಬಂದರಕ್ಕಿರುವಷ್ಟು ಮಹತ್ವವು ಮತ್ತಾವ ಬಂದರ ಗಳಿಗೂ ಇಲ್ಲ. ತ್ರಿಂಕೋಮಾಲಿಯು ಈಶಾನ್ಯ ಬದಿಯಲ್ಲಿ ಹೆಸರಾದ ಬಂದರವೂ ಪಟ್ಟಣವೂ ಆಗಿರುವದು. ಕ್ಯಾಂಡಿ ಅನುರಾಧಾಪುರಗಳು ಒಳ ದೇಶದಲ್ಲಿ ಇದ್ದು ಹಿಂದಿನಕಾಲದ ರಾಜಧಾನಿಗಳಾಗಿವೆ.

ಇಲ್ಲಿಯ ಗುಡ್ಡಗಳ ಓರೆಗಳಲ್ಲಿ ಚಹದ ತೋಟಗಳಿರುವವು. ಯುರೋಪಿ ಯನ್ನರು ಈ ವ್ಯವಸಾಯದಲ್ಲಿ ಸುಮಾರು ೧೫ ಕೋಟಿ ರೂ. ಬಂಡವಾಳವನ್ನು ತೊಡಗಿಸಿರುವರು. ಒಡೆತನವು ಅವರ ಪಾಲಿಗಿದ್ದರೂ ಕೂಲೀ ಮಾಡುವದು ನಮ್ಮ ದಕ್ಷಿಣ ಹಿಂದುಸ್ಥಾನದವರ ಪಾಲಿಗಿದೆ. ಚಹದ ಗಿಡಗಳು ನಾಲ್ಕರಿಂದ ೬ ಫೂಟಿನವರೆಗೆ ಎತ್ತರವಾಗಿ ಬೆಳೆಯುವವು. ಸುಗ್ಗಿಯಲ್ಲಿ ಒಂದೊಂದು ಗಿಡದ ಎಲೆಗಳನ್ನೂ ಕತ್ತರಿಸಿ ಹರವಿದರೆ ೨೦ ಚೌರಸ ಫೂಟ ಸ್ಥಳ ತುಂಬುವಷ್ಟು ಪ್ರಫುಲ್ಲವಾಗಿ ಬೆಳೆಯುವವು. ಇಲ್ಲಿಯ ಭೂಮಿಯಲ್ಲಿ ಬತ್ತ, ತೆಂಗು, ಕೋಕೊ, ರಬ್ಬರು, ಸಿಂಕೋನಾ, ಅಡಿಕೆ ಯಾಲಕ್ಕಿಗಳು ಹುಲುಸಾಗಿ ಬೆಳೆಯುವವು. ಯುರೋಪಿಯನ್ನರು ಚಹವನ್ನು ಬೆಳೆಯಿಸುವದರಲ್ಲಿ ಹೆಚ್ಚು ಲಕ್ಷ್ಯವನ್ನು ಪೂರೈಸಿದಂತೆ, ಇತ್ತೀಚೆಗೆ ರಬ್ಬರವನ್ನು ಬೆಳೆಯಿಸುವದರಲ್ಲಿಯೂ ಹೆಚ್ಚಳವನ್ನು ಪಡೆಯಹತ್ತಿದ್ದಾರೆ. ಬ್ರಾಝಿಲ್‌ನಿಂದ ಉತ್ತಮ ಜಾತಿಯ ರಬ್ಬರದ ಅಗಿಗಳನ್ನು ತಂದು ಇಲ್ಲಿಯ ತೋಟಗಳಲ್ಲಿ ಹಚ್ಚಿದ್ದಾರೆ. ಕಸುವುಳ್ಳ ಭೂಮಿ, ಆರ್ದ್ರತೆ ಗೂಡಿದ ಉಷ್ಣಹವೆ, ವರ್ಷದಲ್ಲಿ ಏಳೆಂಟು ತಿಂಗಳು ಮಳೆ, ಇವೆಲ್ಲವು ದೊರ ಕಿದರೆ ಮಾತ್ರ ರಬ್ಬರದ ಗಿಡಗಳು ಚೆನ್ನಾಗಿ ಬೆಳೆಯುವವು. ಇಂಥ ಪರಿಸ್ಥಿತಿಯು ಸಿಂಹಲ-ದ್ವೀಪದ ತುಂಬ ಇದ್ದದರಿಂದ ಇನ್ನು ತುಸ ದಿನಗಳಲ್ಲಿ ರಬ್ಬರವು ಈ ದೇಶದ ಮುಖ್ಯ ಬೆಳೆಯಾಗುವುದರಲ್ಲಿಯೂ ರಬ್ಬರದ ಮಹತ್ವವನ್ನು ಕಡಿಮೆ ಮಾಡುವಂಥ ವಸ್ತುವಿನ ಶೋಧವಾಗುವವರೆಗೆ, ರಬ್ಬರದ ಸಲುವಾಗಿ ಸಿಂಹಲ ದ್ವೀಪವು ಹೆಸರಾಗಿಯೇ ಉಳಿಯುವುದರಲ್ಲಿಯೂ ಸಂದೇಹವಿಲ್ಲ.

ಇಲ್ಲಿಯ ಹವಾಮಾನವು ನಮ್ಮಲ್ಲಿಯ ಕೊಂಕಣಪಟ್ಟಿಯಂತೆ ಇರುವದು. ಕೊಂಕಣದಲ್ಲಿ ಬೆಳೆಯುವಂಥ ವನಸ್ಪತಿಗಳು ಇಲ್ಲಿಯೂ ಬೆಳೆಯುವವು. ಇಲ್ಲಿ ತೆಂಗಿನ ಗಿಡಗಳು ೬೦ ರಿಂದ ೧೦೦ ಫೂಟುಗಳವರೆಗೆ ಎತ್ತರ

ವಾಗಿರುವವು. ಇದರ ಒಂದೊಂದು ಎಲೆಯು ೨೦ ಘೂಟಿಗಿಂತಲೂ ಉದ್ದವಾಗಿರುವದು. ಇಲ್ಲಿಯ ಕುಟುಂಬದವರು ತಮ್ಮ ಆಸ್ತಿಯನ್ನು ತಮ್ಮ ತೋಟದಲ್ಲಿರುವ ತೆಂಗಿನ ಗಿಡಗಳನ್ನು ಎಣಿಸಿನೋಡಿ ಹೇಳುವ ಪರಿಪಾಠವುಂಟು. ಇಲ್ಲಿಯ ಜನರು ಆಹಾರದಲ್ಲಿ ನಿತ್ಯವೂ ತೆಂಗನ್ನು ಹೆಚ್ಚಾಗಿ ಉಪಯೋಗಿಸುವರು. ತೆಂಗಿನ ಬೆಳೆಯು ಇಲ್ಲಿಯ ಜನರ ಅನೇಕ ವ್ಯವಸಾಯಗಳಿಗೆ ಆಸ್ಪದವಾಗಿದೆ. ಮತ್ತು ಬಡತನವನ್ನು ಹಿಂಗಿಸುವ ಬೆಳೆಯಾಗಿದೆ. ನಮ್ಮ ದೇಶದ ಜನರು ಇಲ್ಲಿಗೆ ಹೋಗಿ, ತುಸ ಬಂಡವಾಳದಿಂದ ತೆಂಗಿನ ವ್ಯವಸಾಯಗಳಲ್ಲಿ ತೊಡಗಬಹುದಾಗಿದೆ. ಪೂರ್ವಕಾಲದಲ್ಲಿ ಅಶೋಕನು ಸಿಂಹಲ ದ್ವೀಪದಲ್ಲಿ ಬೌದ್ಧ ಧರ್ಮವನ್ನು ಹಬ್ಬಿಸಿದನು. ಅಂದಿನಿಂದ ತುಸ ಹೆಚ್ಚು ಕಡಿಮೆ ಪ್ರಮಾಣದಿಂದ ಆದು ಇಲ್ಲಿ ಉಳಿದೇ ಇದೆ. ನಮ್ಮ ಹಿಂದು ಬಾಂಧವರು ಇಲ್ಲಿ ನೆಲಸಿರುವದರಿಂದ ವಿಹಾರಗಳೊಂದಿಗೆ ಗುಡಿಗಳ ಶಿಖರಗಳೂ ಅಲ್ಲಲ್ಲಿ ಕಂಡು ಬರುವವು. ಬೌದ್ಧರಲ್ಲಿ ಶ್ರೀಮಂತರು ಹೆಚ್ಚು. ಮೂಲಜಾತಿಯ ಜನರು ಗುಡ್ಡಗಾಡಿನಲ್ಲಿ ಹೆಚ್ಚಾಗಿ ವಾಸಿಸುವರು. ಅವರ ಮೈಬಣ್ಣ ನಾಸಿಪುಡಿಯದು. ಇವರು ಶಿಕ್ಷಣದಲ್ಲಿ ತೀರ ಹಿಂದುಳಿದ ವರ್ಗದವರಾಗಿದ್ದಾರೆ. ಇವರಲ್ಲಿ ಕೆಲವು ಹೆಂಗುಸರು ಏಕಕಾಲಕ್ಕೆ ಇಬ್ಬರು ಗಂಡಂದಿರನ್ನು ಲಗ್ನಮಾಡಿಕೊಳ್ಳುವ ರೂಢಿಯಿದೆ. ಕಿವಿ, ಮೂಗು, ಕೈಗಳಲ್ಲಿ ತುಂಬಾ ಆಭರಣಗಳನ್ನು ಇಟ್ಟುಕೊಂಡರೂ, ಕಾಲುಗಳಲ್ಲಿ ಏನೂ ಧರಿಸುವದಿಲ್ಲ. ಹೆಂಗುಸರು ಸಹ ಗಂಡುಸರಂತೆ ಧೋತರ ಉಟ್ಟುಕೊಳ್ಳುವರು. ಸಿಂಹಲೀ ಕನ್ನೆಯರಿಗೆ ನೃತ್ಯವು ಬಹಳವಾಗಿ ಸೇರುತ್ತದೆ. ಹೊರಗಿನಿಂದ ಹೆಚ್ಚಿನವರಾರಾದರೂ ಬಂದಾಗ, ಇಲ್ಲವೆ ಊರಲ್ಲಿ ಉತ್ಸವ ಸಮಾರಂಭ ಹಬ್ಬಗಳಿದ್ದಾಗ ಹೆಸರಾದ ನೃತ್ಯವಾಗುವದು. ನೃತ್ಯವಿಲ್ಲದ ಯಾವ ಸಮಾರಂಭವೂ ಇವರಿಗೆ ಸೊಗಸದು. ಇಂಥ ಸಮಾರಂಭಗಳಿಗೆ ಪಲ್ಲಕ್ಕಿಯ ಮೇಲಿಂದಲೂ ಎತ್ತಿನ ಗಾಡಿಗಳಿಂದಲೂ, ಮನುಷ್ಯರು ಎಳೆಯುವ ಕೈಬಂಡಿ (ರಿಕ್ಷಾ) ಗಳಿಂದಲೂ ದೂರದೂರಿನ ಜನರು ಕೂಡುವರು.

ಕೋಲಂಬೋದಲ್ಲಿ ಹಡಗುಪಡೆಯನ್ನೂ ವೈಮಾನಿಕದಳವನ್ನೂ ಇಡಲು ತುಂಬ ಅನುಕೂಲವಿದೆ. ಬ್ರಿಟಿಷರು ಇಲ್ಲಿ ಸಾಕಷ್ಟು ಸೈನ್ಯವನ್ನಿಟ್ಟಿದ್ದಾರೆ. ಇದರಿಂದ ಹಿಂದೀ ಮಹಾಸಾಗರವೆಂಬ ಅಂಗಳದ ಮಧ್ಯದಲ್ಲಿ, ನಮ್ಮ ರಕ್ಷಕರು ಸಿದ್ಧರಾಗಿರುವಂತಾಗಿ ಹಿಂದುಸ್ಥಾನದ ಕರಾವಳಿಗುಂಟ ಸೈನ್ಯವಿಡುವ ಅವಸರದ ಪ್ರಸಂಗವು ನಮ್ಮ ಸರಕಾರಕ್ಕೆಲ್ಲವೆಂದು ಹಲವರು ಅಭಿಪ್ರಾಯಪಡುತ್ತಾರೆ.

ಪ್ರಾಕ್ಕಾವ್ಯ ಮಾಲಿಕೆ

(ಗ್ರಂಥ ಪರಿಚಯ)

'ಪ್ರಾಕ್ಕಾವ್ಯ ಮಾಲಿಕೆ' ಯು ಕನ್ನಡ ಕಾವ್ಯಭಾಗಗಳ ಸಂಗ್ರಹವಾಗಿದೆ. ಬಾಸೆಲ್ ಮಿಶನ್ನಿನಲ್ಲಿ ಬೋಧಕರಾಗಿದ್ದ **ರೆವರೆಂಡ್, ಜಿ. ವರ್ಥ** ಅವರು ಸುಮಾರು ೭೫ ವರುಷಗಳ ಹಿಂದೆ ಈ ಕಾವ್ಯಸಂಗ್ರಹವನ್ನು ತಯಾರಿಸಿದರು. ಈ ಗ್ರಂಥವು ೧೮೬೮ ರಲ್ಲಿ ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಮದ್ರಾಸ ಇವರಿಗಾಗಿ ಮೈಸೂರಿನ ಗವರ್ನಮೆಂಟ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು. ಮೈಸೂರಿನ ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಆಗಿದ್ದ **ಜೆ. ಗ್ಯಾರೆಟ್** ಇವರು ಇದನ್ನು ಪ್ರಕಟಿಸಿದ್ದಾರೆ. ಈಚೆಗೆ ಈ ಗ್ರಂಥದ ಪ್ರತಿಗಳು ಎಲ್ಲಿಯೂ ದೊರೆಯುವದಿಲ್ಲ. ಬಹುಮಟ್ಟಿಗೆ ಈ ಗ್ರಂಥ ಪ್ರಕಟನೆಯ ವಿಚಾರವೇ ಮರೆತು ಹೋದಂತಾಗಿದೆ. ೭೫ ವರುಷಗಳ ಹಿಂದೆ ಒಮ್ಮೆ ಮುದ್ರಿತವಾಗಿ ಈಚೆಗೆ ಈ ಗ್ರಂಥ ಸಾಕಷ್ಟು ಪ್ರಚಾರದಲ್ಲಿ ಇರದೆ ಹೋದುದೇ ಇದಕ್ಕೆ ಕಾರಣವಾಗಿದೆ. ಆದರೆ ಈ ಗ್ರಂಥವನ್ನು ನಾವು ಸಂಪೂರ್ಣವಾಗಿ ಮರೆತು ಬಿಡುವ ಹಾಗಿಲ್ಲ. ಏಕೆಂದರೆ ವರ್ಥ ಸಾಹೇಬರು ಕನ್ನಡ ಭಾಷೆಯಲ್ಲಿ ಪ್ರಾವೀಣ್ಯವನ್ನು ತೋರಿಸುವವರಿಗೆ ಪ್ರತಿ ವರುಷ ೬೦ ರೂಪಾಯಿಗಳಷ್ಟು ಪಾರಿತೋಷಕ ಕೊಡುವದಕ್ಕೆ ಒಂದು ನಿಧಿಯನ್ನು ಬಿಟ್ಟು ಹೋಗಿದ್ದಾರೆ. ಮುಂಬಯಿ ಇಲಾಖೆಯ ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಪರವಾಗಿ ಧಾರವಾಡ ಟ್ರೇನಿಂಗ್ ಕಾಲೇಜಿನಲ್ಲಿ 'ವರ್ಥ ಪ್ರಾಯಿಜ್' ಪರೀಕ್ಷೆ ನಡೆಯುವ ಏರ್ಪಾಡೂ ಇದೆ. ಈ 'ವರ್ಥ ಪ್ರಾಯಿಜ್' ಪರೀಕ್ಷೆಗೆ 'ಪ್ರಾಕ್ಕಾವ್ಯ ಮಾಲಿಕೆ'ಯು ಆವಶ್ಯಕ ಪಠ್ಯ ಪುಸ್ತಕವಾಗಿದೆ. ಆದರೆ ಆ ಪುಸ್ತಕದ ಪ್ರತಿಗಳು ಈಗ ಮಾರಾಟಕ್ಕೆ ದೊರೆಯುವದಿಲ್ಲ. ಆದರೂ 'ಕಾವ್ಯ ಸಂಗ್ರಹ'ದಲ್ಲಿಯ ಕಾವ್ಯ ಭಾಗಗಳನ್ನು ಮೂಲ ಕಾವ್ಯಗಳಿಂದ ಆರಿಸಿಕೊಂಡು ಅಭ್ಯಾಸ ಮಾಡಲು ಸಾಧ್ಯವಿದೆ. ಆ ದೃಷ್ಟಿಯಿಂದ ಆ ಗ್ರಂಥದ ಪರಿಚಯವನ್ನು ಮಾಡಿ ಕೊಡುವುದೇ ಈ ಲೇಖನದ ಗುರಿಯಾಗಿದೆ.

ವರ್ಥ ಸಾಹೇಬರು ಪ್ರಾಚೀನ ಕನ್ನಡ ಸಾಹಿತ್ಯದ ವಿವಿಧ ವಿಭಾಗಗಳ ಪ್ರತಿನಿಧಿಕ ಕಾವ್ಯಸಂಗ್ರಹವನ್ನು ಕೊಡಬೇಕೆಂಬ ಅಪೇಕ್ಷೆಯನ್ನಿಟ್ಟುಕೊಂಡಂತಿದೆ. ರಾಯಿಸ್ ಸಾಹೇಬರ ಮೂರು ವಿಭಾಗಗಳನ್ನೇ ಅನುಸರಿಸಿದ್ದಾರೆ. ಆದರೆ ಆ ಕಾಲಾನುಕ್ರಮವನ್ನು ಅನುಸರಿಸಿಲ್ಲ. ಬ್ರಾಹ್ಮಣ, ವೀರಶೈವ, ಜೈನ

ಈ ಮತಗಳ ಕವಿಗಳ ಕಾವ್ಯಗಳನ್ನು ಅನುಕ್ರಮವಾಗಿ ಕೂಟ್ಟದ್ದಾರ. ಇದಲ್ಲದ ದೇಶೀಯ ಕ್ರೈಸ್ತರು ರಚಿಸಿದ ಕೆಲವು ಗೀತಗಳನ್ನು ಕೊನೆಗೆ ಕೊಟ್ಟಿದ್ದಾರೆ. ಅಂತು ಈ ಗ್ರಂಥದಲ್ಲಿ ನಾಲ್ಕು ವಿಭಾಗಗಳಿವೆ. ಮೊದಲಿನ ಎರಡು ವಿಭಾಗಗಳು ಕೆಲಮಟ್ಟಿಗೆ ವಿಸ್ತಾರವಾಗಿದ್ದು ಕೊನೆಯವೆಂಡು ಸಣ್ಣವಾಗಿವೆ. ಇದಲ್ಲದೆ ಜೈನ ಸಾಹಿತ್ಯದಲ್ಲಿಯ ಉದ್ದಾಮ ಕವಿಗಳ ಶ್ರೇಷ್ಠ ಕಾವ್ಯಗಳನ್ನು ಇಲ್ಲಿ ಆಯ್ದುಕೊಂಡಿಲ್ಲ. ನಾಲ್ಕನೆಯ ವಿಭಾಗದಲ್ಲಿ ಒಂಬತ್ತು ಪದ್ಯಗಳು ಮಾತ್ರ ಇದ್ದು ಅವುಗಳನ್ನು ಧರ್ಮದ ದೃಷ್ಟಿಯಿಂದ ನಾವು ನೋಡಬೇಕಲ್ಲದೆ ಒಳ್ಳೆಯ ಕಾವ್ಯವೆಂಬ ದೃಷ್ಟಿಯಿಂದಲ್ಲ. ಈ ಗ್ರಂಥದಲ್ಲಿಯ ಕಾವ್ಯಭಾಗಗಳ ಆಯ್ಕೆ, ಹೊಂದಿಕೆ ಇವುಗಳ ದೃಷ್ಟಿಯಿಂದ ಸುಧಾರಣೆ ಅವಶ್ಯಕವೆಂದು ಇಂದು ಕಂಡುಬಂದರೂ ಕೂಡ ಈ ಗ್ರಂಥವು ಸು. ೭೫ ವರುಷಗಳ ಹಿಂದೆ ರಚಿತವಾಯಿತೆಂಬ ಸಂಗತಿಯನ್ನು ಗಮನಕ್ಕೆ ತಂದು ಕೊಳ್ಳಬೇಕಾಗುತ್ತದೆ. ಪ್ರಾಚೀನ ಕನ್ನಡಸಾಹಿತ್ಯದ ಬಗೆಗೆ ಸಂಶೋಧನೆ, ವಿಮರ್ಶಾತ್ಮಕ ಅಭ್ಯಾಸಗಳು ಇನ್ನೂ ನಡೆಯದೆ ಇದ್ದ ಕಾಲದಲ್ಲಿ ಕನ್ನಡ ಭಾಷೆಯ ಮೇಲಿನ ಪ್ರೇಮದಿಂದ ಇಂತಹ ಒಂದು ಗ್ರಂಥವನ್ನು ಒದಗಿಸಿಕೊಟ್ಟದ್ದಕ್ಕಾಗಿ ಕನ್ನಡಿಗರು ವರ್ಥ ಸಾಹೇಬರಿಗೆ ಕೃತಜ್ಞರಾಗಿರಬೇಕಾಗುತ್ತಿದೆ. ಪ್ರಾಚೀನ ಕನ್ನಡ ಕಾವ್ಯಸಂಗ್ರಹಗಳು ನಮ್ಮಲ್ಲಿ ತೀರ ಕಡಮೆ. ೧೩ನೆಯ ಶತಮಾನದ ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವ, ೧೬ನೆಯ ಶತಮಾನದ ಅಭಿನವ ವಾದಿ ವಿದ್ಯಾನಂದನ ಕಾವ್ಯಸಾರ ಇವುಗಳ ನಂತರ ವರ್ಥ ಸಾಹೇಬರ ಸಂಗ್ರಹವೊಂದು ಇದೆ. ಈಚೆಗೆ ಕೆಲವು ಸಣ್ಣ ಸಂಗ್ರಹಗಳು ಶಾಲಾ ವಿದ್ಯಾರ್ಥಿಗಳಿಗಾಗಿ ರಚಿತವಾಗಿದ್ದರೂ 'ಪ್ರಾಕ್ಕಾವ್ಯ ಮಾಲಿಕೆ'ಯ ಮಾದರಿಯ ಕಾವ್ಯಸಂಗ್ರಹಗಳು ಇನ್ನೂ ಬಂದಿಲ್ಲ.

ವರ್ಥ ಸಾಹೇಬರು ತಮ್ಮ ಕಾವ್ಯಸಂಗ್ರಹದ ಆರಂಭಕ್ಕೆ 'ಒಂದು ಇಂಗ್ಲಿಷ ಮುನ್ನುಡಿಯನ್ನು ಬರೆದಿದ್ದಾರೆ. ಅದರಲ್ಲಿ ಕನ್ನಡ ಭಾಷೆ, ಸಾಹಿತ್ಯ, ಜನಾಂಗ ಗಳು ಇವುಗಳನ್ನು ಕುರಿತು ಕೆಲವೊಂದು ಮಾತುಗಳನ್ನು ಹೇಳಲಾಗಿದೆ. ಅದರಲ್ಲಿಯ ಕೆಲವು ಅಭಿಪ್ರಾಯಗಳನ್ನು ಇಂದು ಒಪ್ಪುವದು ಸಾಧ್ಯವಿಲ್ಲವಾದರೂ ಅಭ್ಯಾಸಿಗಳ ದೃಷ್ಟಿಯಿಂದ ಅದನ್ನು ಬರೆಯಲಾಗಿದೆ. ಮುಂದೆ ಪ್ರತಿಯೊಂದು ಕಾವ್ಯಭಾಗದ ಆರಂಭಕ್ಕೆ ಪರಿಚಯಾತ್ಮಕ ಕೆಲವು ಮಾತುಗಳನ್ನು ಹೇಳಿದ್ದಾರೆ. ಪದ್ಯಗಳ ತಿರುಳನ್ನು ಇಂಗ್ಲಿಷ ಭಾಷೆಯಲ್ಲಿ ಪದ್ಯಗಳ ಪಕ್ಕದಲ್ಲಿ ಕೊಟ್ಟಿದ್ದಾರೆ. ಪದ್ಯದ ಕೆಳಭಾಗದಲ್ಲಿ ಟಿಪ್ಪಣಿಗಳನ್ನು ಪುಟಗಳ ಅಡಿಯಲ್ಲಿ ಶಬ್ದಾರ್ಥವನ್ನೂ ಕೊಡಲಾಗಿದೆ. ಕೊನೆಯಲ್ಲಿ ಒಂದು ಶಬ್ದಕೋಶವೂ ಇದೆ. ಅಂತು, ವರ್ಥ ಸಾಹೇಬರು ಈ ಗ್ರಂಥರಚನೆಯಲ್ಲಿ ವಿಶೇಷವಾದ ಶ್ರಮ, ತಾಳ್ಮೆ

ಗಳನ್ನು ವಹಿಸಿದ್ದಾರೆಂದು ಹೇಳಬಹುದು. ಹಾಗೂ ಅಭ್ಯಾಸಿಗಳಿಗೆ ಅನುಕೂಲವಾಗುವಂತಹ ಎಲ್ಲ ಪ್ರಯತ್ನಮಾಡಿ ಇಂಗ್ಲಿಷ ಗ್ರಂಥಗಳನ್ನು ಸಂಪಾದಿಸುವ ರೀತಿಯಲ್ಲಿ ಈ ಗ್ರಂಥ ಸಂಪಾದನೆಯ ಕಾರ್ಯವನ್ನು ಮಾಡಿದ್ದಾರೆ. ಮೇಲೆ ಸೂಚಿಸಿದ ನಾಲ್ಕು ವಿಭಾಗಗಳಲ್ಲಿ ಅಡಕವಾಗಿರುವ ಕಾವ್ಯಭಾಗಗಳನ್ನು ಕೆಳಗೆ ಸೂಚಿಸಲಾಗಿದೆ.

A. **ಬ್ರಾಹ್ಮಣ ಸಾಹಿತ್ಯ :—**

೧. ಲಕ್ಷ್ಮೀಶನ ಜೈಮಿನಿಭಾರತ :

(ಅ) ಪೀಠಿಕಾ ಸಂಧಿಯ ನಾಲ್ಕು ಪದ್ಯಗಳು (೭, ೧೦-೧೨).

(ಆ) ೧-೭ ಸಂಧಿಗಳಲ್ಲಿ ಅಡಕವಾಗಿರುವ ಕಥಾಭಾಗ : ಅಶ್ವಮೇಧ ಕುದುರೆಯನ್ನು ಹಿಡಿದು ಅದನ್ನು ಸಂಚಾರಕ್ಕೆ ಬಿಟ್ಟುದುದು.

(ಇ) ೨೫-೨೬ ಸಂಧಿಗಳಲ್ಲಿ ಅಡಕವಾಗಿರುವ ಕಥಾಭಾಗ : ಮಯೂರಧ್ವಜನ ಕಥೆ.

(ಈ) ೨೮-೩೨ ಸಂಧಿಗಳಲ್ಲಿ ಅಡಕವಾಗಿರುವ ಚಂದ್ರಹಾಸನ ಕಥಾಭಾಗ.

೨. ಕುಮಾರವ್ಯಾಸನ ಭಾರತ :

(ಅ) ಪೀಠಿಕಾ ಭಾಗ ೩ ಪದ್ಯಗಳು: (೧ ಹಾಗೂ ೨ ಸಂಧಿಗಳಿಂದ)

(ಆ) ೮-೧೦ ಸಂಧಿಗಳಲ್ಲಿ ಅಡಕವಾದ ಕಥಾಭಾಗ : ಪಾಂಡವರು ಅರಗಿನ ಮನೆಯಿಂದ ಹೊರಟು ಏಕಚಕ್ರ ನಗರದಲ್ಲಿ ಬಕಾಸುರನನ್ನು ಕೊಂದದ್ದು.

೩. ತೊರವೆ ರಾಮಾಯಣ :

೨೮-೩೪ ಸಂಧಿಗಳಲ್ಲಿಯ ಕಥಾಭಾಗ : ರಾವಣನು ಸೀತೆಯನ್ನು ಒಯ್ದದ್ದು.

೪. ಭಾಗವತ :

ತೃತೀಯಸ್ಕಂಧ, ೨ನೆಯ ಸಂಧಿ : ಕೃಷ್ಣಾವತಾರಸಾರ.

೫. ಅನುಭವಾಮೃತ :

(ಅ) ಪೀಠಿಕಾ ಪದ್ಯಗಳು (೪)

(ಆ) ಅಧಿಕಾರಿ ಲಕ್ಷಣ. (೧೯)

(ಇ) ಸಂಸಾರ-ಹೇಯ. (೩೫)

೫ (a). ಸೋಮೇಶ್ವರ ಶತಕ. (೪೪)
(ಈ ಶತಕ ಇಲ್ಲಿ ಬಂದಿರುವುದರಿಂದ ಅನುಕ್ರಮ ತಪ್ಪಿದಂತಿದೆ.)

೬. ದಾಸರ ಹಾಡುಗಳು :
(ಅ) ಕನಕದಾಸರ ಹಾಡುಗಳು. (೮)
(ಬ) ಪುರಂದರದಾಸರ ಹಾಡುಗಳು. (೩೩)

B. ವೀರಶೈವ ಸಾಹಿತ್ಯ :—

೭. ಬಸವ ಪುರಾಣ :
(ಅ) ಪೀಠಿಕಾಪದ್ಯಗಳು (೭)
(ಆ) ೧–೬ ಸಂಧಿಗಳಲ್ಲಿಯ ಕಥಾಸಂಗ್ರಹ : ಬಸವನು ಹುಟ್ಟಿ ಬೆಳೆದು ಕಲ್ಯಾಣದಲ್ಲಿ ಪ್ರಧಾನಿಯಾದುದು.

೮. ಚೆನ್ನಬಸವ ಪುರಾಣ :
೪ನೆಯ ಸಂಧಿ : ಚೆನ್ನಬಸವನ ಜನನದ ಕಥಾಭಾಗ.

೯. ಸರ್ವಜ್ಞನ ವಚನಗಳು :

(ಅ)	ರಾಜನೀತಿ ಪದ್ಧತಿ.	೨೨ ಪದ್ಯಗಳ
(ಆ)	ದಾನ ಪದ್ಧತಿ	೧೦ ,,
(ಇ)	ದಾನಹೀನ ಪದ್ಧತಿ	೧೩ ,,
(ಈ)	ವಿಧಿವಾಸ ಪದ್ಧತಿ	೫ ,,
(ಉ)	ಕುಲ ,,	೧೨ ,,
(ಊ)	ಗುರು ,,	೧೨ ,,
(ಋ)	ದೈವ ,,	೧೩ ,,
(ೠ)	ಭಕ್ತಿ ,,	೧೩ ,,
(ಎ)	ಜ್ಞಾನ ,,	೩೯ ,,
(ಏ)	ಸಭಾಸಭೆ ,,	೨೨ ,,
(ಐ)	ಯೋಗಿ ,,	೧೭ ,,
(ಒ)	ಮೂರ್ಖನ ,,	೫ ,,
(ಓ)	ಸ್ತ್ರೀಯರ ,,	೩೧ ,,
(ಔ)	ನೀತಿ ,,	೫೬ ,,
(ಅಂ)	ದೇಶ ,,	೧೧ ,,

(ಅಃ) ಜೈನರ ,, ೪ ,,
(ಕ) ಬ್ರಾಹ್ಮಣರ ,, ೧೦ ,,
(ಖ) ರಾಶಿ ,, ೧೨ ,,
(ಗ) ಜ್ಯೋತಿಷ ,, ೧೭ ,,
(ಘ) ಒಗಟುಗಳು ೧೭ ,,

೧೦. ರಾಜಶೇಖರ ವಿಲಾಸ :

(ಅ) ಪೀಠಿಕಾಶಾಸ್ತ್ರ ೧೫ ,,
(ಆ) ವನ ವರ್ಣನ ಆಶ್ವಾಸ ೨ ೭ ,,
(ಇ) ಸಮುದ್ರ ವರ್ಣನ ಆಶ್ವಾಸ ೧ ೧೦ ,,
(ಈ) ಗ್ರೀಷ್ಮಋತು ವರ್ಣನ ಆಶ್ವಾಸ ೫ ೧೫ ,,
(ಉ) ಶರತ್‌ಕಾಲ ವರ್ಣನ ಆಶ್ವಾಸ ೬ ೪ ಪದ್ಯಗಳು
(ಊ) ವರ್ಷ ಋತು ,, ,, ೪ ೨೦ ,,
(ಋ) ಹಿಮಂತ ಋತು ,, ,, ೯ ೧೭ ,,
(ೠ) ವಸಂತ ಋತು ,, ,, ೯ ೫ ,,
(ಎ) ಸೂರ್ಯಾಸ್ತ ,, ,, ೧೧ ೨ ,,
(ಏ) ಚಂದ್ರೋದಯ ,, ,, ೧೨ ೭ ,,

C. ಜೈನ ಸಾಹಿತ್ಯ :

೧೯. ಶಾಸ್ತ್ರಸಾರ

(ಅ) ನರಕ ವಿಸ್ತಾರ ೧೬ ಪದ್ಯಗಳು ಹಾಗೂ ಗದ್ಯ.
(ಆ) ಅನ್ಯಮತ ಖಂಡನೆ ೧೯ ಪದ್ಯಗಳು ಹಾಗೂ ಗದ್ಯ.

೧೨. ಧರ್ಮಪರೀಕ್ಷೆ.

(ಅ) ಪೀಠಿಕಾಶ್ವಾಸ (ಮನೋವೇಗ ಹಾಗೂ ಪವನವೇಗರ ಕಥೆ) ೩೧ ಪದ್ಯಗಳು ಹಾಗೂ ಗದ್ಯ.
(ಆ) ಸರ್ವದೇವತಾ ಪರೀಕ್ಷೆ (ಆಶ್ವಾಸ. ೩) ೧೩೫ ಪದ್ಯಗಳೂ ಹಾಗೂ ಗದ್ಯ.
(ಇ) ಈಶ್ವರಾದಿ ಸಕಲ ದೇವಾಸುರಾರ್ಜುನ ಶಸ್ತ್ರಾಸ್ತ್ರ ಸಮರ್ಥ ಪರೀಕ್ಷಾ ವರ್ಣನ. ಆಶ್ವಾಸನ ೪. ೩೦ ಪದ್ಯಗಳು ಹಾಗೂ ಗದ್ಯ.

(ಈ) ಬ್ರಹ್ಮನ ಜಗತ್ಕರ್ತೃತ್ವ, ವಿಷ್ಣುವಿನ ಪಾಲಕತ್ವ, ಅಗಸ್ತ್ಯನ ಸಾಮರ್ಥ್ಯತ್ವ ನಿರೂಪಣಂ. ಆಶ್ವಾಸ ೫. ೩೮ ಪದ್ಯಗಳೂ ಹಾಗೂ ಗದ್ಯ.

(ಉ) ಬ್ರಹ್ಮ, ವಿಷ್ಣು, ಮಹೇಶ್ವರ ದೇವತಾಪರೀಕ್ಷೆ ನಿರೂಪಣ ವರ್ಣನ. ಆಶ್ವಾಸ ೬, ೪೮ ಪದ್ಯಗಳು ಹಾಗೂ ಗದ್ಯ.

(ಊ) ಕೌರವ, ಭಗೀರಥ, ಅಭಿಮನ್ಯು, ಇಂದ್ರಜಿತು, ವೇದವ್ಯಾಸ, ಕರ್ಣ ತೃಣಬಿಂದುಗಳ ಉತ್ಪತ್ತಿ ವರ್ಣನ. ಆಶ್ವಾಸ ೭, ೪೨ ಪದ್ಯಗಳು ಹಾಗೂ ಗದ್ಯ.

(ಋ) ರಾಮಲಕ್ಷ್ಮಣರ ಸಾಮರ್ಥ್ಯ. ಆಶ್ವಾಸ. ೮, ೧೯ ಪದ್ಯಗಳು ಹಾಗೂ ಗದ್ಯ.

(ಋೂ) ರಾವಣನ ಶಿರವರಿದು ಪತ್ತಿದ್ದು ಜರಾಸಂಧನೋತ್ಪತ್ತಿ ವಾಲಿಯ ಸುತನ ಶಿರಪತ್ತಿರ್ದ ವರ್ಣನ. ಆಶ್ವಾಸ ೯, ೭೭ ಪದ್ಯಗಳು ಹಾಗೂ ಗದ್ಯ.

D. ದೇಶೀಯ ಕ್ರೈಸ್ತ ಸಾಹಿತ್ಯ :

೧೩. ದೈವಸ್ತೋತ್ರ. ೩ ಪದ್ಯಗಳು.
೧೪. ಇಹ-ಪರ ಭೇದ. ೩ ಪದ್ಯಗಳು.
೧೫. ಸಾಯಂಕಾಲ ಗೀತ. ೩ ಪದ್ಯಗಳು.

—ಹೀಗೆ ವಿಷಯ ವಿಭಾಗವುಂಟು. ಈ ಗ್ರಂಥದಲ್ಲಿ ಒಟ್ಟು ೧೭೦೦ ಪದ್ಯಗಳಿವೆ. ಶಬ್ದಕೋಶವನ್ನೊಳಗೊಂಡು ಒಟ್ಟು ೫೮೦ ಪುಟಗಳಿವೆ. ಪ್ರಾಚೀನ ಕನ್ನಡ ಕಾವ್ಯದ ಕೆಲವೊಂದು ಪರಿಚಯಕ್ಕೆ ಉಪಯುಕ್ತವಾಗುವಂತೆ ರೆವ್ಹರೆಂಡ್ ವರ್ಥ ಅವರು ಇದನ್ನು ಒಳ್ಳೆಯ ಪರಿಶ್ರಮಪೂರ್ವಕವಾಗಿ ತಯಾರಿಸಿದ್ದಾರೆ. ಇದರ ಪ್ರಯೋಜನವನ್ನು ಕನ್ನಡದ ಅಭ್ಯಾಸಿಗಳು ಪಡೆಯುವರೆಂದು ಆಶಿಸುತ್ತೇನೆ.

— ಎಸ್. ಎಸ್. ಮಾಳವಾಡ.

ಪ್ರಕಟನೆ

ಕನ್ನಡ "ವರ್ಧ ಪ್ರಾಯೋಜ" ಪರೀಕ್ಷೆ ೧೯೪೨.

ವಿ. ಸೂ.—ಈ ವರ್ಷದ ಪರೀಕ್ಷೆಯು ಇದೇ ಜುಲೈ ತಿಂಗಳಲ್ಲಿ ನಡೆಯಬೇಕಾಗಿದ್ದು ಅದಕ್ಕೆ ಸಾಕಷ್ಟು ಅಪೇಕ್ಷಾಪತ್ರಗಳು ಬಾರದ್ದರಿಂದ ಪುನಃ ಈ ಪ್ರಕಟನೆಯನ್ನು ಹೊರಡಿಸಲಾಗಿದೆ.

೧. **ಪರೀಕ್ಷೆಯ ವಿಷಯಗಳು :—**

(ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯಪದ್ಯ ಭಾಗಗಳ ಅರ್ಥ ವಿವರಣೆ ಮಾಡಲಿಕ್ಕೂ ಅವುಗಳಿಗೆ ಟೀಕೆ ಟಿಪ್ಪಣಿಗಳನ್ನು ಬರೆಯಲಿಕ್ಕೂ ಹಳೆಯ ಮತ್ತು ಹೊಸ ಕನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ಉಮೇದವಾರರು ಸಮರ್ಥರಾಗಿರಬೇಕು.

(ಬ) ವರ್ಧ್ಯಸಾಹೇಬರು ರಚಿಸಿರುವ **ಪ್ರಾಕ್ಕಾವ್ಯಮಾಲೆ** ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯಲ್ಲಿ ಅರ್ಥ ವಿವರಣೆ, ಟೀಕೆ ಟಿಪ್ಪಣಿ, ಸ್ವತಂತ್ರ ನಿಬಂಧ, ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವದು.

೨. **ಬಹುಮಾನ :**—ಈ ಮೊದಲು ಇದ್ದ ಐಂ ರೂ. ಗಳ ಒಂದೇ ಬಹುಮಾನದ ಬದಲಾಗಿ ಈಗ ಬಹುಮಾನಗಳು ಎರಡು ಎಂದು ಗೊತ್ತಾಗಿದೆ. **ಮೊದಲನೆಯ ಬಹುಮಾನ ೫೦ ರೂ ೨ನೆಯ ಬಹುಮಾನ ೩೦ ರೂ.**

ಮೊದಲನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ ಕ್ಕೆ ೭೫ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಎರಡನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ಕ್ಕೆ ೫೦ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಪಡೆದಿರಬೇಕು. ಈ ಉಮೇದವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಾಪಾಸಾಗಿರಕೂಡದು.

ಒಂದುವೇಳೆ ಒಬ್ಬನಿಗಿಂತ ಹೆಚ್ಚು ಉಮೇದವಾರರು ಸಮಾನ ಗುಣಗಳನ್ನು ಪಡೆದು ಸಮಾಧಾನಕರವಾಗಿ ಪಾಸಾಗಿದ್ದರೆ ಬಹುಮಾನಗಳನ್ನು ಸರಿಯಾಗಿ ವಿಭಜಿಸಿ ಹಂಚಲಾಗುವದು.

೩. **ಅರ್ಜಿ ಮಾಡತಕ್ಕ ಅವಧಿ :—**

ಪರೀಕ್ಷೆಗೆ ಕೂಡ್ರಲಿಚ್ಛಿಸುವವರು ೧೯೪೨ನೆಯ ಇಸವಿಯ ಆಗಸ್ಟ ತಿಂಗಳ ೧೦ನೆಯ ತಾರೀಖಿನೊಳಗಾಗಿ ಮೆ॥ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾ॥ ದಕ್ಷಿಣಭಾಗ ಇವರಿಗೆ ಮುಟ್ಟುವಂತೆ ಅಪೇಕ್ಷಾಪತ್ರವನ್ನು ಕಳುಹಿಸತಕ್ಕದ್ದು.

೪. **ಪರೀಕ್ಷೆಯ ಸ್ಥಳ ದಿವಸ ಹಾಗು ವೇಳೆ :—**

ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಈ ಪರೀಕ್ಷೆಯು ೧೯೪೨ನೆಯ ಇಸವಿಯ ಆಗಸ್ಟ ತಿಂಗಳ ೨೭–೨೮–೨೯ ನೆಯ ತಾರೀಖುಗಳ ದಿವಸ ನಡೆಯುವದು.

೫. ಪ್ರಶ್ನೆಗಳ ಕಾಗದಗಳು ಕೆಳಗೆ ಬರೆದಂತೆ ಇವೆ :—

ಪ್ರತಿಯೊಂದು ಕಾಗದಕ್ಕೆ ೩ ತಾಸು ಅವಧಿಯೂ ೧೦೦ ಗುಣಗಳೂ ಉಂಟು.

ಮೊದಲನೆಯದು :—	ಪ್ರಾಕ್ಟಿಕ್ಯಮಾಲೆ	೭೦	ಗುಣ ೧೦೦
	ವ್ಯಾಕರಣ ಮತ್ತು ಛಂದಸ್ಸು	೩೦	
ಎರಡನೆಯದು :—	ಹಳೆಗನ್ನಡ ನಿಬಂಧ	೫೦	೧೦೦
	* ಕನ್ನಡ ಬಾವುಟದಲ್ಲಿಯ ಕವಿತಾ ಭಾಗ	೩೦	
	ಹಳೆಗನ್ನಡ ಅಪರಿಚಿತ ಗದ್ಯ ಭಾಗಗಳು	೨೦	
ಮೂರನೆಯದು :—	ಹೊಸಗನ್ನಡ ನಿಬಂಧ ; ಹನ್ನೆರಡನೆಯ	೬೫	೧೦೦
	ಶತಮಾನದ ಕನ್ನಡ ಸಾಹಿತ್ಯ ಪರಿಚಯ	೩೫	

*'ಕನ್ನಡ ಬಾವುಟದಲ್ಲಿಯ ಕವಿತಾಭಾಗ'ದ ವಿವರಣೆ

ಈ ಭಾಗಕ್ಕೆ ೩೦ ಗುಣಗಳು ಇರುವವು

೧.	ರಾಷ್ಟ್ರಕೂಟ ರಾಜನ ಶಾಸನ	ಪುಟ ೫
೨.	ಕನ್ನಡನಾಡಿನ ಚೆಲುವು	ಪುಟ ೧೭–೨೦ ಪೂರ್ಣ
೩.	ಬಸವಣ್ಣನವರ ಗುಣ	ಪುಟ ೪೫
೪.	ಮಹಾದೇವಿಯಕ್ಕ	ಪುಟ ೪೬–೪೯ ಪೂರ್ಣ
೫.	ಕನಕದಾಸರು	ಪುಟ ೫೯–೬೧ ಪೂರ್ಣ
೬.	ಅರುಣೋದಯ	ಪುಟ ೯೭
೭.	ಕಾರ್ಗಾಲದ ವೈಭವ	ಪುಟ ೧೦೦
೮.	ಕೊಡಗು	ಪುಟ ೧೦೨
೯.	ತೆಂಕಣ ಗಾಳಿಯಾಟ	ಪುಟ ೧೦೬
೧೦.	ಕುಮಾರವ್ಯಾಸ	ಪುಟ ೧೨೧
೧೧.	ಬೇಲೂರಿನ ಶಿಲಾಬಾಲಿಕೆಯರು	ಪುಟ ೧೩೬

ಈ ಕವಿತಾ ವಿಭಾಗಗಳನ್ನು ಸಂಪೂರ್ಣ ಅಭ್ಯಾಸಮಾಡಬೇಕು. ಮತ್ತು ಮೂರನೆಯ ಕಾಗದದ ವಿಷಯಗಳಲ್ಲಿ ೩೫ ಗುಣಗಳ 'ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ಪರಿಚಯ' ಎಂಬ ಭಾಗದ ಅಭ್ಯಾಸಕ್ಕಾಗಿ ಕನ್ನಡ ಕವಿಚರಿತೆಯ ಮೊದಲನೆಯ ಭಾಗವನ್ನು ಓದಬಹುದು.

Training College for men,
Dharwar.
5th *July* 1942.

H. S. Torgal,
Principal.

ಕನ್ನಡ ಬುಕ್-ಕಮೀಟಿಯವರಿಂದ ಮಂಜೂರಾದ ಪುಸ್ತಕಗಳು

(ಕಳೆದ ಮೇ ತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಟಪ್ಪಣಿ :— ಪ್ರಾ. ಪ್ರಾಥಮಿಕ; ಮಾ. ಮಾಧ್ಯಮಿಕ; ಟ್ರೇ. ಟ್ರೇನಿಂಗ್; ಶಿ. ಶಿಕ್ಷಕ; ವಿ. ವಿದ್ಯಾರ್ಥಿ; ವಾ. ವಾಚನಾಲಯ; ಶಾ. ಶಾಲೆ.

ಅ.ನಂ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ?
೧೮	**ನೂತನ ಅಂಕಗಣಿತ ಶಿಕ್ಷಕ** ೧ ನೆ ಆ. ೧೯೪೨	ವಿದ್ಯಾವಿಲಾಸ ಬುಕ್ ಡಿಪೊ ಗದಗ	೧—೪—೦	ಪ್ರಾ. ಮಾ. ಶಾ. ಪಠ್ಯಪುಸ್ತಕ
೧೯	**ನೂತನ ಅಂಕಗಣಿತ ಶಿಕ್ಷಕ ಭಾಗ ೧** ೧ ನೆ ಆ. ೧೯೪೨	ಸದರ	೦—೧೦—೦	ಪ್ರಾ. ಮಾ. ಶಾ. ಪಠ್ಯಪುಸ್ತಕ
೨೦	**ಬಾಲಬೋಧನೆಯಲ್ಲಿಯ ಪದಗಳು ನೊಟೇಶನ್ ಪುಸ್ತಕವು** ೧ ನೆ ಆ. ೧೯೩೫	ಟಿ. ಎಚ್. ಕಟ್ಟಿ, ಸ್ಕೂಲ್ ಮಾಸ್ತರ ಕಾಕನೂರ ತಾಲೂಕ ಬಾದಾಮಿ	೦—೨—೩	ಪ್ರಾ. ಶಿ. ವಾ.
೨೧	**ಗದ್ಯಪದ್ಯಾವಲಿ** ೪ ನೆ ಆ. ೧೯೪೨	ವಿದ್ಯಾವಿಲಾಸ ಬುಕ್ ಡಿಪೊ ಗದಗ	೧—೨—೦	*ಪಠ್ಯಪುಸ್ತಕ

* ಪ್ರಾ. ಶಾ. ಮೇಲಿನ ಇಯತ್ತೆಗಳಲ್ಲಿ ಮಾ. ಶಾ. ಕೆಳಗಿನ ಇಯತ್ತೆಗಳಲ್ಲಿ

ಅ.ನಂ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ?
೨೨	**ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳ ಗಣಿತ ಸಂಗ್ರಹ** ೩ ನೆ ಆ. ೧೯೪೧	ರಾಮಾಶ್ರಯ ಬುಕ್ ಡಿಪೊ ಧಾರವಾಡ	೦-೧೨-೦	ಪ್ರಾ. ಮಾ. ವಿ. ಶಿ. ವಾ
೨೩	**ಕನ್ನಡ ಗಣಿತ ಬೋಧೆ ಭಾಗ ೧ ಮತ್ತು ೨** ೨ ನೆ ಆ. ೧೯೪೨	ಶಿವಯೋಗಪ್ಪ ಸಂಗಪ್ಪ ಗುರಿಕಾರ ಶಿಕ್ಷಕರು ಲಕ್ಷ್ಮೇಶ್ವರ	ಪ್ರತಿ ೧ಕ್ಕೆ ೩ ಆಣೆ	ಪ್ರಾ. ವಿ. ಶಿ. ವಾ.
೨೪	**ಕನ್ನಡ ಹೊಸ ಬಾಲಬೋಧೆ** ೨ ನೆ ಆ. ೧೯೪೨	ಸದರ	೦—೧-೬	ಪ್ರಾ. ವಿ. ವಾ.
	(ಹೊಸಕಾಲಕ್ಕೆ ಅನುಗುಣವಾಗಿ ತಕ್ಕ ಸುಧಾರಣೆ ಮಾಡದೆ ಇದ್ದುದರಿಂದ ಹಿಂದೆ ಪಠ್ಯಪುಸ್ತಕವೆಂದು ಮಂಜೂರಾಗಿದ್ದರೂ ಆ ಮಂಜೂರಿಯನ್ನು ಮುಂದೆ ನಡೆಯಿಸುವಂತಿಲ್ಲ.)			
೨೫	**ಪ್ರಪಂಚ ಪರಿಚಯ** ೧ ನೆ ಆ. ೧೯೪೨	ಸಿ. ಎಸ್. ಕುಲಕರ್ಣಿ ಮಾಸೂರ ಕಂಪೌಂಡ ಮಾಳಮರಡಿ ಧಾರವಾಡ	೦—೩-೬	ಪ್ರಾ. ವಿ. ಶಿ. ವಾ.
೨೬	**ಆರೋಗ್ಯಶಾಸ್ತ್ರ ಸಾರ** ೧ ನೆ ಆ. ೧೯೪೧	ಗುರುನಾಥ ಜೋಶಿ ಭಾರತೀಯ ಸಾಹಿತ್ಯ ಪ್ರಕಟನಾಲಯ, ಲೈನಬಝೂರ ಧಾರವಾಡ	೦—೪-೦	ಪ್ರಾ. ಮಾ. ವಿ. ಶಿ. ವಾ
೨೭	**ಆರೋಗ್ಯದರ್ಪಣ** ೪ ನೆ ಆ. ೧೯೪೨	ಕಾಳಿಂಗಯ್ಯನ ಪುಟ್ಟುರಾವ ತೀರ್ಥಹಳ್ಳಿ	೦—೪-೦	ಪ್ರಾ. ವಿ. ಶಿ. ವಾ.

ಪತ್ರಗಳ ಮುಖ್ಯಾಂಶಗಳು

೧. **ಯರಗಟ್ಟಿ**:— (ಬೆಳಗಾವಿ ಜಿಲ್ಹೆ) ಈ ಊರಲ್ಲಿಯ ಕನ್ನಡ ಶಾಲೆಯ ಹೆಡ್‌ಮಾಸ್ತರರಾದ ಶ್ರೀಮಾನ್ ಟಿ. ಎಫ್. ದೇಸಾಯಿ, ಹಾಗು ಉರ್ದುಕ್ಲಾಸ ಮಾಸ್ತರರಾದ ಶ್ರೀಮಾನ್ ಆ. ಹು. ಯರಗಟ್ಟಿ ಇವರಿಬ್ಬರಿಗೂ ವರ್ಗವಾದುದರಿಂದ ಅವರ ಸನ್ಮಾನಾರ್ಥವಾಗಿ ಸುಮಾರು ೨೦೦ ಜನರು ಕೂಡಿ ತಾಂಬೂಲ ಸಮಾರಂಭವನ್ನು ಮಾಡಿ ಸನ್ಮಾನಿಸಿದರು.

ತಿಳಿಸಿದವರು— ಶ್ರೀ. ಬ. ಫ. ತೋಟಗಿ, ಅ. ಮಾ ಯರಗಟ್ಟಿ.

೨. **ತೇರಗಾವಿ**:— (ಕಾರವಾರ ಜಿಲ್ಹೆ) ಇಲ್ಲಿಯ ಲೋಕಪ್ರಿಯ ಮಾಸ್ತರರಾದ ಶ್ರೀ. ರಾ. ವಿ. ಗಾವಕರ ಇವರಿಗೆ ವರ್ಗವಾದುದರಿಂದ ಊರವರು ಸತ್ಕಾರಮಾಡಿದರು.

ತಿಳಿಸಿದವರು— ಶ್ರೀ. ಗು. ನಾ. ಪಾಟಣಕರ, ಸರಪಂಚ ಗ್ರಾಮಪಂಚಾಯತಿ

೩. **ಹಿರಿಯಬಾಗೇವಾಡಿ** :— (ಬೆಳಗಾವಿ ಜಿಲ್ಹೆ) ಇಲ್ಲಿಯ ಗಂಡು ಮಕ್ಕಳ ಶಾಲೆಯಲ್ಲಿ ಈ ವರ್ಷ ಪ್ರಾಥಮಿಕ ಶಾಲಾಪ್ರಮಾಣಪತ್ರ ಪರೀಕ್ಷೆಯ ಪರಿಣಾಮವು ಜೆನ್ನಾಗಿ ಆಯಿತು. ೧೪ ಹುಡುಗರಲ್ಲಿ ೧೨ ಹುಡುಗರು ಪಾಸಾಗಿದ್ದು ೯ ವಿದ್ಯಾರ್ಥಿಗಳಿಗೆ ಮೂನ್ನೂರಕ್ಕಿಂತ ಹೆಚ್ಚು ಗುಣಗಳು ದೊರಕಿವೆ. ಇವರಿಗೆ ಇಲ್ಲಿಯ ಅ. ಮಾ. ಶ್ರೀ. ಸಂ. ಕೂ. ಖೋದಾನಪುರ ಇವರು ದೀರ್ಘ ಪರಿಶ್ರಮದಿಂದ ಕಲಿಸಿದ್ದರು.

ತಿಳಿಸಿದವರು— ಶ್ರೀ. ಗ. ಬ. ಕೊಳ್ಳಿ. ಅ. ಮಾ. ಹಿರಿಯಬಾಗೇವಾಡಿ.

೪. **ಪಾರಿಶವಾಡ**:— (ಬೆಳಗಾವಿ ಜಿಲ್ಹೆ) ಅ. ಡೆ. ಎ. ಇ. ಅವರಾದ ಶ್ರೀಮಾನ್ ಎಸ್. ಎಚ್. ಹುಯಿಲಗೋಳಕರರಿಗೆ ವಿಜಾಪುರ ಜಿಲ್ಹೆಗೆ ವರ್ಗವಾದುದರ ನಿಮಿತ್ತ ಈ ಊರ ಶಾಲೆಯಲ್ಲಿ ಸತ್ಕಾರ ಸಮಾರಂಭವಾಯಿತು. ಹೆ| ಮಾ| ರಾದ ಶ್ರೀ. ಚ. ಬ. ಧಾರವಾಡ ಅವರು ಗುಣವರ್ಣನಪರ ಪದ್ಯಗಳನ್ನು ಸಭೆಯ ಮುಂದೆ ಅಂದು ತೋರಿಸಿದರು.

ತಿಳಿಸಿದವರು— ಶ್ರೀ. ಹೆ| ಮಾ| ಕ. ಗ. ಮು. ಶಾ. ಪಾರಿಶವಾಡ

೫. **ಹಾವೇರಿ** :— (ಧಾರವಾಡ ಜಿಲ್ಹೆ) ಇಲ್ಲಿಯ ಸರಸ್ವತಿ ಪ್ರಾಥಮಿಕ ಶಾಲೆಯಲ್ಲಿ ಮೂರನೆಯ ವರ್ಷದ ಪಾರಿತೋಷಕ ಸಮಾರಂಭವು ತಾ||

೧೪-೬-೪೨ನೆಯ ದಿವಸ ಮೆ| ಮಾಮಲೇದಾರ ಸಾಹೇಬರ ಅಧ್ಯಕ್ಷತೆಯಲ್ಲಿ ಜರುಗಿತು. ಸುಮಾರು ೪೫ ಹುಡುಗಿಯರಿಗೆ ಮೆಚ್ಚುಗೆಗಳನ್ನು ಕೊಡಲಾಯಿತು.

ತಿಳಿಸಿದವರು— ಶ್ರೀ. ಡಿ. ಎಸ್. ಏ.

೬. **ಮೆಳವಂಕಿ** :— (ಬೆಳಗಾವಿ ಜಿಲ್ಲೆ) ಇಲ್ಲಿಯ ಮಾಸ್ತರರಾದ ಶ್ರೀ. ಬ. ಬ. ಪೂಜಾರ ಇವರ ಪ್ರಯತ್ನದಿಂದ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಿದೆ. ಊರ ಹಿರಿಯರು ಇದನ್ನು ಕಂಡು ಸಂತೋಷದಿಂದ ಒಬ್ಬ ಸಹಾಯಕ ಶಿಕ್ಷಕರನ್ನು ಕೊಟ್ಟಿದ್ದಾರೆ. ಮತ್ತು ತಾ|| ೧೬-೬-೪೨ನೆಯ ದಿವಸ ಮಿಠಾಯಿ ಹಂಚಿ ಬಡ ವಿ. ಗಳಿಗಾಗಿ ೧೬ ಪಾಟಿಗಳನ್ನು ಕೊಟ್ಟರು.

ತಿಳಿಸಿದವರು— ಶ್ರೀ. ಅ. ಸ. ಕೊಪ್ಪದ, ಮೆಳವಂಕಿ.

೭. **ಮನ್ನೊಳ್ಳಿ** :— (ಬೆಳಗಾವಿ ಜಿಲ್ಲೆ) ಈ ಊರಲ್ಲಿಯ ಪಂಚಲಿಂಗೇಶ್ವರ ಗುಡಿಯಲ್ಲಿ ಶ್ರೀಮಾನ್ ಕೇ. ಜಿ. ಹಲಸಗಿಯವರು ಧಾರವಾಡದ ಕೇ. ಈ. ಬೋರ್ಡಿನ ಕಾಲೇಜದ ೨ನೆಯ ವರ್ಷದ ೪೦ ವಿದ್ಯಾರ್ಥಿಗಳಿಗೆ ತಾ|| ೧೫-೬-೪೨ ರಿಂದ ೧೦ ದಿವಸಗಳವರೆಗೆ ಸ್ಕೌಟ ಶಿಕ್ಷಣವನ್ನು ಕೊಟ್ಟರು. ಸ್ಕೌಟರು ದೇವಾಲಯದ ಬಾವಿಯನ್ನು ಕೆಸರು ತೆಗೆದು ಸ್ವಚ್ಛಮಾಡಿದರು. ಮಬನೂರ ಶಾಲೆಯ ಬಯಲನ್ನು ಸಮಮಾಡಿದರು. ಇವರ ಆಟ-ಪಾಟ ಪರೋಪಕಾರಗಳನ್ನು ಕಂಡು ಊರವರು ಸಂತೋಷಬಟ್ಟರು.

ಈ ಜಿಲ್ಲೆಯ ಸ್ಕೂಲ್‌ಬೋರ್ಡಿನ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾದ ಶ್ರೀಮಾನ್ **ಪುರೋಹಿತ** ಬೋಧರಾಯರು ಬೇಗನೆ ಸೇವಾನಿವೃತ್ತರಾಗಲಿರುವದರಿಂದ ಈ ಊರ ಪ್ರಮುಖರೂ ಶಿಕ್ಷಕರೂ ಕೂಡಿ ಪ್ರೇಮಾದರಗಳಿಂದ ತಾಂಬೂಲ ಸಮಾರಂಭವನ್ನು ನೆರವೇರಿಸಿದರು.

ತಿಳಿಸಿದವರು— ಶ್ರೀ. ಗ. ರು. ಕುಂಬಾರ, ಅ. ಮಾ. ಮನ್ನೊಳ್ಳಿ.

೮. **ಕೊಡಗಾನೂರು** :— (ವಿಜಾಪುರ ಜಿಲ್ಲೆ) ಇಲ್ಲಿಯ ಶಾಲಾವಾಚನಾಲಯಕ್ಕೆ ಆ. ಡೆ. ಎ. ಇ. ಅವರಾದ ಶ್ರೀಮಾನ್ ಬಿ. ಎನ್. ಜೇರೆ ಅವರು ದರ್ಶನವಿತ್ತು ಸಂತೋಷ ವ್ಯಕ್ತಮಾಡಿದರು.

ತಿಳಿಸಿದವರು— ಕಾರ್ಯದರ್ಶಿಗಳು ವಾಚನಾಲಯ ಕೊಡಗಾನೂರು.

ಬಾಗಿಲುಕೋಟೆ :— ಇಲ್ಲಿಯ ಶ್ರೀಮಂತ ವ್ಯಾಪಾರಿಗಳಾದ ಶ್ರೀ. ಕಿಶೋರಿಲಾಲ ರಾಮಪ್ರತಾಪ, ಶ್ರೀ. ರಾಜಮಲ್ ಜೇಸಾಜಿ ಈ ಉಭಯತರು ಕನ್ನಡ ೧೯ೇ ನಂಬರ ಗಂಡುಮಕ್ಕಳ ಶಾಲೆಯಲ್ಲಿ ಕಲಿಯುತ್ತಿರುವ ಬಡ ಮತ್ತು ಮುಂದಾಗಬಹುದಾದ ವಿದ್ಯಾರ್ಥಿಗಳ ಉತ್ತೇಜನಕ್ಕಾಗಿ ಹತ್ತು ರೂಪಾಯಿಗಳನ್ನು ; ಪಾಟಿ, ಪುಸ್ತಕಗಳನ್ನು ಕೊಂಡು ಹಂಚುವದಕ್ಕಾಗಿ ಕೊಟ್ಟರು. ಈ

ಹಣದಿಂದ ತಂದ ಪಾಟಿ ಪುಸ್ತಕಗಳನ್ನು ಶ್ರೀಮಾನ್ **ಸಾಸನೂರರ** (ಸ್ಕೂಲ ಕಮೀಟಿಯ ಜೇಅರಮನ್‌ರು) ಹಸ್ತದಿಂದ ಈ ಉಭಯತರ ಸಮುಕ್ಷವು ಹಂಚುವದರಲ್ಲಿ ಬಂದಿತು. ಈ ದಾನಿಗಳೇ ಕಳೆದ ಎರಡು ವರ್ಷಗಳಿಂದ ಬೇಸಿಗೆ ಕಾಲದಲ್ಲಿ ಸರಕಾರಿ, ಖಾಸಗಿ ಎಲ್ಲ ಪ್ರಾ. ಶಾಲೆಗಳಲ್ಲಿ ಬಾಲಕರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ತಮ್ಮ ವೆಚ್ಚದಿಂದ ಮಾಡುತ್ತಲಿರುವರು. ಶ್ರೀ. ಸಾಸನೂರ ವಕೀಲರು ಪಾಟಿ ಪುಸ್ತಕಗಳನ್ನು ಹಂಚುವಾಗ ಇವರ ದಾನವು ಉಳಿದ ಧನವಂತರು ಅನುಕರಣ ಮಾಡುವಂತಹದಿರುವದೆಂದು ಹೇಳಿದರು.

ತಿಳಿಸಿದವರು :—ಶ್ರೀ. ರಾ. ಸ. ಬದಾಮಿ ಶಿಕ್ಷಕರು, ಬಾಗಲಕೋಟಿ.

ಕರಗಾವಿ :— (ಬೆಳಗಾವಿ ಜಿಲ್ಹೆ) ಇಲ್ಲಿಯ ಶಿಕ್ಷಕರು ತಮ್ಮ ಶಾಲೆಯ ೨-೩-ಳನೆಯ ಇಯತ್ತೆಗಳ ವಿದ್ಯಾರ್ಥಿಗಳೊಂದಿಗೆ ತಾಲೂಕಿನ ಸ್ಥಳವಾದ ಚಿಕ್ಕೋಡಿಯ ಚಿಕ್ಕ ಪ್ರವಾಸವನ್ನು ಮಾಡಿದರು. ವಿದ್ಯಾರ್ಥಿಗಳು ಸೃಷ್ಟಿಯ ಸೊಬಗನ್ನು ನೋಡಿ ನಲಿದಾಡಿದರು. ಸರಕಾರಿ ಕಚೇರಿಗಳನ್ನು ಪ್ರತ್ಯಕ್ಷ ಕಂಡರು. ವಿವಿಧ ವಿನೋದಗಳಿಂದ ಹಿಗ್ಗಿದರು. ಅಧಿಕಾರಿಗಳು ಹಾಗು ಸದ್ಗೃಹಸ್ಥರು ತಕ್ಕ ಸಹಾಯ ಮಾಡಿದ್ದರಿಂದ ಪ್ರವಾಸವು ಸುಖಕರವಾಯಿತು.

ತಿಳಿಸಿದವರು :— ಶ್ರೀ. ಭೀ. ಜ. ಗುರವ, ಕರಗಾವಿ.

ಯಾಳವಾರ :— (ವಿಜಾಪುರ ಜಿಲ್ಹೆ) ೨೯-೬-೪೩ನೆಯ ದಿವಸ ಈ ಊರಿನ ಕ. ಗಂ. ಮು. ಶಾಲೆಯಲ್ಲಿ ಶಿಕ್ಷಕರ ಗ್ರೂಫ್ ಸಮ್ಮೇಲನವು ಮೆ|| ಎಸ್. ಪಿ. ಪಾಟೀಲ ಗಂನೇ ಅ. ಡಿ. ಎ. ಇನ್‌ಸ್ಪೆಕ್ಟರ ಜಿಲ್ಹಾ ವಿಜಾಪುರ ಅವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಜರಗಿತು. ಮೆ|| ಸ್ಪೇಶಲ್ ಮಾಮಲೇದಾರರು ಹಾಜರಿದ್ದು "ಒಕ್ಕಲತನದ ಸುಧಾರಣೆ" ಯ ಬಗ್ಗೆ ಬಹಳ ಕಳಕಳಿಯ ಭಾಷಣ ಮಾಡಿದರು. ಮೆ|| ಪಾಟೀಲ ಸಾಹೇಬರು "ಹಟಗೆಯೆಂದು ಗುಡಿಯನೊಂದು ಕಟ್ಟುತಿರುವೆಯಾ" ಎಂಬ ಕವಿತೆಯನ್ನು ಬಹು ಮನೋರಂಜಕವಾಗಿ ಕಲಿಸಿ ತೋರಿಸಿದರು.

ತಿಳಿಸಿದವರು:— ಶ್ರೀ. ಸಿ. ಬಿ. ಮಾನವಿ, ಚೇಅರಮನ್ನರು ಗ್ರಾಮಪಂಚಾಯತಿ.

ಕುಂದರನಾಡ ಶಿಕ್ಷಣ ಪ್ರಸಾರಕ ಮಂಡಳದ ವರದಿ :—ನಮ್ಮ ದೇಶದ ದುರ್ದಶೆಗೆ ಮೂಲಕಾರಣವಾದ ನಿರಕ್ಷರತೆಯನ್ನು ಹೊಡೆದೋಡಿಸಲು ಇತ್ತೀಚೆಗೆ ಶಿಕ್ಷಣಪ್ರಸಾರಕ ಸಂಸ್ಥೆಗಳು ಅಲ್ಲಲ್ಲಿ ಸ್ಥಾಪಿತವಾಗಿವೆ. ಇಂಥವುಗಳಲ್ಲಿ ಕುಂದರನಾಡ ಶಿಕ್ಷಣಪ್ರಸಾರಕ ಮಂಡಳವೂ ಒಂದಾಗಿದೆ. ಇದು ಶ್ರೀಮಾನ್ ಎಸ್. ಏ. ಕಾಗತಿಕರ ಅವರ ಹಿರಿಯತನದಲ್ಲಿ ಬೆಳಗಾವಿ ಜಿಲ್ಹೆಯೊಳಗಿನ ಆಂಕಲಗಿ ಎಂಬ ಊರೊಳಗೆ ಆರಂಭವಾಗಿ ನಾಲ್ಕು ವರ್ಷಗಳಾದವು. ಈ

ಸಂಸ್ಥೆಯ ಚತುರ್ಥ ವಾರ್ಷಿಕ ವೃತ್ತಾಂತವು ನಮ್ಮ ಕೈಸೇರಿದೆ. ಅದರ ಕೆಲವು ಅಂಶಗಳು :—

ಕಳೆದ ವರ್ಷ ಮುಂಡಳದ ಅಧೀನದಲ್ಲಿ ೫೮ ಶಾಲೆಗಳಿದ್ದವು. ಈ ವರ್ಷ ೬೦ ಆಗಿವೆ. ಡಿ. ಸ್ಕೂ. ಬೋ. ನ ಶಾಲೆಗಳಿರದಂಥ ಚಿಕ್ಕ ಹಳ್ಳಿಗಳಲ್ಲಿ ೬೦ ಶಿಕ್ಷಕರು ದುಡಿದು ಎಲ್ಲ ಜಾತಿಗಳಲ್ಲಿಯ ಸುಮಾರು ಎರಡು ಸಾವಿರ ವಿದ್ಯಾರ್ಥಿಗಳಿಗೆ ಕಲಿಸುತ್ತಲಿದ್ದಾರೆ. ಈ ಶಿಕ್ಷಕರ ಶಿಕ್ಷಣಕ್ಕಾಗಿಯೂ, ಅವರು ಪ್ರಾಮಾಣಿಕತನದಿಂದ ಸಲ್ಲಿಸಿದ ಸೇವೆಗಾಗಿ ಕೊಡುವ ಮೆಚ್ಚುಗೆಗಳಿಗಾಗಿಯೂ ತುಂಬ ಗಮನಿಸಲಾಗಿದೆ. ಹತ್ತೊಂಟು ಶಾಲೆಗಳಲ್ಲಿ ನೂಲುವ ಕೈಗಾರಿಕೆಯ ಶಿಕ್ಷಣವನ್ನು ಕೈಕೊಳ್ಳಲಾಗಿದೆ. ಪ್ರೌಢರಿಗಾಗಿ ೨೦ ವರ್ಗಗಳನ್ನು ತೆಗೆದರೂ ಸಾಕ್ಷರಿಗಳಾದವರ ಸಂಖ್ಯೆಯು ೪೧ ಮಾತ್ರ ಆಯಿತು. ಇದರಿಂದ ನಿರಾಶರಾಗದೆ ನಾಲ್ವರು ಕೆಲಸಗಾರರಿಗೆ ಪ್ರೌಢಶಿಕ್ಷಣದ ವರ್ಗದಲ್ಲಿ ತರಬೇತಿಯನ್ನು ಹೊಂದಲು ಅನುವು ಮಾಡಿಕೊಡಲಾಯಿತು. ಶಾಲೆಗಳ ಲೆಕ್ಕಪತ್ರಗಳೂ ಅವುಗಳ ಮೇಲ್ವಿಚಾರಣೆಯೂ ಸಮನಾಗಿ ಸಾಗಿದೆಯೆಂದು ಮಹನೀಯರೂ ಅಧಿಕಾರಿಗಳೂ ಬರೆದಿದ್ದಾರೆ. ಸರಕಾರದಿಂದ ದೊರೆಯುವ ಸಹಾಯಧನ ಹಾಗು ಸದ್ಗೃಹಸ್ಥರೂ ಸಂಸ್ಥೆಗಳೂ ಕೊಡುವ ಧರ್ಮಾರ್ಥ ಹಣ ಕೂಡಿ ಈ ವರ್ಷ ಸುಮಾರು ೧೨ ಸಾವಿರ ರೂ. ಬಂದಿವೆ. ಅವುಗಳಿಂದ ಶಿಕ್ಷಕರ ಸಂಬಳ, ಶಾಲೆಗಳ ಸಾದಿಲವಾರ ಮೊದಲಾದ ವೆಚ್ಚವನ್ನು ಸಾಗಿಸಲಾಗಿದೆ.

ದೇಶಸೇವೆಯೇ ಈಶಸೇವೆಯೆಂದೂ ಸಂಸ್ಕೃತಿಯ ಬೆಳವಣಿಗೆಗೆ ಸಾಕ್ಷರತೆಯೇ ಮುಖ್ಯ ಸಾಧನವೆಂದೂ ಗುರಿಯಾಗಿಟ್ಟುಕೊಂಡು ಕೆಲಸ ಮಾಡುತ್ತಲಿರುವ ಈ ಸಂಸ್ಥೆಯವರು ತಮ್ಮಂಥ ಸಂಸ್ಥೆಗಳ ಶಾಲೆಗಳ ಶಿಕ್ಷಕರನ್ನು ಡಿ. ಸ್ಕೂ. ಬೋ. ನಲ್ಲಿ ಸೇರಿಸಿಕೊಳ್ಳುವ ಹಾಗು ಅವರಿಗೆ ಅದಷ್ಟು ಮುಂಚಿತವಾಗಿ ಶಿಕ್ಷಣ ಕೊಡುವ ವಿಶಿಷ್ಟ ಯೋಜನೆಗಳನ್ನು ಕೈಕೊಳ್ಳಬೇಕೆಂದೂ ಮೇಲ್ವಿಚಾರಕರ ಸಂಬಳ, ಶಾಲೆಗಳ ಹೊಸಕಟ್ಟಡಗಳು, ಕೈಗಾರಿಕೆಯ ಶಿಕ್ಷಣ ಮೊದಲಾದವುಗಳಿಗಾಗಿ ಹೆಚ್ಚು ಸಹಾಯಧನವನ್ನು ಕೊಡಬೇಕೆಂದೂ ಸರಕಾರದ ಬಳಿಯಲ್ಲಿ ಪ್ರಾರ್ಥಿಸುತ್ತಾರೆ. ಈ ಸಂಸ್ಥೆಯು ಇಷ್ಟೊಂದು ಮುಂದುವರಿದಿದ್ದರೂ ಪ್ರತಿಯೊಂದು ಶಾಲೆಗೆ ಯೋಗ್ಯವಾದ ನಿಯತ ಕಾಲಿಕಗಳನ್ನು ಪೂರೈಸಿರುವದಾಗಲಿ ಶಾಲಾ ವಾಚನಾಲಯಗಳನ್ನು ಸ್ಥಾಪಿಸಿರುವದಾಗಲಿ ವರದಿಯಲ್ಲಿ ಕಂಡುಬರುವದಿಲ್ಲ. ಚಾಲಕರು ಈ ವಿಷಯದಲ್ಲಿ ಗಮನಿಸುವರೆಂದು ಆಶಿಸುವೆವು.

ಸಾಕ್ಷರಿಗಳಾದ ಪ್ರಬುದ್ಧರಿಗಾಗಿ

" ಹೆಣ್ಣು ಹಣ್ಣಲ್ಲ. ಗಂಡು ಗುಂಡಲ್ಲ "

ಶ್ರೀಮಾನ್ ಎಸ್. ಆರ್. ತಾವಡೆ, ಎಮ್. ಎ., ಎ. ಇ. ಡ. ಭಾ. ಧಾರವಾಡ ಅವರಿಂದ

ಒಂದು ಊರಲ್ಲಿ ಚಿನ್ನಪ್ಪನೆಂಬ ಒಬ್ಬ ಒಕ್ಕಲಿಗನಿದ್ದನು. ಚಿನ್ನಪ್ಪನಿಗೆ ಚಿನ್ನವ್ವ ಎಂಬ ಒಬ್ಬ ಹೆಂಡತಿಯಿದ್ದಳು. ಚಿನ್ನಪ್ಪ ಚಿನ್ನವ್ವರಿಗೆ ಮೂವರು ಚಿಕ್ಕ ಮಕ್ಕಳಿದ್ದರು.

ಚಿನ್ನಪ್ಪನು ತಾನೇ ಹೆಚ್ಚು ದುಡಿಯಬೇಕಾಗುವದೆಂದು ತಿಳಿದನು; ಹೆಂಡತಿಯ ಕೆಲಸವು ಬಹಳ ಸುಲಭವೆಂದು ತಿಳಿದನು. ಒಂದು ದಿವಸ ಚಿನ್ನಪ್ಪನಿಗೂ ಚಿನ್ನವ್ವನಿಗೂ ವಾದನಡೆಯಿತು.

ಗಂಡನು– " ಏನೇ, ನಾನು ಒಂದು ದಿವಸದಲ್ಲಿ ಮಾಡುವ ಕೆಲಸಕ್ಕೆ ನಿನಗೆ ಮೂರು ದಿನಗಳು ಬೇಕು. ಮನೆಯಲ್ಲಿ ಹೆಂಗಸರ ದುಡಿತ ಕಡಿಮೆ. ಹೆಣ್ಣು ಮೆತ್ತಗಿನ ಹಣ್ಣು; ಗಂಡು ಗುಂಡಿನ ಹಾಗೆ " ಅಂದನು.

ಹೆಂಡತಿಯು– " ಆಗಲಿ, ನೀವು ಮಾಡುವ ಕೆಲಸವನ್ನು ನನಗೆ ಬಿಡಿರಿ; ನನ್ನ ಕೆಲಸವನ್ನು ನೀವು ಮಾಡಿರಿ. ಗುಂಡಿನಂತಿರುವ ಗಂಡಿನ ಗತಿಯನ್ನು ಆ ಮೇಲೆ ನೋಡೋಣ " ಎಂದಳು.

ಗಂಡ ಹೆಂಡಿರು ಒಪ್ಪಿಕೊಂಡರು. ಗಂಡನು ತಾನು ಹೊಲದಲ್ಲಿ ಮಾಡುವ ಕೆಲಸವನ್ನೆಲ್ಲ ಹೆಂಡತಿಗೆ ತಿಳಿಸಿದನು. ಹೆಂಡತಿಯು ಗಂಡನು ಮನೆಯಲ್ಲಿ ಮಾಡಬೇಕಾದ ಕೆಲಸಗಳನ್ನೆಲ್ಲ ಹೇಳಿದಳು. ಮರುದಿನ ಚಿನ್ನವ್ವನು ಗಳಿಯ ಸಾಮಾನುಗಳನ್ನು ತೆಗೆದುಕೊಂಡು ಎತ್ತುಗಳನ್ನು ಅಟ್ಟಿಕೊಂಡು ಹೊಲಕ್ಕೆ ಹೋದಳು

ಮೊದಮೊದಲು ಅವಳಿಗೆ ತುಸ ತೊಂದರೆಯಾಯಿತು. ತುಸ ಹೊತ್ತಿನಲ್ಲಿಯೇ ಎಲ್ಲವೂ ಸರಿಯಾಯಿತು. ಎತ್ತುಗಳು ತಿರುಗಬೇಕಾದಲ್ಲಿ ರೂಢಿಯಂತೆ ತಾವೇ ತಿರುಗಿದವು. ಗಳಿಯ

ಕೆಲಸವು ಮುಂದೆ ಸಾಗಿತು. ಸಂಜೆಯ ಹೊತ್ತಿಗೆ ನೋಡಿದಾಗ ಗಂಡನು ಹೇಳಿದಷ್ಟಕ್ಕಿಂತಲೂ ಳ ಅಕ್ಕಡಿ ಹೊಲವನ್ನು ಹೆಚ್ಚಿಗೆ ಹರಗಿದ್ದಳು. ಇದನ್ನು ನೋಡಿ ಅವಳಿಗೆ ಸಂತೋಷವಾಯಿತು.

ಇತ್ತ ಮನೆಯಲ್ಲಿದ್ದ ಚಿನ್ನಪ್ಪನು ಜೋಳವನ್ನು ಬೀಸುವಾಗ ಕಲ್ಲನ್ನು ಕಸುವಿನಿಂದ ಗರಗರ ತಿರುಗಿಸಿದನು. ಜೋಳದ ಹಿಟ್ಟು ಬೀಳದೆ ಹೆಚ್ಚಾಗಿ ನುಚ್ಚೇ ಬಿದ್ದಿತು. ನೀರು ತರಲಿಕ್ಕೆ ಹೋದಾಗ ಕೊಡಮುಳುಗಿಸಲಿಕ್ಕೆ ೨೦ ನಿಮಿಷ ಹಿಡಿದವು. ರೊಟ್ಟಿಯು ಮೂಡಲು ಕುಳಿತಾಗ ಬೆಂಕಿಯೇ ಸರಿಯಾಗಿ ಹೊತ್ತಲಿಲ್ಲ. ಹಿಟ್ಟು ನುಚ್ಚಾಗಿದ್ದದರಿಂದ ರೊಟ್ಟಿಯನ್ನು ಬಡಿಯುವದಕ್ಕೆ ಬರಲಿಲ್ಲ. ಹಾಗೆ ಹೀಗೆ ಮಾಡಿ ಹಂಚಿನ ಮೇಲೆ ಹಾಕಿದ್ದು ಬೇಯಲಿಲ್ಲ. ಕೆಂಡದಮೇಲೆ ಇಟ್ಟಿದ್ದು ಉಬ್ಬಲಿಲ್ಲ. ಕಸ ಮುಸುರೆಯ ಮಾತೂ ಹಾಗೆಯೇ ಉಳಿಯಿತು. ಒಂದು ಕೂಸು 'ಅಮ್ಮಾ' ಎಂದು ಅತ್ತರೆ ಮತ್ತೊಂದು 'ಅಪ್ಪಾ' ಎಂದು ಅಳುತ್ತ ಹೋದಹೋದಲ್ಲಿ ಬೆನ್ನುಹತ್ತಿತು. ಚಿನ್ನವ್ವನು ಸಂಜೆಯ ಹೊತ್ತಿಗೆ ಹೊಲದಿಂದ ಮನೆಗೆ ಬಂದಳು.

ಮನೆಯಲ್ಲಿದ್ದ ಗಂಡನು ಅಲ್ಲಿಯ ಕಿರುಕಳ ಕೆಲಸಗಳಿಂದ ಬೇಸರುಗೊಂಡು ತನ್ನಿಂದ ತಪ್ಪಾಯಿತೆಂಬಂತೆ ಮನೆಯ ಅಂಗಳದಲ್ಲಿ ಬಂದು ನಿಂತಿದ್ದನು. ಆರೇಳು ವರ್ಷದ ಹಿರಿಯ ಮಗಳು ಮನೆಯಲ್ಲಿ ನಡೆದ ಅಪ್ಪನ ಗೋಳಾಟವನ್ನೆಲ್ಲ ಹೇಳಿದಳು.

ಚಿನ್ನಪ್ಪನು ತನ್ನ ತಪ್ಪನ್ನು ಒಪ್ಪಿಕೊಂಡನು.
ಚಿನ್ನವ್ವನು ತನಗೆ ಹೊಲದಲ್ಲಿ ಹೆಚ್ಚು ದಣಿವಾಯಿತೆಂದಳು.
" ಹೆಣ್ಣು ಹಣ್ಣಲ್ಲ ; ಗಂಡು ಗುಂಡಲ್ಲ.
ಹೆಣ್ಣಿನ ಕೆಲಸ ಹೆಣ್ಣಿಗೆ ; ಗಂಡಿನ ಕೆಲಸ ಗಂಡಿಗೆ "
ಎಂದು ಇಬ್ಬರೂ ಸಮಾಧಾನ ಮಾಡಿಕೊಂಡರು.

ಹೊಸ ಪದ್ಧತಿಯ ಹಿಂದೀ ಜಮಾಖರ್ಚು ಭಾಗ ೧

(ಮನೆಯ ಜಮಾಖರ್ಚು)

ಶ್ರೀ. ರಾ. ಸಿ. ಸಜ್ಜನ ಇವರು ಹೊಸ ಅಭ್ಯಾಸಪತ್ರಿಕೆಯ ಪ್ರಕಾರ ಈ ಪುಸ್ತಕವನ್ನು ರಚಿಸಿರುವರು. ಸರಕಾರದವರು ಇದನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಟೆಕ್ಸ್ಟ್‌ಬುಕ್ ಎಂದು ಮಂಜೂರು ಮಾಡಿರುವರು. ಮತ್ತು ಸ್ಕೂಲಬೋರ್ಡುಗಳ ಅಧಿಕಾರಿಗಳೂ ಮಾನ್ಯಮಾಡಿದ್ದಾರೆ. ಇದರಲ್ಲಿ ಇಯತ್ತಿವಾರ ಜಮಾಖರ್ಚಿನ ಅಭ್ಯಾಸಕ್ರಮದಂತೆ ಆರಂಭದ ಜಮಾಖರ್ಚು, ಕೀರ್ದಿ, ಖತಾವಣಿ, ಬಾಕಿಗಳ ತಾಳಿ, ಉತ್ಪನ್ನ ಖರ್ಚಿನ ಖಾತೆ, ಅಢಾವೆ, ತೋಂಡಮಿಳವಣಿ ಕೀರ್ದಿ ಮತ್ತು ಶಾಲಾಸಹಕಾರಿ ಸಂಘದ ಅಂಗಡಿ (ಸೊಸಾಯಿಟಿ) ಯ ಜಮಾಖರ್ಚು ಮುಂತಾದ ವಿಷಯಗಳೂ, ಪ್ರಾಮಿಸರಿ ನೋಟು, ಮನಿಯಾರ್ಡರ, ಇನ್ಸುಅರನ್ಸ, ಚೆಕ್ಕು, ಹುಂಡಿ, ಬಡ್ಡೀ ಆಕರಣೆ ಮೊದಲಾದ ವ್ಯವಹಾರದೊಳಗಿನ ಮಾಹಿತಿಗಳೂ, ಪ್ರಶ್ನಗಳೂ, ಅವುಗಳ ಉತ್ತರಗಳೂ ಕೊನೆಗೆ ಪರೀಕ್ಷೆಯ ಪ್ರಶ್ನಕಾಗದಗಳೂ ಇರುವವು. ಇದು ಈಗಿನ ಪರೀಕ್ಷೆಯ ಪದ್ಧತಿಯಂತೆ ಬರೆದಿರುವದರಿಂದ ಹೆಣ್ಣು ಮಕ್ಕಳ ಮತ್ತು ಗಂಡುಮಕ್ಕಳ ಪ್ರಾ. ಶಾ. ಪ್ರ. ಪ. ಪರೀಕ್ಷೆಯ ಉಮೇದವಾರರಿಗೂ ಬಹು ಉಪಯುಕ್ತವಾದುದಿರುತ್ತದೆ. ಆದಕಾರಣ ಎಲ್ಲ ಮಹನೀಯರು ಇದರ ಲಾಭವನ್ನು ಪಡೆಯಬೇಕೆಂದು ಆಶಿಸುತ್ತೇವೆ. **ಬೆಲೆ : ೮ ಆಣೆ**

ಪತ್ತೆ :– **ರಾ. ಸಿ. ಸಜ್ಜನ ಮಾಸ್ತರ,** ಜೋರಾಪುರ ಪೇಟೆ, ವಿಜಾಪುರ.

ಕನ್ನಡ ೫–೬–೭ನೆಯ ಇಯತ್ತೆಯ ವಿದ್ಯಾರ್ಥಿನಿಯರಿಗೆ

ಒಳ್ಳೇ ಸುಸಂಧಿ! ★ ಸುಲಭ ಬೆಲೆ!!

ಗೃಹ-ವಿಜ್ಞಾನ-ಶಾಸ್ತ್ರ

ಅಥವಾ

ಗೃಹಶಿಕ್ಷಣದ ಕೈಗನ್ನಡಿ

(ಶ್ರೀ. ಬಸವಕುಮಾರ ಕೃತ)

ಇದು ಶಾಲೋಪಯೋಗಿ ಪುಸ್ತಕವಿದ್ದು ಮುಂಬ್ಯೆ ವಿದ್ಯಾಖಾತೆಯವರಿಂದ ಮಂಜೂರಾಗಿದೆ. ಇದರಲ್ಲಿ ಪಾಕಶಾಸ್ತ್ರ, ಶರೀರಶಾಸ್ತ್ರ, ಆರೋಗ್ಯಶಾಸ್ತ್ರ, ಆಹಾರ ವಿಜ್ಞಾನಶಾಸ್ತ್ರ, ಮರ್ಮಶಾಸ್ತ್ರ, ಗೃಹವೈದ್ಯಶಾಸ್ತ್ರ, ಸಂಗೋಪನಶಾಸ್ತ್ರ ಇವುಗಳ ಮಾಹಿತಿ ಅಲ್ಲದೆ ಇನ್ನೂ ಎಷ್ಟೋ ಪರೀಕ್ಷೆಯ ವಿಷಯಗಳಿವೆ. ಪ್ರಸಿದ್ಧ ಸಾಹಿತಿಗರೂ, ಡಾಕ್ಟರೂ, ಪಂಡಿತರೂ ಸಹ ಇದು "ಪ್ರತಿಯೊಬ್ಬರು ಮನೆಯಲ್ಲಿ ಸಂಗ್ರಹಿಸಲು ಯೋಗ್ಯವಾಗಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.

ಬೆಲೆ ೦—೮—೦

ಪ್ರಕಾಶಕರು

ಪಶುಪತಯ್ಯಾ ಚಿನ್ನಯ್ಯಾ ಶಾಬಾದಿಮಠ ಬುಕ್ ಡಿಪೋ, ಗದಗ.

Reg. No. B. 3691

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ **ಪುಸ್ತಕವನ್ನು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕವಿತಾಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

ಅಗಸ್ಟ ೧೯೪೨ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ಬಿಡಿ ಸಂಚಿಕೆಗೆ ನಾಲ್ಕು ಆಣೆಗಳು.

ವಾರ್ಷಿಕ ಚಂದಾ ಹಣ ನೆರವು ರೂಪಾಯಿಗಳು ನಾಲ್ಕು.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಶ್ರೀಮಾನ್ ತಾವಡೆ ಸಾಹೇಬರ ಪ್ರಯಾಣ	೧
೨.	ಶಾರೀರಿಕ ಶಿಕ್ಷಣ	೨
೩.	ಲೋಕಮಾನ್ಯ ಬಾಳ ಗಂಗಾಧರ ಟಿಳಕರು	೧೦
೪.	ಶೀಲ ಸಂವರ್ಧನೆ	೧೭
೫.	ಪ್ರಾಥಮಿಕ ಶಿಕ್ಷಕರ ಸಂಬಳ	೨೩
೬.	ಕನ್ನಡ ಬುಕ್-ಕವಿಗಳಿಂದ ಮುಂಜೂರಾದ ಪುಸ್ತಕಗಳು	೨೫
೭.	ಪುಸ್ತಕ ಪರಿಚಯ	೨೬
೮.	ಧಾರವಾಡ ಜಿಲ್ಲೆಯ ಸ್ಕೂಲಬೋರ್ಡಿನ ಕೆಲವು ನಿರ್ಣಯಗಳು	೨೭
೯.	ಪ್ರಕಟನೆ	೩೮
೧೦.	ಮಾದರಿಯ ಹಳ್ಳಿ (ಪ್ರಬುದ್ಧರಿಗಾಗಿ)	೪೧

Printed by V. Y. Jathar at the Karnatak Printing Works, Dharwar and Published by H. S. Torgal, Esq. M. A., Principal Training College For-Men Dharwar, at his Office.

ಪುರೋಗಾಮಿ ಶಿಕ್ಷಕ

★

(ಲೇಖಕರು : ಶ್ರೀ. ಎಸ್. ಬಿ. ಗಜೇಂದ್ರಗಡ, ಬಿ.ಎ., ಬಿ.ಟಿ., ವಿಜಾಪುರ)

ಪ್ರಾಥಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಇರುವ
ದೈನಂದಿನ ಅಭ್ಯಾಸದಲ್ಲಿ— ಕಲಿಸುವ ಕಾರ್ಯದಲ್ಲಿ ಅತ್ಯಂತ ಉಪ-
ಯುಕ್ತವಾಗುವಂತೆ, ವಿದ್ಯಾಖಾತೆಯ ಅಭ್ಯಾಸಪತ್ರಿಕೆ-
ಯನ್ನು ಸಂಪೂರ್ಣವಾಗಿ ಅನುಸರಿಸಿ ಬರೆಯಲ್ಪಟ್ಟಿದೆ.

ಪುಟಗಳು ೩೩೬ ★ ಬೆಲೆ ೨-೪-೦

ಇದು ಮೂರು ಮುಖ್ಯ ಭಾಗಗಳನ್ನೊಳಗೊಂಡಿದೆ.

(೧) ಶೈಕ್ಷಣಿಕ ಮನಃಶಾಸ್ತ್ರವನ್ನು ೧೫೫ ಪುಟಗಳಲ್ಲಿ ವಿವೇಚಿಸಿದೆ. (೨) ಶಿಕ್ಷಣಶಾಸ್ತ್ರದ ಮೂಲತತ್ವಗಳನ್ನೂ ಪ್ರತ್ಯಕ್ಷವಾಗಿ ಕಲಿಸುವ ಶಾಸ್ತ್ರೀಯ ಪದ್ಧತಿಯನ್ನೂ ವಿವರಿಸಿದೆ. (೩) ಆಧುನಿಕ ಶಿಕ್ಷಣ ಕ್ರಮದ ಮಹತ್ವದ ಅಂಗಗಳಾದ ಶಾರೀರಿಕ ಶಿಕ್ಷಣ, ಶಿಸ್ತು, ಸಂಘಟನೆ ಮೊದಲಾದ ವಿಷಯಗಳನ್ನು ತಿಳಿಸಿದೆ.

ಶಿಕ್ಷಣದ ಸರ್ವಾಂಗಗಳನ್ನೂ ಸುಲಲಿತವಾದ ಭಾಷೆಯಲ್ಲಿ ಒತ್ತಟ್ಟಿಗೇ ಸುಂದರವಾಗಿ ಮಂಡಿಸಿದ ಶಾಸ್ತ್ರೀಯ ಗ್ರಂಥವು

ಕನ್ನಡದಲ್ಲಿ ಇದೊಂದೇ!

★

ಕನ್ನಡ-ಇಂಗ್ಲಿಷ್ ಶಾಲೆ-ಕಾಲೇಜುಗಳ ಎಲ್ಲಾ ಪಠ್ಯಪುಸ್ತಕಗಳೂ ಇತರ ಪುಸ್ತಕ, ಸ್ಕೂಲ್ ಸ್ಟೇಶನರಿ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ.

ಸ್ಟೂಡಂಟ್ಸ್ ಓನ್ ಬುಕ್ ಡಿಪೋ, ಧಾರವಾಡ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ಸಂಪುಟ ೮೧	ಅಗಸ್ಟ ೧೯೪೭	ವರ್ಷ ೧೫. ಸಂ. ೫

ಶ್ರೀಮಾನ್ ತಾವಡೆ ಸಾಹೇಬರ ಪ್ರಯಾಣ

ನಮ್ಮ ದಕ್ಷಿಣಭಾಗದ ಸನ್ಮಾನ್ಯ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ **ಶ್ರೀಮಾನ್ ತಾವಡೆಸಾಹೇಬರವರು** ಕೆಲಕಾಲದ ಮಟ್ಟಿಗೆ ಹಿಂದುಸ್ತಾನ ಸರಕಾರದವರು ನಿಯಮಿಸಿದ ಯುದ್ಧ ವಿಷಯಕ ಒಂದು ವಿಶಿಷ್ಟ ಅಧಿಕಾರದ ಮೇಲೆ ಹೋಗಿರುವರು. ಅವರು ಮೊನ್ನೆ (ತಾ. ೨೦) ತಮ್ಮ ಸ್ಥಾನಕ್ಕೆ ನಿಯಮಿಸಲ್ಪಟ್ಟ ಬೆಳಗಾಂವಿಯ ಬಿ. ಟಿ. ಕಾಲೇಜದಲ್ಲಿ ಪ್ರೊಫೆಸರರಾಗಿದ್ದ **ಡಾ. ವಿ. ವಿ. ಕಾವುತ** ಬಿ. ಏ. ಇವರಿಗೆ ಅಧಿಕಾರವನ್ನು ಒಪ್ಪಿಸಿ ಮುಂಬಯಿಗೆ ಪ್ರಯಾಣ ಬೆಳೆಸಿದರು. ಇದೇತಿಂಗಳ ೩೦ ನೆಯ ತಾರೀಖಿಗೆ ಅವರು ಸಿಮ್ಲಾಕ್ಕೆ ಹೋಗುವರು. ಶ್ರೀ. ತಾವಡೆ ಸಾಹೇಬರ ಮುಂದಿನ ಅಧಿಕಾರ ಕಾರ್ಯಕಲಾಪಗಳು ಮುಂತಾದವುಗಳ ಬಗ್ಗೆ ಸದ್ಯಕ್ಕೆ ಹೆಚ್ಚು ವಿವರಣೆಗಳು ಗೊತ್ತಾಗಿಲ್ಲ.

ಯಾವ ಬಗೆಯ ಪೂರ್ವ ಸೂಚನೆಯಿಲ್ಲದೆ ಒಮ್ಮೆಲೆ ಈ ಬದಲಾವಣೆಯು ಸಂಭವಿಸಿತು. ಕೂಡಲೆ ಹಲವು ಶಿಕ್ಷಣ ಸಂಸ್ಥೆಗಳು ಸಾಹೇಬರವರಿಗೆ ಬಿಳ್ಕೊಡುವ ಸಮಾರಂಭನನ್ನು ನೆರವೇರಿಸಿದವು. ಗಂಡುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜ, ಹೈಸ್ಕೂಲು ಮತ್ತು ಮೂಲ ಶಿಕ್ಷಣ ಕೇಂದ್ರ ಈ ನಾಲ್ಕೂ ಸರಕಾರೀ ಸಂಸ್ಥೆಗಳ ಶಿಕ್ಷಕರು ಸೇರಿ ನೆರವೇರಿಸಿದ ಬೀಳ್ಕೊಡುವ ಸಮಾರಂಭವು ತುಂಬ ಆಕರ್ಷಕವಾಗಿದ್ದಿತು. ಆ ಸಮಯದಲ್ಲಿಯೂ ಟ್ರೇನಿಂಗ್ ಕಾಲೇಜದ ವಿದ್ಯಾರ್ಥಿ ಶಿಕ್ಷಕರ ವಾದವಿವಾದ ಮುಂಡಲದ ಸಭೆಯಲ್ಲಿಯೂ ಸಾಹೇಬರವರು ಅಂದು ಆಡಿದ ಮಾತುಗಳು ತುಂಬ ಉದ್ಬೋಧಕವಾಗಿದ್ದವು. ಶ್ರೀಮಾನ್ ತಾವಡೆಯವರು ತಮ್ಮ ಮುಂದಿರುವ ಘನವಾದ ಕಾರ್ಯದಲ್ಲಿ ತುಂಬ ಯಶಸ್ಸು ಪಡೆಯಲೆಂದು ಹಾರೈಸುವೆವ.

ಶಾರೀರಿಕ ಶಿಕ್ಷಣ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಗರ್ಭವತಿಯಾದ ತಾಯಿಗೆ ಒಳ್ಳೆಯ ಆಹಾರ ನಡೆವಳಿ ಏನೋದೋಲ್ಲಾಸ ಗಳು ಇವನ್ನೆಲ್ಲ ಒದಗಿಸಿಕೊಡಬೇಕೆಂದು ಹೇಳುವದರ ರಹಸ್ಯವು ಈ ಮಾತಿನಲ್ಲಿ ಅಡಕವಾಗಿರುವದು.

ಆರೋಗ್ಯದ ಮತ್ತು ಆಹಾರದ ವಿಷಯದಲ್ಲಿ ಚಿಕ್ಕ ಬಾಲಕರು ಹಲವು ಪ್ರಶ್ನೆಗಳನ್ನು ಕೇಳುವರು. ಅವರ ಮನಸ್ಸಿನ ಲವಲವಿಕೆಯೇ ಈ ಬಗೆಯ ಪ್ರಶ್ನೆಗಳಿಗೆ ಕಾರಣವಾಗಿರುವದು. ಇಂಥ ಪ್ರಶ್ನೆಗಳಿಗೆ ತಾಯ್ತಂದೆಗಳು ತುಂಬ ಎಚ್ಚರದಿಂದ ಉತ್ತರ ಕೊಡಬೇಕಾಗುವದು. ಯಾಕೆಂದರೆ, ಬಾಲಕರ ಶಿಕ್ಷಣಕ್ಕೆ ಅವರಲ್ಲಿ ಹುಟ್ಟುವ ಯಾವದೊಂದು ವಿಷಯವನ್ನು ತಿಳಿದುಕೊಳ್ಳುವ ಲವಲವಿಕೆಯೇ ಮುಖ್ಯ ಸಾಧನವಾಗಿರುವದು. ಇಂಥ ಲವಲವಿಕೆಯನ್ನು ಪಾಲಕರು ಪ್ರೋತ್ಸಾಹಿಸಿ ಅದು ಅವರಲ್ಲಿ ವಿಕಾಸಹೊಂದುವಂತೆ ಯತ್ನಿಸುತ್ತಿರಬೇಕು. ಎಷ್ಟೋ ಕುಟುಂಬಗಳಲ್ಲಿ ಇದಕ್ಕೆ ವಿರುದ್ಧವಾಗಿ ಚಿಕ್ಕಮಕ್ಕಳು ಕೇಳುವ ಪ್ರಶ್ನೆ-ಗಳಿಗೆ ತಕ್ಕ ಉತ್ತರ ಕೊಡುವದಿಲ್ಲ; ಅವರು ಹೀಗೆ ಪ್ರಶ್ನೆಕೇಳಿ ತಮಗೆ ತೊಂದರೆಕೊಡುತ್ತಿರುವರೆಂದೂ ತಿಳಿಯಲಾಗುವದು; ಆದುದರಿಂದ ಅವರನ್ನು ಬೆದರಿಸಿ ಅವರಲ್ಲಿರುವ ಲವಲವಿಕೆಯನ್ನು ಕುಗ್ಗಿಸುವದೂ ಉಂಟು. ವಿದ್ಯಾರ್ಥಿ-ಗಳಿಗಷ್ಟೇ ಶಿಕ್ಷಣಕೊಟ್ಟರೆ ಸಾಲದು. ಅವರ ಪಾಲಕರಿಗೂ ಸಹ ತಮ್ಮ ಮಕ್ಕಳು ಮರಿಗಳನ್ನು ನಡಿಸಿಕೊಳ್ಳುವ ಮತ್ತು ಅವರಿಗೆ ಶಿಕ್ಷಣ ಕೊಡುವ ವಿಷಯದಲ್ಲಿ ಶಿಕ್ಷಣ ಕೊಡುವದು ಅವಶ್ಯ ಎಂಬ ಪರಿಸ್ಥಿತಿಯು ಈಗ ಉಂಟಾಗಿರುವದು.

ಶಾರೀರಿಕ ಶಿಕ್ಷಣ:—ನಾವು ನಾಯಿ, ಮುಂಗ, ಕುದುರೆ, ಹುಲಿ ಮುಂತಾದ ಪ್ರಾಣಿಗಳಿಗೆ ಕೆಲಕೆಲವುಸಾರೆ ಅವುಗಳ ಸ್ವಾಭಾವಿಕ ಜೀವನಕ್ಕೆ ವಿರುದ್ಧವಾದ ಸಂಗತಿಗಳನ್ನು ಕಲಿಸಿ ಅವುಗಳಿಂದ ಕೆಲಸಮಾಡಿಸಿಕೊಳ್ಳುತ್ತೇವೆ. ಇದೇ ರೀತಿ ಯಾಗಿ ನಮ್ಮ ತಾಲೀಮುಖಾನೆಗಳಲ್ಲಿ ಪೈಲವಾನರು ತಯಾರಾಗುವರು. ಕೆಲ-ವೊಂದು ಕಾರ್ಯಮಾಡುವ ಶಕ್ತಿಯುಂಟಾಗುವಂಥ ಸಂಸ್ಕಾರಕೊಡುವದು ಬೇರೆ; ನಿಜವಾದ ಶಿಕ್ಷಣಕೊಡುವದು ಬೇರೆ, ಎಂಬದನ್ನು ನಾವು ಅರಿತಿರಬೇಕು. 'ಮನುಷ್ಯನಲ್ಲಿ ಸ್ವಾಭಾವಿಕವಾಗಿ ಇರುವಂಥ ಪರಿಪೂರ್ಣತೆಯನ್ನು ಪ್ರಕಟ-ಗೊಳಿಸುವದೇ ಶಿಕ್ಷಣ' ವು ಎಂಬ ಸೂತ್ರದಲ್ಲಿ ಸ್ವಾಮಿ ವಿವೇಕಾನಂದರು ಶಿಕ್ಷಣ ವೆಂದರೇನೆಂಬದನ್ನು ವಿಶದಪಡಿಸಿರುವರು. ಈ ಶಿಕ್ಷಣವು ಮಾನಸಿಕವಾಗಿರ ಬಹುದು ಇಲ್ಲವೆ ಶಾರೀರಿಕವಾಗಿರಬಹುದು.

ಶಿಕ್ಷಣವು ಪುರುಷರಿಗೆ ಇಲ್ಲವೆ ಸ್ತ್ರೀಯರಿಗೆ ತಮ್ಮಲ್ಲಿರಬೇಕಾದ ನಿಜವಾದ

ಮನುಷ್ಯತ್ವದ ಸರಿಯಾದ ಕಲ್ಪನೆಯನ್ನು ತಂದು ಕೊಡಬೇಕು. ಸೂರ್ಯ ಪ್ರಕಾಶವು ಬಿದ್ದೊಡನೆ ಕೆಲಕೆಲವು ಹೂವುಗಳು ಸ್ವಾಭಾವಿಕವಾಗಿ ವಿಕಾಸ ಹೊಂದುವಂತೆ ಶಿಕ್ಷಣದಿಂದ ಮಾನವ ಪ್ರಾಣಿಯಲ್ಲಿರುವ ಮನುಷ್ಯತ್ವವು ವಿಕಾಸಹೊಂದಬೇಕಾಗುವದು. ಇಂಥದೇ ನಿಜವಾದ ಶಿಕ್ಷಣವಲ್ಲದೆ ಕೆಲವೊಂದು ಕಾರ್ಯಮಾಡುವ ಶಕ್ತಿಯನ್ನುಂಟುಮಾಡಿದ ಮಾತ್ರಕ್ಕೆ ಅದು ಶಿಕ್ಷಣವೆನಿಸಲಾರದು. ಬೌದ್ಧಿಕಶಿಕ್ಷಣವನ್ನು ಹೊಂದಿದವನು ಒಳ್ಳೆಯ ಕಾರ್ಕೂನನಾಗಲಿ ಒಳ್ಳೆಯ ಅಧಿಕಾರಿಯಾಗಲಿ ಆಗಬಹುದು. ಹಾಗೆ ಶಾರೀರಿಕ ಶಿಕ್ಷಣವನ್ನು ಹೊಂದಿದವನೆನಿಸಿಕೊಳ್ಳುವವನು ಭಾರವಾದ ಗುಂಡನ್ನು ದೂರ ಒಗೆಯಬಹುದು. ಕಬ್ಬಿಣದ ಸರಪಳಿಯನ್ನು ಹರಿಯಬಹುದು. ಇಷ್ಟರಿಂದಲೇ ಇಂಥವರು ಬೌದ್ಧಿಕ ಇಲ್ಲವೆ ಶಾರೀರಿಕ ಶಿಕ್ಷಣವನ್ನು ಸರಿಯಾಗಿ ಹೊಂದಿದವರೆಂದು ಹೇಳಲು ಬರುವಂತಿಲ್ಲ. ನಿಜವಾದ ಶಾರೀರಿಕ ಶಿಕ್ಷಣವು ನಮ್ಮ ಶರೀರ ಮನಸ್ಸು ಇವೆರಡರಲ್ಲಿಯೂ ಇರುವ ಅಲೌಕಿಕ ಸಾಮರ್ಥ್ಯವನ್ನು ವಿಕಾಸಗೊಳಿಸುವದಿಷ್ಟೆ ಅಲ್ಲ; ದೈವಿಕ ಶಾಂತಿಯ ನಿವಾಸದಕಡೆಗೆ ನಮ್ಮನ್ನು ಕರೆದೊಯ್ಯುವ ಘನತರವಾದ ಕಾರ್ಯವನ್ನು ಮಾಡುವದು. ಮಾನವಪ್ರಾಣಿಗೆ ಮನುಷ್ಯತ್ವದ ಅರಿವನ್ನು ತಂದುಕೊಡುವದಕ್ಕೆ ಶಾರೀರಿಕ ಶಿಕ್ಷಣವು ಒಂದು ಮುಖ್ಯ ಸಾಧನವಾಗಿರುವದು. ಈ ದೃಷ್ಟಿಯಿಂದ ವಿಚಾರಮಾಡಿದರೆ ನಮ್ಮ ಪ್ರಕೃತದ ತಾಲೀಮು ಖಾನೆಗಳಲ್ಲಿ ಕೊಡುವ ಶಾರೀರಿಕ ಶಿಕ್ಷಣವೆಂದರೆ ಕೆಲವೊಂದು ಹೆಚ್ಚಿನ ಶಕ್ತಿಯ ಚಮತ್ಕಾರಗಳನ್ನು ಮಾಡಿತೋರಿಸಲು ಕಲಿಸುವಂಥ ಸರ್ಕಸಿನ ಶಿಕ್ಷಣವೆಂದೂ ಹಲವುಸಾರೆ ಕೆಲಕೆಲವು ಅಂಗೋಪಾಂಗಗಳಿಗೆ ಅಪಾಯಕರವಾದ ರೀತಿಯಲ್ಲಿ ಇಂಥ ಕೆಲಸಗಳು ನಡೆಯಿಸಲ್ಪಡುವವೆಂದೂ ಇಂಥ ಶಿಕ್ಷಣದಿಂದ ಹೆಚ್ಚಿನ ಪ್ರಯೋಜನವೇನೂ ಆಗಲಾರದೆಂದೂ ಹೇಳಬೇಕಾಗುವದು.

ತನ್ನ ಕಾಲಮೇಲೆ ಜೋಲಿ ಹಿಡಿದು ನಿಲ್ಲುವದಕ್ಕೂ ನಡೆಯುವದಕ್ಕೂ ಕಲಿಯುತ್ತಿರುವ ಚಿಕ್ಕ ಮಗುವನ್ನು ನೋಡಿರಿ. ಅದು ತನ್ನ ಶಿಕ್ಷಣವನ್ನು ತಾನೇ ಪ್ರಯೋಗಾನುಭವಗಳಿಂದ ಪೊಂದುತ್ತಿರುವದು. ಮಗುವು ಮೊದಲು ಗೋಡೆ ಮುಂತಾದ ಆಧಾರವನ್ನು ಹಿಡಿದು ನಿಲ್ಲಲು ಕಲಿಯುವದು; ತರುವಾಯ ಕೈಬಿಟ್ಟು ನಿಲ್ಲಲು ಯತ್ನಿಸುವದು, ಆ ಬಳಿಕ ತಪ್ಪುಹೆಜ್ಜೆಯಿಡುವದಕ್ಕೂ ಕೈಬಿಟ್ಟು ನಡೆಯುವದಕ್ಕೂ ಹವಣಿಸುವದು. ಆರೋಗ್ಯದ ಮತ್ತು ಶಾರೀರಿಕ ಶಿಕ್ಷಣದ ಅಭ್ಯಾಸವು ಈ ವಯಸ್ಸಿಗೆ ಮುಗಿಯಿತು; ಅಥವಾ ಈ ಅವಸ್ಥೆಯನ್ನು ಹೊಂದಿದಾಗ ಈ ಅಭ್ಯಾಸವು ಪೂರ್ಣವಾಯಿತು, ಎಂದು ಹೇಳುವಂತಿಲ್ಲ. ಅದು ಮನುಷ್ಯನು ಹುಟ್ಟಿದ ದಿನದಿಂದ ಸಾಯುವವರೆಗೂ ಬಿಟ್ಟುಬಿಡದೆ ಆಚರಣೆ

ಮಾಡುತ್ತ ಕಲಿಯುತ್ತ ಮುಂದೆ ಸಾಗಲೇಬೇಕಾದ ವಿಷಯ. ಸದ್ಯದ ಸಾಮಾನ್ಯ ಜನತೆಯಲ್ಲಿ ಈ ವಿಷಯಕ್ಕೆ ತಕ್ಕ ಶಿಕ್ಷಣ ಪ್ರಸಾರವಾದರೆ ಅದರಿಂದ ಮುಂದಿನ ಪೀಳಿಗೆಯು ಹೆಚ್ಚು ಸುಸಂಸ್ಕೃತವಾಗಲು ಸಹಾಯವಾಗುವದು. ಈ ದೃಷ್ಟಿಯಿಂದ ನಾವು ಕೆಲಸಮಾಡಿ ಮುಂದಿನ ಪೀಳಿಗೆಗೆ ಈ ಜಗತ್ತು ಹೆಚ್ಚು ಸುಖದಾಯಕವೂ ಮೇಲ್ಮರಗತಿಯದೂ ಆಗುವಂತೆ ಮಾಡಲು ಯತ್ನಿಸಬೇಕು.

ಶಿಕ್ಷಕರ ಕಾರ್ಯವು ಘನವಾದದ್ದಿರುವಷ್ಟೇ ತೊಡಕಿನದೂ ಆಗಿರುವದು; ಅವರ ಮಾರ್ಗದಲ್ಲಿ ಅನೇಕ ಅಡಚಣಿಗಳಿರುವವು. ಶಿಕ್ಷಕರು ಶಾಲೆಯಲ್ಲಿರುವಾಗಿನ ವೇಳೆಯಲ್ಲಿ ಬಾಲಕರಿಗೆ ಶಿಕ್ಷಣಕೊಡುವ ಮಟ್ಟಿಗೆ ಮಾತ್ರ ಹೊಣೆಗಾರರಾಗಿರುವರು. ಶಾಲೆಯ ವೇಳೆಯನ್ನು ಮಿಕ್ಕುಳಿದ ವೇಳೆಯಲ್ಲಿಯೂ ಅವರು ಮನೆಯಲ್ಲಿ ಇರುವಾಗಲೂ ಅವರ ತಾಯ್ತಂದೆಗಳೂ ಪಾಲಕರೂ ಅವರಿಗೆ ಕೊಡುತ್ತಿರುವ ಶಿಕ್ಷಣದ ಬಗ್ಗೆ ಶಿಕ್ಷಕರು ಹೊಣೆಗಾರರಾಗಲಾರರು. ಶಾಲೆಯಲ್ಲಿ ಕಲಿಸುವ ಹಲಕೆಲವು ಮಾತುಗಳು ತಾತ್ತ್ವಿಕ ಸ್ವರೂಪದಲ್ಲಿರುವದರಿಂದ ಅವು ಶಾಲೆಯಲ್ಲಿಯೇ ಉಳಿದುಬಿಡುವವು. ಅವು ಬಾಲಕರ ಸಂಗಡ ಮನೆಯನ್ನು ಸೇರಿ ಆಚರಣೆಗೆ ಬರಲಾರವು. ಇದೇ ಮಾತು ಶಾರೀರಿಕ ಶಿಕ್ಷಣದಲ್ಲಿಯೂ ಕೂಡ ಸಂಭವಿಸುವದು. ನಿಜವಾದ ಶಾರೀರಿಕ ಶಿಕ್ಷಣ ಕೊಡುವದಕ್ಕೆ ಶಿಕ್ಷಕರಿಗೆ ತಕ್ಕ ಅನುಕೂಲತೆಗಳೇ ಇರುವದಿಲ್ಲ. ಶಾಲೆಯ ವೇಳಾಪತ್ರಿಕೆಯಲ್ಲಿ ಸೇರ್ಪಡೆಯಾದ ಅರ್ಧತಾಸಿನ ಮಟ್ಟಿಗೆ ಮಾತ್ರ ಬಾಲಕರು ಶಾರೀರಿಕ ಶಿಕ್ಷಣಕೊಡುವ ಶಿಕ್ಷಕನ ಆಧೀನಕ್ಕೆ ಬರುವರು. ಈ ಅರ್ಧ ತಾಸು ಕೂಡ ಆ ಶಿಕ್ಷಕನ ಇಚ್ಛಾನುಸಾರವಾಗಿ ದೊರೆಯುವ ಸಂಭವ ಕಡಿಮೆ. ಯಾಕೆಂದರೆ ಇಡಿಯ ಶಾಲೆಯ ಮತ್ತು ಬೇರೆ ಬೇರೆ ವರ್ಗಗಳ ಕಾರ್ಯಕ್ರಮಕ್ಕೆ ಈ ಶಾರೀರಿಕ ಶಿಕ್ಷಣದ ವೇಳೆಯು ಅನುಗುಣವಾಗಿರಬೇಕು; ಇಷ್ಟೇ ಅಲ್ಲ, ಅವಕ್ಕೇ ಹೆಚ್ಚು ಪ್ರಾಧಾನ್ಯತೆಯಿರುವದು. ಇಷ್ಟು ಕಡಿಮೆ ಎಂದರೆ ಅರ್ಧತಾಸಿನ ವೇಳೆಯಲ್ಲಿಯೇ ತನ್ನ ಚಾಣ್ಯೆಯನ್ನೆಲ್ಲ ಉಪಯೋಗಿಸಿ ಶಾರೀರಿಕ ಶಿಕ್ಷಣಪಲ್ಲಾದ ಪ್ರಗತಿಯನ್ನು ಮೇಲಣ ಅಧಿಕಾರಿಗಳಿಗೆ ತೋರಿಸಿ ಅವರನ್ನು ಸಮಾಧಾನಪಡಿಸಿಕೊಂಡು ತಾನು ಶಿಕ್ಷಕ ವರ್ಗದಲ್ಲಿ ಇರಲು ಅರ್ಹನೆಂದೂ ಶಾಲೆಯಲ್ಲಿ ತನ್ನ ಅಸ್ತಿತ್ವವು ಆವಶ್ಯಕವೆಂದೂ ತೋರಿಸಿಕೊಳ್ಳಬೇಕಾಗುವದು. ಇದು 'ವೇಳೆ ಸ್ವಲ್ಪ; ಸೋಗುಗಳು ಬಹಳ' ಎಂಬ ಕನ್ನಡ ಗಾದೆಯ ಮಾತಿನ ಒಂದು ಪ್ರತ್ಯಕ್ಷ ಪ್ರಮಾಣವೆಂದರೆ ತಪ್ಪಾಗದು.

ಚಿತ್ರಗಳನ್ನು ಚಿತ್ರಿಸುವ ಇಲ್ಲವೆ ಪ್ರತಿಮೆಗಳನ್ನು ಮಾಡುವ ಕಲಾವಿದನಿಗೆ ಆಯಾ ವಸ್ತುಗಳ ಅಥವಾ ಪ್ರಾಣಿಗಳ ಶರೀರದ ಅಸ್ಥಿರಚನೆಯ ಕಲ್ಪನೆಯು ಸರಿಯಾಗಿ ಇರಬೇಕಾಗುವದು. ಶಾರೀರಿಕ ಶಿಕ್ಷಣಕಾರ್ಯದಲ್ಲಿಯೇ ತಮ್ಮ

ಆಯುಷ್ಯವನ್ನೆಲ್ಲ ಕಳೆದ ಎಷ್ಟೋಜನರಿಗೆ ನಮ್ಮ ಶರೀರದ ಯಾವ ಭಾಗದಲ್ಲಿ ಯಾವ ಅವಯವವಿದೆ, ಅದರ ಕಾರ್ಯಕಲಾಪಗಳೇನು, ಯಾವ ಅಂಗದ ಅಸ್ಥಿರಚನೆಯು ಯಾವ ರೀತಿಯಾಗಿರುವದು ಎಂಬುದರ ಕಲ್ಪನೆಯೇ ಇರುವದಿಲ್ಲ. ನಮ್ಮಲ್ಲಿ ಡಾಕ್ಟರ ಜನರನ್ನುಳಿದ ಇತರರಿಗೆ ಶಾರೀರ ಶಾಸ್ತ್ರದ ಮೂಲ ತತ್ತ್ವಗಳ ತಿಳಿವಳಿಕೆಯೂ ಕೂಡ ಅನಾವಶ್ಯಕವೆಂಬ ವಿಚಾರವುಳ್ಳ ಜನರೇ ಹೆಚ್ಚು. ನಮ್ಮ ಶಾಲೆಗಳೊಳಗಿನ ವಿದ್ಯಾರ್ಥಿಗಳಿಗೆ ಅಖಿಲ ಜಗತ್ತಿನ ಯಾವ ಭಾಗದಲ್ಲಿ ಏನು ಇರುವದೆಂಬದರ (ಭೂಗೋಲ ಶಾಸ್ತ್ರದ) ಅಥವಾ ಗ್ರಹ ನಕ್ಷತ್ರಗಳನ್ನೊಳಗೊಂಡ ಅಖಂಡ ಪ್ರಪಂಚದ (ಜ್ಯೋತಿಷ ಶಾಸ್ತ್ರದ) ಕಲ್ಪನೆಯಿರುವದು ಆದರೆ ಅವರಿಗೆ ತಮ್ಮ ಸ್ವಂತ ಶರೀರದ ಯಾವ ಭಾಗದಲ್ಲಿ ಯಾವ ಅವಯವವಿದೆಯೆಂಬುದರ ಸರಿಯಾದ ತಿಳಿವಳಿಕೆಯಿರುವದಿಲ್ಲ. ಅವರಿಗೆ ತಮ್ಮ ಶರೀರವನ್ನು ನೀಟಾಗಿ ಇಟ್ಟುಕೊಳ್ಳುವದಕ್ಕೂ ಅದರ ಯಾವುದಾದರೊಂದು ಭಾಗಕ್ಕೆ ಅಲ್ಪಸ್ವಲ್ಪ ಅಪಾಯ ಸಂಭವಿಸಿದಾಗ ತಕ್ಕ ಉಪಾಯಗಳನ್ನು ಮಾಡಿಕೊಳ್ಳುವದಕ್ಕೂ ಗೊತ್ತಿರುವದಿಲ್ಲ. ಆರೋಗ್ಯಶಾಸ್ತ್ರ, ಆರೋಗ್ಯದ ಮೂಲ ತತ್ತ್ವಗಳು, ಪ್ರಥಮ ಚಿಕಿತ್ಸೆ, ಇವುಗಳಿಗೆ ನಮ್ಮ ಶಾಲಾ ಶಿಕ್ಷಣದಲ್ಲಿ ಸಾಕಾದಷ್ಟು ಪ್ರಾಮುಖ್ಯತೆಯಿಲ್ಲದಿರುವದೇ ಇದಕ್ಕೆ ಕಾರಣವಾಗಿದೆ. ಶಾರೀರಿಕ ಶಿಕ್ಷಣದ ಕಾರ್ಯದಲ್ಲಿ ತೊಡಗಿದ ಶಿಕ್ಷಕರು ಸರಿಯಾದ ಕಾರ್ಯಾರಂಭ ಮಾಡುವದಕ್ಕಿಂತ ಮೊದಲು ತಮ್ಮ ಬಾಲಕರಿಗೆ ಈ ವಿಷಯಗಳ ಶಿಕ್ಷಣ ಕೊಡಬೇಕಾಗುವದು.

ಶಾರೀರಿಕ ಶಿಕ್ಷಣಕ್ಕೆ ಸಂಬಂಧಿಸುವ ಇತರ ಚಟುವಟಿಕೆಗಳೂ ಕೆಲವಿರುವವು. ಬಾಲಕರಿಗೆ ಹಲಕೆಲವು ಕಸರತ್ತು ಮಾಡಿಸುವದರಿಂದ ಅಥವಾ ಆಟಗಳನ್ನು ಆಡಿಸುವದರಿಂದ ಸರಿಯಾದ ಶಾರೀರಿಕ ಶಿಕ್ಷಣವು ದೊರೆಯಲಾರದು. ಅವರಿಗೆ ಪೌಷ್ಟಿಕ ಆಹಾರ, ವಿಶ್ರಾಂತಿ, ನಿದ್ದೆ, ಶರೀರದ ಮತ್ತು ಮನೆಯ ಸುತ್ತಲಿನ ಪ್ರದೇಶದ ಸ್ವಚ್ಛತೆ, ಒಳ್ಳೆಯ ಚಟಗಳು, ಒಳ್ಳೆಯ ಹವೆ, ಸೂರ್ಯಪ್ರಕಾಶ, ಒಳ್ಳೆಯ ಅಭಿರುಚಿ ಇವೆಲ್ಲ ವಿಷಯಗಳ ಬಗ್ಗೆ ಶಾಲೆಯಲ್ಲಿ ತಕ್ಕ ಶಿಕ್ಷಣವು ದೊರೆಯಬೇಕು; ಮತ್ತು ಬಾಲಕರು ಮನೆಯಲ್ಲಿ ಇವನ್ನು ಆಚರಿಸುತ್ತಿರಬೇಕು. ನಮ್ಮ ಶಾಲೆಗಳಿಗೆ ಬರುವ ಮತ್ತು ನಾವು ಶಾರೀರಿಕ ಶಿಕ್ಷಣವನ್ನು ಕೊಡಬೇಕಾಗಿರುವ ಮಕ್ಕಳಲ್ಲಿ ಅಶಕ್ತರಾದ, ಎದೆ ಗೂಡುಗಟ್ಟಿದ, ಡುಬ್ಬಗಟ್ಟಿ ಮುಂದೆ ಹಾಯ್ದಿರುವ ಹೊಟ್ಟೆಯುಳ್ಳ, ಬಿದಿರ ಕಟ್ಟಿಗೆಯಂತೆ ಬಡಕಲಾದ ಕೈಕಾಲುಗಳುಳ್ಳ, ಹಂಸಪಾದದ, ಬಾಗಿದ ಬೆನ್ನುಹುರಿಯುಳ್ಳ, ಹಲ್ಲುಪಂಕ್ತಿಯು ಇನ್ನೂ ಬೆಳೆಯದಿರುವ ಇಲ್ಲವೆ ಹುಳಿತುಹೋದ ಹಲ್ಲುಗಳಿರುವ ಮಕ್ಕಳ

ಹೆಚ್ಚಾಗಿರುವರು. ಇಂಥವರಿಗೆ ಶಾರೀರಿಕ ಶಿಕ್ಷಣ ಕೊಟ್ಟು ಅವರನ್ನು ಸುಧಾರಿಸುವ ಭಾರವು ನಮ್ಮ ಶಾರೀರಿಕ ಶಿಕ್ಷಣ ಕೊಡುವ ಶಿಕ್ಷಕರ ಮೇಲಿರುವದು.

ಪೌಷ್ಟಿಕ ಆಹಾರವೆಂದರೇನೆಂಬುದಾಗಲಿ, ನಮಗೆ ಉಪಲಬ್ಧವಾಗಿರುವ ಜೀನಸುಗಳಲ್ಲಿಯೇ ಯಾವದನ್ನು ಯಾವ ರೀತಿಯಾಗಿ ಎಷ್ಟು ಉಪಯೋಗಿಸಿ ಕೊಂಡೆರೆ ನಮ್ಮ ಆಹಾರವು ತಕ್ಕಮಟ್ಟಿಗಾದರೂ ಪೌಷ್ಟಿಕವೆನಿಸಬಹುದೆಂಬುದಾಗಲಿ ನಮ್ಮಲ್ಲಿ ಎಷ್ಟು ಜನರಿಗೆ ಸರಿಯಾಗಿ ಗೊತ್ತಿದೆ? ನಾವು ನಮ್ಮ ಮಕ್ಕಳಿಗೆ ಪ್ರತಿದಿನ ಒಂದೆರಡು ದೊಡ್ಡ ಊಟಗಳಲ್ಲಿ ಹಾಕುತ್ತಿರುವಷ್ಟೇ ಆಹಾರವನ್ನು ಬೇರೆ ಬೇರೆ ವೇಳೆಗಳಲ್ಲಿ ಸರಿಯಾಗಿ ಕೊಡುವದರಿಂದ ಅವು ಹೆಚ್ಚು ಪೋಷಕವಾಗುವದೂ ಅವರಲ್ಲಿ ಹೆಚ್ಚು ಶಕ್ತಿಯನ್ನು ಹುಟ್ಟಿಸುವದೂ ಉಂಟು. ಮಕ್ಕಳು ಮನೆಯಲ್ಲಿಯೂ ಸೂಟಿಯ ವೇಳೆಯಲ್ಲಿಯೂ ನಾನಾಬಗೆಯ ಅನಾರೋಗ್ಯಕರವಾದ ಮತ್ತು ಪೌಷ್ಟಿಕವಲ್ಲದ ಆಹಾರಗಳನ್ನು ಸೇವಿಸುತ್ತಿರುವರು. ಶಿಕ್ಷಕರು ಇದನ್ನು ಪ್ರತಿಬಂಧಿಸಲಾರರು. ಮುಂಬಯಿಯಂಥ ಊರಿನಲ್ಲಿ ಶಾಲೆಗೆ ಹೋಗುವ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಅಥವಾ ಹಾಲನ್ನು ಕೊಡುವ ಪದ್ಧತಿಯು ಇತ್ತೀಚೆಗೆ ಪ್ರಾರಂಭವಾಗಿದೆ. ಇದು ಒಳ್ಳೆಯ ಉಪಾಯವೇನೋ ಹೌದು. ಆದರೆ ದೇಶದ ತುಂಬೆಲ್ಲ ಈ ಪದ್ಧತಿಯು ಎಂದು ಪ್ರಚಾರದಲ್ಲಿ ಬರುವದೊ ಯಾರುಬಲ್ಲರು?

ಮಕ್ಕಳ ಶಾರೀರಿಕ ಶಿಕ್ಷಣದ ಕಾರ್ಯವನ್ನು ಕೈಕೊಂಡ ಶಿಕ್ಷಕರು ಮೊದಲು ಅವರ ಮನೆತನದ ಸ್ಥಿತಿಗತಿಗಳನ್ನೂ ಅವರಿಗೆ ದೊರೆಯುವ ಆಹಾರವು ಎಷ್ಟು ಮಟ್ಟಿಗೆ ಪೌಷ್ಟಿಕವಾಗಿರುವದೆಂಬದನ್ನೂ ಅರಿತುಕೊಳ್ಳಬೇಕು. ಬರಿಹೊಟ್ಟೆಯಲ್ಲಿ ಇಲ್ಲವೆ ಅರೆಹೊಟ್ಟೆಯಲ್ಲಿ ಸಾಲೆಗೆ ಬಂದ ಮಕ್ಕಳನ್ನು ಶಾರೀರಿಕ ಶಿಕ್ಷಣದ ಕಾರ್ಯದಲ್ಲಿ ತೊಡಗಿಸಿ, ಮೈಮುರಿ ದುಡಿಸಿಕೊಳ್ಳುವದರಿಂದ ಆಗುವ ಅಪಾಯವನ್ನು ದುರ್ಲಕ್ಷಿಸುವದು ಎಂದೂ ಹಿತಕರವಾಗಲಾರದು. ಈ ಮಾತನ್ನು ಮರೆತು ಕೆಲಸ ಮಾಡುವ ಶಿಕ್ಷಕರನ್ನು ಕಾಣುವದು ಅಪರೂಪವಲ್ಲ.

ಚಿಕ್ಕ ಮಕ್ಕಳಿಗೆ ದಿನಕ್ಕೆ ನಾಲ್ಕೈದು ಸಾರೆ ಆಹಾರ ಕೊಡಬೇಕಾಗುವದು. ಅವರಿಗೆ ತಕ್ಕಷ್ಟು ಪೋಷಕ ಗುಣವುಳ್ಳ ಆಹಾರವನ್ನು ವೇಳೆಗೆ ಸರಿಯಾಗಿ ಕೊಡುತ್ತಿರುವದು ತೀರ ಅವಶ್ಯಕವಾದ ಮಾತು. ಪ್ರಬುದ್ಧರ ವಿಷಯದಲ್ಲಿ ಇದು ಅಷ್ಟು ಮಹತ್ವದ ಪಾತಳಿಸಲಿಕ್ಕಿಲ್ಲ. ಹೀಗೆ ತಕ್ಕ ಆಹಾರವನ್ನು ತಕ್ಕ ವೇಳೆಗೆ ಕೊಡುವದರಿಂದ ಮಕ್ಕಳು ಹೆಚ್ಚು ಸುಂದರವಾದ ಮೈಕಟ್ಟಿನವರೂ ಹೆಚ್ಚು ಚಟುವಟಿಕೆ ಉತ್ಸಾಹಗಳುಳ್ಳವರೂ ಆಗುವರಲ್ಲದೆ, ಅವರು ಬೌದ್ಧಿಕ ಶಿಕ್ಷಣದ ಪಾಠಗಳಲ್ಲಿ ಹೆಚ್ಚು ಆಸ್ಥೆಯಿಂದಲೂ ಸ್ಥಿರಚಿತ್ತದಿಂದಲೂ ಕೆಲಸ ಮಾಡುವರು.

ಆಹಾರದ ಪೌಷ್ಟಿಕತೆಯು ಅದರ ಪ್ರಮಾಣವನ್ನು ಅವಲಂಬಿಸಿರದೆ ಆ ಪದಾರ್ಥ-ಗಳಲ್ಲಿರುವ ಶಕ್ತಿಯನ್ನು ಹುಟ್ಟಿಸಿ ಅವಯವಗಳನ್ನು ಪೋಷಿಸಿ ಬೆಳೆಯಿಸುವ ಗುಣವನ್ನು ಹೆಚ್ಚಾಗಿ ಅವಲಂಬಿಸಿರುವದು. ಆಹಾರದ ಪೌಷ್ಟಿಕ ಗುಣವೆಂದರೇನೆಂಬದು ಬಾಲಕರಿಗಂತೂ ತಿಳಿದಿರುವದಿಲ್ಲ. ಇಷ್ಟೇ ಅಲ್ಲ ಅವರ ಪಾಲಕರಿಗೂ ಈ ವಿಷಯದಲ್ಲಿ ತಕ್ಕಷ್ಟು ಜ್ಞಾನವಿರುವದಿಲ್ಲ. ನಮ್ಮ ಶಾಲೆಗಳೊಳಗೆ ಪಾಠ ಪುಸ್ತಕಗಳಲ್ಲಿ ಗಂಡುಸರಿಗೂ ಹೆಂಗುಸರಿಗೂ ಯಾವ ಯಾವ ವಯಸ್ಸಿನಲ್ಲಿ ಅವರ ಶರೀರ ಪೋಷಣೆಗೆ ಎಂಥೆಂಥ ಆಹಾರವು ಎಷ್ಟೆಷ್ಟು ಬೇಕೆಂಬುದರ ವಿವರಣೆಯಿರುವದಿಲ್ಲ. ಶಿಕ್ಷಕರು ಈ ಕೊರತೆಯನ್ನು ಪೂರೈಸಿಕೊಡಬೇಕಾಗುವದು.

ನಮ್ಮವರಿಗೆ ಪಾಶ್ಚಿಮಾತ್ಯ ದೇಶದ ಜನರ ಅನುಕರಣೆಯ ಹುಚ್ಚು ಹತ್ತಿದೆಯೆಂದು ಹೇಳುವದುಂಟು. ಶಾಲೆಗಳ ಅಭ್ಯಾಸದ ವೇಳೆಯೂ ಕೂಡ ಈ ಬಗೆಯ ಅಂಧ ಅನುಕರಣೆಯ ಪರಿಣಾಮವೆಂದೇ ಹೇಳಬೇಕಾಗಿದೆ. ಯುರೋಪಿಯನ್ನರು ಮುಂಜಾನೆ ೯, ೯–೩೦ರ ಸುಮಾರಕ್ಕೆ ತಮ್ಮ ಮುಂಜಾನೆಯ ಊಟವನ್ನು ಮುಗಿಸಿ ಕೆಲಸಕ್ಕೆ ತೊಡಗುವರು. ನಮ್ಮ ಹಳ್ಳಿಗಳಲ್ಲಿ ಇದಕ್ಕೆ ನ್ಯಾರಿ ಎಂದು ಹೇಳುವರು; ಮತ್ತು ಮಧ್ಯಾಹ್ನ ೧ ಗಂಟೆಯ ವೇಳೆಗೆ ಮಧ್ಯಾಹ್ನದ ಊಟಕ್ಕೆ ಹೋಗಲು ಅನುಕೂಲವಾಗುವಂತೆ ಕೆಲಸವನ್ನು ಬಿಡುವರು. ನಮ್ಮ ಮಕ್ಕಳು ಶಾಲೆಯ ಅಭ್ಯಾಸದ ದೃಷ್ಟಿಯಿಂದ ಅತಿ ಮಹತ್ವದ್ದಾದ ಬೆಳಗಿನ ವೇಳೆಯನ್ನೆಲ್ಲ ವ್ಯರ್ಥವಾಗಿ ಕಳೆದು ೧೦–೩೦ರ ಅಥವಾ ೧೧ ಗಂಟೆಯ ಸುಮಾರಿಗೆ ಊಟಮುಗಿಸಿ ಸಾಲೆಗೆ ಓಡುವರು; ಮತ್ತು ೧ ಗಂಟೆಯ ಸೂಟಿಯಲ್ಲಿ ಸಾಲೆಯ ಮುಂದಿನ ದಾರಿಯಮೇಲೆ ಮಾರಲಿಕ್ಕೆ ಇಟ್ಟ ಹಸಿಬಿಸಿ ಜೀನಸುಗಳಲ್ಲಿ ಕೈಗೆ ಸಿಕ್ಕದ್ದನ್ನು ತಿಂದು ಮತ್ತೆ ಸಾಲೆಗೆ ಹೋಗುವರು. ನಮ್ಮ ಶಾಲೆಗಳಲ್ಲಿ ನಡೆಯುವ ಶಾರೀರಿಕ ಶಿಕ್ಷಣದ ವೇಳೆಯೂ ಕೂಡ ಹಲವು ಸಂದರ್ಭಗಳಲ್ಲಿ ತೀರ ಅಯೋಗ್ಯವಾದದ್ದಿರುವದು. ನಮ್ಮ ದೇಶವು ಉಷ್ಣ ಹವಾಮಾನವುಳ್ಳದ್ದು. ಇಂಥಲ್ಲಿ ಮಧ್ಯಾಹ್ನದ ವೇಳೆಯು ಕೆಲಸಮಾಡಲಿಕ್ಕೆ ಅನುಕೂಲವಾದದ್ದಲ್ಲ. ಬೆಳಗಿನ ಮತ್ತು ಮಧ್ಯಾಹ್ನದ ತರುವಾಯದ ಇಳಿಹೊತ್ತಿನ ಸಮಯವು ಅಭ್ಯಾಸಕ್ಕೂ ಶಾರೀರಿಕ ಶಿಕ್ಷಣಕ್ಕೂ ತುಂಬ ಹಿತಕರವಾದ ವೇಳೆಯೆನಿಸುವದು. ಈ ದೃಷ್ಟಿಯಿಂದ ವಿಚಾರಮಾಡಿ ಶಾಲೆಯ ವೇಳೆಯನ್ನು ಗೊತ್ತುಪಡಿಸಿ ವೇಳಾಪತ್ರಿಕೆಯನ್ನು ತಯಾರಿಸಬೇಕಾಗಿರುವದು.

ಆರೋಗ್ಯದ ದೃಷ್ಟಿಯಿಂದ ಬೆಳಕು, ಬಿಸಿಲು ಮತ್ತು ಶುದ್ಧ ಹವೆ ಇವಕ್ಕೂ ಆಹಾರದಷ್ಟೇ ಮಹತ್ವವಿದೆ. ಆದರೂ ಎಷ್ಟೋ ಶಾಲೆಗಳಲ್ಲಿ ಈ ವಿಷಯಕ್ಕೆ ತೀರ ಅನಾದರ ತೋರಿಸಿರುವದನ್ನು ಕಾಣಬಹುದು. ಎಷ್ಟೋ ಶಾಲೆಯ

ಕೋಣೆಗಳ ನೆಲವು ಹೊಲಸಾಗಿರುವದು; ಕಿಡಕಿಗಳನ್ನು ತೆರೆದಿರುವದಿಲ್ಲ. ಶಾಲೆಯಲ್ಲಿ ಕಂಡು ಕಲಿತಿರುವದನ್ನು ಬಾಲಕರು ತಮ್ಮ ಮನೆಗಳಲ್ಲಿ ಆಚರಿಸ ಬೇಕಾಗುವದರಿಂದ ಶಿಕ್ಷಕರು ಈ ವಿಷಯದಲ್ಲಿ ಎಚ್ಚರದಿಂದಿರಬೇಕು.

ಶಾಲೆಯೊಳಗಿನ ತಾಲೀಮು ಖಾನೆಯು ತುಂಬ ಆಕರ್ಷಕವಾಗಿರಬೇಕು. ಇದರಿಂದ ಶಾರೀರಿಕ ಬೆಳವಣಿಗೆ ವಿಕಾಸಗಳ ವಿಷಯದಲ್ಲಿ ಮಕ್ಕಳಲ್ಲಿ ಸ್ವಾಭಾವಿಕವಾಗಿ ಇರುವ ಪ್ರವೃತ್ತಿಗಳು ಜಾಗ್ರತೆ ಹೊಂದಿ ಸ್ಥಿರವಾಗಿ ಉಳಿಯಲು ಸಹಾಯವಾಗುವದು. ಮಕ್ಕಳಿಗೆ ತಮ್ಮ ಬೇರೆ ಬೇರೆ ಅವಯವಗಳಲ್ಲಿರುವ ಅಸ್ಥಿಗಳ ಮತ್ತು ಸ್ನಾಯುಸಂಸ್ಥೆಗಳ ಬೆಳವಣಿಗೆ ವಿಕಾಸಗಳನ್ನೂ ಅವುಗಳ ಉಪಯೋಗದ ಸಾಧನಗಳನ್ನೂ ಚೆನ್ನಾಗಿ ತಿಳಿಸಿಕೊಡುವದಲ್ಲದೆ, ವಿದ್ಯಾರ್ಥಿಗಳು ಆ ಸಾಧನಗಳನ್ನು ಸರಿಯಾಗಿ ಉಪಯೋಗಿಸುವಂತೆಯೂ ಅವರು ಪ್ರತಿವಾರಕ್ಕೆ ಒಮ್ಮೆಯಾದರೂ ಅವುಗಳಿಂದಾದ ಪರಿಣಾಮವನ್ನು ನಿರೀಕ್ಷಿಸುತ್ತಿರುವಂತೆಯೂ ಶಿಕ್ಷಕರು ನೋಡಿಕೊಳ್ಳಬೇಕು. ಶರೀರದ ಅಳತೆ ಮತ್ತು ಬೇರೆ ಬೇರೆ ಅಂಗೋಪಾಂಗಗಳ ವಿಕಾಸ ಇವುಗಳನ್ನು ಅಳೆದು ನೋಡಿ, ಬರೆದಿಟ್ಟು, ಅವುಗಳಲ್ಲಾದ ಹೆಚ್ಚು ಕಡಿಮೆಗಳನ್ನು ಕಂಡುಹಿಡಿಯುತ್ತ ಸಾಗುವದು ಶಾರೀರಿಕ ಶಿಕ್ಷಣಕ್ರಮದಲ್ಲಿ ಮಾಡಬೇಕಾದ ಒಂದು ಮಹತ್ವದ ಮಾತು. ಇಂಥ ಎಲ್ಲ ಮಾಹಿತಿಯುಳ್ಳ ಒಂದು ಕಾರ್ಡಿನಲ್ಲಿಯೇ ಅವರವರ ಸಾಮಾನ್ಯ ಆರೋಗ್ಯಕ್ಕೆ ಸಂಬಂಧಿಸಿದ ಮತ್ತೆ ಕೆಲವು ಸಂಗತಿಗಳನ್ನೂ ಬರೆದಿಡಬೇಕಾಗುವದು. ಹೆಚ್ಚು ವಿವರಣೆಯನ್ನು ಅಪೇಕ್ಷಿಸುವ ಸಂದರ್ಭದಲ್ಲಿ ಆ ಮಕ್ಕಳು ತಕ್ಕೊಳ್ಳುತ್ತಿರುವ ಆಹಾರದ ಜೀನಸುಗಳು, ಅವುಗಳ ಪ್ರಮಾಣ, ಅವರು ಮಾಡುತ್ತಿರುವ ಬೇರೆ ಬೇರೆ ವ್ಯಾಯಾಮಗಳ ವಿವರಣೆ, ಮನೆಯಲ್ಲಿ ಅವರಿಗಿರುವ ಅನುಕೂಲತೆ ಪ್ರತಿಕೂಲತೆಗಳು, ಇವನ್ನೆಲ್ಲ ಬರೆದಿಡುವದು ಆವಶ್ಯಕವೆನಿಸುವದು. ಇದೇ ಕಾರ್ಡಿನಲ್ಲಿ ಅವರು ಬೇರೆ ಬೇರೆ ವಯಸ್ಸಿನಲ್ಲಿ ತೋರಿಸುತ್ತಿರುವ ಬೌದ್ಧಿಕ ಮತ್ತು ನೈತಿಕ ವಿಕಾಸವನ್ನೂ ಬರೆದಿಡುವದುಂಟು. ಇಂಥ ಎಲ್ಲ ವಿವರಣೆಗಳನ್ನು ಸರಿಯಾಗಿ ಬರೆದಿಟ್ಟಿರುವ ಕಾರ್ಡಿನಿಂದ ಆಯಾ ಮಕ್ಕಳ ವಿಷಯದ ಎಲ್ಲ ಮಹತ್ವದ ಮಾತುಗಳು ಒತ್ತಟ್ಟಿಗೆ ಏಕಕಾಲಕ್ಕೆ ದೊರೆಯುವವು. ಒಳ್ಳೆಯ ಸ್ಥಿತಿಯಲ್ಲಿ ಹುಟ್ಟಿ ಬೆಳೆದಿರುವ ಹಾಗು ಮಾದರಿಯಾಗಿರುವ ಮಕ್ಕಳಲ್ಲಿ ಬೇರೆ ಬೇರೆ ವಯಸ್ಸಿನಲ್ಲಿ ಕಂಡುಬರುವ ಎತ್ತರ, ತೂಕ, ಆಟದಲ್ಲಿ ತೋರಿಸುವ ಪ್ರಗತಿ ಮುಂತಾದ ವಿವರಣೆಗಳು ಎಲ್ಲರಿಗೂ ತಿಳಿಯುವಂತೆ ವ್ಯವಸ್ಥೆ ಮಾಡಿರುವದು ಆವಶ್ಯಕವೆನಿಸುವದು. ಉದಾ:– ೧೦ ವರ್ಷ ವಯಸ್ಸಿನ ಒಬ್ಬ ಬಾಲಕನು ಆದರ್ಶಪ್ರಾಯನಾಗಬೇಕಾದರೆ ಅವನ ಎತ್ತರ, ತೂಕ ಮೊದಲಾದವು ಇಷ್ಟಿಷ್ಟು ಇರಬೇಕು ಎಂಬುದು ಎಲ್ಲರಿಗೂ

ತಿಳಿಯಬೇಕು. ಅಂಥ ಆದರ್ಶವು ಅವರ ಮುಂದಿದ್ದರೆ ಅವರು ಆ ಆದರ್ಶವನ್ನು ಮುಂದಿಟ್ಟುಕೊಂಡು ಅದನ್ನು ಸಾಧಿಸಲು ಹವಣಿಸುವರು.

ಒಟ್ಟಿನ ಮೇಲೆ ಹೇಳುವದೇನಂದರೆ, ಶಾರೀರಿಕ ಶಿಕ್ಷಣದ ಬಗ್ಗೆ ನಾವು ಈ ಕೆಳಗಿನ ಸಂಗತಿಗಳನ್ನು ಲಕ್ಷ್ಯದಲ್ಲಿಟ್ಟಿರಬೇಕು.

ಆರೋಗ್ಯವೂ ಶಾರೀರಿಕ ಶಿಕ್ಷಣವೂ ಮನುಷ್ಯನ ಸಂಪೂರ್ಣ ಶಿಕ್ಷಣಕ್ಕೆ ಪೂರಕವಾಗಿರುವವು. ವೈದ್ಯಕೀಯ ವೃತ್ತಿಯವರೂ ಶಿಕ್ಷಣ ಪುರಸ್ಕರ್ತರೂ ಕೂಡಿಯೆ ಈ ಕೆಲಸವನ್ನು ನೆರವೇರಿಸಬೇಕು. ಶಿಕ್ಷಣದಲ್ಲಿ ಇದು ಶಾರೀರಿಕ ಶಿಕ್ಷಣ; ಇದು ಬೌದ್ಧಿಕ ಶಿಕ್ಷಣ; ಇದು ನೈತಿಕ ಶಿಕ್ಷಣ; ಎಂಬ ಭಿನ್ನಭೇದ ಗಳಿರಕೂಡದು.

ಗರ್ಭಾವಸ್ಥೆಯಿಂದಲೇ ಆರೋಗ್ಯ ರಕ್ಷಣೆಯ ಕಾರ್ಯಗಳು ಪ್ರಾರಂಭ ವಾಗುವದರಿಂದ ಆರೋಗ್ಯ ವಿಷಯಕ ಮೇಲ್ವಿಚಾರಣೆ ನಡೆಯಿಸುವ ಅಧಿಕಾರಿ ಗಳಿಂದ ಈ ಕೆಲಸವು ಪ್ರಾರಂಭವಾಗಲಾರದು.

ಶಾಲೆಗೆ ಹೋಗುವ ಮಕ್ಕಳ ವಿಷಯದಲ್ಲಿ ಅವರ ಶಾರೀರಿಕ ಬೆಳೆ ವಣಿಗೆ, ಅವರು ಮಾಡುತ್ತಿರುವ ವ್ಯಾಯಾಮಗಳು, ಆಡುತ್ತಿರುವ ಆಟಗಳು, ಇಷನ್ನಷ್ಟೇ ನೋಡುತ್ತಿದ್ದರೆ ಸಾಲದು. ಅವರಿಗೆ ದೊರೆಯುತ್ತಿರುವ ಆಹಾರ, ಆ ಆಹಾರದ ಪೌಷ್ಟಿಕತೆ, ವಿಶ್ರಾಂತಿ, ಒಳ್ಳೆಯ ಚಟಗಳು, ಸ್ವಚ್ಛತೆ, ನಿರ್ದುಷ್ಟ-ವಾದ ಹವೆ, ಬೆಳಕು ಮುಂತಾದವುಗಳ ವಿಷಯದಲ್ಲಿಯೂ ನಾವು ತಕ್ಕಷ್ಟು ಲಕ್ಷ್ಯ ಪೂರೈಸಬೇಕು.

ಮಕ್ಕಳ ಶಿಕ್ಷಣವು ಕೆಲವೊಂದು ನಿಶ್ಚಿತವಾದ ಧ್ಯೇಯವಿಟ್ಟುಕೊಂಡು ಸಾಗಬೇಕು. ಉದಾ :– ಹೆಣ್ಣು ಮಕ್ಕಳ ವಿಷಯದಲ್ಲಿ ಅವರು ಮುಂದೆ ಮೇಲ್ತರ ಗತಿಯ ಆರೋಗ್ಯವಂತರಾದ ಮಕ್ಕಳನ್ನು ಹಡೆಯಲು ತಕ್ಕವರಾಗುವ ಧ್ಯೇಯ ವಿರಬೇಕು; ಗಂಡುಮಕ್ಕಳ ಶಿಕ್ಷಣವು ಅವರು ತಮ್ಮ ಮುಂದಿನ ಜೀವನದಲ್ಲಿ ಕೈಕೊಳ್ಳಬೇಕಾದ ವ್ಯವಸಾಯಕ್ಕೆ ಅನುಗುಣವಾದದ್ದಿರಬೇಕು.

ಆರೋಗ್ಯ ಶಾಸ್ತ್ರದ ಮೂಲತತ್ತ್ವಗಳನ್ನು ಎಲ್ಲರೂ ಅರಿತಿರಬೇಕು; ಮತ್ತು ಅವರಿಗೆ ಶಾಲೆಯಲ್ಲಿಯೇ ಈ ವಿಷಯದ ಶಿಕ್ಷಣವು ದೊರೆಯಬೇಕು. ಶಾರೀರ ಶಾಸ್ತ್ರ, ಆರೋಗ್ಯದ ನಿಯಮಗಳು, ಪ್ರಥಮ ಚಿಕಿತ್ಸೆ, ಪೌಷ್ಟಿಕ ಆಹಾರ, ಶರೀರದ ಬೇರೆ ಬೇರೆ ಅವಯವಗಳನ್ನೂ ಸ್ನಾಯುಗಳನ್ನೂ ಬೆಳೆಯಿಸುವ ಮತ್ತು ಬಲಗೊಳಿಸುವ ವ್ಯಾಯಾಮಗಳು, ವಿಶ್ರಾಂತಿ, ಒಳ್ಳೆಯ ಅಭ್ಯಾಸಗಳು, ಶರೀರದ ಮತ್ತು ಸುತ್ತುಮುತ್ತಲಿನ ಪ್ರದೇಶಗಳ ಸ್ವಚ್ಛತೆ, ರೋಗಜಂತುಗಳ ಹುಟ್ಟುವಿಕೆ, ಪ್ರಸಾರ, ರೋಗನಿವಾರಣೆಯ ಸರ್ವಸಾಮಾನ್ಯ ಉಪಾಯಗಳು, ಮುಂತಾದ

ವಿಷಯಗಳಿಗೆ ಸಂಬಂಧಿಸಿದ ಪಾಠಗಳನ್ನು ಅವರಿಗೆ ನಾವು ಶಾಲೆಯಲ್ಲಿ ಕಲಿಸಬೇಕಾಗುವದು.

ಚಿಕ್ಕ ಬಾಲಬಾಲಕಿಯರಿಗಷ್ಟೇ ಅಲ್ಲ, ಅವರ ತಾಯ್ತಂದೆಗಳಿಗೂ ಈ ವಿಷಯದಲ್ಲಿ ತಕ್ಕಷ್ಟು ಶಿಕ್ಷಣ ದೊರೆಯಬೇಕು.

ಶಾಲೆಯ ವೇಳೆಯೂ ಶಾರೀರಿಕ ಶಿಕ್ಷಣದ ಸಮಯವೂ ಆಯಾ ದೇಶ-ಕಾಲಗಳಿಗೆ ಅನುಗುಣವಾಗಿರಬೇಕು. ಮಕ್ಕಳ ಶಾರೀರಿಕ, ಮತ್ತು ನೈತಿಕ, ಬೌದ್ಧಿಕ, ಕ್ರಮ-ವಿಕಾಸಗಳನ್ನು ತೋರಿಸುವ ಒಂದು ಕಾರ್ಡನ್ನು ಇಟ್ಟಿರಬೇಕು.

ಬೇರೆ ಬೇರೆ ಜಾತಿ ಮತಗಳಿಗೆ ಅನುಗುಣವಾದ ಉಚ್ಚ ಆದರ್ಶವು ಆಯಾ ಬಾಲಬಾಲಿಕೆಯರ ಮುಂದೆ ಇರುವಂತೆ ಮಾಡಬೇಕು.

ಶಾಲೆಗಳಲ್ಲಿಯೂ ತಾಲೀಮಖಾನೆಗಳಲ್ಲಿಯೂ ನಡೆಯುವ ಶಾರೀರಿಕ ಶಿಕ್ಷಣದ ಕಾರ್ಯಕ್ರಮವನ್ನು ಯೋಗ್ಯ ಅಧಿಕಾರಿಗಳು ಆಗಾಗ ಮೇಲ್ವಿಚಾರಣೆ ನಡೆಯಿಸಿ, ಅವರಿಗೆ ತಕ್ಕ ಸಲಹೆ ಸೂಚನೆಗಳನ್ನು ಒದಗಿಸುವ ವ್ಯವಸ್ಥೆಯಿರಬೇಕು. ಅವರು ಆ ಸ್ಥಳಗಳಲ್ಲಿ ಇರುವ ಅವಕಾಶ, ಬೆಳಕು, ಹವೆಯಾಡುವಿಕೆ ಮಕ್ಕಳು ಕೂಡುವ ಸಾಧನಗಳು ಮತ್ತು ಅವುಗಳ ವ್ಯವಸ್ಥೆ, ನೀರಿನ ಪೂರೈಕೆ, ಆಟದ ಸ್ಥಳಗಳು ಮುಂತಾದವುಗಳ ಬಗ್ಗೆ ಇರುವ ಅನುಕೂಲತೆ ಪ್ರತಿಕೂಲತೆಗಳನ್ನು ಅನುಲಕ್ಷಿಸುತ್ತಿರಬೇಕು.

(ಡಾ॥ ಕೆ. ಎಸ್. ಮಾಸ್ಕರ ಎಮ್. ಎ., ಅವರ ಲೇಖನದ ಆಧಾರದಿಂದ ಬರೆದುದು.)

ಲೋಕಮಾನ್ಯ ಬಾಳಗಂಗಾಧರ ಟಿಳಕರು

೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಮಹರ್ಷಿ ದಾದಾಭಾಯಿ ನವರೋಜಿಯವರು ಕೇಂದ್ರಸ್ಥಾನದಲ್ಲಿದ್ದುಕೊಂಡು ದೇಶದ ತರುಣ ಪೀಳಿಗೆಗೆ ರಾಷ್ಟ್ರಸೇವೆಯ ಶಿಕ್ಷಣಕೊಡುತ್ತ ನಡೆದಿದ್ದರು. ಅವರು ಬರೆದುಕೊಟ್ಟ ಸ್ವತಂತ್ರ ಭಾರತಮಾತೆಯ ರೂಪರೇಷೆಗೆ ಜೀವಕಳೆ ತುಂಬಿಸುವ ಲೋಕನಾಯಕರು ಅವರಿರುವಾಗಲೇ ಹುಟ್ಟಿ ಬೆಳೆದು ಮುಂದೆ ಬಂದು ಆಕೆಯ ಸೇವೆಗೆ ಸಿದ್ಧರಾದರು. ದೇಶದ ಸರ್ವಾಂಗಸುಂದರವಾದ ಪ್ರಗತಿಯಾಗಬೇಕಾದರೆ ಲೋಕಜಾಗ್ರತಿಯು ಅವಶ್ಯವಾಗಿದ್ದಿತು. ಲೋಕಮಾನ್ಯ ಬಾಳಗಂಗಾಧರ ಟಿಳಕರು ಇಂತಹ ಲೋಕಜಾಗ್ರತಿಯನ್ನು ಹುಟ್ಟಿಸಿದವರಲ್ಲಿ ಪ್ರಮುಖರು.

ಅವರು ಹಿಂದಿಗಳಿಗೂ 'ಮನುಷ್ಯತ್ವವಿದೆ, ಸ್ವಾಭಿಮಾನವಿದೆ, ಧೈರ್ಯವಿದೆ' ಎಂಬದನ್ನು ಜಗತ್ತಿನ ನಿದರ್ಶನಕ್ಕೆ ತಂದುಕೊಟ್ಟರು.

ಸಹ್ಯಗಿರಿಯ ಪಶ್ಚಿಮದ ಇಳುಕಲಿನಲ್ಲಿ ಹಬ್ಬಿದ ಬಡನಾಡಾದ ಕೊಂಕಣ ಪ್ರಾಂತವು ಲೋಕಮಾನ್ಯ ಟಿಳಕರ ಜನ್ಮಭೂಮಿ. ರತ್ನಾಕರನ ನೆರೆಮನೆಯೆನಿಸುವ ರತ್ನಾಗಿರಿಯಲ್ಲಿ ಇವರು ೧೮೫೬ ನೆಯ ಇಸ್ವಿಯ ಜುಲೈ ೨೩ ನೆಯ ತಾರೀಖಿನ ದಿನ ಜನ್ಮತಾಳಿದರು. ದಾರಿದ್ರ್ಯವಿದ್ದಲ್ಲಿ ಆ ಕೊರತೆಯನ್ನು ತುಂಬಿಕೊಡುವದಕ್ಕಾಗಿ ಭಗವಂತನು ಬುದ್ಧಿಶಕ್ತಿಯನ್ನು ಹೆಚ್ಚಾಗಿ ಇಟ್ಟಿರುವನೆಂದೂ ಈ ಮಾತಿಗೆ ಲೋ. ಟಿಳಕರು ರತ್ನಾಗಿರಿಯಲ್ಲಿ ಹುಟ್ಟಿದ್ದು ಒಂದು ಉದಾಹರಣೆಯೆಂದೂ ಹೇಳುವದುಂಟು. ೧೮೭೧ ನೆಯ ಇಸ್ವಿಯ ದಸರೆಯ ಸುಮೂರ್ತದಲ್ಲಿ ಅವರ ವಿದ್ಯಾರಂಭವಾಯಿತು. ಲೋಕಮಾನ್ಯರ ಹಿರಿಯರು ಪುಣೆಯಲ್ಲಿ ಡೆಪುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿದ್ದರು. ಆದ್ದರಿಂದ ಅವರ ಮುಂದಿನ ಶಿಕ್ಷಣವೆಲ್ಲ ಪುಣೆಯಲ್ಲಿಯೇ ನಡೆಯಿತು. ಅವರು ೧೮೭೩ ರಲ್ಲಿ ಮೆಟ್ರಿಕ್ಯುಲೇಶನ್ ೧೮೭೬ ರಲ್ಲಿ ಬಿ. ಎ. ೧೮೭೯ ರಲ್ಲಿ ಎಲ್‌ಎಲ್. ಬಿ. ಪರೀಕ್ಷೆಗಳಲ್ಲಿ ಪಾಸಾದರು. ಈ ರೀತಿಯಾಗಿ ಉಚ್ಚತರಗತಿಯ ಬೌದ್ಧಿಕ ಶಿಕ್ಷಣದೊಂದಿಗೆ ಅದಕ್ಕನುಣವಾದ ಶಾರೀರಿಕ ಶಿಕ್ಷಣವನ್ನೂ ಪಡೆದು ಲೋಕಮಾನ್ಯರು ತಮ್ಮ ಮುಂದಿನ ಮಹಾಕಾರ್ಯವನ್ನು ಕೈಕೊಳ್ಳಲು ಸರ್ವವಿಧದಿಂದಲೂ ಯೋಗ್ಯರಾದರು. ಸಾಲೆಕಾಲೇಜಗಳಲ್ಲಿ ಬೌದ್ಧಿಕ ಶಿಕ್ಷಣವನ್ನು ಪಡೆಯುತ್ತಿರುವಾಗಲೇ ತಾಲೀಮು ಮಾಡುವದು ಕುಸ್ತಿಯಾಡುವದು ಈಸುವದು ಮುಂತಾದ ಶಾರೀರಿಕ ವ್ಯಾಯಾಮಗಳನ್ನು ಮಾಡಿ ಶರೀರಸಾಮರ್ಥ್ಯವನ್ನು ದೊರಕಿಸಿದ್ದರಿಂದಲೇ ಅವರು ಮುಂದಿನ ದೇಶಸೇವಾ ಕಾರ್ಯದಲ್ಲಿ ಒದಗಿದ ಕಾರಾಗೃಹವಾಸವೇ ಮೊದಲಾದ ಶಾರೀರಿಕ ಕಷ್ಟಗಳನ್ನು ಸಹಜವಾಗಿ ಸಹಿಸಿಕೊಳ್ಳಲು ಸಮರ್ಥರಾದರೆಂದು ಹೇಳುವರು.

ಎಲ್‌ಎಲ್. ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಳಿಕ ಸರಕಾರದ ನೌಕರಿಯಲ್ಲಿ ಸೇರಬೇಕೆಂಬ ವಿಚಾರವೊಂದು ಅವರಲ್ಲಿದ್ದಿತಂತೆ. ಆದರೆ ಆಗಿನ ಮಹಾರಾಷ್ಟ್ರದೊಳಗಿನ ತರುಣ ಪೀಳಿಗೆಯ ಚಾಲಕರಾದ ನ್ಯಾಯಮೂರ್ತಿ ರಾನಡೆಯವರು ತಮ್ಮ ಅನುಭವದಿಂದ ಸರಕಾರದ ನೌಕರಿಯ ಜಾಲದಲ್ಲಿ ಒಮ್ಮೆ ಸಿಲುಕಿಕೊಂಡರೆ ಅವರಿಂದ ಯಾವ ಬಗೆಯ ದೇಶಕಾರ್ಯವೂ ನಿರರ್ಗಳವಾಗಿ ಸಾಗಲಾರದೆಂಬ ವಿಚಾರವುಳ್ಳವರಾಗಿದ್ದರು. ಮತ್ತು ಆ ವಿಚಾರಕ್ಕನುಗುಣವಾಗಿ ಲೋಕಮಾನ್ಯ ಟಿಳಕ, ವಿಷ್ಣುಶಾಸ್ತ್ರಿ ಚಿಪಳೂಣಕರ, ಅಗರಕರ ಮೊದಲಾದ ಸುಶಿಕ್ಷಿತ ತರುಣರು ಜನತೆಯ ಸೇವೆಗೆ ಮುಂದೆಬಂದು ಭಾರತಮಾತೆಯ

ಉದ್ಧಾರ ಕಾರ್ಯಕ್ಕೆ ನೆರವಾದುದು ನಮ್ಮೆಲ್ಲರ ಸುದ್ದೈವದ ಮಾತಾಯಿತು.

ದೇಶದ ಉನ್ನತಿಗೆ ಜನಜಾಗ್ರತಿಯೂ ಶಿಕ್ಷಣವೂ ಆವಶ್ಯಕವೆಂಬುದು ಆಗಲೇ ಸಿದ್ಧವಾದ ಮಾತಾಗಿತ್ತು. ಅದಕ್ಕಾಗಿ ದೇಶಸೇವಕರು ಈ ಎರಡು ಕಾರ್ಯಗಳಲ್ಲಿ ತಮ್ಮ ಶಕ್ತಿಸರ್ವಸ್ವವನ್ನು ವಿನಿಯೋಗಿಸುವದು ಅತ್ಯವಶ್ಯವೆಂಬ ವಿಚಾರದಿಂದ ಮಹಾರಾಷ್ಟ್ರದ ತರುಣ ಪೀಳಿಗೆಯು ಮುಂದೆ ಬಂದಿತು. ಪುಣೆಯಲ್ಲಿ ನ್ಯೂ ಇಂಗ್ಲಿಷ ಸ್ಕೂಲು (ಗಲಲಂ) ಪ್ರಾರಂಭವಾಗಿ ಮುಂದೆ ಗಲಲಜ ರಲ್ಲಿ ಫರ್ಗ್ಯುಸನ್ ಕಾಲೇಜವು ಉದಯವಾಯಿತು. ಫರ್ಗ್ಯುಸನ್ ಕಾಲೇಜದಲ್ಲಿ ಶಿಕ್ಷಣ ಹೊಂದಿದ ಬಹುಜನ ಕನ್ನಡಿಗರು ಈಗಲೂ ಅದನ್ನು ಮರೆತಿರಲಾರರು. ಪುಣೆಯ ಡೆಕ್ಕನ್ ಎಜ್ಯುಕೇಶನ್ ಸೊಸಾಯಿಟಿಯು ನೂಡಿದ ಮತ್ತು ಮಾಡುತ್ತಿರುವ ಶಿಕ್ಷಣ ಪ್ರಸಾರದ ಪವಿತ್ರ ಕಾರ್ಯವನ್ನು ಮಹಾರಾಷ್ಟ್ರೀಯರಷ್ಟೇ ಏಕೆ ಉತ್ತರ ಕರ್ನಾಟಕದ ಕನ್ನಡಿಗರೂ ಮರೆಯುವಂತಿಲ್ಲ. ಲೋಕಮಾನ್ಯ ಟಿಳಕರೇ ಮೊದಲಾದ ಆಗಿನ ತರುಣ ಮಹಾರಾಷ್ಟ್ರೀಯರು ಸ್ವಾರ್ಥತ್ಯಾಗದಿಂದ ಮುಂದೆ ಬಂದು ಕೆಲಸ ಮಾಡಿದುದರಿಂದಲೇ ಈ ಎಲ್ಲ ಹೊಸ ಬಗೆಯ ಶಿಕ್ಷಣ ಸಂಸ್ಥೆಗಳು ಹುಟ್ಟಿ ಬೆಳೆದು ಹೊಸ ವಿಚಾರದ ತರುಣ ವರ್ಗವು ಸಿದ್ಧವಾಗಿ ರಾಜಕೀಯ ಆಂದೋಲನಕ್ಕೆ ಅವಶ್ಯವಿದ್ದ ಲೋಕಜಾಗ್ರತಿಗೆ ಸಹಾಯವಾಯಿತೆಂದರೆ ತಪ್ಪಾಗದು.

ಈ ರೀತಿಯಾಗಿ ತರುಣ ವರ್ಗದ ಸಂಸ್ಕಾರಕ್ಕೆ ತಕ್ಕ ಯೋಜನೆಯನ್ನು ಮಾಡುವದರ ಜೊತೆಗೆ ಸಾಮಾನ್ಯ ಜನತೆಯಲ್ಲಿಯೂ ತಕ್ಕ ಜಾಗೃತಿಯನ್ನುಂಟು ಮಾಡಿ ನಮ್ಮ ದೇಶದ ರಾಜ್ಯದಾಡಳತೆಯನ್ನು ನಡೆಯಿಸಲಿಕ್ಕೆ ನಾವು ಸಮರ್ಥರಿದ್ದೇವೆಂಬದನ್ನು ಜಗತ್ತಿಗೆ ತೋರಿಸಿ ಕೊಡುವ ಅತಿ ಮಹತ್ವದ ಕೆಲಸವನ್ನು ಲೋಕಮಾನ್ಯರು ಬಹು ಕುಶಲತೆಯಿಂದ ಪ್ರಾರಂಭಿಸಿದರು. ಲೋಕಮಾನ್ಯರು ಪ್ರಾರಂಭಿಸಿದ 'ಕೇಸರಿ' ಪತ್ರವು ಆ ಕಾಲದಲ್ಲಿ ಮಹಾರಾಷ್ಟ್ರದಲ್ಲಿ ಮಾಡಿದಷ್ಟು ಜನಜಾಗ್ರತಿಯು ಇನ್ನಾವ ಸಾಧನದಿಂದಲೂ ಸಾಧ್ಯವಿರಲಿಲ್ಲ. ಶಿವಾಜಿಯ ಉತ್ಸವ ಗಣಪತಿಯ ಉತ್ಸವಗಳ ಹೆಸರಿನಿಂದ ವ್ಯಾಖ್ಯಾನ ಮಾಲೆಗಳನ್ನು ಏರ್ಪಡಿಸಿ ಮಲಗಿದ ಮಹಾರಾಷ್ಟ್ರವನ್ನು ಎಬ್ಬಿಸಿ ಕೂಡ್ರಿಸುವ ಶ್ರೇಯಸ್ಸು ಲೋಕಮಾನ್ಯರಿಗೆ ಸೇರಿದ್ದು. ಲೋಕಮಾನ್ಯರು ರಾಜ್ಯದಾಡಳತೆಯ ವಿಷಯದಲ್ಲಿ ಜನತೆಯ ಹೇಳಿಕೆಯೇನಿದೆಯೆಂಬದನ್ನು ಸರಕಾರಕ್ಕೆ ತಿಳಿಸಿ ಕೊಡುವ ಉದ್ದೇಶದಿಂದ "ಮರಾಠಾ" ಎಂಬ ಹೆಸರಿನ ಇಂಗ್ಲಿಷ ಪತ್ರಿಕೆಯೊಂದನ್ನು ಪ್ರಾರಂಭಿಸಿದರು.

ಗೀತೆಯು ಲೋಕಮಾನ್ಯ ಟಿಳಕರ ಪೂಜ್ಯ ಪಾರಾಯಣ ಗ್ರಂಥ. ಅದರ

ರಹಸ್ಯವನ್ನು ತಿಳಿದುಕೊಂಡು ಜನರಿಗೆ ತಿಳಿಯ ಹೇಳುವ ಹಂಬಲವು ಅವರಿಗೆ ಬಹುಕಾಲದಿಂದ ಇದ್ದಿತು. ಗೀತೆಯಲ್ಲಿ ಕರ್ಮಯೋಗಕ್ಕೇ ಪ್ರಾಧಾನ್ಯವಿದೆ. ಸರ್ವದಾ ಕಾರ್ಯನಿರತನಾಗಿರುವದೇ ಮನುಷ್ಯನ ಧರ್ಮ. ದೇಶೋದ್ಧಾರದ ಆಂದೋಲನಕ್ಕೂ ಮಾನವನ ಧರ್ಮಕ್ಕೂ ಸಂಬಂಧವಿದೆ. ಇಂತಹ ಕರ್ಮಯೋಗವೇ ಗೀತೆಯಲ್ಲಿ ಪ್ರತಿಪಾದಿತವಾಗಿದೆ. ಇವೇ ಮೊದಲಾದ ಗೀತೆಯ ರಹಸ್ಯಗಳನ್ನು ಲೋಕಮಾನ್ಯರು ಬಹು ಕುಶಲತೆಯಿಂದ ಜನತೆಯ ಮುಂದಿಟ್ಟರು.

ಲೋಕಮಾನ್ಯ ಟಿಳಕರು ಘನವಿದ್ವಾಂಸರು. ಇತಿಹಾಸ, ಸಂಶೋಧನ, ಜ್ಯೋತಿಷಶಾಸ್ತ್ರ, ಭಾಷಾಶಾಸ್ತ್ರ, ಅರ್ಥಶಾಸ್ತ್ರ, ತತ್ವಜ್ಞಾನ ಇವನ್ನೆಲ್ಲ ಅವರು ಸಶಾಸ್ತ್ರವಾಗಿ ಅಭ್ಯಾಸಮಾಡಿದ್ದರು. ಸಂಸ್ಕೃತಭಾಷೆಯಲ್ಲಿಯೂ ಅವರಿಗೆ ತುಂಬ ಪಾಂಡಿತ್ಯವಿದ್ದಿತು. ಅವರು 'ಓರಾಯಿನ್' "ಆರ್ಕ್ಟಿಕ್ ಹೋಮ ಇನ್ ದಿ ವೇದಾಸ" "ಗೀತಾರಹಸ್ಯ" ಮೊದಲಾದ ಸ್ವತಂತ್ರ ಸಂಶೋಧನಪರ ಗ್ರಂಥಗಳನ್ನು ರಚಿಸಿರುವರು. ಮರಾಠೀ ಭಾಷೆಗೆ ಹೊಸ ಮಾದರಿಯನ್ನು ತಂದು ಕೊಟ್ಟ ಶ್ರೇಯಸ್ಸು ಲೋಕಮಾನ್ಯ ಟಿಳಕರಿಗೇ ಹೆಚ್ಚಾಗಿ ಸಲ್ಲಬೇಕು. ಅವರ ಸ್ಮರಣಶಕ್ತಿಯೂ ವಕ್ತೃತ್ವಕಲೆಯೂ ಅವರ್ಣನೀಯವಾದುವು.

"ಅಗ್ರತಶ್ಚತುರೋವೇದಾಃ ಪೃಷ್ಠತಃ ಸಶರಂ ಧನುಃ |
ಇದಂ ಕ್ಷಾತ್ರಮಿದಂ ಬ್ರಾಹ್ಮಂ ಶಾಪಾದಪಿ ಶರಾದಪಿ ||

ಎಂದು ಹೇಳುವಂತೆ ಲೋಕಮಾನ್ಯರು ಘನವಿದ್ವಾಂಸರಾದ್ದರಿಂದಲೇ ಅಲ್ಲ, ವೀರ ಕ್ಷತ್ರಿಯರ ಮುಖ್ಯ ಲಕ್ಷಣವಾದ ಆತ್ಮತ್ಯಾಗ ಕೈಕೊಂಡ ಕಾರ್ಯವನ್ನು ಕೊನೆಗಾಣಿಸಿಯೇ ಬಿಡುವೆವೆಂಬ ಧೈರ್ಯ ಮುಂದಿಟ್ಟ ಅಡಿಯನ್ನು ಎಂದಿಗೂ ಹಿಂದೆಗೆಯೆನೆಂಬ ಮನಸ್ಸಿನ ನಿಶ್ಚಲವೃತ್ತಿ ಇವುಗಳಿಂದಲೂ ಅದ್ವಿತೀಯ ಲೋಕನಾಯಕರೆಂದೆನಿಸಿಕೊಂಡರು.

ಬಲ್ಲವರು ಲೋಕನಾಯಕರಾದವರಲ್ಲಿ ಎರಡು ವರ್ಗಗಳನ್ನು ಕಲ್ಪಿಸುವರು. ಒಂದು ಗುಡ್ಡವನ್ನು ಏರಿಹೋಗುವದಿದೆಯೆಂದು ತಿಳಿದರೆ ಗಟ್ಟಿಗರಾದ ಕೆಲವರನ್ನೇ ಕೂಡಿಕೊಂಡು ಕಡಿದಾದ ದಾರಿಯಿಂದ ಸರಸರನೆ ಅದನ್ನು ಏರಿ ಹೋಗಿ ಬಿಡುವವರು ಒಂದು ಮಾರ್ಗದವರು. ಅವರಿಗೆ ಆ ದಾರಿಯಲ್ಲಿ ಒದಗ ಬಹುದಾದ ಆಪತ್ತುಗಳ ಭಯವೇ ಇರದು. ಪ್ರಾಣಾಪಾಯವೇ ಒದಗಿದರೂ ಅದನ್ನು ಆನಂದದಿಂದ ಆದರಿಸುವೆವೆಂದು ಅವರು ಹೇಳುವರು. ಸಶಕ್ತರನ್ನೂ ಅಶಕ್ತರನ್ನೂ ಕೂಡಿಕೊಂಡು ಆ ಗುಡ್ಡದ ಓರೆಯ ದಾರಿಗುಂಟ ಸಾವಕಾಶ ನಡೆದುಹೋಗಿ ಅದರ ಶಿಖರವನ್ನು ಮುಟ್ಟಬೇಕೆನ್ನುವವರು ಎರಡನೆಯ ವರ್ಗ

ದವರು. ಲೋಕಮಾನ್ಯ ಟಿಳಕರು ಈ ಎರಡರಲ್ಲಿ ಮೊದಲನೆಯ ವರ್ಗಕ್ಕೆ ಸೇರುವ ಪ್ರಕೃತಿಯವರು. ಆದುದರಿಂದಲೇ ರಾಜಕೀಯ ಆಂದೋಲನದಲ್ಲಿ ಅದರ ಪಕ್ಷಕ್ಕೆ " ಉಗ್ರಪಕ್ಷ "ವೆಂದು ಹೆಸರುಂಟಾಯಿತು. ಸ್ವರಾಜ್ಯ ಸಾಧನೆಯ ಮಾರ್ಗದಲ್ಲಿ ನಾವು ಸರಕಾರದ ಮನವೊಲಿಸಿ ಕಾರ್ಯಸಾಧಿಸುವದು ಅಸಂಭವವೆಂದೂ ಪ್ರಸಂಗವೊದಗಿದರೆ ಅಧಿಕಾರಿಗಳ ಸಂಗಡ ಕಾದಾಡಿ ನಮ್ಮ ಅರ್ಹತೆಯನ್ನು ಸಿದ್ಧಮಾಡಿ ತೋರಿಸಿದಾಗಲೇ ನಮಗೆ ತಕ್ಕ ಅಧಿಕಾರಗಳು ದೊರೆಯುವವೆಂದೂ ಅವರು ಹೇಳುತ್ತಿದ್ದರು.

" ಉಗ್ರಪಕ್ಷದವರೇ ಆಗಲಿ, ಮಂದಪಕ್ಷದವರೇ ಆಗಲಿ, ಎಲ್ಲರ ಉದ್ದೇಶವೂ ಗುರಿಯೂ ಒಂದೇ. ಅವರ ಮಾರ್ಗದಲ್ಲಿ ಮಾತ್ರ ಭೇದ ತೋರುವದು. ರಶಿಯದ ಆಳರಸರು ಕೆಟ್ಟವರೆಂದು ಅಲ್ಲಿಯ ಪ್ರಜೆಗಳು ದೂರುವರು. ಆದರೆ ಅಲ್ಲಿಯ ಆಡಳಿತೆಯಲ್ಲಿ ಅಖಂಡ ದೇಶದ ಶಕ್ತಿಯನ್ನು ಹೀರಿ ದೇಶದ ಸಂಪತ್ತನ್ನು ಸೂರೆಮಾಡಿ ವರ್ಚಸ್ಸನ್ನು ಕುಂದಿಸುವ ಧ್ಯೇಯವಿಲ್ಲ. ಆದರೆ ನಮ್ಮದೇಶದ ಆಳರಸರ ಧೋರಣೆಯು ಬೇರೆಯೇ ಆಗಿದೆ. ಇಂಗ್ಲಂಡದ ಜನತೆಗೆ ನಮ್ಮದೇಶದ ಸ್ಥಿತಿ ಗತಿಗಳು ಚನ್ನಾಗಿ ತಿಳಿದಿಲ್ಲ. ಹಿಂದಿಗಳು ತಮ್ಮ ತಮ್ಮೊಳಗಿನ ಮತಭೇದವನ್ನು ದೂರನಾಡಿಕೊಂಡು ಮೊದಲು ಎಲ್ಲರೂ ಒಂದಾಗಬೇಕೆಂದು ಅವರು ಹೇಳುವರು. ಅದು ಈಗಲೇ ಆಗತಕ್ಕ ಮಾತಲ್ಲ ತರುಣ ಪೀಳಿಗೆಯು ನಮ್ಮನ್ನು ಅನುಸರಿಸುವದು. ಸ್ವಾವಲಂಬನವೇ ನಮ್ಮ ಇಷ್ಟ ಸಾಧನೆಯ ಮಹಾ ಮಂತ್ರದ ಮೂಲವು. ಈ ದಾರಿಯಲ್ಲಿ ಒದಗುವ ಎಲ್ಲ ಬಗೆಯ ಕಷ್ಟನಷ್ಟಗಳನ್ನು ನಾವು ಆನಂದದಿಂದ ಅಂಗೀಕರಿಸುವೆವು. ಹಿಂದುಸ್ತಾನದ ಹಿತಕ್ಕಾಗಿ ನಾವು ಸೆರೆಮನೆಗೆ ಹೋಗಲು ಸಹ ಹಿಂಜರಿಯೆವು. ಇತ್ಯಾದಿ. " ದಿ. ನ್ಯೂ. ಸ್ಪಿರಿಟ್ ಇನ್ ಇಂಡಿಯಾ " ಎಂಬ ಪುಸ್ತಕವನ್ನು ಬರೆದ ಇಂಗ್ಲಿಷ ಗೃಹಸ್ಥರ ಮುಂದೆ ಲೋ. ಟಿಳಕರು ವಿವರಿಸಿದ ತಮ್ಮ ರಾಜಕೀಯ ಆಂದೋಲನದ ಧೋರಣೆಯ ಸಂಕ್ಷಿಪ್ತ ರೂಪರೇಷೆಯಿದು.

ಲೋಕಮಾನ್ಯರ ಕಾಲಕ್ಕಿಂತ ಮೊದಲು ಸ್ವರಾಜ್ಯದ ಹೆಸರೆತ್ತುವುದು ಕೂಡ ರಾಜದ್ರೋಹದ ಮಹಾಪರಾಧವೆನಿಸುತ್ತಿತ್ತು. ಈಗ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನೂ ಮೀರಿದ ಸ್ವಾತಂತ್ರ್ಯವನ್ನೂ ಸಾರುವದೂ ಕೂಡ ಅಂತಹ ರಾಜದ್ರೋಹವೆನಿಸುವದಿಲ್ಲ.

೧೯೦೮ ರಲ್ಲಿ ಲೋಕಮಾನ್ಯ ತಿಲಕರು ರಾಜದ್ರೋಹದ ಆರೋಪಕ್ಕೆ ಗುರಿಯಾಗಿ ೬ ವರ್ಷ ಕಾರಾಗೃಹವಾಸಕ್ಕೆ ಗುರಿಯಾಗಿ ಬ್ರಹ್ಮದೇಶದೊಳಗಿನ ಮಂಡಾಲೆಯ ಸೆರೆಮನೆಗೆ ಕಳುಹಿಸಲ್ಪಟ್ಟರು. ಅಲ್ಲಿರುವಾಗಲೇ ಅವರು ಮೇಲೆ

ಹೇಳಿದ "ಗೀತಾರಹಸ್ಯ" ಮೊದಲಾದ ಉದ್ಗ್ರಂಥಗಳನ್ನು ರಚಿಸಿದರು. ಸೆರೆಮನೆಯ ಭೀತಿಯುಳ್ಳವರು ಲೋಕನಾಯಕರಾಗಿ ಮುಂದೆ ಬರಲು ಸಾಧ್ಯವೇ ಇಲ್ಲವೆಂಬದು ಆಗಲೇ ಸಿದ್ಧವಾಗಿ ಹೋಗಿತ್ತು. ಲೋಕಮಾನ್ಯರ ಮೇಲಿನ ರಾಜದ್ರೋಹದ ಆರೋಪದ ವಿಚಾರಣೆ ನಡೆದಾಗ ಅವರು ತಮಗೆ ಮುಂದೆ ಬರಬಹುದಾದ ಆಪತ್ತನ್ನು ತಿಳಿದೇ ಇದ್ದರು. ಮತ್ತು ತಮಗೆ ನ್ಯಾಯಾಧೀಶರು ಶಿಕ್ಷೆಯನ್ನು ವಿಧಿಸುವದಕ್ಕಿಂತ ಮೊದಲು "ನ್ಯಾಯಾಧೀಶರು ನನ್ನನ್ನು ಅಪರಾಧಿಯೆಂದು ನಿರ್ಣಯಿಸಿ ಶಿಕ್ಷೆಯನ್ನು ವಿಧಿಸಿದರೆ ನಾನು ಅದನ್ನು ಆನಂದದಿಂದ ಅಂಗೀಕರಿಸುವೆನು. ನಾನು ನಿರಪರಾಧಿಯೆಂಬದನ್ನು ನನ್ನ ಮನಸ್ಸು ಸಾರಿ ಹೇಳುತ್ತದೆ. ಈ ನ್ಯಾಯಸ್ಥಾನಕ್ಕಿಂತಲೂ ಮೇಲಿನ ಮಟ್ಟದ ನ್ಯಾಯಾಸನವೊಂದಿದೆಯೆಂಬುದನ್ನು ನಾನು ಬಲ್ಲೆನು. ಈ ಎಲ್ಲ ಲೌಕಿಕ ನ್ಯಾಯನಿರ್ಣಯಗಳನ್ನು ಖಂಡಿಸಬಲ್ಲ ಶಕ್ತಿಯೊಂದಿದ್ದು ಆ ಶಕ್ತಿಸ್ವರೂಪನಾದ ಪರಮೇಶ್ವರನ ಮನಸ್ಸಿನಲ್ಲಿ ನಾನು ಕಾರಾಗೃಹವಾಸ ಕಷ್ಟವನ್ನು ಅನುಭವಿಸಬೇಕೆಂಬ ವಿಚಾರವಿದ್ದರೆ ಅದನ್ನು ಯಾರೂ ತಪ್ಪಿಸಲಾರರು. ಅಥವಾ ಈ ಬಗೆಯ ಕಷ್ಟ ಸಹಿಸುವದರಿಂದಲೇ ನನ್ನ ಇಷ್ಟಸಾಧನೆಯಾಗಬೇಕೆಂದು ಅತನ ಅಪೇಕ್ಷೆ ಇರುವದೋ ಏನೋ ಯಾರು ಬಲ್ಲರು?" ಎಂದು ಸ್ಪಷ್ಟವಾಗಿ ನುಡಿದು ಆ ವಿಷಯದಲ್ಲಿ ತಮಗಿರುವ ಮನೋಧೈರ್ಯವನ್ನು ವ್ಯಕ್ತಪಡಿಸಿದರು.

ಸರಕಾರದವರು ಸನ್ ೧೯೧೧ನೆಯ ಇಸ್ವಿಯ ಜೂನ ೧೭ ನೆಯ ತಾರೀಖಿನ ದಿನ ಮಧ್ಯರಾತ್ರಿ ಕತ್ತಲೆಯಲ್ಲಿ ಲೋ. ಟಿಳಕರನ್ನು ಮಂಡಾಲೆಯಿಂದ ಅಕಸ್ಮಾತ್ ಪುಣೆಗೆ ಕರೆದುಕೊಂಡು ಬಂದು ಭಂಧಮುಕ್ತ ಮಾಡಿದರು. ಅವರ ಆಗಮನದಿಂದ ಮಹಾರಾಷ್ಟ್ರದೊಳಗಿನ ರಾಜಕೀಯ ಆಂದೋಲನಕ್ಕೆ ಮತ್ತೆ ಕಳೆಯೇರಿತು. ಆದರೆ ಸರಕಾರದವರು ಒಂದು ಪರಿ ಪತ್ರವನ್ನು ಹೊರಡಿಸಿ ಅವರನ್ನು ಯಾರೂ ಕಾಣಲಿಕ್ಕೆ ಹೋಗಲಾಗದು; ಅವರೊಡನೆ ಬಳಕೆಯನ್ನು ಮಾಡಬಾರದು, ಮುಂತಾದ ಅಪ್ಪಣೆಗಳನ್ನು ಸಾರಿದರು. ಮುಂದೆ ಕೆಲವು ದಿವಸಗಳಲ್ಲಿ (ಅಗಷ್ಟ ೩೦ನೆಯ ತಾರೀಖು) ಯುರೋಪದಲ್ಲಿ ಮಹಾಯುದ್ಧವು ಪ್ರಾರಂಭವಾಗಲು ನಮ್ಮ ದೇಶದೊಳಗಿನ ರಾಜಕೀಯ ಬಂಧನವು ಶಿಥಿಲವಾಯಿತು. ಈ ಮಹಾಯುದ್ಧದ ಪ್ರಸಂಗದಲ್ಲಿ ಲೋಕಮಾನ್ಯರು ಬ್ರಿಟಿಶ ಜನತೆಗೆ ತುಂಬ ಸಹಾನುಭೂತಿಯನ್ನು ತೋರಿಸಲು ಮುಂದೆ ಬಂದರು. ಅಯರ್ಲಂಡದಂತೆಯೇ ಹಿಂದುಸ್ತಾನಕ್ಕೂ ರಾಜ್ಯದಾಡಳತೆಯಲ್ಲಿ ತಕ್ಕ ಬದಲಾವಣೆಗಳು ಬೇಕಾಗಿವೆ. ಇಲ್ಲಿಯ ಅಳರಸರ ಸ್ವೇಚ್ಛಾಚಾರವನ್ನು ತಡೆದು ನಮ್ಮ ಸ್ವಾತಂತ್ರ್ಯವನ್ನು ಸಾಧಿಸಿಕೊಳ್ಳುವದೇ ನಮ್ಮ ಗುರಿಯಲ್ಲದೆ ಮಹಾಯುದ್ಧದಂಥ ಆಪತ್ಕಾಲ-

ದಲ್ಲಿ ನಾವು ಬ್ರಿಟಿಶರನ್ನು ವಿರೋಧಿಸಿ ಅವರ ಕೇಡನ್ನು ಬಯಸಲಾರೆವು. ಎಂಬ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದರು. ಇದರಿಂದ ಲೋಕಮಾನ್ಯರ ಅಂತಃಕರಣದಲ್ಲಿ ತಾತ್ವಿಕ ನಿಷ್ಠೆಯೊಂದೇ ಇರುವದಲ್ಲದೆ ವ್ಯಕ್ತಿದ್ವೇಶಕ್ಕೆ ಅದರಲ್ಲಿ ಎಳ್ಳಷ್ಟೂ ಎಡೆಯಿಲ್ಲವೆಂಬದು ವ್ಯಕ್ತವಾಗುವದಲ್ಲವೇ ?

ಹಲವು ರಾಜಕೀಯ ಆಂದೋಲನದ ಮುಂದಾಳುಗಳಂತೆ ಲೋಕಮಾನ್ಯರ ಹೃದಯದಲ್ಲಿಯೂ ಜಾತಿದ್ವೇಷ ಧರ್ಮದ್ವೇಷಗಳಂಥ ದುರ್ಗುಣಗಳಿಗೆ ಎಡೆಯೇ ಇರಲಿಲ್ಲ. ಅವರು ಒಂದೆಡೆಯಲ್ಲಿ " ಅಸ್ಪೃಶ್ಯತೆಯು ವೈದಿಕ ಧರ್ಮ ಸಮ್ಮತವಾದುದಲ್ಲ, ಸ್ಪೃಶ್ಯಾಸ್ಪೃಶ್ಯ ವಿಚಾರಗಳು ಮರಣಾನಂತರದಲ್ಲಿ ಉಳಿಯಲಾರವು, ಅರ್ಥಾತ್ ಪರಮೇಶ್ವರನ ಸನ್ನಿಧಿಯಲ್ಲಿಯೂ ಈ ತರದ ಭೇದ ಭಾವಕ್ಕೆ ಎಡೆಯಿಲ್ಲವೆಂದ ಬಳಿಕ ನಮ್ಮ ಸಮಾಜದಲ್ಲಿ ಇಂಥ ಕ್ಷುದ್ರ ವಿಚಾರಗಳಿಗೆ ಎಡೆಗೊಡುವದು ಮಹಾ ಪಾಪಕರವಾಗಿರುವದು." ಎಂದು ಸ್ಪಷ್ಟವಾಗಿ ನುಡಿದಿರುವರು.

" ಭೌದ್ಧಿಕ ವಿಕಾಸದೊಡನೆ ಶಾರೀರಿಕ ಬೆಳೆವಣಿಗೆಯೂ ಸರಿಯಾಗಿ ಆಗುವಂತೆ ನೋಡಿಕೊಂಡ ಹೊರತು ಶಿಕ್ಷಣಕ್ಷೇತ್ರದಲ್ಲಿ ನಾವು ನಮ್ಮ ಕರ್ತವ್ಯವನ್ನು ಮಾಡಿದಂತಾಗುವದಿಲ್ಲ."

" ಐಕ್ಯವೊಂದೇ ನಮ್ಮ ತಾರಣೋಪಾಯವು! ನಾಲ್ವತ್ತುಕೋಟಿ ಸಂಖ್ಯೆಯ ಜನತೆಯ ಐಕ್ಯದಿಂದುಂಟಾಗುವ ಶಕ್ತಿಯು ಎಷ್ಟೆಂದು ಹೇಳೋಣ! ಐಕ್ಯವುಳ್ಳ ಅಷ್ಟು ಇರುವೆಗಳೂ ಸಹ ಮುದ್ದಾನೆಯನ್ನು ಹಣ್ಣಿಗೆ ತರಬಹುದು. "

" ಭಾರತ ಮಾತೆಯು ನಮ್ಮನ್ನು ಕರೆಯುತ್ತಲಿದ್ದಾಳೆ. ಅದಕ್ಕಾಗಿ ನಾವು ಸದಾ ಸಿದ್ಧರಾಗಿರೋಣ. ನಮ್ಮ ಮುಂದಿನ ರಾಷ್ಟ್ರಕಾರ್ಯವೇ ನಮಗೆ ಅತ್ಯಂತ ಮಹತ್ವದ್ದೆಂದು ತಿಳಿದು ನಡೆಯೋಣ. "

ಇವೇ ಮೊದಲಾದ ಲೋಕಮಾನ್ಯರ ಅಮೃತ ವಚನಗಳಿಂದ ನಾವು ನಮ್ಮ ಕರ್ತವ್ಯ ಮಾರ್ಗವನ್ನು ಕಂಡುಕೊಳ್ಳಬಹುದು.

ಸನ್ ೧೯೨೦ ನೆಯ ಇಸ್ವಿಯ ಆಗಷ್ಟ ತಿಂಗಳ ೧ ನೆಯ ತಾರೀಖಿನದಿನ ಲೋಕಮಾನ್ಯ ಟಿಳಕರು ರಾಜಕೀಯ ಆಂದೋಲನದಲ್ಲಿ ಆಸಕ್ತವಾದ ಭರತ ಭೂಮಿಯ ಕರ್ಮಕ್ಷೇತ್ರದಿಂದ ಕಣ್ಮರೆಯಾಗಿ ನಡೆದರು. ನ್ಯಾಯಮೂರ್ತಿ ಚಂದಾವರಕರರು ಹೇಳುವಂತೆ ಭಾರತವಾಸಿಗಳ ರಾಜಕೀಯ ಆಂದೋಲನದಲ್ಲಿಯಷ್ಟೇ ಏಕೆ ! ಭರತಖಂಡದ ಇತಿಹಾಸದಲ್ಲಿಯೂ ಲೋಕಮಾನ್ಯ ಟಿಳಕರ ಹೆಸರು ಚಿರಸ್ಥಾಯಿಯಾಗಿದೆ.

ಶೀಲ ಸಂವರ್ಧನೆ

ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿಯ ವಿದ್ಯಾರ್ಥಿ-ಶಿಕ್ಷಕರ ವಾದವಿವಾದ ಕೂಟದಲ್ಲಿ ೨೫-೭-೧೯೪೨ ನೆಯ ದಿವಸ ಅಧ್ಯಾಪಕರಾದ ಶ್ರೀಮಾನ್ ಬೈಚವಾಳ ಶ್ರೀನಿವಾಸರಾಯರು ಎಮ್. ಏ. ಅವರ ಅಧ್ಯಕ್ಷತೆಯಲ್ಲಿ ಮಾನ್ಯರಾದ ಶ್ರೀ. ಅಮ್ಮಿನಭಾವಿ ತಮ್ಮಣ್ಣರಾಯರು ಶೀಲಸಂವರ್ಧನೆಯ ವಿಷಯದಲ್ಲಿ ಮಹತ್ವದ ಭಾಷಣವನ್ನು ಮಾಡಿದರು. ಅದರ ಕೆಲವು ಅಂಶಗಳು ಹೀಗಿವೆ :—

" ಶೀಲವೆಂದರೆ ಒಳ್ಳೆಯ ನಡತೆಯು. ಅದನ್ನು ಬೆಳೆಯಿಸುವದು ಎಲ್ಲರಿಗೆ ಎಲ್ಲ ಕಾಲದಲ್ಲಿಯೂ ಅತ್ಯಗತ್ಯವಾದದ್ದು. ಶೀಲದ ಸಂವರ್ಧನೆಯು ಆಗಬೇಕೆಂಬ ವಿಷಯದಲ್ಲಿ ಯಾರ ಮತಭೇದಗಳೂ ಇಲ್ಲ. ಯಾವುದಕ್ಕೆ ಒಳ್ಳೆಯ ನಡತೆ ಅನ್ನಬೇಕು ? ಯಾವುದಕ್ಕೆ ಕೆಟ್ಟ ನಡತೆ ಅನ್ನಬೇಕು ? ಇದು ಒಳ್ಳೆಯ ತೊಡಕಿನ ವಿಷಯವು. ಕಾಲಮಾನದಂತೆ, ದೇಶ-ಪರಿಸ್ಥಿತಿಗಳಂತೆ, ಧಾರ್ಮಿಕ ಕಲ್ಪನೆಗಳ ವ್ಯತ್ಯಾಸಗಳಂತೆ ಒಳ್ಳೆಯ ನಡತೆ ಕೆಟ್ಟ ನಡತೆಗಳ ತಿಳಿವಳಿಕೆಗಳು ಬದಲಿಸುತ್ತಲಿವೆ. ಶೀಲದ ಕಲ್ಪನೆಯಲ್ಲಿಯೆ ಆಗಲಿ, ಅದರ ವರ್ಧನೆಯಲ್ಲಿಯೆ ಆಗಲಿ, ಉತ್ಕ್ರಾಂತಿಯು ಕಂಡುಬರುತ್ತಲಿದೆಯೆ ಹೊರತು ಒಮ್ಮೆಲೆ ಕ್ರಾಂತಿಯಾದ ಉದಾಹರಣೆಗಳು ತೀರ ಕಡಿಮೆ. ಶೀಲವಂತರಾದ ಸಜ್ಜನರು ಯಾರೆಂಬ ವಿಷಯದಲ್ಲಿ ಭರ್ತೃಹರಿಯು ಹೀಗೆ ಹೇಳಿದ್ದಾನೆ.

ತೃಷ್ಣಾಂ ಛಿಂಧಿ; ಭಜ ಕ್ಷಮಾಂ; ಜಹಿ ಮುದಂ; ಪಾಪೇಮತಿಂ ಮಾಕೃಥಾಃ ।
ಸತ್ಯಂ ಬ್ರೂಹ್ಯನುಯಾಹಿ ಸಾಧುಪದವೀಂ; ಸೇವಸ್ವ ವಿದ್ವಜ್ಜನಂ ।
ಮಾನ್ಯಾನ್ಮಾನಯ ; ವಿದ್ವಿಷೋಪ್ಯನುನಯ; ಪ್ರಚ್ಛಾದಯಸ್ವಾನ್ ಗುಣಾನ್ ।
ಕೀರ್ತಿಂ ಪಾಲಯ; ದುಃಖಿತೇ ಕುರು ದಯಾಂ; ಏತತ್ಸತಾಂ ಲಕ್ಷಣಂ ॥

ಆಶೆಯನ್ನು ಕಡಿದುಹಾಕಿರಿ; ಕ್ಷಮೆಯನ್ನು ತಾಳಿರಿ; ಎಲ್ಲಬಗೆಯ ಗರ್ವವನ್ನು ಬಿಟ್ಟುಬಿಡಿರಿ; ಪಾಪಕರವಾದ ವಿಚಾರಗಳಲ್ಲಿ ಮನಸ್ಸು ಹಾಕಬೇಡಿರಿ. ಸತ್ಯವನ್ನು ನುಡಿಯಿರಿ. ಸಜ್ಜನರ ಮಾರ್ಗವನ್ನು ಅನುಸರಿಸಿರಿ. ವಿದ್ವಾಂಸರ ಸೇವೆಯನ್ನು ಮಾಡಿರಿ; ಮಾನಕ್ಕೆ ಅರ್ಹರಾದವರಿಗೆ ಸನ್ಮಾನ ಮಾಡಿರಿ, ವೈರಿಗಳನ್ನೂ ಕೂಡ ಅನುಸರಿಸಿರಿ; ತಮ್ಮಲ್ಲಿರುವ ಸದ್ಗುಣಗಳನ್ನು ಮುಚ್ಚಿಕೊಳ್ಳಿರಿ. ತಮ್ಮ ಮನೆ, ಸಮಾಜ, ದೇಶಗಳ ಕೀರ್ತಿಯನ್ನು ರಕ್ಷಿಸಿರಿ, ದುಃಖಿತರಿಗೆ ದಯೆಯನ್ನು ತೋರಿಸಿರಿ. ಈ ನಡತೆಯೇ ಸಜ್ಜನರ ಲಕ್ಷಣವು.

ಸಜ್ಜನರಲ್ಲಿ ಕಂಡು ಬರುವ ಅನೇಕ ಸದ್ಗುಣಗಳ ಸಮುಚ್ಚಯವೇ ಶೀಲವೆನಿಸುವದು. ಸರ್ವಸದ್ಗುಣಗಳು ಒಬ್ಬನಲ್ಲಿಯೇ ಕಂಡುಬರುವದು ಅಪರೂಪವಾದರೂ ಕೂಡ ಮಿಗಿಲಾದ ಸದ್ಗುಣಗಳುಳ್ಳ ಮಹಾನುಭಾವರೂ ದಿವ್ಯಜೀವಿಗಳೂ ಹಲವರು ಆಗಿಹೋಗಿದ್ದಾರೆ; ಈಗಲೂ ಇದ್ದಾರೆ; ವಸುಂಧರೆಯಲ್ಲಿ ಮುಂದೆಯೂ ಆಗುವರೆಂಬುದರಲ್ಲಿ ಸಂದೇಹವಿಲ್ಲ.

ವೇದಕಾಲದಲ್ಲಿ ಆದರ್ಶ ವ್ಯಕ್ತಿಗಳು ಸಾಕಷ್ಟು ಇದ್ದರೆಂಬ ವಿಷಯದಲ್ಲಿ ತಕ್ಕ ಪ್ರಮಾಣಗಳಿವೆ. ಪುರಾಣ ಕಾಲದಲ್ಲಿ ರಾಮಕೃಷ್ಣರು ಆದರ್ಶ ವ್ಯಕ್ತಿಗಳಾಗಿ ಹೋದರು. ಆ ಕಾಲದಲ್ಲಿಯ ಸೀತೆ, ಭರತ, ಹನುಮಂತ, ಲಕ್ಷ್ಮಣ, ಧರ್ಮ, ಭೀಷ್ಮ ಮೊದಲಾದವರೂ ಒಂದೊಂದುಬಗೆಯಿಂದ ಆದರ್ಶರಾಗಿದ್ದಾರೆ. ಇವರುಗಳ ಚರಿತ್ರೆಗಳನ್ನು ಕೇಳಿ ನಮ್ಮ ಸಮಾಜವು ಅನೇಕ ಶತಮಾನಗಳಿಂದ ಶೀಲಸಂವರ್ಧನೆಯನ್ನು ಮಾಡಿಕೊಳ್ಳುತ್ತಲಿದೆ. ಇತಿಹಾಸ ಕಾಲದಲ್ಲಿ ಕೂಡ ನಮ್ಮ ದೇಶದಲ್ಲಿ ಶೀಲವಂತರ ಕೊರತೆಯಿರಲಿಲ್ಲ. ಗೌತಮ ಬುದ್ಧನು ಉಚ್ಚತರವಾದ ವಿಚಾರ, ದಯೆ, ಸತ್ಯ, ಸಾದಾಜೀವನಗಳಿಂದ ಆದರ್ಶನಾಗಿರುವನು. ಮಹಾವೀರ, ಚಂದ್ರಗುಪ್ತ, ವಿಕ್ರಮ, ವಿದ್ಯಾರಣ್ಯ, ಶಿವಾಜಿ ಮೊದಲಾದವರು ಸಮಾಜದಲ್ಲಿ ಸದ್ಗುಣಗಳ ಬೆಳೆವಣಿಗೆಯನ್ನು ಚೆನ್ನಾಗಿಯೆ ಮಾಡಿದರು.

ಶೀಲವಂತರಲ್ಲಿ ಒಂದುತರದ ದಿವ್ಯಶಕ್ತಿ ಇರುತ್ತದೆ. ಅದು ಅವರಲ್ಲಿ ಹೇಗೆ ಬಂತು? ನಮ್ಮೆಲ್ಲರಲ್ಲಿಯೂ ಅದು ಏಕೆ ಬರಬಾರದು? ನಾವು ಅವರಿಂದ ತೀರ ಭಿನ್ನರಾಗಿರುವೆವೋ ಹೇಗೆ? ಅವರಿಗಿದ್ದ ಸಾಧನಸಾಮಗ್ರಿಗಳು ನಮಗಿಲ್ಲವೇ ಹೇಗೆ? ಇದು ತುಂಬ ವಿಚಾರಣೀಯವಾದ ಪ್ರಶ್ನೆ. ಈಗ ನಮ್ಮ ದೇಶದಲ್ಲಿ ಶಾಂತತೆಯಿದೆ. ಜ್ಞಾನಸಾಧನಗಳು ವಿಪುಲವಾಗಿವೆ. ಅಲ್ಲಲ್ಲಿ ಸಂಘ, ಸಂಸ್ಥೆಗಳು ಹುಟ್ಟಿ ಬೆಳೆದಿವೆ. ಹೀಗಿದ್ದರೂ ಶೀಲಸಂವರ್ಧನೆಯು ಸರಿಯಾಗಿಯೂ ತೃಪ್ತಿಕರವಾಗಿಯೂ ಸಾಗಿದೆಯೆಂದು ಹೇಳಲಿಕ್ಕೆ ಆಗುವದಿಲ್ಲ. ಇದು ಯಾಕೆ?

ಸದ್ಗುಣಗಳ ಬೆಳವಣಿಗೆಯು ಕೇವಲ ಉಪದೇಶದಿಂದಾಗಲಿ, ಚರಿತ್ರೆಗಳ ಶ್ರವಣಪಠಣಗಳಿಂದಾಗಲಿ ಆಗದು. 'ಸತ್ಯಂ ವದ' ಎಂದು ವೇದಗಳು ಹೇಳುತ್ತಲೇ ಇವೆ. 'ತೃಷ್ಣಾಂ ಛಿಂಧಿ' ಎಂದು ಹೇಳುವವರಿಗೆ ಕೊರತೆ ಇಲ್ಲ. ನಾವೆಲ್ಲರೂ ನಿತ್ಯವ್ಯವಹಾರಗಳಲ್ಲಿ ಇವುಗಳನ್ನು ಒಬ್ಬರಿಗೊಬ್ಬರು ಹೇಳುತ್ತಲೇ ಇರುವೆವು. ಹೀಗಿದ್ದರೂ ನಾವು ಶೀಲವಂತರಾಗಿರುವೆವೇ ಎಂಬ ಪ್ರಶ್ನೆಗೆ ಬರುವ ಉತ್ತರವೇನು? ಹಾಗಾದರೆ ಶೀಲಸಂವರ್ಧನೆಗೆ ಈತರದ ಹೇಳುವದು, ಕೇಳುವದು ಸಾಕಾಗದೆಂಬುದು ಸ್ಪಷ್ಟವು. ಮಾಡುವದು ಇಲ್ಲವೆ ನಡೆಯುವದು ಮುಖ್ಯವಾದದ್ದು. ನುಡಿದಂತೆ ನಡೆಯುವವರಿಂದ ಅವರ ಸುತ್ತಲಿನ ಜನರಲ್ಲಿ ಶಾಂತಿ

ಸೌಖ್ಯಗಳು ನೆಲೆಗೊಳ್ಳುವವು. ಆಶೆಯನ್ನು ತೊರೆಯಬೇಕೆಂದು ಹೇಳುವದೆನೋ ಬಲು ಸುಲಭ. ಆದರೆ ಬೆಲೆಯುಳ್ಳ, ಉಪಯುಕ್ತ ವಸ್ತುವು ನಿರಾಯಾಸವಾಗಿ ದೊರೆಯುತ್ತಿರುವಾಗ, ಆಶಾಪಾಶವು ಸಡಿಲಾಗುವದು ತೀರ ಕಠಿಣವು. ಇಂತಹ ನೊಂಡ ಆಶೆಯನ್ನು ಹಿಡಿತದಲ್ಲಿ ಇಟ್ಟುಕೊಳ್ಳುವದು ತೀರ ಕಠಿಣವಾಗಿದ್ದು ಅದರ ಸಾಧನೆಗೆ ಬಹುಕಾಲ ಪರಿಶ್ರಮಪಡಬೇಕಾಗುವದು. ಈಗಿನ ಕಾಲದಲ್ಲಿ ಶೀಲಸಂವರ್ಧನೆಗೆ ಏನುಮಾಡಬೇಕೆಂಬುದನ್ನು ನೋಡುವಾ.

ಸಾರಾಸಾರ-ವಿಚಾರಶಕ್ತಿಯು ಬೆಳೆಯಬೇಕು.

ಮಹನೀಯರಾಗಲಿ ಗ್ರಂಥಗಳಾಗಲಿ ಒಳ್ಳೆಯದನ್ನೇ ಮಾಡಿರೆಂದು ಹೇಳುವದುಂಟು. ಇಷ್ಟರಿಂದಲೇ ನಮಗೆ ಎಲ್ಲ ತರದ ಅನುಭವಗಳು ಬರಲಾರವು. ಇಂತಹದು ಒಳಿತು ಎಂದು ನಾವು ತಿಳಿದುಕೊಳ್ಳುವಾಗ, ಕೆಡಕು ಎಂತಹದೆಂಬುದನ್ನೂ ಅರಿಯಬೇಕು. ಈಗ ನಮ್ಮಲ್ಲಿ ಹಲವರು ತುಡುಗು-ಮಾಡಿರಲಿಕ್ಕಿಲ್ಲ. ಇಷ್ಟರಿಂದಲೇ ಅವರಲ್ಲಿ ನಿಜವಾಗಿಯೂ ತುಡುಗತನದ ಗುಣವೇ ಇಲ್ಲವೆಂದು ಹೇಳಲಿಕ್ಕಾಗುವದಿಲ್ಲ. ತುಡುಗುಮಾಡುವಂಥ ವಿಶಿಷ್ಟ ಪರಿಸ್ಥಿತಿಯು ಅವರಿಗೆ ಪ್ರಾಪ್ತವಾಗಿರಲಿಕ್ಕಿಲ್ಲವೆಂಬುದೇ ಸಹಜವು. ಶೀಲವಂತರಲ್ಲಿ ದುರ್ಬಲವಾದ ಸೈರಣೆಯಿರುವದಿಲ್ಲ. ಧೀರವಾದ ಸಂಯಮನ ಶಕ್ತಿಯು ಇರುವದು. ಒಳ್ಳೆಯ ಹಾಗೂ ಕೆಟ್ಟ ಕೆಲಸಗಳಿಂದಾಗುವ ಲಾಭಹಾನಿಗಳನ್ನೂ ಕಷ್ಟನಷ್ಟಗಳನ್ನೂ ಹೊಗಳಿಕೆತೆಗಳಿಕೆಗಳನ್ನೂ ಶಾಂತಿಚಿಂತೆಗಳನ್ನೂ ಪರಿಭಾವಿಸಿ ನೋಡಿದಹೊರತು, ಸಾರಾಸಾರ ವಿಚಾರಶಕ್ತಿಯಿಂದ ಸರಿಯಾದ ನಿರ್ಣಯವನ್ನು ಮಾಡುವ ಸಾಮರ್ಥ್ಯವು ಬರಲಾರದು. ಸಾರಾಸಾರ ವಿಚಾರಶಕ್ತಿಯಿಂದ ಕಾರ್ಯಕಾರಣಗಳ ಸಂಬಂಧವು ಹೊಳೆದು,ಆತ್ಮವಿಶ್ವಾಸವು ಬೆಳೆದು,ಸದ್ಗುಣಗಳ ಸಮುಚ್ಚಯಕ್ಕೆ ಸಹಾಯವಾಗುವದು. ತಾಯಿಯ ವಿಷಯದಲ್ಲಿ ನಮ್ಮೆಲ್ಲರಲ್ಲಿ ಪೂಜ್ಯಬುದ್ಧಿಯು ಯಾವಾಗ ಉಂಟಾಗುವದು ? ಅವಳು ನಮ್ಮ ಸಲುವಾಗಿ ಪಟ್ಟ ಕಷ್ಟನಷ್ಟಗಳನ್ನು ಪರಿಭಾವಿಸಿದಾಗಲ್ಲವೆ ? ಶ್ರೀರಾಮನು ತಂದೆಯ ವಚನವನ್ನು ಮೀರಿ ಮನೆಯಲ್ಲಿಯೇ ಉಳಿದಿದ್ದರೆ, ಭರತನು ತಾಯಿಯ ಇಚ್ಛೆಯಂತೆ ಪಟ್ಟವನ್ನೇರಿದ್ದರೆ ಅವರ ಸೌಖ್ಯಕ್ಕೆ ಕೊರತೆಯಿರುತ್ತಿರಲಿಲ್ಲ; ಆದರೆ ಸಮಾಧಾನದ ಕೊರತೆಯಾಗುತ್ತಿತ್ತು. ಅವರ ಶೀಲಕ್ಕೆ ಕುಂದು ಬರುತ್ತಲಿದ್ದಿತು. ಆದುದರಿಂದ ವಿಚಾರಗಳ ತಾಕಲಾಟದಲ್ಲಿ ಸತ್ ಶೀಲದ ನಿರ್ಧಾರಕ್ಕೆ ಒಳಗಾಗಿ ರಾಮನು ವನವಾಸಕ್ಕೆ ಹೋದನು. ಭರತನು ತಾಯಿಯ ಮಾತನ್ನು ಮೀರಿದನು. ಅಂತಹ ರಾಜ್ಯವಾಗಲಿ ಪಟ್ಟದಾಶೆಯಾಗಲಿ ನಮ್ಮೆಲ್ಲರಿಗೆ ಇರಲಿಕ್ಕಿಲ್ಲ; ಆದರೆ ಅವರಿಗೊದಗಿದ ಕೆಲಸಗಳು ಅವರಿಗೆ ದೊಡ್ಡವಾಗಿರುವಂತೆ ನಮಗೆ

ಪ್ರಾಪ್ತವಾಗಿರುವ ಕೆಲಸಗಳು ನಮಗೆ ದೊಡ್ಡವೇ ಸರಿ. ಇವುಗಳಲ್ಲಿಯೇ ನಾವು ಶ್ರೇಯಸ್ಕರ-ಪ್ರೇಯಸ್ಕರಗಳನ್ನು ಆರಿಸಿಕೊಳ್ಳಬೇಕಾಗಿದೆ.

ಕ್ರಿಯಾಶಕ್ತಿಯು ಯೋಗ್ಯವಾಗಿ ಬೆಳೆಯಬೇಕು.

ಸದ್ಗುಣಗಳ ಸಂವರ್ಧನೆಗೆ ಕೆಲಸಮಾಡುವ ಶಕ್ತಿಯು ಸಾಕಷ್ಟು ಬೆಳೆದಿರಬೇಕಾದ ಅಗತ್ಯವಿದೆ. ಪ್ರಬಲವಾದ ಇಚ್ಛಾಶಕ್ತಿಯು ಇದ್ದ ಹೊರತು ಚಿಕ್ಕ ಪುಟ್ಟ ಕೆಲಸಗಳು ಸಹ ವೇಳೆಗೆ ಸರಿಯಾಗಿ ಆಗಲಾರವು. ಪ್ರೊ. ರಾಮಮೂರ್ತಿಯವರು ಓಡುವ ಮೋಟಾರನ್ನು ನಿಲ್ಲಿಸುವ ಇಲ್ಲವೆ, ಎದೆಯ ಮೇಲೆ ಕಲ್ಲು ಒಡೆಯಿಸಿಕೊಳ್ಳುವಂಥ ಮಹಾಕಾರ್ಯಗಳ ಒಳಗುಟ್ಟು ಅವರ ಇಚ್ಛಾಶಕ್ತಿಯಲ್ಲಿದೆ. ಬಲವಾದ ಇಚ್ಛಾಶಕ್ತಿಯಿಂದ ಕಾರ್ಯಗಳಲ್ಲಿ ಆಸಕ್ತಿಯುಂಟಾಗುವದು ಇಂಗ್ಲೀಷದಲ್ಲಿ ಇದಕ್ಕೆ (Will Power) ಎನ್ನುವದುಂಟು. ಮಿತ್ರರಿಂದ ಪತ್ರಬಂದಾಗ ಅದರೊಳಗಿನ ಸುದ್ದಿ ಸಂಗತಿಗಳಿಂದ ಹರ್ಷದುಃಖಗಳನ್ನು ಅನುಭವಿಸುವ ನಾವು, ತನ್ನಂತೆ ಪರರನ್ನು ಬಗೆಯುವ, ಸಂಪೂರ್ಣ ಶೀಲವಂತರೆಂದು ಹೇಳಲಿಕ್ಕಾದೀತೆ? ಇಲ್ಲ. ಬಹಳವಾದರೆ ಆ ದಾರಿಯಲ್ಲಿ ಇದ್ದೇವೆಂದು ಹೇಳಬಹುದು. ಸಕಾಲಕ್ಕೆ ಸುಕಾರ್ಯಗಳನ್ನು ಮಾಡುವ ಸದ್ಗುಣವು ಇಷ್ಟರಿಂದಲೇ ಬೆಳೆಯದು. ಶೀಲವಂತರು ನಿರ್ಜನಪ್ರದೇಶದಲ್ಲಿದ್ದರೇನು ಫಲ? ಮಾನವನು ಸಾಂಘಿಕ ಪ್ರಾಣಿಯು. ತನ್ನಲ್ಲಿರುವ ಹಾಗು ಪ್ರಾಪ್ತವಾದ ಸದ್ಗುಣಗಳು ಸುತ್ತಲಿನವರಿಗೆಲ್ಲ ಬರುವಂತೆ ಮಾಡುವದು ಆತನ ಧರ್ಮ. ಅದರ ಅನುಕರಣಮಾಡಬೇಕಾದರೆ ಜನರಲ್ಲಿಯೂ ಒಂದು ತರದ ಆತುರತೆ ಬೇಕು; ಶಿಕ್ಷಣ ಬೇಕು; ಉದ್ದೇಶಯುಕ್ತ ಕಾರ್ಯಗಳು ಬೇಕು. ಅವುಗಳನ್ನು ಮಾಡಿಯೇತೀರುವೆವೆಂಬ ಹಟವು ಎಲ್ಲರಲ್ಲಿಯೂ ಮೊಳೆತು, ತಾಳಿ, ಬಾಳಿ, ಬೆಳೆದು ಬಲಿಯಬೇಕು. ತನ್ನ ಪೀಳಿಗೆಗೆ ಕ್ರಿಯಾಶಕ್ತಿಯ ಸರ್ವಾಂಗಸುಂದರವಾದ ಬೀಜವು ಉಳಿಯುವಂತೆ ಪ್ರತಿಯೊಬ್ಬನೂ ಯತ್ನಿಸಬೇಕು. ಹಾಗಿಲ್ಲದೆ ರಾತ್ರಿ ೯ ಗಂಟೆಗೆ ಮಲಗುವಾಗ, ಬೆಳಿಗ್ಗೆ ೬ ಗಂಟೆಗೆ ಏಳುವ ನಿಶ್ಚಯಮಾಡಿ ಗಡಿಯಾರದಲ್ಲಿ ಅಲಾರ್ಮ ಇಟ್ಟು ಮಲಗಿಕೊಂಡ ಬಳಿಕ, ಅದು ವೇಳೆಗೆಸರಿಯಾಗಿ ಗಂಟೆಹೊಡೆದೆಬ್ಬಿಸುವಾಗ (ಇದೇನು ರಿಪಿ, ಎಂದು) ಮತ್ತೆ ಮತ್ತೆ ಮುಸುಕುಹಾಕಿ ಮಲಗುವಂಥವರಿಂದ ಯಾವ ಮಹಾಕಾರ್ಯವಾದೀತು? ರಾತ್ರಿ ಮಲಗುವಾಗ ಬೆಳಗಿನ ನಾಲ್ಕು ಗಂಟೆಗೆ ಏಳಲೇಬೇಕೆಂದು ನಿರ್ಧಾರಮಾಡಿ ಮಲಗಿದರೆ ಗಡಿಯಾರದಲ್ಲಿ ನಾಲ್ಕು ಬಡಿಯುವದಕ್ಕೂ ನಿದ್ದೆಯಿಂದ ಎಚ್ಚರಿಯುವದಕ್ಕೂ ಸರಿಹೊಂದಬೇಕು. ಇದಕ್ಕೇ ನಿಜವಾದ, ಪ್ರಬಲವಾದ ಇಚ್ಛಾಶಕ್ತಿಯ ಪರಿಣಾಮವೆನ್ನಬೇಕು. ಕ್ರಮಪ್ರಾಪ್ತವಾದ ನಿರ್ಣಯ-

ನಿಶ್ಚಯಗಳು, ಸಾರಾಸಾರ ವಿಚಾರಶಕ್ತಿಯಿಂದ ಬೆಳೆದ ಕ್ರಿಯಾಶಕ್ತಿಯ ಬಲದಿಂದ ಉಂಟಾಗುವವು. ಒಳ್ಳೆಯ ಕೆಲಸಗಳನ್ನು ಆರಿಸಿಕೊಳ್ಳುವದು ಅವರವರ ಕೈಯಲ್ಲಿಯೇ ಇದೆ.

ಉಚ್ಚವಾದ ಧ್ಯೇಯವನ್ನು ಅನುಸರಿಸಬೇಕು.

ಯಾವದೇ ಸತ್ಕಾರ್ಯವಾಗಬೇಕಾದರೆ ಅದರಲ್ಲಿ ತೊಡಗಿದವರಿಗೆ ಬಲವಾದ ಆಸಕ್ತಿ ಬೇಕು. ಆಸಕ್ತಿಗೆ ಆಶೆಬೇಕು. ಆಶೆಯು ತಾತ್ಪೂರ್ತಿಕವಾಗಿರಬಹುದು. ಧ್ಯೇಯವು ಸ್ಥಿರವಾಗಿರಬೇಕು. ತಮ್ಮ ತಮ್ಮ ಧ್ಯೇಯಗಳಿಗನುಗುಣವಾಗಿ ಆದರ್ಶಗಳನ್ನು ಮುಂದಿಟ್ಟುಕೊಳ್ಳಬೇಕು. ಧರ್ಮಸ್ಥಾಪಕರು, ಮತಪ್ರವರ್ತಕರೂ ಆದರ್ಶಗಳನ್ನು ಮುಂದಿರಿಸಿರುವರು. ಯೋಗ್ಯ ಆದರ್ಶಗಳನ್ನು ಅನುಸರಿಸಿದ ಜನಾಂಗವೇ ಮುಂದರಿಯುವದು. ತುಡುಗುಮಾಡಲೇ ಬಾರದೆಂಬುದು ದಿವ್ಯವಾದ ಆದರ್ಶವು! ಗೊತ್ತಾಗದಂತೆ ತುಡುಗುಮಾಡಬಹುದೆಂಬುದು ಎಂದಿಗೂ ಯೋಗ್ಯವಾಗಲಾರದು. ಹಿಂದಿನ ಕಾಲದಲ್ಲಿ ಗ್ರೀಸ ದೇಶದೊಳಗಿನ ಸ್ಪಾರ್ಟಾ ಪ್ರಾಂತದಲ್ಲಿ ಗೊತ್ತಾಗದಂತೆ ತುಡುಗುಮಾಡಿದವರಿಗೆ ಶಿಕ್ಷೆಯಾಗುತ್ತಿತಲಿಲ್ಲ; ಇಷ್ಟೇ ಅಲ್ಲ. ಹೀಗೆ ನೂರು ತುಡುಗುಗಳನ್ನು ಮಾಡಿದವರಿಗೆ ರಾಜನಷ್ಟು ಮನ್ನಣೆ ದೊರೆಯುತ್ತಲಿತ್ತು. ಇದರಿಂದ ಆ ಪ್ರಾಂತದ ಜನರಲ್ಲಿ ಧೈರ್ಯ, ಸಾಹಸ, ಯುಕ್ತಿಗಳು ಬೆಳೆದುವೇ ಹೊರತು, ಅವರಿಂದ ನೀತಿಯ ಮಟ್ಟವು ಬೆಳೆಯಲಿಲ್ಲ. ಮಾನವಜನಾಂಗಕ್ಕೆ ಆದರ್ಶವಾದ ಶೀಲವನ್ನು ಕಾಯ್ದಿಡುವ ಕೆಲಸವು ಆಗಲಿಲ್ಲ; ಮೇಲಾಗಿ ತನ್ನ ಅಸ್ತಿತ್ವವನ್ನು ಕೂಡ ಬಹುಕಾಲದ ವರೆಗೆ ಕಾಯ್ದುಕೊಳ್ಳಲಿಕ್ಕೆ ಆಗಲಿಲ್ಲ. ಪ್ರತಿಯೊಂದು ಸಮಾಜವು ಉಚ್ಚವಾದ ಧ್ಯೇಯವನ್ನು ತಮ್ಮ ಮುಂದಿಟ್ಟುಕೊಂಡು ಅದಕ್ಕನುಗುಣವಾದ ಯೋಜನೆಗಳನ್ನು ಕೈಕೊಳ್ಳದೆ ಹೋದರೆ, ಬರಿಯ ಮಾತುಗಳಿಂದ ಅಥವಾ ಬರೆಹಗಳಿಂದ ಶೀಲಸಂವರ್ಧನೆಯಾಗದು.''

ತರುವಾಯ ಅಧ್ಯಕ್ಷರಾದ ಶ್ರೀಮಾನ್ ಬೈಚವಾಳ ಶ್ರೀನಿವಾಸರಾಯರು ತಮ್ಮ ವಿದ್ವತ್ಪರಿಪೂರ್ಣವಾದ ಮುಕ್ತಾಯದ ಭಾಷಣದಲ್ಲಿ ಹೀಗೆ ತಿಳಿಸಿದರು.

'ಕಾಲಕ್ಕೆ ತಕ್ಕಂತೆ ಶೀಲದ ಸಂವರ್ಧನೆಯಲ್ಲಿ ಮಾರ್ಪಾಡುಗಳಾಗುತ್ತಲಿರುತ್ತವೆ. ತಮ್ಮ ತಮ್ಮ ಪರಿಸ್ಥಿತಿಗೆ ಅನುಗುಣವಾದ ವಿಶಿಷ್ಟ ಗುಣಗಳು ಬೆಳೆಯಬೇಕೆಂದು ದೇಶದ ಮುಂದಾಳುಗಳು ಸಾಹಸಪಡುತ್ತಿರುವರು. ಈಗ ವ್ಯಾಖ್ಯಾತರು ಹೇಳಿದ ಗ್ರೀಸಬೇಶದಲ್ಲಿಯ ಸ್ಪಾರ್ಟಾ ಪ್ರಾಂತದ ಉದಾಹರಣೆಯನ್ನೆ ತಕ್ಕೊಳ್ಳುವಾ. ಈ ಪ್ರಾಂತವು ತೀರ ಚಿಕ್ಕದಿತ್ತು; ಸುತ್ತಲು ಪ್ರಬಲರಾದ

ವೈರಿಗಳಿದ್ದರು. ಹೀಗಿದ್ದರೂ ಒಂದು ಪ್ರಸಂಗದಲ್ಲಿ ಈ ಪ್ರಾಂತದ ೧೪೦೦ ಸೈನಿಕರು ಲಿಯೋ ನೀಡಸ್ ಎಂಬ ಅರಸನ ಧುರೀಣತ್ವದಲ್ಲಿ, ಥರ್ಮಾಪಿಲಿಯ ಇಕ್ಕಟ್ಟಾದ ಕಣಿವೆಯ ಮಾರ್ಗದಲ್ಲಿ, ಇರಾಣದ ಬಲವಾದ ಹತ್ತು ಸಾವಿರ ಸೈನಿಕರನ್ನು ಹಿಮ್ಮೆಟ್ಟಿಸಿದರು. ಇಷ್ಟೊಂದು ಶೌರ್ಯವನ್ನು ತೋರಿಸಲು ಅವರು ಅನುಸರಿಸಿದ ರೂಢಿಗಳು, ಉದ್ದೇಶಗಳು, ಆದರ್ಶಗಳು, ವಿಚಾರಣೀಯವಾಗಿಲ್ಲವೇ? ಸ್ಪಾರ್ಟಾದವರಿಂದ ಇಡಿಯ ಮಾನವ ಜನಾಂಗಕ್ಕೆ ಆದರ್ಶವಾದ ಶೀಲಸಂವರ್ಧನೆಯು ದೊರೆಯದೆ ಹೋದರೂ ಒಂದು ತೀರ ಚಿಕ್ಕ ವಿಭಾಗವು ಬಹುಕಾಲ ವೈಭವಶಾಲಿಯಾಗಿ ಬಾಳಿತೆಂಬುದರಲ್ಲಿ ಸಂದೇಹವಿಲ್ಲ. ಇಲ್ಲಿಯ ಸರಕಾರದ ವೈದ್ಯರು ತಮತಮಗೆ ಗೊತ್ತುಪಡಿಸಿದ ವಿಭಾಗದಲ್ಲಿ ಜನ್ಮಿಸಿದ ಪ್ರತಿಯೊಂದು ಮಗುವಿನ ಮನೆಗೆ ಹೋಗಿ ಆ ಮಗುವು ಸಶಕ್ತವೂ ತೇಜಃಪುಂಜವೂ ಆಗುವಂತೆ ಇದೆಯೋ ಇಲ್ಲವೋ ಪರೀಕ್ಷಿಸುತ್ತಿದ್ದರು. ದುರ್ಬಲವಾಗಿರುವ ಮಗುವನ್ನು ಗುಡ್ಡದ ಮೇಲಿಂದ ಉರುಳಿಸಿ ಕೊಂದುಬಿಡುತ್ತಿದ್ದರು. ತಮ್ಮಲ್ಲಿಯ ಪ್ರಜೆಯು ಬಲಿಷ್ಠವಾಗಬೇಕೆಂದು ಆ ಜನಾಂಗವು ಎಷ್ಟೊಂದು ಪ್ರಯತ್ನಪಡುತ್ತಲಿದ್ದಿ. ತೆಂಬುದು ಇದೊಂದೇ ಉದಾಹರಣೆಯಿಂದ ಕಂಡುಬರುವದು. ಹಿರಿಯರಲ್ಲಿ ಉಂಟಾದ ಮನೋಧೈರ್ಯವು ಆಗಿನ ಕಾಲದ ಅವರ ಬಾಲಕರಲ್ಲಿ ಸಹ ಬಂದು ಬಿಡುತ್ತಿದ್ದಿತು. ಒಮ್ಮೆ ಸ್ಪಾರ್ಟಾದ ಒಬ್ಬ ಬಾಲಕನು ತನ್ನ ಮಿತ್ರನ ಬೆಟ್ಟಿಗೆ ಹೋದಾಗ, ಅವರ ಮನೆಯಲ್ಲಿಯ ಒಂದು ಮುದ್ದುಮುದ್ದಾದ ಬೆಕ್ಕಿನ ಮರಿಯನ್ನು ಕದ್ದು ಆಂಗಿಯ ಒಳಗೆ ಬಗಲಲ್ಲಿ ಅದರ ಮುಖವನ್ನು ಅವಚಿಕೊಂಡು ಮಿತ್ರನ ಮುಂದೆ ನಗೆಮುಖದಿಂದಲೇ ಮಾತನಾಡುತ್ತಿದ್ದನು. ಮುಸುಕಿನೊಳಗಿದ್ದ ಮರಿಬೆಕ್ಕು ತನಗೆ ಒದರಲಿಕ್ಕೆ ಬಾರದಿದ್ದರೂ ತನ್ನ ಉಗುರುಗಳಿಂದ ಆತನ ಮೈಯ್ಯನ್ನೆಲ್ಲ ಚಿವುರಿ, ಹರಿದುಕೊಂಡು ಆತನ ಅಂಗಿಗಳನ್ನೆಲ್ಲ ರಕ್ತದಿಂದ ತೊಯ್ದು ಬಿಡುವಂತೆ ಮಾಡಿತು. ಆದರೂ ಕೂಡ ಆ ಬಾಲನು ಬಹಿರಂಗದಲ್ಲಿ ನಗುತ್ತಲೇ ಮಾತನಾಡುತ್ತ ಬೀಳ್ಕೊಂಡು ತನ್ನ ಮನೆಗೆ ಹೋದನು. ನೋವನ್ನು ಸ್ವಲ್ಪವೂ ತೋರಗೊಡದ ಗಟ್ಟಿಗನಾದ ಆ ಬಾಲಕನು ಮುಂದೆ ನಮ್ಮಲ್ಲಿಯ ಕರ್ಣನಿಗಿಂತಲೂ ವೀರನಾಗಿರುವದರಲ್ಲಿ ಸಂದೇಹವೇನು? ಶೀಲಸಂವರ್ಧನೆಗೆ ಬಲವಾದ ದೃಢನಿಶ್ಚಯಬೇಕು. ಮೋಹದ ಕೂಡ ಸಂಯಮನದ ತಿಕ್ಕಾಟವಾಗಲೇಬೇಕು. ತಂಬಾಕು ಜರ್ದಾಗಳು ದೊರೆಯದ ಸ್ಥಳದಲ್ಲಿ ಅವುಗಳನ್ನು ಬಿಟ್ಟೆನೆಂದು ಹೇಳುವದು ಅಭಾವವೈರಾಗ್ಯವು; ಇದರಲ್ಲಿ ಪೌರುಷವಿಲ್ಲ. ಕ್ರಿಯಾಶಕ್ತಿಗೆ ಪರೀಕ್ಷಾ ಕಾಲವು ಬೇಕೇಬೇಕು. ಪ್ರತಿಯೊಬ್ಬರಲ್ಲಿಯೂ ಸಹಕಾರ, ಉತ್ಸಾಹ, ಧೈರ್ಯ, ಸಾಹಸ, ಸತ್ಯಪ್ರೀತಿ ಮೊದಲಾದ ಸದ್ಗುಣಗಳು ಸುಸಂಗತವಾಗಿ ಬೆಳೆದು ಬರಬೇಕು. ನಾವೆಲ್ಲರೂ ಸ್ವಂ

ಉದಾಹರಣೆಯಿಂದ ಪರರಿಗೆ ಆದರ್ಶರಾಗಿರಲು ಹವಣಿಸಬೇಕು. ಇದಕ್ಕಾಗಿ ಸಾರಾಸಾರ ವಿಚಾರಶಕ್ತಿ, ಕಾರ್ಯಪ್ರೀತಿ, ಉಚ್ಚತರವಾದ ಧ್ಯೇಯಗಳ ಆವಶ್ಯಕತೆಗಳುಂಟೆಂದು ಬೇರೆ ಹೇಳಲಿಕ್ಕೆ ಬೇಡ."

ಪ್ರಾಥಮಿಕ ಶಿಕ್ಷಕರ ಸಂಬಳ

ಮುಂಬಯಿ ಸರಕಾರದ ವಿದ್ಯಾಖಾತೆಯ ನಿರ್ಣಯ

ನಂ. ೭೨ ತಾ|| ೧೨-೬-೧೯೪೨ ನೆಯ ಇಸ್ವಿ.

೧೯೪೧ ನೆಯ ಇಸ್ವಿಯ ಸಪ್ಟಂಬರ ತಿಂಗಳ ೧೨ ನೆಯ ತಾರೀಖಿಗೆ ಮುಂಬಯಿ ಸರಕಾರದವರು ಗೊತ್ತುಪಡಿಸಿದ ೭೨ ನೆಯ ನಂಬರಿನ ವಿದ್ಯಾಖಾತೆಯ ನಿರ್ಣಯದ ಮೇರೆಗೆ ಸನ್ ೧೯೩೬-೩೯ ಈ ಅವಧಿಯಲ್ಲಿ ಮೂರನೆಯ ವರ್ಷದ ಟ್ರೇನಿಂಗಿನ ಸರ್ಟಿಫಿಕೇಟನ್ನು ದೊರಕಿಸಿದ ಶಿಕ್ಷಕರಿಗೆ ಈ ಕೆಳಗಿನಂತೆ ಸಂಬಳ ದೊರೆಯಬೇಕೆಂದು ಗೊತ್ತಾಗಿತ್ತು.

ಸ್ಥಾನಿಕ ಅಧಿಕಾರಿ ಸಂಘಗಳಿಲ್ಲದ ಮ್ಯುನಸಿಪಾಲಟಿಗಳನ್ನು ಒಳಗೊಂಡು ಜಿಲ್ಲಾ ಲೋಕಲಬೋರ್ಡಿನ ಶಾಲೆಗಳಲ್ಲಿ ಕೆಲಸಮಾಡುವವರಿಗೆ	೩೦-೪-೩೫-೧-೫೦
ಸ್ಥಾನಿಕ ಅಧಿಕಾರೀ ಸಂಘಗಳಾಗಿರುವ ಮ್ಯುನಸಿಪಾಲಟಿಗಳ ಶಾಲೆಗಳಲ್ಲಿ ಕೆಲಸಮಾಡುವವರಿಗೆ	೩೫-೪-೪೫-೧-೫೦

ತಿದ್ದುಪಡಿ ಹೊಂದಿದ ನಿಯಮದ ಮೇರೆಗೆ ಎರಡನೆಯ ವರ್ಷದ ಶಿಕ್ಷಕರಿಗೆ ೨೫-೪-೩೦-೧-೪೦ ರಂತೆ ಸಂಬಳ ದೊರೆಯುವದು. ಈ ನಿಯಮದ ಮೇರೆಗೆ ೩೦ ರೂ. ಸಂಬಳ ಪಡೆದ ತರುವಾಯ ೪೦ ರೂ. ಸಂಬಳ ಪಡೆಯುವದಕ್ಕೆ ಎರಡನೆಯ ವರ್ಷದವರಿಗೆ ೧೦ ವರ್ಷಗಳೂ ಮೂರನೆಯ ವರ್ಷದವರಿಗೆ (೧೯೩೬-೩೯) ೧೫ ವರ್ಷಗಳೂ ಹಿಡಿಯುವದರಿಂದ ಈ ಮೂರುವರ್ಷಗಳ ಅವಧಿಯಲ್ಲಿ ಟ್ರೇಂಡರಾದ ಮೂರನೆಯ ವರ್ಷದ ಶಿಕ್ಷಕರಿಗೆ ಹಾನಿಯಾಗುವ-

ದೆಂದು ಸರಕಾರಕ್ಕೆ ಬಿನ್ನವಿಸಿಕೊಂಡಿದ್ದಾರೆ. ಮೂರನೆಯ ವರ್ಷದವರಿಗೆ ಮುಂದೆ ೫೦ ರೂ. ಗಳ ವರೆಗೆ ಸ್ಕೇಲು ಇರುವದರಿಂದ ಪೆನ್‌ಶನ್ ಪಡೆಯುವ ಕಾಲಕ್ಕೆ ೫೦ ರೂ. ದೊರಕಿಸಿ ಹೆಚ್ಚಿಗೆ ಪೆನ್‌ಶನ್ ಪಡೆಯುವದಕ್ಕೆ ಅನುಕೂಲ ವಿರುವದರಿಂದ ಅದು ಎರಡನೆಯ ವರ್ಷದವರ ಸ್ಕೇಲಿಗಿಂತ ಹೆಚ್ಚಿನದೆಂಬು. ದೇನೋ ನಿಜ. ಆದರೆ ಕೆಲಕೆಲವು ಹಳೆಯ ಶಿಕ್ಷಕರು ಮೂರನೆಯ ವರ್ಷದ ಟ್ರೇನಿಂಗಿನ ಸರ್ಟಿಫಿಕೇಟನ್ನು ದೊರಕಿಸಿದ್ದರೂ ೪೦ ರೂ. ಪಗಾರು ಪಡೆಯುವ. ದಕ್ಕಿಂತ ಮೊದಲೇ ಪೆನ್‌ಶನ್ ಮೇಲೆ ಹೋಗುವ ಪ್ರಸಂಗವೂ ಇರುವದು. ಇಂಥ ಶಿಕ್ಷಕರಿಗೆ ಮೂರನೆಯ ವರ್ಷದ ಸ್ಕೇಲಿಗಿಂತಲೂ ಎರಡನೆಯ ವರ್ಷದ ಸ್ಕೇಲೇ ಹೆಚ್ಚು ಲಾಭದಾಯಕವಾಗುವ ಸಂಭವವೂ ಇರುವದು. ಆದ್ದರಿಂದ ಇಂಥ ಶಿಕ್ಷಕರು ತಾವಾಗಿ ಅಪೇಕ್ಷಿಸಿದರೆ ೩೦-೪-೩೫-೧-೫೦ ಈ ಸ್ಕೇಲಿನ ಬದಲು ೩೦-೧-೪೦ ಈ ಸ್ಕೇಲಿನಲ್ಲಿಯೇ ಉಳಿಯುವದಕ್ಕೆ ಸಹ ಅಪ್ಪಣೆ ದೊರೆಯುವದು.

ಇಂಥ ಶಿಕ್ಷಕರು ತಮ್ಮ ಹೇಳಿಕೆಯನ್ನು ತಮ್ಮ ಜಿಲ್ಲಾ ಲೋಕಲ್ ಅಥಾರಿಟಿಗೆ ಅರಿಕೆಮಾಡಿಕೊಂಡರೆ ಅವರು ಸರಕಾರದ ಮುಂಜೂರಿಯನ್ನು ತರಿಸಿಕೊಂಡು ಮೂರನೆಯ ವರ್ಷದ ಸ್ಕೇಲಿನ ಬದಲು ಎರಡನೆಯ ವರ್ಷದ ಸ್ಕೇಲಿನಂತೆಯೇ ಪಗಾರು ಕೊಡುವರು. ಹೀಗೆ ಒಮ್ಮೆ ಒಪ್ಪಿಕೊಂಡು ಸ್ವೀಕರಿಸಿದ ಹೊಸ ಸ್ಕೇಲನ್ನು ಪುನಃ ಬದಲಿಸಲಿಕ್ಕೆ ಎಂದೂ ಬರಲಾರದು. ಮತ್ತು ಹೀಗೆ ಲೋಕಲ್ ಅಥಾರಿಟಿಯವರು ಸರಕಾರದ ಅಪ್ಪಣೆಯನ್ನು ಪಡೆದ ತಾರೀಖಿನಿಂದ ೬ ತಿಂಗಳ ಒಳಗಾಗಿ ಶಿಕ್ಷಕರು ತಮಗೆ ಯಾವ ಸ್ಕೇಲು ಬೇಕೆಂಬುದನ್ನು ಅರಿಸಿಕೊಳ್ಳಬೇಕಾಗುವದು.

ಈ ರೀತಿಯಾಗಿ ಎರಡನೆಯ ವರ್ಷದ ಸ್ಕೇಲನ್ನು ಆರಿಸಿಕೊಂಡ ಶಿಕ್ಷಕರಿಗೆ ೩೦-೧-೪೦ ರ ಸ್ಕೇಲಿನಲ್ಲಿ ಅವರಿಗೆ ದೊರೆಯಬಹುದಾದ ಸಂಬಳವನ್ನು ಆ ತಾರೀಖಿಗೆ ಹೊಸ ಸ್ಕೇಲಿನಂತೆ ದೊರೆಯಬಹುದಾದ ಆರಂಭದ ಪಗಾರವೆಂದು ತಿಳಿಯಲಾಗುವದು. ಮತ್ತು ಮುಂದೆ ಕಾಲಕಾಲಕ್ಕೆ ಬಡತಿಗಳನ್ನು ಕೊಡಲಾಗುವದು. ಆದರೆ ಆ ತಾರೀಖಿಗಿಂತಲೂ ಹಿಂದಿನ ಅವಧಿಗೆ ದೊರೆಯಬಹುದಾದ ಬಾಕಿ ಉಳಿಯುವ ಹಣವು ಮಾತ್ರ ದೊರೆಯಲಾರದು.

ಕನ್ನಡ ಬುಕ್-ಕಮಿಟಿಯವರಿಂದ ನುಂಜೂರಾದ ಪುಸ್ತಕಗಳು

(ಕಳೆದ ಜುಲೈ ತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಟಿಪ್ಪಣಿ :— ಪ್ರಾ. ಪ್ರಾಥಮಿಕ; ಮಾ. ಮಾಧ್ಯಮಿಕ; ಟ್ರೇ. ಟ್ರೇನಿಂಗ್; ಶಿ. ಶಿಕ್ಷಕ; ವಿ. ವಿದ್ಯಾರ್ಥಿ; ವಾ. ವಾಚನಾಲಯ; ಶಾ. ಶಾಲೆ.

ಅ.ಸಂ.	ಪುಸ್ತಕಗಳ ಹೆಸರು	ಪ್ರಕಾಶಕರು	ಬೆಲೆ	ಏತಕ್ಕಾಗಿ ನುಂಜೂರಾಗಿವೆ ?
೨೮	**ಪುರೋಗಾಮಿ ಶಿಕ್ಷಕ** (೧೯ೆ ಆ. ೧೯೪೨)	ಮ್ಯಾನೇಜರ ಸ್ಟೂಡಂಟ್ಸ ಓನ್‌ಬುಕ್-ಡಿಪೋ, ಧಾರವಾಡ	೨–೪–೦	ಟ್ರೇ. ಸಂ. ಪಠ್ಯಪುಸ್ತಕ
೨೯	**ಕುಮಾರ ರಾಮು** (೧೯ೆ ಆ. ೧೯೪೧)	ದಿ. ಪಬ್ಲಿಶರ ಮಿಂಚಿನಬಳ್ಳಿ ದೇಸಾಯಿ-ಗಲ್ಲಿ, ಧಾರವಾಡ	೧–೦–೦	ಪ್ರಾ.ಮಾ.ಟ್ರೇ.ವಿ.ಶಿ.ವಾ.
೩೦	**ಮೊಗ್ಗೆಯ ಮಾಲೆ** (೧೯ೆ ಆ. ೧೯೪೧)	ದಿ. ಪಬ್ಲಿಶರ ತೋಂಟದಾರ್ಯ ಪ್ರಿಂಟಿಂಗ ಪ್ರೆಸ್, ಧಾರವಾಡ	೦–೧–೦	ಪ್ರಾ. ಮಾ. ವಿ. ಶಿ. ವಾ.
೩೧	**ವರ್ಧಾ ಯೋಜನೆ ಮತ್ತು ಸ್ತ್ರೀ ಶಿಕ್ಷಣ** (೧೯ೆ ಆ. ೧೯೪೨)	ಎಚ್.ಎ. ಮೋಹರೆ, ಸಂಪಾದಕರು ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ	೦–೩–೦	ಪ್ರಾ. ಮಾ. ಟ್ರೇ. ಶಿ. ವಾ.
೩೨	**ಥಾಮಸ್ ಆಲ್ವಾ-ಏಡಿಸನ್** (೧೯ೆ ಆ. ೧೯೪೨)	ಪಿ. ಟಿ. ಆಯ್. ಬುಕ್‌ಡಿಪೋ ಬೆಂಗಳೂರು	೧–೮–೦	ಪ್ರಾ. ಮಾ.ಟ್ರೇ.ವಿ.ಶಿ.ವಾ.
೩೩	**ಸತ್ವಶಾಲಿ ರಶಿಯಾ** (೧೯ೆ ಆ. ೧೯೪೨)	ದಿ. ಪಬ್ಲಿಶರ ಮಿಂಚಿನಬಳ್ಳಿ ದೇಸಾಯಿ-ಗಲ್ಲಿ, ಧಾರವಾಡ	೧–೪–೦	ಮೇಲಿನವಾ. ಮಾ. ಟ್ರೇ. ವಿ.ಶಿ.ವಾ.
೩೪	**ಶ್ರೀಶಾಂತೇಶ್ವರ ಚರಿತ್ರಂ** (೧೯ೆ ಆ. ೧೯೪೩)	ಶ್ರೀ. ಪದ್ಮಾವತೆಮ್ಮಾ ಸಾಲಿಗ್ರಾಮ	೧–೦–೦	ಪ್ರಾ. ಮಾ. ಟ್ರೇ. ಶಿ. ವಾ.

ಪುಸ್ತಕ ಪರಿಚಯ

ಕಾರಡಗಿ ಮಹಾಲ ದೇಶಪಾಂಡೆಯರ ಇತಿಹಾಸವು

ಗ್ರಂಥಕರ್ತರು— ಶ್ರೀ. ಗೋವಿಂದರಾವ ದೇಶಪಾಂಡೆಯವರು

ಬೆಲೆ ೧ ರೂ. ಕ್ರೌನ್ ಆಕಾರದ ೧೩೬+೧೬ ಪುಟಗಳು :

ಹಿಂದಿನ ಕಾಲದಲ್ಲಿ ಈಗಿನ ಧಾರವಾಡ ಜಿಲ್ಲೆಯೊಳಗಿನ ಸವಣೂರ ಸಂಸ್ಥಾನ ಮತ್ತು ಬಂಕಾಪುರ, ಹಾನಗಲ್, ಕರ್ಜಗಿ, ಕಲಘಟಗಿ, ಹುಬ್ಬಳ್ಳಿ ಈ ಐದು ತಾಲೂಕುಗಳಿಗೆ ಸೇರಿದ ೧೧೮ ಹಳ್ಳಿಗಳು ಹಾಗು ಕಾರವಾರ ಜಿಲ್ಲೆಯೊಳಗಿನ ೧೪ ಹಳ್ಳಿಗಳು ಅಂತೂ ೧೩೨ ಹಳ್ಳಿಗಳು ಸೇರಿ ಕಾರಡಗಿ ಮಹಾಲು ಎನ್ನಿಸಿಕೊಳ್ಳುತ್ತಿತ್ತು. ಆಗಿನ ಕಾಲದಲ್ಲಿ ಹೀಗೆ ಹಲವು ಹಳ್ಳಿಗಳನ್ನು ಸೇರಿಸಿ ಆಗುವ ಒಂದು ಗುಂಪಿಗೆ ಮಹಾಲು ಎಂದೂ ಅದರ ಮೇಲಣ ಅಧಿಕಾರಿಗೆ ಮಹಾಲಕರಿ ಎಂದೂ ಹೆಸರಿರುತ್ತಿತ್ತು. ಕಾರಡಗಿಯ ಮಹಾಲು ಮೊದಲು ವಿಜಯನಗರದ ರಾಜ್ಯಕ್ಕೂ ರಕ್ಕಸತಂಗಡಿಯ ಯುದ್ಧದ ತರುವಾಯ ವಿಜಾಪುರದ ರಾಜ್ಯಕ್ಕೂ ಸೇರಿತ್ತು. ಈ ಮಹಾಲಿನ ದೇಶಪಾಂಡೆಯರ ಸಾದ್ಯಂತವಾದ ಇತಿಹಾಸವೇ ಪ್ರಸ್ತುತ ಪುಸ್ತಕದಲ್ಲಿ ವರ್ಣಿತವಾದ ವಿಷಯವು.

೮೦ ವರ್ಷದ ಮುಪ್ಪಿನ ಮುದುಕರಾದರೂ ಮನೆತನದ ಅಭಿಮಾನ ಮತ್ತು ದೇಶದ ಇತಿಹಾಸದ ಮೇಲಿನ ಉಜ್ವಲವಾದ ಪ್ರೀತಿ ಇವುಗಳಿಂದ ಪ್ರೇರಿತರಾದ ಶ್ರೀಮಾನ್ ದೇಶಪಾಂಡೆ ಗೋವಿಂದರಾಯರು ಬಹುಕಾಲ ಮತ್ತು ಬಹುವಿಧದ ಪರಿಶ್ರಮದಿಂದ ಈ ಮಹತ್ವದ ಗ್ರಂಥವನ್ನು ಇಂದಿನ ತರುಣ ಪೀಳಿಗೆಗೆ ಅನುಕರಣೀಯವಾದ ರೀತಿಯಲ್ಲಿ ಪ್ರಕಟಿಸಿ ಕರ್ನಾಟಕದ ಜನತೆಯ ಮೇಲೆ ಎಂದೂ ಮರೆಯಲಾಗದಂಥ ಉಪಕಾರ ಮಾಡಿದ್ದಾರೆ. ಇದು ಒಂದು ಮಹಾಲಿನ, ಅದರ ಒಡೆಯರಾದ ಒಂದು ಘನತೆವೆತ್ತ ಮನೆತನದ ಇತಿಹಾಸವಾಗಿದ್ದರೂ ಅಖಿಲ ಕರ್ನಾಟಕದ ಇತಿಹಾಸಕ್ಕೆ ಸಂಬಂಧಪಡುವ ಅನೇಕ ಮಹತ್ವದ ವಿಷಯಗಳನ್ನು ಒಳಗೊಂಡಿರುವದು. ಈ ಮನೆತನಕ್ಕೆ ಸಂಬಂಧಿಸಿದ ಅನೇಕ ಪ್ರಮುಖ ಸದ್ಗೃಹಸ್ಥರ ಮತ್ತು ಮಹತ್ವದ ಗುಡಿಗಳ, ದೇವರ ಚಿತ್ರಗಳನ್ನೂ ಕಾರಡಿಗಿಯ ಮಹಾಲಿನ ನಕಾಶೆಯನ್ನೂ ಪುಸ್ತಕದಲ್ಲಿ ಸೇರಿಸಿರುವದರಿಂದ ವಿಷಯ ವಿವೇಚನೆಗೆ ಅನುಕೂಲವಾಗಿರುವದಲ್ಲದೆ ಪುಸ್ತಕವು ಆಕರ್ಷಕವಾಗುವದಕ್ಕೂ ಕಾರಣವಾಗಿದೆ.

ಪುಸ್ತಕದ ಬರೆಹದ ರೀತಿಯನ್ನು ಕುರಿತು ಉತ್ತರ ಕರ್ನಾಟಕದ ಸನ್ಮಾನ್ಯ ವ್ಯಕ್ತಿಗಳಾದ ಶ್ರೀ. ಆಲೂರ ವೆಂಕಟರಾಯರ ಮಾತುಗಳನ್ನೆ ಇಲ್ಲಿ ಅವತರಿಸಿದರೆ ಸಾಕೆನಿಸುವದು.

" ಇತಿಹಾಸವನ್ನು ಅಭ್ಯಾಸ ಮಾಡುವದು ಒಂದು ಶಾಸ್ತ್ರ ; ಅದನ್ನು ಬರೆಯುವದು ಒಂದು ಕಲೆ ; ಮತ್ತು ಅದನ್ನು ಓದಿ ತಿಳಿದುಕೊಳ್ಳುವದು ಒಂದು ತತ್ತ್ವಜ್ಞಾನ. ಕೇವಲ ಸಂಗತಿಗಳ ಪೋಣಿಕೆಯೆ ಇತಿಹಾಸವಲ್ಲ..... ಇತಿಹಾಸವನ್ನು ಕಲಿಹಾಕಿ ಅವುಗಳೊಳಗಿನ ಸಂಗತಿಗಳನ್ನೆಲ್ಲ ತುಲನಾತ್ಮಕ ದೃಷ್ಟಿಯಿಂದ ಸಂಶೋಧನೆ ನಡೆಯಿಸಿ ಇತಿಹಾಸ ಬರೆಯುವೆದು ಅವಶ್ಯ. ಇಂಥ ಇತಿಹಾಸಕ್ಕೆ ಇದು ತಳಹದಿ. ಶ್ರೀ. ಗೋವಿಂದರಾಯರು ಬರೆದ ಇತಿಹಾಸವು ಈ ದೃಷ್ಟಿಯಿಂದ ಅಪೂರ್ವವಾದದ್ದೆಂದೇ ಹೇಳಬೇಕು. ಏಕೆಂದರೆ ಈ ಮಾದರಿಯ ಗ್ರಂಥಗಳಲ್ಲಿ ಇದೇ ಮೊದಲನೆಯದು. "

N. V. K.

ಧಾರವಾಡ ಜಿಲ್ಲೆಯ ಸ್ಕೂಲ್ ಬೋರ್ಡಿನ ಕೆಲವು ನಿರ್ಣಯಗಳು

೬೬–೩. ಈ ವರೆಗೆ ಶಿಕ್ಷಕರಿಗೆ ಪೆನ್‌ಶನ್ ಮಂಜೂರ ಮಾಡುವ ಅಧಿಕಾರವು ಸ್ಕೂಲ್ ಬೊರ್ಡಿಗೆ ಇದ್ದಿತು. ಇನ್ನುಮುಂದೆ ಅದನ್ನು ಸ್ಕೂಲ್ ಬೋರ್ಡಿನ ಚೆಅರಮನ್ನರಿಗೆ ಒಪ್ಪಿಸಿ ಕೊಡಲಾಯಿತು.

೬೯ ಹೆಣ್ಣುಮಕ್ಕಳ ಪಿ. ಎಸ್. ಸಿ ಪರೀಕ್ಷೆಗೆ ಹೋಗುವ ವಿದ್ಯಾರ್ಥಿನಿಯರ ಸಂಗಡ ಹೋಗುವ ಶಿಕ್ಷಿಕೆಯರು ಆ ಅವಧಿಯಲ್ಲಿ ಕೆಲಸದ ಮೇಲೆ ಇದ್ದಂತೆಯೇ ತಿಳಿಯಬೇಕು. ಇಂಥ ವಿದ್ಯಾರ್ಥಿನಿಯರ ಸಂಗಡ ಒಬ್ಬಳೇ ಶಿಕ್ಷಿಕೆಯು ಹೋಗಬಹುದು. ಅವರಿಗೆ ಪ್ರವಾಸದ ಭತ್ತೆಯನ್ನು ಕೊಡಲಾಗದು.

೭೩ ಶಾರೀರಿಕ ಶಿಕ್ಷಣದ ಶಿಬಿರಕ್ಕೆ ಹೋಗುವ ಶಿಕ್ಷಕ ಶಿಕ್ಷಿಕೆಯರಿಗೆ ನಿಯಮದ ಪೇರೆಗೆ ಪ್ರವಾಸದ ಭತ್ತೆಯನ್ನೂ ದಿನಕ್ಕೆ ನಾಲ್ಕಾಣೆಯಂತೆ ದಿನದ ವೆಚ್ಚದ ಭತ್ತೆಯನ್ನೂ ಕೊಡಬೇಕು.

೭೯ ಇನ್ನುಮುಂದೆ ಧಾರವಾಡ ಜಿಲ್ಲೆಯ ಸ್ಕೂಲ್ ಬೋರ್ಡಿನ ಸಭೆಯು ಧಾರವಾಡದ ಸ್ಕೂಲ್ ಬೋರ್ಡಿನ ಕಚೇರಿಯ ಕಟ್ಟಡದಲ್ಲಿ ಅಥವಾ ಚೇರಮನ್ನರು ಗೊತ್ತುಪಡಿಸುವ ಜಿಲ್ಲೆಯೊಳಗಿನ ಬೇರೆ ಯಾವದಾದರೂ ಊರಿನಲ್ಲಿ ನಡೆಯುವದು.

ಪ್ರಕಟನೆ

ಗಾಂವಟೀ ಶಾಲೆ (Voluntary Schools) ಗಳನ್ನು ರಜಿಸ್ಟರ ಮಾಡುವ ಅರ್ಜಿಗಳು

ಗಾಂವಟೀ ಶಾಲೆಗಳನ್ನು ರಜಿಸ್ಟರ ಮಾಡುವದರ ಸಲುವಾಗಿ ಕಳುಹಿಸತಕ್ಕ ಅರ್ಜಿಗಳನ್ನು ೧೯೪೨ ನೆಯ ಇಸವಿಯ ಡಿಶಂಬರ ತಿಂಗಳ ಮೊದಲನೆಯ ತಾರೀಖಿಗೆ ಅಥವಾ ಅದಕ್ಕೂ ಮೊದಲೇ ಆಯಾ ಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಿಗೆ ಮುಟ್ಟುವಂತೆ ಕಳುಹಿಸತಕ್ಕದ್ದು. ಹೀಗೆ ೧-೧೨-೧೯೪೨ ನೆಯ ದಿವಸ ಅಥವಾ ಅದಕ್ಕೂ ಮೊದಲೇ ಮುಟ್ಟಿದ ಅರ್ಜಿಗಳಷ್ಟೇ ಯೋಗ್ಯ ವಿಚಾರಣೆಗೆ ಒಳಗಾಗಿ ಆ ಶಾಲೆಗಳು ೧೯೪೩-೪೪ ನೆಯ ಸಾಲಿನ ಗ್ರ್ಯಾಂಟಿನ ಬಗ್ಗೆ ರಜಿಸ್ಟರ ಮಾಡಲ್ಪಡುವವು; ಮತ್ತು ಹಣದ ಅನುಕೂಲತೆಯಾದರೆ ಮಾತ್ರ ಈ ಶಾಲೆಗಳಿಗೆ ಗ್ರ್ಯಾಂಟ ದೊರೆಯುವದು. ೧-೧೨-೧೯೪೨ ರ ತರುವಾಯ ಅರ್ಜಿಯು ಮುಟ್ಟಿದ ಶಾಲೆಗಳನ್ನು ರಜಿಸ್ಟರ ಮಾಡಬಹುದು ; ಆದರೆ ಅವುಗಳಿಗೆ ನಡೆಯುವ ವರ್ಷ (೧೯೪೩-೪೪) ದಲ್ಲಿ ಗ್ರ್ಯಾಂಟು ಸಿಗಲಾರದು.

ಧಾರವಾಡ.
ತಾ. ೨೯-೭-೧೯೪೨

(ಸಹಿ) ಜೆ. ಆರ್. ಭಂಡಿವಾಡ
ದ. ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಸಲುವಾಗಿ.

ಪತ್ರಗಳ ಮುಖ್ಯಾಂಶಗಳು

ಭೇಟಿಕಳ:— (ಕಾರವಾರ ಜಿಲ್ಲೆ) ಕಳೆದ ಜೂನ ತಿಂಗಳಲ್ಲಿ ಇಲ್ಲಿಯ ಕನ್ನಡ ಶಾಲೆಯಲ್ಲಿ ಬಾಲದಿನವು ಆ. ಡೆ. ಎ. ಇ. ಅವರಾದ ಶ್ರೀಮಾನ್ ಟಿ. ಸಿ. ಕಾಮತ ಬಿ. ಎ., ಬಿ. ಟಿ. ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಎಲ್ಲ ಶಿಕ್ಷಕ ಶಿಕ್ಷಕಿಯರೂ ಊರ ಹಿರಿಯರೂ ಆಗಮಿಸಿದ್ದರು. ಸಮ್ಮೇಲನದ ಎಲ್ಲ ಕೆಲಸಗ ಚಿತ್ತಾಕರ್ಷಕವಾಗಿ ಸಾಗಿದವು. ಪೆ| ಮಾ| ರಾದ ಪ್ರಭು ಅವರು ಕಳೆದ ನಾಲ

ವರ್ಷಗಳಲ್ಲಿ ಸುಮಾರು ೧೫೦ ವಿದ್ಯಾರ್ಥಿಗಳಿಗೆ ಹಿಂದುಸ್ತಾನಿಯನ್ನು ಕಲಿಸಿರುವರು. ಶಾಲೆಯಲ್ಲಿ ಸರ್ವಾಂಗಸುಂದರ ಶಿಕ್ಷಣವನ್ನು ಕೊಡುತ್ತಿರುವರಷ್ಟೇ ಅಲ್ಲದೆ, ವ್ಯಾಯಾಮಶಿಕ್ಷಣ, ಶಿಷ್ಟಪದ್ಧತಿ, ನೂಲುವ ಕೈಗಾರಿಕೆ ಮೊದಲಾದ ವಿಷಯಗಳ ಕಡೆಗೆ ಸಾಕಷ್ಟು ಲಕ್ಷ್ಯವನ್ನು ಪೂರೈಸಿರುವರು. ಇದು ಬಹಳ ಒಳ್ಳೆಯದೆಂದು ಮೇಲಧಿಕಾರಿಗಳು ಬರೆದಿರುವರು.

ತಿಳಿಸಿದವರು— ಶ್ರೀ. ಕೇ. ವಿ. ಭಟ್ಟ ಜವಳಿ ವ್ಯಾಪಾರಿಗಳು, ಭಟಕಳ.

ಕಿತ್ತೂರು:—(ಬೆಳಗಾವಿ ಜಿಲ್ಲೆ) ಇಲ್ಲಿಯ ಅ. ಮಾ. ರಾದ ಶ್ರೀಮಾನ್ ವೆ. ಗೊ. ಮಠದ ಇವರು ಸೇವಾನಿವೃತ್ತರಾದುದರಿಂದ ಶಾಲೆಯಲ್ಲಿ ಸತ್ಕಾರ ಸಮಾರಂಭವು ಜರುಗಿತು. ಈ ಕರ್ತವ್ಯನಿಷ್ಠ ಶಿಕ್ಷಕರ ಅಭಿನಂದನಪರವಾಗಿ ವ್ಯವಸಾಯಬಂಧುಗಳಲ್ಲಿ ಹಲವರು ಮಾತನಾಡಿದರು.

ತಿಳಿಸಿದವರು— ಶ್ರೀ. ಎಸ್. ವಿ. ನಾಗಶೆಟ್ಟಿ ಮಾಸ್ತರರು, ಕಿತ್ತೂರು.

ಬೆಳಗಲಿ:— (ಮುಧೋಳ ಸಂಸ್ಥಾನ) ಇಲ್ಲಿಯ ಗಂಡುಮಕ್ಕಳ ಶಾಲೆಯಲ್ಲಿ ೧೨-೭-೧೯೪೨ನೆಯ ದಿವಸ ಮುಧೋಳ ಅಸೆಂಬ್ಲಿಯ ಸದಸ್ಯರಾದ ಶ್ರೀಮಾನ್ ಧಡೂತಿ ಸಿದ್ದಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ. ಎಮ್.ಆಯ್. ವಕ್ಕುಂದ ಹಾಗು ಶ್ರೀ. ಜಿ. ಕೆ. ಸಿಂದಗಿ ಅವರು ಮಾದರಿಯ ಪಾಠಗಳನ್ನು ಕಲಿಸಿದರು.

ತಿಳಿಸಿದವರು— ಶ್ರೀ. ಬಿ. ಎಚ್. ಹಲಕುರ್ಕಿ ಹೆ। ಮಾ। ಬೆಳಗಲಿ.

ಉಗಾರ:— (ಬೆಳಗಾವಿ ಜಿಲ್ಲೆ) ಈ ಊರಲ್ಲಿ ಒಂದೇ ಸವನೆ ೨೨ ವರ್ಷ ಕೆಲಸಮಾಡಿದ ಶ್ರೀ. ಕಟ್ಟಿ ಗುಂಡಾಚಾರ್ಯ ಮಾಸ್ತರರಿಗೆ ವರ್ಗವಾದುದರಿಂದ ಅವರ ಹಿಂದಿನ ಮತ್ತು ಇಂದಿನ ಶಿಷ್ಯರೂ ಊರ ಹಿರಿಯರೂ ಕೂಡಿ, ಸಭೆಮಾಡಿ, ಸತ್ಕರಿಸಿ ಬೀಳ್ಕೊಟ್ಟರು.

ತಿಳಿಸಿದವರು— ಶ್ರೀ. ಮಿರ್ಜಿ ಅಣ್ಣಾರಾಯರು ಶಿಕ್ಷಕರು ಉಗಾರ.

ಶಿರಾಲಿ:—(ಕಾರವಾರ ಜಿಲ್ಲೆ)ಇಲ್ಲಿಯ ಕನ್ನಡ ಶಾಲೆಯಲ್ಲಿ ೧೨-೭-೪೨ನೆಯ ದಿವಸ ಈ ಭಾಗದ ಶಾಲೆಗಳ ಶಿಕ್ಷಕರ ಸಹಕಾರ ಸಭೆಯು ನೆರೆಯಿತು. ಆಗ ಅ. ಡಿ. ಎ. ಇ. ಅವರಾದ ಶ್ರೀಮಾನ್ ಕಾಮತ ಸಾಹೇಬರು ಬಾಲಕರಿಗೆ ಹೊಸಪದ್ಧತಿಯಿಂದ ಕಲಿಸುವ ಕ್ರಮ, ರಾತ್ರಿಶಾಲೆ ಹಾಗು ವಾಚನಾಲಯಗಳ ಮಹತ್ವ, ಲೋಕಸಂಗ್ರಹಕ್ಕಾಗಿ ಶಿಕ್ಷಕನು ಮಾಡಬೇಕಾದ ಕರ್ತವ್ಯ ಮೊದಲಾದವುಗಳನ್ನು ಪರಿಣಾಮಕರವಾಗಿ ತಿಳಿಸಿದರು.

ಸುದ್ದಿಗಾರರು— ಶ್ರೀ ಸು. ನಾ. ಶೆಟ್ಟಿ ಹೆ. ಮಾ. ಶಿರಾಲಿ.

ಕೋಡಿಹಾಳ:— (ವಿಜಾಪುರ ಜಿಲ್ಲೆ) ಇಲ್ಲಿಯ ಶಾಲೆಯಲ್ಲಿ ತಾರೀಖ ೧೬ ೭–೧೯೪೨ನೆಯ ದಿವಸ ಅ. ಡೆ. ಎ. ಇ. ಅವರಾದ ಶ್ರೀಮಾನ್ ಗುಡಿಸಾಗ ಸಾಹೇಬರ ನೇತೃತ್ವದಲ್ಲಿ ಈ ಭಾಗದ ಶಿ. ಶಿ. ಸಮ್ಮೇಲನವು ಚೆನ್ನಾಗಿ ಜರುಗಿತ

ತಿಳಿಸಿದವರು— ಶ್ರೀ. ಸ. ಪು. ಹೊಕರಾಣಿ ಸ್ಕೂ. ಮಾಸ್ತ

ಗಜೇಂದ್ರಗಡ:—(ಧಾರವಾಡ ಜಿಲ್ಲೆ) ಇಲ್ಲಿಯ ಪ್ರಮುಖ ವ್ಯಾಪಾರಸ್ಥ ರೆಲ್ಲರೂ ಕೂಡಿ, ನಲ್ಲಿಹಚ್ಚಿದ ನೀರಿನ ಪಾತ್ರೆಯೊಂದನ್ನು ಗಂಡುಮಕ್ಕ ಶಾಲೆಗೆ ಕೊಟ್ಟರು; ದಿನಾಲು ಕುಡಿಯುವ ನೀರನ್ನು ತುಂಬಿಡಿಸುವ ವ್ಯವಸ್ಥೆ ಯನ್ನೂ ಮಾಡಿದ್ದಾರೆ.

ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾದುದರಿಂದ ಇಲ್ಲಿಯ ಸ್ಕೂಲ್ ಪಂಚರು ಡಿ. ಸ್ಕೂ. ಬೋರ್ಡಿನಿಂದ ಅ. ಮಾಸ್ತರರು ಬರುವವರೆಗೆ ಮೂರುತಿಂಗಳ ಮಟ್ಟಿಗೆ ತಾವೇ ಸಂಬಳಕೊಟ್ಟು, ಒಬ್ಬ ಸಹಾಯ ಶಿಕ್ಷಕರನ್ನ ಕೊಟ್ಟಿರುವರು. ಶಾಲೆಯ ಕಟ್ಟಡವು ಸಾಲದ್ದರಿಂದ ಸ್ಕೂಲ್‌ಬೋರ್ಡಿನವರ ಇನ್ನೊಂದು ಬಾಡಿಗೆಯ ಸ್ಥಳವನ್ನು ಹುಡಿಯುವವರೆಗೆ ಮೂರುತಿಂಗಳ ಮಟ್ಟಿಗೆ ಶಾಲೆಹಾಕಲು ಪುಕ್ಕಟೆಯಾಗಿ ಸ್ಥಳವನ್ನು ಕೊಟ್ಟಿರುವರು.

ಈ ಶಾಲೆಯಲ್ಲಿಯ ಅಭ್ಯಾಸಕೂಟದ ವಿದ್ಯಾರಣ್ಯ ವಾಚನಾಲಯಕ್ಕೆ ದೇಶಭಕ್ತರೂ ಎಮ್. ಎಲ್. ಏ. ಅವರೂ ಆದ ದೊಡ್ಡಮೇಟಿ ಅಂದಾನೆಪ್ಪ ನವರು ಭೆಟ್ಟಿಯನ್ನು ಕೊಟ್ಟು ಸದಭಿಪ್ರಾಯವನ್ನು ಬರೆದು ೫ ರೂ. ಕಾಣಿಕೆ ಯಿತ್ತರು.

ಸುದ್ದಿಗಾರರು — ಶ್ರೀ. ಲ. ವಿ. ಘಾಟಿಕ, ಮುಖ್ಯಾಧ್ಯಾಪಕರು

ಮುಡೇರ್ಶ್ವರ:— (ಕಾರವಾರ ಜಿಲ್ಲೆ) ಅ. ಡೆ. ಎ. ಇ. ಅವರಾ ಶ್ರೀ. ಕಾಮತರಾಯರು ಈ ಊರ ಶಾಲೆಯಲ್ಲಿ ೭–೭–೧೯೪೨ ನೆಯ ದಿವಸ ಈ ಭಾಗದ ಎಲ್ಲ ಶಿಕ್ಷಕರನ್ನು ಕರೆಯಿಸಿ ಮಾದರಿಯ ಪಾಠಗಳನ್ನು ಕಲಿ ತೋರಿಸಿದರು.

ಸುದ್ದಿಗಾರರು— ಹೆಡ್ ಮಾಸ್ತರರು ಮುಡೇರ್ಶ್ವರ

ಸಾಕ್ಷರಿಗಳಾದ ಪ್ರಬುದ್ಧರಿಗಾಗಿ

ಮಾದರಿಯ ಹಳ್ಳಿ

ಶ್ರೀಮಾನ್ ಎಸ್. ಆರ್. ತಾವಡೆ, ಎಮ್. ಎ., ಎ. ಇ. ಡ. ಭಾ. ಧಾರವಾಡ ಅವರಿಂದ

ನಮ್ಮ ದೇಶದ ಮುಂದಾಳುಗಳೂ ಸರಕಾರದವರೂ ಹಳ್ಳಿಯ ಸುಧಾರಣೆಗೆ ಯತ್ನಿಸುತ್ತಿದ್ದಾರೆ. ಹಳ್ಳಿಯ ಜನರ ಹೊಟ್ಟೆ ಬಟ್ಟೆಗೆ ಸಾಕಷ್ಟು ದೊರೆಯಬೇಕು; ಹಳ್ಳಿಯು ಆರೋಗ್ಯಕರವಾಗಿರಬೇಕು; ಹಳ್ಳಿಯ ಜನರು ಓದುಬರೆಹಗಳನ್ನು ಕಲಿತು ದೇಶದ ಚಟುವಟಿಕೆಗಳನ್ನೆಲ್ಲ ತಿಳಿದುಕೊಂಡು ನಡೆಯಬೇಕು; ಎಂದು ಅವರು ಅಪೇಕ್ಷಿಸುತ್ತಾರೆ.

ಈ ಎಲ್ಲ ವಿಚಾರಗಳಿಂದ ನೋಡಿದರೆ ನಮ್ಮ (.....) ಹಳ್ಳಿಯು ಒಂದು ಮಾದರಿಯ ಹಳ್ಳಿಯಾಗಿದೆ. ಇದು ಹೇಗೆ ನೋಡಿರಿ.

ಆಹಾರ— ನಮ್ಮ ಹಳ್ಳಿಯ ಹೊಲಗಳಲ್ಲಿ ಜೋಳ, ಗೋದಿ, ಕಡಲೆ, ತೊಗರಿ, ಕುಸುಬೆ, ಹೆಸರು, ಉದ್ದು ಇವೆಲ್ಲ ಬೆಳೆಯುತ್ತವೆ; ತುಸು ಅಕ್ಕಿಯನ್ನೂ ಬೆಲ್ಲವನ್ನೂ ಕಿರಾಣಿ ಸಾಮಾನುಗಳನ್ನೂ ಮಾತ್ರ ಕೊಂಡುಕೊಳ್ಳುತ್ತೇವೆ. ದನಕರುಗಳು ನಮಗೆ ಹೈನವನ್ನು ಕೊಡುತ್ತವೆ. ಕುಟ್ಟಿದ ಅಕ್ಕಿ ಬೀಸಿದ ಹಿಟ್ಟು ಹಸುರು ಕಾಯಿಪಲ್ಲೆ ಹಸನಾದ ಹೈನು ಇವು ನಮಗೆ ದೊರೆಯುವವು.

ಅರಿವೆ— ನಮ್ಮ ಹೊಲದಲ್ಲಿ ಹತ್ತಿಯು ಬೆಳೆಯುವದು. ಆ ಹತ್ತಿಯನ್ನು ಅರೆದು, ಅರಳಿಯನ್ನು ನೂತು, ನಮಗೆ ಬೇಕಾಗುವಷ್ಟು ಬಟ್ಟೆಯನ್ನು ನಾವೇ ನೆಯ್ದುಕೊಳ್ಳುತ್ತೇವೆ.

ಬಳಕೆಯ ನೀರಿನಹೊಂಡವು ಊರಿನ ಒಂದು ತುದಿಯಲ್ಲಿರುವದು. ಅದರ ಸುತ್ತಲಿನ ನೆಲವೆಲ್ಲ ಹಸನಾಗಿದೆ. ಅದರಲ್ಲಿ ದನಕರುಗಳ ಮೈ ತೊಳೆಯುವದು, ಬಟ್ಟೆ ಒಗೆಯು-

ವದು, ಕೈ ಕಾಲು ತೊಳೆಯುವದು, ಮುಂತಾದ ಹೊಲಸ ಕೆಲಸಗಳನ್ನು ನಾವು ಎಂದೂ ಮಾಡುವದಿಲ್ಲ.

ಕುಡಿಯುವ ನೀರಿಗಾಗಿ ಎರಡು ಒಳ್ಳೆಯ ಬಾವಿಗಳಿರುವವು; ಅವುಗಳ ಸುತ್ತಲೂ ಕಟ್ಟೆಯನ್ನು ಕಟ್ಟಿದ್ದೇವೆ. ಸುತ್ತಲಿನ ಸ್ಥಳವೆಲ್ಲ ನಿರ್ಮಲವಾಗಿರುವದು. ಎಲ್ಲ ಜಾತಿಗಳ ಜನರು ಈ ನೀರನ್ನು ಬಳಸುತ್ತೇವೆ. ಊರೊಳಗಿನ ಓಣಿಗಳು ಯಾವಾಗಲೂ ಸ್ವಚ್ಛವಾಗಿರುವವು. ನಾವು ಕಸಕಡ್ಡಿಗಳನ್ನೆಲ್ಲ ತಿಪ್ಪೆಗುಂಡಿಗಳಲ್ಲಿಯೇ ಒಯ್ದು ಚೆಲ್ಲುತ್ತೇವೆ.

ಶಿಕ್ಷಣ— ಊರ ನಡುವೆ ಒಳ್ಳೆಯ ಶಾಲೆಯಿರುವದು. ಊರ ಹುಡುಗರೂ ಹುಡುಗೆಯರೂ ತಪ್ಪದೆ ಶಾಲೆಗೆ ಹೋಗುತ್ತಾರೆ. ಅಲ್ಲಿಯೇ ರಾತ್ರಿಯ ಶಾಲೆಯೂ ನಡೆಯುವದು. ಒಂದು ಒಳ್ಳೆಯ ವಾಚನಾಲಯವೂ ಅಲ್ಲಿ ಇರುವದು. ದೇಶ ಪರದೇಶಗಳ ಸುದ್ದಿ ಚಟುವಟಿಕೆಗಳನ್ನೆಲ್ಲ ತಿಳಿಸುವ ವರ್ತಮಾನಪತ್ರಗಳು ಅಲ್ಲಿಗೆ ಬರುವವು.

ಸಾಮಾನ್ಯವಾಗಿ— ನಮ್ಮ ಊರಲ್ಲಿ ಪಕ್ಷಪಂಗಡಗಳಿಲ್ಲ. ಜಾತಿಜಗಳಗಳಿಲ್ಲ. ಬಡಿಗ ಕಮ್ಮಾರ ಉಪ್ಪಾರ ಇವರೆಲ್ಲರೂ ನಮ್ಮ ಮನೆಗೆಲಸಗಳನ್ನು ಮಾಡುವರು. ನಮಗೆ ಬೇಕಾಗುವ ಗಳೆಯ ಸಾಮಾನುಗಳನ್ನು ಮಾಡಿಕೊಡುವರು. ಕುಂಬಾರರು ಗಡಿಗೆಗಳನ್ನು ಮಾಡುವರು. ಹೊಲೆಯರು ಊರನ್ನು ಹಸನಾಗಿಡುವರು. ಕೆರವು ಮಿಣಿ ಬಾರು ಮುಂತಾದವುಗಳನ್ನು ಹೊತ್ತು ಹೊತ್ತಿಗೆ ಒದಗಿಸಿ ಕೊಡುವರು. ನಮ್ಮಲ್ಲಿ ಇವರು ಮುಸಲ್ಮಾನರು ಇವರು ಹಿಂದುಗಳು ಎಂಬ ಭೇದವೇ ಇಲ್ಲ. ಎಲ್ಲರೂ ನೆರೆಹೊರೆಯ ಸ್ನೇಹಿತರಂತೆ ಕೂಡಿ ನಡೆಯುವೆವು. ಎಂದಬಳಿಕ ನಮ್ಮದು ಮಾದರಿಯ ಹಳ್ಳಿಯಲ್ಲವೇ?

ಹೊಸ ಪದ್ಧತಿಯ ಹಿಂದೀ ಜಮಾಖರ್ಚು ಭಾಗ ೧

(ಮನೆಯ ಜಮಾಖರ್ಚು)

ಶ್ರೀ. ರಾ. ಸಿ. ಸಜ್ಜನ ಇವರು ಹೊಸ ಅಭ್ಯಾಸಪತ್ರಿಕೆಯ ಪ್ರಕಾರ ಈ ಪುಸ್ತಕವನ್ನು ರಚಿಸಿರುವರು. ಸರಕಾರದವರು ಇದನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಟಿಕ್ಸ್ಬುಕ್ ಎಂದು ಮಂಜೂರು ಮಾಡಿರುವರು. ಮತ್ತು ಸ್ಕೂಲಬೋರ್ಡುಗಳ ಅಧಿಕಾರಿಗಳೂ ಮಾನ್ಯಮಾಡಿದ್ದಾರೆ. ಇದರಲ್ಲಿ ಇಯತ್ತೆವಾರ ಜಮಾಖರ್ಚಿನ ಅಭ್ಯಾಸಕ್ರಮದಂತೆ ಆರಂಭದ ಜಮಾಖರ್ಚು, ಕೀರ್ದಿ, ಖತಾವಣಿ, ಬಾಕಿಗಳ ತಾಳೆ, ಉತ್ಪನ್ನ ಖರ್ಚಿನ ಖಾತೆ, ಅಥಾವೆ, ತೋಂಡಮಿಳವಣಿ ಕೀರ್ದಿ ಮತ್ತು ಶಾಲಾಸಹಕಾರಿ ಸಂಘದ ಅಂಗಡಿ (ಸೊಸಾಯಿಟಿ) ಯ ಜಮಾಖರ್ಚು ಮುಂತಾದ ವಿಷಯಗಳೂ, ಪ್ರಾಮಿಸರಿ ನೋಟ, ಮನಿಯಾರ್ಡರ, ಇನ್ಸುಅರನ್ಸ, ಚೆಕ್ಕು, ಹುಂಡಿ, ಬಡ್ಡಿಯ ಆಕರಣೆ ಮೊದಲಾದ ವ್ಯವಹಾರದೊಳಗಿನ ಮಾಹಿತಿಗಳೂ ಪ್ರಶ್ನಗಳೂ ಅವುಗಳ ಉತ್ತರಗಳೂ ಕೊನೆಗೆ ಪರೀಕ್ಷೆಯ ಪ್ರಶ್ನಕಾಗದಗಳೂ ಇರುವವು. ಇದು ಈಗಿನ ಪರೀಕ್ಷೆಯ ಪದ್ಧತಿಯಂತೆ ಬರೆದಿರುವದರಿಂದ ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಪ್ರಾ. ಶಾ. ಪ್ರ. ಪ. ಪರೀಕ್ಷೆಯ ಉಮೇದವಾರರಿಗೂ ಬಹು ಉಪಯುಕ್ತವಾದುದಿರುತ್ತದೆ. ಆದಕಾರಣ ಎಲ್ಲ ಮಹನೀಯರು ಇದರ ಲಾಭವನ್ನು ಪಡೆಯಬೇಕೆಂದು ಆಶಿಸುತ್ತೇವೆ. **ಬೆಲೆ : ೮ ಆಣೆ**

ಪತ್ತೆ :- **ರಾ. ಸಿ. ಸಜ್ಜನ ಮಾಸ್ತರ,** ಜೋರಾಪುರ ಪೇಟೆ, ವಿಜಾಪುರ.

ವಿನಂತಿ

★

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಸುವ ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು.

೨. ಈ ಮಾಸಪತ್ರಿಕೆಯು ಪ್ರತಿತಿಂಗಳ ಕೊನೆಯವಾರದಲ್ಲಿ ಪ್ರಸಿದ್ಧವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೩. ಲೇಖಕರು ಹಾಗು ಪ್ರಕಾಶಕರು ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರಿಗೆ ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆಗಾಗಿ ಕಳಿಸಬಹುದು.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕಮಿಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು

ಸಪ್ಟಂಬರ್ ೧೯೪೨ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ವಿಷಯಾನುಕ್ರಮಣಿಕೆ

ಅ. ಸಂ.	ವಿಷಯ.	ಪುಟ.
೧.	ಗಡಿಯಾಳದ ನೇಳೆಯಲ್ಲಿ ಬದಲಾವಣೆ	೧
೨.	ದ. ಭಾ. ಎ. ಇ. ಡಾ॥ ವಿ. ವಿ. ಕಾಮತ ಅವರು	೫
೩.	ಮುಖ್ಯಾಧ್ಯಾಪಕರೂ ಅವರ ಕಾರ್ಯಕಲಾಪಗಳೂ	೬
೪.	ಜೀವಸತ್ವಗಳು	೯
೫.	ಸರ್ ಫೆರೋಜಶಹಾ ಮೇರವಾನಜಿ ಮೆಹಥಾ	೧೭
೬.	ಸಯಾಮು	೨೨
೭.	ಕನ್ನಡ ವರ್ಧಪ್ರಾಯಿಕ್ಕು ಪರೀಕ್ಷೆ ೧೯೪೩	೨೪
೮.	ಕೋಷ್ಟಕಗಳು	೨೫
೯.	ಪತ್ರಗಳ ಮುಖ್ಯಾಂಶಗಳು	೨೯
೧೦.	ನಾನೇನು ಮಾಡಬೇಕು ? (ಪ್ರಬುದ್ಧರಿಗಾಗಿ)	೩೧

ಬಿಡಿ ಸಂಚಿಕೆಗೆ ನಾಲ್ಕು ಅಣೆಗಳು.
ನಾಡಿನ ಕನ್ನಡ ಚಂದಾ ಹಣ ಎರಡು ರೂಪಾಯಿಗಳು ಮಾತ್ರ.

Printed by V. Y. Jathar at the Karnatak Printing Works, Dharwar and Published by H. S. Torgal, Esq. M. A., Principal Training College For-Men Dharwar, at his Office.

★

ಪುರೋಗಾಮಿ ಶಿಕ್ಷಕ

★

(ಲೇಖಕರು : ಶ್ರೀ. ಎಸ್. ಬಿ. ಗಜೇಂದ್ರಗಡ, ಬಿ.ಎ., ಬಿ.ಟಿ., ವಿಜಾಪುರ

ಪ್ರಾಥಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಇರುವ
ದೈನಂದಿನ ಅಭ್ಯಾಸದಲ್ಲಿ— ಕಲಿಸುವ ಕಾರ್ಯದಲ್ಲಿ ಅತ್ಯಂತ ಉಪ-
ಯುಕ್ತವಾಗುವಂತೆ, ವಿದ್ಯಾಖಾತೆಯ ಅಭ್ಯಾಸಪತ್ರಿಕೆ-
ಯನ್ನು ಸಂಪೂರ್ಣವಾಗಿ ಅನುಸರಿಸಿ ಬರೆಯಲ್ಪಟ್ಟಿದೆ.

ಪುಟಗಳು ೩೩೬ ★ ಬೆಲೆ ೨-೪

ಇದು ಮೂರು ಮುಖ್ಯ ಭಾಗಗಳನ್ನೊಳಗೊಂಡಿದೆ.

(೧) ಶೈಕ್ಷಣಿಕ ಮನಃಶಾಸ್ತ್ರವನ್ನು ೧೫೫ ಪುಟಗಳಲ್ಲಿ ವಿವೇಚಿಸಿ
(೨) ಶಿಕ್ಷಣಶಾಸ್ತ್ರದ ಮೂಲತತ್ವಗಳನ್ನೂ ಪ್ರತ್ಯಕ್ಷವಾಗಿ ಕಲಿಸುವ ಶಾಸ್ತ್ರೀಯ
ಪದ್ಧತಿಯನ್ನೂ ವಿವರಿಸಿದೆ. (೩) ಆಧುನಿಕ ಶಿಕ್ಷಣ ಕ್ರಮದ ಮಹತ್ವದ
ಅಂಗಗಳಾದ ಶಾರೀರಿಕ ಶಿಕ್ಷಣ, ಶಿಸ್ತು, ಸಂಘಟನೆ ಮೊದಲಾದ ವಿಷಯಗಳನ್ನು
ತಿಳಿಸಿದೆ.

ಶಿಕ್ಷಣದ ಸರ್ವಾಂಗಗಳನ್ನೂ ಸುಲಲಿತವಾದ ಭಾಷೆಯಲ್ಲಿ ಒತ್ತಟ್ಟಿಗೆ
ಸುಂದರವಾಗಿ ಮಂಡಿಸಿದ ಶಾಸ್ತ್ರೀಯ ಗ್ರಂಥವು

ಕನ್ನಡದಲ್ಲಿ ಇದೊಂದೇ!

★

ಕನ್ನಡ-ಇಂಗ್ಲಿಷ್ ಶಾಲೆ-ಕಾಲೇಜುಗಳ ಎಲ್ಲಾ ಪಠ್ಯಪುಸ್ತಕಗಳೂ ಇತರ ಪುಸ್ತ
ಸ್ಕೂಲ್ ಸ್ಟೇಶನರಿ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ.

ಸ್ಟೂಡಂಟ್ಸ್ ಓನ್ ಬುಕ್ ಡಿಪೋ, ಧಾರವಾಡ.

★

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ಸಂಪುಟ ೮೧	ಸಪ್ಟಂಬರ್ ೧೯೪೨	ವರ್ಷ ೧೫. ಸಂ. ೬

ಗಡಿಯಾಳದ ವೇಳೆಯಲ್ಲಿ ಬದಲಾವಣೆ

ಇದೇ ಸಪ್ಟಂಬರ ತಿಂಗಳ ೧೫ನೆಯ ತಾರೀಖಿನಿಂದ ಗಡಿಯಾಳಗಳನ್ನು ಂದು ತಾಸು ಮುಂದೆ ಇಡಬೇಕೆಂದು ಹಿಂದುಸ್ತಾನ ಸರಕಾರದವರು ರ್ಣಯಿಸಿದ್ದಾರಷ್ಟೇ?

ಸೂರ್ಯ ಚಂದ್ರ ಗ್ರಹನಕ್ಷತ್ರಾದಿಗಳು ಇರುವ ಸ್ಥಾನಗಳನ್ನು ನೋಡಿ ೇಳೆಯನ್ನು ತಿಳಿದುಕೊಂಡು ಅದರಂತೆ ತಮ್ಮ ದಿನದ ಕಾರ್ಯಕ್ರಮಗಳನ್ನು ೆರವೇರಿಸುವ ಹಳ್ಳಿಯ ಜನರ ನಿತ್ಯದ ಜೀವನದಲ್ಲಿ ಇದರಿಂದ ಹೆಚ್ಚಿನ ಬದಲಾವಣೆ ನೇನೂ ಆಗದು. ಬೆಳ್ಳಿಯಚಿಕ್ಕೆಯ ಸ್ಥಾನವನ್ನು ನೋಡಿ ಇಲ್ಲವೆ ಕೋಳಿಯ ೂಗನ್ನುಕೇಳಿ ಕೆಲಸಕ್ಕೆ ಹೋಗುವ ಜನರು ನಮ್ಮಲ್ಲಿ ಇನ್ನೂ ಬಹುಜನರಿದ್ದಾರೆ. ೀದರೆ ಕೈಯೊಳಗಿನ ಗಡಿಯಾಳದ ವೇಳೆಯ ಮೇಲೆಯೇ ಕೈಯೂರಿ ಕೆಲಸ ಮಾಡುವ ಚಟವುಳ್ಳ ಶಹರದ ಜನರಿಗೂ ಸರಕಾರದ ಇಲ್ಲವೆ ಖಾಸಗಿ ನೌಕರಿ ಯಲ್ಲಿ ಇರುವವರಿಗೂ ರೈಲುಪ್ರವಾಸ ಕಚೇರಿಗಳ ಕೆಲಸ ಮುಂತಾದ ಸಂದರ್ಭ ಗಳಲ್ಲಿಯೂ ಈ ಬದಲಾವಣೆಯನ್ನು ಎಲ್ಲರೂ ಅನುಸರಿಸಲೇಬೇಕಾಗುವದು. ಂದುಸ್ತಾನದ ಸ್ಟ್ಯಾಂಡರ್ಡ ಟಾಯಿಮ್ ಎಂದರೇನು? ಅದನ್ನು ೧ ತಾಸು ಮುಂದೆ ಸರಿಸುವದರಿಂದ ಹಿಂದುಸ್ತಾನದ ಬೇರೆಬೇರೆ ಭಾಗಗಳ ಸ್ಥಾನಿಕ ಸೂರ್ಯೋದಯ ಸೂರ್ಯಾಸ್ತಗಳಿಗೆ ಸಂಬಂಧಿಸಿ ಯಾವ ತೊಂದರೆಗಳು ನಿಂಟಾಗುವವು? ಮುಂತಾದ ವಿಚಾರಗಳನ್ನು ಮತ್ತೊಮ್ಮೆ ಸವಿಸ್ತಾರವಾಗಿ ವಿವೇಚಿಸೋಣ.

ಹಿಂದುಸ್ತಾನ ಸರಕಾರದವರು ಹೀಗೆ ವೇಳೆಯನ್ನು ಒಂದು ತಾಸು ಮುಂದರಿಸುವದರಲ್ಲಿ ಹೆಚ್ಚಿನ ಗೂಢವೇನೂ ಇಲ್ಲ. ವಿದ್ಯುತ್ತಿನ ಬೆಳಕನ್ನು ಉಪಯೋಗಿಸುವ ದೊಡ್ಡ ದೊಡ್ಡ ನಗರಗಳಲ್ಲಿ ೧ ತಾಸು ಮುಂಚಿತವಾಗಿ ಕಚೇರಿಯ ಕೆಲಸಗಳನ್ನಾಗಲಿ ಗಿರಣಿ ಮುಂತಾದವುಗಳ ಕೆಲಸಗಳನ್ನಾಗಲೆ ಮುಗಿಸಿಬಿಡುವದರಿಂದ ಜನರು ಇನ್ನೂ ಬೆಳಕಿರುವಾಗಲೇ ತಮ್ಮ ಪೇಟೆಯ ಕೆಲಸಗಳನ್ನೂ ಆಟನೋಟಗಳು ಮುಂತಾದವುಗಳನ್ನೂ ಮುಗಿಸಿಕೊಂಡು ಬೇಗನೆ ಮನೆಗೆ ಹೋಗಿ ಊಟ-ಉಪಚಾರಗಳನ್ನು ಮುಗಿಸಿಕೊಂಡು 'ಬೇಗನೆ ಮಲಗಿ ಬೇಗನೆ ಏಳು'ವದಕ್ಕೆ ಅನುಕೂಲವಾಗುವದು. ಇದರಿಂದ ವಿದ್ಯುದ್ದೀಪಗಳ ವೆಚ್ಚವು ಕಡಿಮೆಯಾಗುವದು. ಇದರಂತೆ ಚಿಮಣಿ ಎಣ್ಣೆಯ ದೀಪಗಳನ್ನು ಉಪಯೋಗಿಸುವವರಿಗೂ ಕೂಡ ದೀಪದ ವೆಚ್ಚದಲ್ಲಿ ಉಳಿತಾಯವಾಗುವದು ಮೇಲಾಗಿ ಚಿಮಣಿ ಎಣ್ಣೆಯ ತುಟಾಗ್ರತೆಯ ಈ ಮಹಾಯುದ್ಧದ ದುಸ್ಥಾಳದಲ್ಲಿ ಆ ಎಣ್ಣೆಯ ಉಪಯೋಗವನ್ನು ಸಾಧ್ಯವಾದಷ್ಟು ಕಡಿಮೆಮಾಡುವದು ಅನಿವಾರ್ಯವಾಗಿದೆಯಷ್ಟೇ? ಇದು ಮೊದಲನೆಯ ಉದ್ದೇಶ. ಎರಡನೆಯದೆಂದರೆ ದಿನದ ಬೆಳಕುಳ್ಳ ಭಾಗವನ್ನು ಸಂಪೂರ್ಣವಾಗಿ— ಆದಷ್ಟು ಹೆಚ್ಚು ಪ್ರಮಾಣದಿಂದ— ಕೆಲಸಕ್ಕೆ ಉಪಯೋಗಿಸಿಕೊಳ್ಳಲಿಕ್ಕೆ ಇದರಿಂದ ಅನುಕೂಲವಾಗುವದು. ಬೆಳಗಿನ ಆರುಗಂಟೆಗೆ ಕೆಲಸಕ್ಕೆ ತೊಡಗಬೇಕೆಂಬ ನಿಯಮವುಳ್ಳ ಜನರು ಈಗ ಮೊದಲಿನ ೫ ಗಂಟೆಗೇ ಕೆಲಸಕ್ಕೆ ಎದ್ದು ನಿಲ್ಲಬೇಕಾಗುವದು ಇದರಿಂದ ಅವರು ಒಂದು ತಾಸು ಮುಂಚಿತವಾಗಿ ಕೆಲಸಕ್ಕೆ ಹತ್ತಿದಂತಾಗುವದು. ನಮ್ಮಲ್ಲಿ ಐದುಗಂಟೆಗೆ ಸೂರ್ಯೋದಯವಾಗದೆ ಇದ್ದರೂ ನಸು ಬೆಳಕಾಗಿರುವದಷ್ಟೇ?

ಒಟ್ಟಿನಮೇಲೆ ಗಡಿಯಾಳದ ವೇಳೆಯನ್ನು ಮುಂದರಿಸುವದರಲ್ಲಿ ದೀಪದ ವೆಚ್ಚದ ಉಳಿತಾಯ ಬೆಳಕುಳ್ಳ ವೇಳೆಯ ಆದಷ್ಟು ಹೆಚ್ಚಿನ ಭಾಗವನ್ನು ಕೆಲಸಕ್ಕೆ ಉಪಯೋಗಿಸಿಕೊಳ್ಳುವದು ಇವೆರಡೇ ಉದ್ದೇಶಗಳಿರುವವು. ಪ್ರತ್ಯಕ್ಷ ಯುದ್ಧ ಕಾರ್ಯದಲ್ಲಿ ತೊಡಗಿದ ಪ್ರದೇಶದಲ್ಲಿ ವಿಮಾನದಾಳಿಯ ನಿವಾರಣೆಯ ಕಾರ್ಯಗಳಿಗೂ ಕತ್ತಲೆಯ (Blackout) ನಿಯಮಗಳಿಗೆ ಒಳಗಾಗಿರುವ ಪ್ರದೇಶಗಳ ಕಾರ್ಯಗಳಿಗೂ ಇದರಿಂದ ತುಸುಮಟ್ಟಿಗೆ ಅನುಕೂಲವಾಗುವದೆಂದು ಹೇಳುವದೂ ಉಂಟು.

ದ. ಭಾ. ದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿರುವ

ಡಾ. ವಿ. ವಿ. ಕಾಮತ, ಬಿ. ಎ., ಎಸ್. ಟಿ. ಸಿ. ಡಿ. ಅವರು

ಅಗಸ್ಟ ತಿಂಗಳ ಸಂಚಿಕೆಯಲ್ಲಿ ಬರೆದಂತೆ ಡಾ. ವಿ. ವಿ. ಕಾಮತರವರು ನಮ್ಮ ಭಾಗದ ಸದ್ಯದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿರುವರಷ್ಟೇ? ನಮ್ಮ ಶಿಕ್ಷಕ ವರ್ಗಕ್ಕೆ ಆ ಮಹನೀಯರ ಪರಿಚಯಮಾಡಿಕೊಡುವದೇ ಈ ಚಿಕ್ಕ ಲೇಖನದ ಉದ್ದೇಶವು.

ಇವರು ೧೮೮೮ನೆಯ ಇಸ್ವಿಯ ಆಗಸ್ಟ ತಿಂಗಳ ಇಪ್ಪತ್ತೇಳನೆಯ ತಾರೀಖಿನ ದಿನ ಉತ್ತರ ಕನ್ನಡ ಜಿಲ್ಲೆಯೊಳಗಿನ ಕಾರವಾರ ತಾಲೂಕಿನ ಒಂದು ಚಿಕ್ಕ ಹಳ್ಳಿಯಲ್ಲಿ ಜನ್ಮಿಸಿದರು. ಅವರ ಹಿರಿಯರು ಆ ಊರಲ್ಲಿ ಒಳ್ಳೆಯ ಜಮೀನು ದಾರರೆಂದು ಹೆಸರಾಗಿದ್ದರು. ಒಕ್ಕಲಿಗರನ್ನು ಮಕ್ಕಳಂತೆ ನಡೆಯಿಸಿಕೊಳ್ಳಬೇಕೆಂಬ ಅಭಿಪ್ರಾಯದಿಂದಲೋ ಏನೋ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಕ್ಕಲಿಗರಿಗೆ "ಒಕ್ಕಲು ಮಕ್ಕಳು" ಎಂದು ಹೇಳುವ ಪರಿಪಾಠವಿದೆ. ಇದೇ ರೀತಿಯಾಗಿ ಕಾಮತ ವಿಠ್ಠಲರಾಯರು ತಮ್ಮ ಹೊಲಮಾಡುವ ರೈತರನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಡಾ|| ಕಾಮತರವರ ತಾಯಿಯವರು ಕಾರವಾರದಲ್ಲಿ ಒಳ್ಳೆಯ ವ್ಯಾಪಾರಸ್ಥರೆನ್ನಿಸಿಕೊಂಡ ತೇಲಂಗ ಮನೆತನದವರು.

ಬಾಲಕ ಕಾಮತ ವೆಂಕಟೇಶನು ತಮ್ಮ ಹಳ್ಳಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿಕೊಂಡ ಬಳಿಕ ಕಾರವಾರಕ್ಕೆ ಬಂದು ಅಲ್ಲಿಯ ಹಿಂದು ಸ್ಕೂಲಿನಲ್ಲಿ ಇಂಗ್ಲಿಷು ಅಭ್ಯಾಸಮಾಡಿ ೧೯೦೪ನೆಯ ಇಸ್ವಿಯಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಮೇಲ್ತರಗತಿಯಲ್ಲಿ ಪಾಸಾದನು. ಬಾಲ್ಯದಿಂದಲೂ ಇಹರಲ್ಲಿ ಪ್ರತಿಮಾತಿನಲ್ಲಿಯೂ ಕೆಲಸದಲ್ಲಿಯೂ ತರ್ಕ-ವಿತರ್ಕಮಾಡಿ ಯಾವದೊಂದು ನಿಷ್ಕರ್ಷಕ್ಕೆ ಮುಟ್ಟುವ ಪ್ರವೃತ್ತಿಯು ಕಂಡು ಬರುತ್ತಿತ್ತು. ಮ್ಯಾಟ್ರಿಕ್ಯುಲೇಶನ್ ಆದಬಳಿಕ ಇವರು ಮುಂಬಯಿಯೊಳಗಿನ ವಿಲ್‌ಸನ್ ಕಾಲೇಜವನ್ನು ಸೇರಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಕಾಲೇಜದಲ್ಲಿ ಓದುತ್ತಿದ್ದಾಗ ಇವರು ಚಾಣಾಕ್ಷ ವಿದ್ಯಾರ್ಥಿಗಳೆಂದು ಹೆಸರಾಗಿದ್ದರು. ಮತ್ತು ಮೇಲ್ತರಗತಿಯ ಯೋಗ್ಯತೆಗಾಗಿ ಇವರಿಗೆ ಕಾಲೇಜದ ಒಂದು ವಿದ್ಯಾರ್ಥಿವೇತನವು ದೊರೆಯುತ್ತಿತ್ತು. ಇವರು ಪದಾರ್ಥವಿಜ್ಞಾನ ಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳನ್ನು ಅರಿಸಿಕೊಂಡು ೧೯೦೯ನೆಯ ಇಸ್ವಿಯಲ್ಲಿ ಬಿ. ಎ. ಪರೀಕ್ಷೆಯಲ್ಲಿ ಪಾಸಾದರು.

ಆಗಿನ ಕಾಲದಲ್ಲಿ ಬಿ. ಎ. ಪರೀಕ್ಷೆಯಲ್ಲಿ ಪಾಸಾದವರಿಗೆ ತುಂಬ ಮಾನ್ಯತೆ ಯಿತ್ತು. ಮತ್ತು ಅಂಥವರಿಗೆ ಸರಕಾರದ ಎಲ್ಲ ಖಾತೆಗಳಲ್ಲಿ ಸುಲಭವಾಗಿ ನೌಕರಿಯು ದೊರೆಯುತ್ತಿತ್ತು. ಆಗ ರೆವಿನ್ಯೂ ಮೊದಲಾದ ಖಾತೆಗಳಲ್ಲಿ ಕೆಲಸ ಮಾಡುವವರಿಗಂತೂ ಜನರಲ್ಲಿ ಅತಿಶಯ ಮನ್ನಣೆಯಿತ್ತು. ಹೀಗಿದ್ದರೂ ಇವರು ಹೆಚ್ಚಿನ ಜನಾದರಣೆಯಾಗಲಿ ವೇತನದಲ್ಲಿ ಹೆಚ್ಚಿನ ಲಾಭವಾಗಲಿ ಇಲ್ಲದಿರುವ ಶಿಕ್ಷಣಖಾತೆಯಲ್ಲಿ ನೌಕರಿಯನ್ನು ಒಪ್ಪಿಕೊಂಡರು. ಇದರಿಂದ ಇವರಲ್ಲಿ ಶಿಕ್ಷಣ ವಿಷಯದಲ್ಲಿ ಎಷ್ಟು ಆಸ್ಥೆ ಆದರಗಳಿದ್ದುವೆಂಬುದು ಗೊತ್ತಾಗುವದು. ಇವರ ಸಹೋದರರಲ್ಲಿ ಒಬ್ಬರು ರೆವಿನ್ಯೂ ಖಾತೆಯಲ್ಲಿ ಮಾಮಲೇದಾರರಾಗಿದ್ದರು. ಇವರು ಮೊದಲು ಕಾರವಾರ ಹೈಸ್ಕೂಲಿನಲ್ಲಿ ನೌಕರಿಯನ್ನು ಪ್ರಾರಂಭಿಸಿದರು. ಮತ್ತು ೧೯೧೨ ನೆಯ ಇಸ್ವಿಯಲ್ಲಿ ಮಾಧ್ಯಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜಕ್ಕೆ ಹೋಗಿ ಮೊದಲನೆಯ ತರಗತಿಯ ಎಸ್. ಟಿ. ಸಿ. ಡಿ. ಪದವಿಯನ್ನು ಪಡೆದು ಬಂದರು. ಕಾರವಾರ (೨ ವರ್ಷ) ವಿಜಾಪುರ (೭ ವರ್ಷ) ಧಾರವಾಡ (೧೫ ವರ್ಷ) ಹೈಸ್ಕೂಲುಗಳಲ್ಲಿ ಒಟ್ಟು ೨೪ ವರ್ಷ ನೌಕರಿ ಮಾಡಿದ ತರುವಾಯ ಇವರು ಮಾಧ್ಯಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜದಲ್ಲಿ ಪ್ರೊಫೆಸರರಾಗಿ ನಿಯಮಿಸಲ್ಪಟ್ಟರು. ಈ ತರಗತಿಯಲ್ಲಿ ಇವರು ಮುಂಬಯಿ ಕಾಲೇಜದಲ್ಲಿ ಐದು ವರ್ಷ ಬೆಳಗಾಂವಿಯ ಕಾಲೇಜದಲ್ಲಿ ಮೂರು ವರ್ಷ ಹೀಗೆ ೮ ವರ್ಷ ಕೆಲಸ ಮಾಡಿ ಪಡೆದ ಅನುಭವದೊಡನೆ ಈಗ ನಮ್ಮ ಭಾಗದ ಎಜ್ಯುಕೇಶನಲ್ ಇನ್ ಸ್ಪೆಕ್ಟರರಾಗಿರುವರು.

ಹೊರಗೆ ಶಾಲಾಖಾತೆಯ ನೌಕರಿಯಲ್ಲಿ ಕೆಲಸಮಾಡುತ್ತಿದ್ದರೂ ಅವರ ಮನಃಪ್ರವೃತ್ತಿಯು ಕೇವಲ ನೌಕರಿಮಾಡಿ ಕೆಲವೊಂದು ವೇತನವನ್ನು ಪಡೆದು ಸಂಸಾರ ಸಾಗಿಸಿಕೊಂಡು ಹೋಗುವಷ್ಟರಿಂದಲೇ ತೃಪ್ತಿಹೊಂದುವಷ್ಟು ಸಂಕುಚಿತವಾಗಿರಲಿಲ್ಲ. ಹೈಸ್ಕೂಲಿನಲ್ಲಿ ಶಿಕ್ಷಕರಾಗಿರುವಾಗ ವಿದ್ಯಾರ್ಥಿಗಳಿಗೆ ಶಾಲೆಯ ಅಭ್ಯಾಸಪತ್ರಿಕೆಗೆ ಒಳಗಾದ ಹಲಕೆಲವು ವಿಷಯಗಳನ್ನು ಕಲಿಸಿದರೆ ತಮ್ಮ ಕೆಲಸ ವಾಯಿತೆಂದು ಇವರು ಎಂದೂ ಭಾವಿಸಿರಲಿಲ್ಲ. ವಿದ್ಯಾರ್ಥಿಗಳಲ್ಲಿ ಸ್ವಾತಂತ್ರ್ಯ ವೃತ್ತಿ, ಬಾಹ್ಯಜಗತ್ತಿನ ಜ್ಞಾನಾರ್ಜನೆ, ಪರೋಪಕಾರ ಮುಂತಾದ ಗುಣಗಳನ್ನು ಹುಟ್ಟಿಸಿ ಬೆಳೆಯಿಸುವಂಥ ಆಟನೋಟಗಳಲ್ಲಿ ಅವರನ್ನು ತೊಡಗಿಸುವದರಲ್ಲಿ ಇವರು ಸದಾ ನಿರತರಾಗಿರುತ್ತಿದ್ದರು. ಸ್ಕೌಟ ಶಿಕ್ಷಣದಂಥ ಅಭ್ಯಾಸಪತ್ರಿಕೆಯ ಹೊರಗಿನ, ವಿದ್ಯಾರ್ಥಿಗಳಿಗೆ ಮುಂದಿನ ಜೀವನದಲ್ಲಿ ಹೆಚ್ಚು ಪ್ರಯೋಜನಕಾರಿಯಾದ, ಕಾರ್ಯಕ್ರಮವು ಇವರಿಗೆ ಅತ್ಯಂತ ಪ್ರಿಯಕರವಾಗಿದ್ದಿತು. ಇವರು ೧೯೨೯–೩೦ ರಲ್ಲಿ ಇಂಗ್ಲಂಡದೊಳಗಿನ ಬರ್ಕನ್ ಹೆಡ್‌ದಲ್ಲಿ ನೆರೆದ ಜಗತ್ತಿನ

ಸ್ಕಾಟ ಜಾಂಬೂರಿಗೆ ಹೋಗಿದ್ದರು. ಅದೇ ಸಮಯದಲ್ಲಿ ಎಡಿನ್‌ಬರೋ ವಿಶ್ವವಿದ್ಯಾನಿಲಯಕ್ಕೆ ಸೇರಿ ಮೇಲ್ತರಗತಿಯ ಶೈಕ್ಷಣಿಕ ಪ್ರಶಸ್ತಿ ಪತ್ರಿಕೆ (Deploma in Education with distinction) ಯನ್ನು ಪಡೆದು ಬಂದರು.

ತರ್ಕ ವಿತರ್ಕಗಳನ್ನು ನಡೆಯಿಸಿ ಹೊಸ ಸಂಗತಿಗಳನ್ನು ಹುಡುಕುತ್ತಿರುವ ಸದಭ್ಯಾಸವು ಇವರ ಹುಟ್ಟುಗುಣವೆಂಬದನ್ನು ಹಿಂದೆ ಹೇಳಿದೆಯಷ್ಟೆ? ಇದಕ್ಕನು ಗುಣವಾಗಿ ಇವರು ತಮ್ಮ ನೌಕರಿಗೆ ಸಂಬಂಧಿಸಿದ ಕಾರ್ಯಕಲಾಪಗಳನ್ನು ಮೇಲಿನ ಅಧಿಕಾರಿಗಳಿಗೆ ತೃಪ್ತಿಕರವಾಗಿ ಮಾಡುವದಲ್ಲದೆ ತಮ್ಮದೇ ಆದ ಬೇರೊಂದು ಶೈಕ್ಷಣಿಕ ವಿಷಯವನ್ನು ಮುಂದಿಟ್ಟುಕೊಂಡು ಕೆಲಸಮಾಡಿ ಅದರಲ್ಲಿ ತುಂಬ ಯಶಸ್ಸುಪಡೆದಿರುವರು. ನಮ್ಮ ದೇಶದ ವಿದ್ಯಾರ್ಥಿಗಳ ಬುದ್ಧಿ ಮಾಪನದ ವಿಷಯದಲ್ಲಿ ಇವರು ಬಹುಕಾಲ ಪರಿಶ್ರಮವಹಿಸಿ ಕೆಲಸಮಾಡಿ ಕೆಲವು ನಿರ್ಣಯಗಳನ್ನು ಕಂಡುಹಿಡಿದಿರುವರು. ಹಿಂದೀ ವಿದ್ಯಾರ್ಥಿಗಳ ಬುದ್ಧಿ ಮಾಪನದ ಪ್ರಯೋಗಗಳನ್ನು ನಡೆಯಿಸಿ ಅದರ ಫಲಿತಾಂಶವಾಗಿ "ಹಿಂದೀ ವಿದ್ಯಾರ್ಥಿಗಳ ಬುದ್ಧಿ ಮಾಪನ" ಎಂಬ ವಿಷಯದ ಮೇಲೆ ಸವಿಸ್ತಾರವಾದ ಒಂದು ಗ್ರಂಥವನ್ನು ಕನ್ನಡದಲ್ಲಿ ಬರೆದರು. ಅದರ ಮರಾಠಿ ಭಾಷಾಂತರವೂ ಆಗಿದೆ. ಈ ಎರಡೂ ಪುಸ್ತಕಗಳು ೧೯೩೬-೩೭ ನೆಯ ಸಾಲಿನಲ್ಲಿ ಪ್ರಕಟವಾಗಿವೆ. ಇವನ್ನು ಓದುವದರಿಂದ ನಮ್ಮ ದೇಶದ ಚಿಕ್ಕ ಮಕ್ಕಳ ಬೌದ್ಧಿಕ ವಿಷಯದ ಹಲವು ಸಮಸ್ಯೆಗಳು ನಮ್ಮ ನಿದರ್ಶನಕ್ಕೆ ಬರುವವು. ಬುದ್ಧಿಮಾಪನದ ವಿಷಯಕ್ಕೆ ಸಂಬಂಧಿಸಿದ ಹೆಚ್ಚಿನ ಅಭ್ಯಾಸಕ್ಕಾಗಿ ೧೯೩೮-೩೯ ನೆಯ ಸಾಲಿನಲ್ಲಿ ಇವರು ಮತ್ತೊಮ್ಮೆ ಇಂಗ್ಲಂಡಕ್ಕೆ ಹೋಗಿ ಬಂದರು. ಈ ಸಾರೆ ಅವರಿಗೆ ಎಡಿನ್‌ಬರೋ ವಿಶ್ವವಿದ್ಯಾಲಯದವರು P. H. D. ಪದವಿಯನ್ನು ಅರ್ಪಿಸಿದರು. ಆಗ ಇವರು ಬರೆದ "Measuring Intelligence of Indian children" ಎಂಬ ಇಂಗ್ಲಿಷು ಪುಸ್ತಕವನ್ನು ಆಕ್ಸಫರ್ಡ ಯುನಿವರ್ಸಿಟಿ ಪ್ರೆಸ್ಸಿನವರು ಪ್ರಕಟಿಸಿದ್ದಾರೆ. British Journal of Educational Psychology, Teaching University Journal ಎಂಬ ಇಂಗ್ಲಿಷು ಪತ್ರಿಕೆಗಳಲ್ಲಿ ಇವರ ಹಲವು ಲೇಖನಗಳು ಪ್ರಕಟವಾಗಿವೆ. ಇದರಿಂದ ಇವರು ತಾವು ಕೈಕೊಂಡಿರುವ ಹಿಂದೀ ವಿದ್ಯಾರ್ಥಿಗಳ ಬುದ್ಧಿ ಮಾಪನ ಕಾರ್ಯದಲ್ಲಿ ಎಷ್ಟು ದಕ್ಷತೆಯಿಂದ ಕೆಲಸಮಾಡುತ್ತಿರುವರೆಂಬದೂ ಆ ವಿಷಯವನ್ನು ಎಷ್ಟು ಪರಿಶ್ರಮದಿಂದಲೂ ಕೂಲಂಕಷವಾಗಿಯೂ ಅಭ್ಯಾಸ ಮಾಡಿರುವರೆಂಬದೂ ವ್ಯಕ್ತವಾಗುವವು.

ಶಿಕ್ಷಣ ವಿಷಯದಲ್ಲಿಯೂ ಅದರ ಅನುಷಂಗಿಕ ವಿಷಯವಾದ ಮಾನಸ ಶಾಸ್ತ್ರದಲ್ಲಿಯೂ ಇಷ್ಟೊಂದು ಆಸ್ಥೆಯಿಂದ ಕೆಲಸ ಮಾಡಿದ ಈ ಮಹನೀಯರಿಗೆ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಂಥ ಉಚ್ಚ ಅಧಿಕಾರದ ಸ್ಥಳವು ಎಂದೋ ದೊರೆಯಬೇಕಾಗಿತ್ತೆಂಬದು ಸಹಜವೇ ಸರಿ. ಶಿಕ್ಷಣ ಕ್ಷೇತ್ರದಲ್ಲಿ ನಿಜವಾದ ಸುಧಾರಣೆಯಾಗಬೇಕಾದರೆ, ರೋಗನಿವಾರಣೆಗೆ ಅದರ ಮೂಲ ಕಾರಣವನ್ನರಿತು ನಿದಾನ ಮಾಡುವಂಥ ಡಾಕ್ಟರರು ಆವಶ್ಯಕವಾಗಿರುವಂತೆ, ವಿದ್ಯಾರ್ಥಿಗಳ ಮನಃ ಶಕ್ತಿಯನ್ನು ಪರೀಕ್ಷಿಸಿ ಅವರ ಶಿಕ್ಷಣದ ಯೋಜನೆಯನ್ನು ಕೈಕೊಂಡು ಪ್ರಚಾರ ದಲ್ಲಿ ತರಲು ಸಮರ್ಥರಾದ ಡಾಕ್ಟರ ಕಾಮತರಂಥ ವ್ಯಕ್ತಿಗಳು ಉಚ್ಚ ಅಧಿಕಾರಸ್ಥಾನದಲ್ಲಿ ಇರುವದು ಅತ್ಯಂತ ಆವಶ್ಯಕವೆಂಬ ಮಾತನ್ನು ನಾವು ಇಲ್ಲಿ ಹೇಳದಿರಲಾರೆವು.

ಡಾ. ಕಾಮತರವರು ಅತ್ಯಂತ ಶಾಂತಸ್ವಭಾವದವರು. ಅವರು ಶಿಕ್ಷಕರಿರುವಾಗಲೂ ಧಾರವಾಡ ಹೈಸ್ಕೂಲಿನ ವಿದ್ಯಾರ್ಥಿಗಳ ವಸತಿಗೃಹದ ಮೇಲ್ವಿಚಾರಕರಾಗಿರುವಾಗಲೂ ವಿದ್ಯಾರ್ಥಿಗಳೊಡನೆ ಎಷ್ಟು ಸಮಭಾವದಿಂದ ಬೆರೆದು ಅವರ ಲೋಪದೋಷಗಳನ್ನು ಅರಿತುಕೊಂಡು ಕೆಲಸ ಮಾಡುತ್ತಿದ್ದರೆಂಬದು ನಾವೆಲ್ಲರೂ ಕಂಡು ಕೇಳಿದ ಮಾತಾಗಿದೆ. ಮುಂಬಯಿಯ ಮತ್ತು ಬೆಳಗಾಂವಿಯ ಮಾಧ್ಯಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜಗಳಲ್ಲಿಯೂ ಇವರು ತಮ್ಮ ವಿದ್ಯಾರ್ಥಿಗಳಿಗೆ ತುಂಬ ಪ್ರಿಯರಾಗಿದ್ದರು. ಇಂಥ ಸಮತೋಲನ ಮನೋವೃತ್ತಿಯ ಮಹಾನುಭಾವರು ತಮಗೆ ಈಗ ದೊರೆದಿರುವ ಉಚ್ಚ ಅಧಿಕಾರದ ಸ್ಥಾನದಲ್ಲಿಯೂ ಕೂಡ ತುಂಬ ಯಶಸ್ಸು ಪಡೆಯುವರೆಂಬದರಲ್ಲಿ ಸಂದೇಹವಿಲ್ಲ.

N. V. K.

ಮುಖ್ಯಾಧ್ಯಾಪಕರೂ ಅವರ ಕಾರ್ಯಕಲಾಪಗಳೂ

ಇಪ್ಪತ್ತು ವರುಷಗಳ ಹಿಂದೆ ಉತ್ತಮ ಮುಖ್ಯಾಧ್ಯಾಪಕ (Head Master) ನ ಗುಣವಿಶೇಷಗಳನ್ನು ಈ ಮೂರು ಮಾತುಗಳಲ್ಲಿ ಹೇಳಬಹುದಾಗಿತ್ತು. ೧. ಅವನು ಒಳ್ಳೆಯ ಶಿಕ್ಷಕನಾಗಿರಬೇಕು; ೨. ಮೇಲ್ತರಗತಿಯ ಮಾರ್ಗದರ್ಶಿಯಾಗಿರಬೇಕು; ೩. ಉತ್ತಮ ಮೇಲ್ವಿಚಾರಕನಾಗಿರಬೇಕು;

ಿದ್ಯಾನಪತ್ರಿಕೆಗೆ ಸಂಬಂಧಿಸುವ ಹಲಕೆಲವು ವಿಷಯಗಳನ್ನು ಜೆನ್ನಾಗಿ ಕಲಿಸಿ ಿದ್ಯಾರ್ಥಿಗಳು ಕೆಲವೊಂದು ತರಗತಿಯ ಪರೀಕ್ಷೆಯಲ್ಲಿ ಉತ್ತಮರೀತಿಯಿಂದ ಾಸಾಗುವಂತೆ ನೋಡಿಕೊಳ್ಳುವದಿಷ್ಟೇ ಶಾಲೆಗಳ ಧ್ಯೇಯವೆಂದು ತಿಳಿಯಲ್ಪಡು ್ದಾಗ ಒಳ್ಳೆಯ ಮುಖ್ಯಾಧ್ಯಾಪಕನ ಗುಣಗಳನ್ನು ಇಷ್ಟೇ ಮಾತುಗಳಲ್ಲಿ ೀಳುವದು ಸಮಂಜಸವಾಗಬಹುದಾಗಿತ್ತು. ಆದರೆ ಇತ್ತೀಚೆಗೆ ಶಾಲೆಗಳ ಾರ್ಯಕ್ಷೇತ್ರವು ತುಂಬ ವಿಸ್ತರಣಹೊಂದಿದೆ. ಶಿಕ್ಷಣಶಾಸ್ತ್ರದಲ್ಲಿ ಹೊಸ ಹೊಸ ಶೋಧಗಳಾಗಿವೆ. ಸಮಾಜದ ಜನಜೀವನವೂ ಮಾರ್ಪಟ್ಟು ಅದರ ೀಡಿಕೆಗಳು ಹೆಚ್ಚಿವೆ. ಇದರಿಂದ ಶಾಲೆಗಳಿಗೆ ಬರುವ ವಿದ್ಯಾರ್ಥಿಗಳ ಶಿಕ್ಷಣದ ುಶಯೇ ಬದಲಾಗಿಹೋಗಿದೆ. ಈ ದೃಷ್ಟಿಯಿಂದ ವಿಚಾರಮಾಡಿದರೆ ಮುಖ್ಯಾ ಾಧ್ಯಾಪಕರ ಬುದ್ಧಿಮತ್ತೆ ಕಾರ್ಯಕುಶಲತೆ ಮತ್ತು ಹೊಣೆಗಾರಿಕೆಗಳು ಇವುಗಳ ಸುಟ್ಟಗಳು, ಮಿತಿಮೀರಿ ವಿಸ್ತಾರಹೊಂದಿದ ಕಾರ್ಯಕ್ಷೇತ್ರವನ್ನೊಳಗೊಂಡ ಾಲಾಸಂಸ್ಥೆಯ ಚಾಲಕನಿಗೆ ಅನುಗುಣವಾದ ರೀತಿಯಲ್ಲಿ ಹೆಚ್ಚಿನ ತರಗತಿಗೆ ುರಿಹೋಗಿರುವವು. ಈಗಿನ ಶಾಲೆಗಳ ಮುಖ್ಯಾಧ್ಯಾಪಕರು ತಮ್ಮ ಶಾಲೆಗೆ ುರುವ ಬಾಲಕ-ಬಾಲಿಕೆಯರ ವೈಯಕ್ತಿಕ–ಶಾರೀರಿಕ ಮಾನಸಿಕ ಮತ್ತು ೈತಿಕ–ವಿಕಾಸಗಳಿಗೆ ಹೊಣೆಗಾರರೆಂದು ತಿಳಿಯಲ್ಪಡುವರು. ಆ ಬಾಲಬಾಲಿಕೆ ುರು ಬೇರೆ ಬೇರೆ ಜೀವನಕ್ರಮದವರೂ ಯೋಗ್ಯತೆಯವರೂ ಇರುವರು. ಅವರ ುದ್ಧಿಶಕ್ತಿಯೂ ಅಭಿರುಚಿಯೂ ಪೂರ್ವಸಂಸ್ಕಾರ ಆನುವಂಶಿಕಗುಣಾವಗುಣ ಗಳೂ ಶೀಲಸ್ವಭಾವಗಳೂ ಭಿನ್ನಭಿನ್ನವಾಗಿರುವವು. ಅವರ ಶಾರೀರಿಕಶಕ್ತಿ ುರೋಗ್ಯ ಅಭ್ಯಾಸಶಕ್ತಿ ಕಲಿಯುವದರಲ್ಲಿ ಆಸಕ್ತಿ ಇವುಗಳಲ್ಲಿಯೂ ತಾರತಮ್ಯ ವಿರುವದು. ಇಂಥ ನೂರೊಂದು ಬಗೆಯ ನೂರೊಂದು ವಿದ್ಯಾರ್ಥಿಗಳ ಸಂಸ್ಕಾರದ ಹೊಣೆಯು ಶಾಲೆಗೆ ಸೇರುವದು. ಇಂಥ ಬಹು ವಿಶಾಲವಾದ ಕಾರ್ಯಕ್ಷೇತ್ರವುಳ್ಳ ಸಂಸ್ಥೆಯ ಚಾಲಕನಾದ ಮುಖ್ಯಾಧ್ಯಾಪಕನ ಯೋಗ್ಯ ತೆಯೂ ಕಾರ್ಯಕಲಾಪಗಳೂ ಆ ಕಾರ್ಯಕ್ಷೇತ್ರಕ್ಕೆ ಅನುಗುಣವಾಗಿರಬೀ ಕೆಂಬುದನ್ನು ಸ್ವಲ್ಪದರಲ್ಲಿ ವಿವೇಚಿಸಲು ಯತ್ನಿಸುವದೇ ಈ ಲೇಖನದ ಧ್ಯೇಯವು.

ಹೊಣೆಗಾರಿಕೆ— ಆಧುನಿಕ ಶಾಲೆಗಳ ಮುಖ್ಯಾಧ್ಯಾಪಕನು ಹಿಂದಿನಂತೆ ಒಂದು ಸಂಸ್ಥೆಯ ಆಧ್ಯತೆಯುಳ್ಳ ಅಧಿಕಾರಸ್ಥಾನದಲ್ಲಿ ವಿರಾಜಿಸುವ ವ್ಯಕ್ತಿಯಲ್ಲ. ಅವನ ಸ್ಥಾನವು ಹೆಚ್ಚು ಹೊಣೆಗಾರಿಕೆಯುಳ್ಳದ್ದಿರುವದು. ಮತ್ತು ಅವನು ಹೆಚ್ಚು ವಿಶಾಲವಾದ ಕಾರ್ಯಕ್ಷೇತ್ರದಲ್ಲಿ ಕೆಲಸಮಾಡುವ ಯೋಗ್ಯತೆಯುಳ್ಳವ ನಿರಬೇಕಾಗುವದು. ಒಂದು ವರ್ಗದ ಶಿಕ್ಷಕನು ತನ್ನ ವರ್ಗದಲ್ಲಿರುವ

೩೦-೪೦ ವಿದ್ಯಾರ್ಥಿಗಳ ಬೇರೆ ಬೇರೆ ವಿಷಯಗಳ ಅಭ್ಯಾಸವನ್ನು ನೋಡಿಕೊಂಡ ತಮ್ಮ ವೈಯಕ್ತಿಕತೆಯನ್ನು ಅವರ ಮೇಲೆ ಅವರವರಿಗೆ ಅನುಗುಣವಾದ ಮತ್ತು ಪರಿಣಾಮಕಾರಿಯಾದ ರೀತಿಯಲ್ಲಿ ಒಡಮೂಡಿಸಿ ಅವರು ತಮ್ಮ ಸಮಾಜ ಜೀವನಕ್ಕೆ ಅರ್ಹರಾಗುವಂತೆಯೂ ಜಗತ್ತಿನ ಉತ್ಪಾದನಕಾರ್ಯದಲ್ಲಿ ತಮ್ಮ ಭಾಗವನ್ನು ವಹಿಸಲು ತಕ್ಕವರಾಗುವಂತೆಯೂ ಮಾಡಬೇಕಾಗುವದು. ಆದ ಮುಖ್ಯಾಧ್ಯಾಪಕನು ಇಡಿಯ ಶಾಲೆಯೊಳಗಿನ ಎಲ್ಲ ವಿದ್ಯಾರ್ಥಿಗಳ ಈ ಬಗೆಯ ಪರಿಪೂರ್ಣವಿಕಾಸ ಸರ್ವತೋಮುಖವಾದ ಉತ್ಕರ್ಷಗಳಿಗೆ ಹೊಣೆಗಾರ ನಾಗಿರುವನು. ಅವನು ಶಾಲೆಯ ವ್ಯವಸ್ಥಾಪಕನೂ ಆಡಳತೆಗಾರನೂ ಆಗಿರುವ ನಲ್ಲದೆ ಶಾಲೆಯ ಶಿಸ್ತನ್ನು ಕಾದುಕೊಳ್ಳುವ ಹೆಚ್ಚಿನ ಹೊಣೆಗಾರಿಕೆಯೂ ಇವನಿಗೇ ಸೇರುವದು.

ಮುಖ್ಯಾಧ್ಯಾಪಕನು ತನ್ನ ಶಿಕ್ಷಕವರ್ಗವನ್ನು ನೋಡಿಕೊಳ್ಳಬೇಕಾಗುವದು ಮತ್ತು ಇಡಿಯ ಶಾಲೆಯ ವಿದ್ಯಾರ್ಥಿಗಳ ಸಂಬಂಧದ ಕರ್ತವ್ಯವನ್ನು ಮಾಡ ಬೇಕಾಗುವದು. ಈ ಸಂದರ್ಭದಲ್ಲಿ ಆ ಬಾಲಬಾಲಿಕೆಯರ ಪಾಲಕರೊಡನೆಯೂ ತಕ್ಕ ಸಂಬಂಧವನ್ನಿಟ್ಟುಕೊಳ್ಳದೆ ಸಾಗದು. ಮೇಲಾಗಿ ಇಡಿಯ ಶಾಲೆಯ ಆಡಳತೆ ಶಿಸ್ತುಗಳಿಗೂ ಹೊಣೆಗಾರನಾಗಿದ್ದು ಮೇಲ್ವಿಚಾರಣೆಯ ಅಧಿಕಾರಿಗಳಿಗೂ ಸಮಾಧಾನಕರವಾಗುವಂತೆ ಕೆಲಸ ಮಾಡದೆ ಗತ್ಯಂತರವಿರುವದಿಲ್ಲ. ಇಷ್ಟೊಂದು ಬಹುಮುಖವಾದ ಹೊಣೆಗಾರಿಕೆಯ ಸ್ಥಾನದಲ್ಲಿರುವ ಮುಖ್ಯಾಧ್ಯಾಪಕನು ಅವರೆಲ್ಲರಿಗೂ ಸಮಾಧಾನಕರವಾದ ರೀತಿಯಿಂದ ಕೆಲಸಮಾಡಿ ಯಶಸ್ಸುಪಡೆಯ ಬೇಕಾದರೆ ಅವನು ಉಚ್ಚತರದ ಆಳಿಕೆಯ ಸಾಮರ್ಥ್ಯವುಳ್ಳವನೂ ಮೇಲ್ತರದ ಶಿಕ್ಷಣವನ್ನು ಹೊಂದಿದ ಬುದ್ಧಿಶಕ್ತಿಯುಳ್ಳವನೂ ಶಿಕ್ಷಣಕಲಾಭಿಜ್ಞನೂ ಇವನ್ನೆಲ್ಲ ನಿರ್ವಿಘ್ನದಿಂದ ನಿರ್ವಹಿಸಲು ತಕ್ಕದ್ದಾದ ಶಾರೀರಕ ಸಾಮರ್ಥ್ಯ ಆರೋಗ್ಯಗಳುಳ್ಳವನೂ ಆಗಿರಬೇಕೆಂದು ಹೇಳಿದರೆ ಅರಿದೆನಿಸದು. ಮುಖ್ಯಾ ಧ್ಯಾಪಕನು ತನ್ನ ಕೈಕೆಳಗಿನವರನ್ನು ಒಳ್ಳೆಯ ರೀತಿಯಿಂದ ನಡೆಯಿಸಿಕೊಂಡು ಅವರ ಪ್ರೀತಿಯನ್ನು ಸಂಪಾದಿಸಬೇಕಾಗುವದು. ವಿದ್ಯಾರ್ಥಿಗಳನ್ನು ತನ್ನ ಮಕ್ಕಳಂತೆ ಮಮತೆಯಿಂದ ನೋಡುವ ಸಹಾನುಭೂತಿಯುಳ್ಳವನಾಗಿರುವ ದಲ್ಲದೆ ಉತ್ತಮ ರೀತಿಯಿಂದ ಕಲಿಸಬಲ್ಲ ಶಿಕ್ಷಣ ಕಲಾಭಿಜ್ಞನಾಗಿರಬೇಕು. ಮತ್ತು ಪಾಲಕರ ಮತ್ತು ಮೇಲಣ ಅಧಿಕಾರಿಗಳ ಸಂಗಡ ಪ್ರಸಂಗಾನುರೋಧ ದಿಂದ ನಡೆದುಕೊಂಡು ಅವರೆಲ್ಲರ ಪ್ರೀತಿ ಸಹಾಯ ಸಹಾನುಭೂತಿಗಳನ್ನು ದೊರಕಿಸಿಕೊಳ್ಳುವ ತಂತ್ರಗಾರನಾಗಿರಬೇಕು.

(ಮುಂದೆಸಾಗುವದು)

ಜೀವಸತ್ವಗಳು (Vitamins)

ಅನುವಾದಕ:— ಶ್ರೀ. ಗು. ಬಾ. ನಾಡಗೌಡ.

ಜೀವಸತ್ವಗಳೆಂದರೇನು? ಅವು ಮಾನವ ಜೀವನಕ್ಕೆ ಹೇಗೆ ಆವಶ್ಯಕವಾಗಿವೆ? ಇವು ಮಹತ್ವದ ಪ್ರಶ್ನೆಗಳು. ನಮ್ಮ ಆಹಾರದಲ್ಲಿರಬೇಕಾದ ಜೀವಸತ್ವಗಳ ಪ್ರಮಾಣವನ್ನು ಅರಿತುಕೊಳ್ಳುವದರಿಂದ ಮಾನವ ಕುಲದ ಅವನತಿಯನ್ನು ತಡೆಯಬಹುದು; ಮಾನವ ಶರೀರದ ದೋಷಗಳನ್ನು ಕಳೆಯಲು ಸಾಧ್ಯವಾಗುವುದು.

ನಾವು ಜೀವಸತ್ವವೆಂಬ ಹೆಸರನ್ನು ಕೇಳಹತ್ತಿ ಎಷ್ಟೋ ವರ್ಷಗಳಾದವು. ಆದರೂ ಸಾಮಾನ್ಯ ಜನರು ಅದರ ಅರ್ಥವನ್ನು ತಿಳಿದುಕೊಳ್ಳುವದು ಕಠಿಣವಾಗಿದೆ. ಆದ್ದರಿಂದ ಆಧುನಿಕ ವೈದ್ಯಶಾಸ್ತ್ರವು ವಿವೇಚಿಸುವ ಜೀವಸತ್ವದ ವಿಷಯಕ್ಕೆ ಕೆಲವು ಮಾತುಗಳನ್ನು ವಿವರಿಸುವದೇ ಈ ಲೇಖನದ ಉದ್ದೇಶವಾಗಿದೆ. ನಾವು ಪ್ರತಿನಿತ್ಯ ಸೇವಿಸುವ ಆಹಾರದಲ್ಲಿ ಯಾವುವಾದರೊಂದು ಜೀವಸತ್ವದ ಕೊರತೆಯಾಗಿದ್ದಲ್ಲಿ ಮತ್ತು ಆ ಕೊರತೆಯು ಬೇರೊಂದು ಉಪಾಯದಿಂದ ಪೂರೈಸಲ್ಪಡದಿದ್ದರೆ, ಅದರ ಪರಿಣಾಮವು ಭಯಂಕರವಾಗುವದು.

ನಾವು 'ಅ' ಎಂಬ ಜೀವಸತ್ವವನ್ನು ಸೇವಿಸದಿದ್ದರೆ ನಮ್ಮ ಶರೀರವು ಕೆಲವೊಂದು ನಿರ್ದಿಷ್ಟರೀತಿಯಿಂದ ಕಷ್ಟಪಡಹತ್ತುವದು. ನಾವು ಅದನ್ನು ದುರ್ಲಕ್ಷಿಸಿದರೆ, ನಮಗೆ ಭಯಂಕರವಾದ ರೋಗವಾಗಬಹುದು. ಮತ್ತು ಮರಣವೂ ಒದಗಬಹುದು. ಆದ್ದರಿಂದ ನಮ್ಮ ದೇಹವು ಸರಿಯಾಗಿ ಬೆಳೆಯಲು ಬೇಕಾಗುವ ಜೀವಸತ್ವಗಳು ಯಾವ ಆಹಾರದಲ್ಲಿ ಎಷ್ಟು ಇವೆಯೆಂಬದನ್ನು ಅರಿತಿರಬೇಕು. ಜೀವಸತ್ವಗಳ ವಿಷಯವಾಗಿ ಹೇಳುವಾಗ 'ಅ' ಕ್ಕಿಂತ 'ಬ' ನ್ನು ಮೊದಲಿಗೆ ತೆಗೆದುಕೊಳ್ಳುವೆನು; ಯಾಕಂದರೆ, 'ಬ' ವೇ ಮೊಟ್ಟ ಮೊದಲು ಶೋಧಿಸಲ್ಪಟ್ಟಿತು.

ಆಹಾರದಲ್ಲಿ 'ಬ' ಜೀವಸತ್ವವಿಲ್ಲದ್ದರಿಂದ ಎಷ್ಟೋ ರೋಗಗಳೂ ಮರಣಗಳೂ ಸಂಭವಿಸಿವೆ. 'ಬ' ದ ಅಭಾವದ ಪರಿಣಾಮವು ಈಗ ೫೦ ವರ್ಷಗಳ ಹಿಂದೆ ಜಪಾನ-ಚೀನಗಳಲ್ಲಾದ 'ಬೆರಿ ಬೆರಿ' ಎಂಬ ಸಾಂಸರ್ಗಿಕರೋಗದ ರೂಪದಿಂದ ಜನರ ಕಣ್ಣೆದುರಿಗೆ ಬಂದಿತು. ಒಂದು ಕಾಲದಲ್ಲಿ ಬೆರಿ ಬೆರಿಯು ಜಪಾನದ ಭೂ-ಜಲಸೈನ್ಯದ ಅರ್ಧಭಾಗವನ್ನು ಆವರಿಸಿಕೊಂಡು ಲಕ್ಷಾನುಲಕ್ಷ ಜನರು ಮರಣಹೊಂದಹತ್ತಿದರು. ಜಗತ್ತಿನ ಎಲ್ಲ ಭಾಗದ ವಿಜ್ಞಾನಿಗಳು ಆ ರೋಗದ ಅಭ್ಯಾಸಕ್ಕಾಗಿ ಜಪಾನ-ಪೂರ್ವಚೀನಗಳಿಗೆ ಹೊರಟರು. ಕೊನೆಗೆ ಹಲವು ಪ್ರಯೋಗಾನುಭವಗಳಿಂದ ಗಿರಣಿಯ ಅಕ್ಕಿಯನ್ನು (Polished

Rice) ತಿನ್ನುತ್ತಿರುವ ಪಾರಿವಾಳಗಳಿಗೂ ಈ ರೋಗವು ಬರುವದೆಂದೂ ಭತ್ತ ಹೊಟ್ಟು ತೌಡುಗಳನ್ನು ತಿನ್ನಿಸುವದರಿಂದ ಆ ರೋಗದ ನಿವಾರಣೆಯಾಗು ದೆಂದೂ ಗೊತ್ತಾಯಿತು. ರೋಗಬಂದಾಗ ಅವುಗಳಿಗೆ ಕೈಯಿಂದ ಕುಟ್ಟಿ ಅಕ್ಕಿಯನ್ನು (Brown Rice) ತಿನ್ನಿಸುವದರಿಂದ ಅವು ಗುಣಹೊಂದುತ್ತ ವೆಂದೂ ತಿಳಿಯಿತು. ಇದರಿಂದ ಬೆರಿ ಬೆರಿಯಾಗಲು ಗಿರಣಿಗಳಲ್ಲಿ ತಯಾರಾ ಬಿಳಿಯ ಅಕ್ಕಿಯೇ ಕಾರಣವೆಂದು ತಿಳಿಯಿತು.

ಇದನ್ನು ಅನೇಕರು ವಿರೋಧಿಸಿದರು. 'ಅಕ್ಕಿಯು ಸಾವಿರಾರು ವಷ ಗಳಿಂದ ಪೌರ್ವಾತ್ಯರ ಮುಖ್ಯಾಹಾರವಾಗಿದೆ. ಅಂದಮೇಲೆ ಅದು ಮೊನೆ ಮೊನ್ನೆ ಕಂಡುಬಂದ ಈ ಹೊಸ ರೋಗಕ್ಕೆ ಹೇಗೆ ಕಾರಣವಾಗುವದು?' ಎಂದ ಅವರು ಪ್ರತಿಪಾದಿಸಿದರು. ಆಗ ಇತ್ತಿತ್ತಲಾಗಿ ಆ ಭಾಗದ ಜನರು ಸೇವಿಸುವ ಅಕ್ಕಿ ಯನ್ನು ತಯಾರಿಸುವ ರೀತಿಯನ್ನು ಪರ್ಯಾಲೋಚಿಸಬೇಕಾಯಿತು. ಮೊದಲು ಕೈಯಿಂದ ಕುಟ್ಟಿದ ಅಕ್ಕಿಯನ್ನು ತಿನ್ನುತ್ತಿದ್ದವರು ಸಾಂಕ್ರಾಮಿಕ ರೋಗ ಕಾಲದಲ್ಲಿ ಗಿರಣಿಯಲ್ಲಾದ ಬಿಳಿಯಕ್ಕಿಯನ್ನೇ ತಿನ್ನುತ್ತಿದ್ದುದು ಗೊತ್ತಾಯಿತು ಬೆರಿ ಬೆರಿ ರೋಗವು ಹಬ್ಬಿದ ಭಾಗಗಳ ಜನರು ಬಿಳಿಯಕ್ಕಿಯನ್ನು ಬಿಟ್ಟು ಕೈಯಕ್ಕಿಯನ್ನು ಪಯೋಗಿಸುವದರಿಂದ ಈ ರೋಗದ ನಿವಾರಣೆಯಾಯಿತು ಈಗ ಈ ರೋಗಿಗಳ ಮಾನವು ಬಹು ಕಡಿಮೆಯಾಗಿದೆ.

ಪೂರ್ವದೇಶಗಳಲ್ಲಿ ಅಕ್ಕಿಯೇ ಮುಖ್ಯಾಹಾರವಾಗಿದ್ದ ದೇಶಗಳಲ್ಲಿ ಮೆರಗಕ್ಕಿ (ಬಿಳಿಯಕ್ಕಿ) ಯ ಉಪಯೋಗವನ್ನು ಪ್ರತಿಬಂಧಿಸಲು ಕಾಯದ ಗಳನ್ನು ಮಾಡಿದ್ದಾರೆ. 'ಬ' ಜೀವಸತ್ವವು ಅಕ್ಕಿಮೇಲಿನ ತೌಡಿನ ಒಳಭಾಗದ ಹೊದಿಕೆಯಲ್ಲಿರುವದು. ಗಿರಣಿಗಳಲ್ಲಿ ಬತ್ತವನ್ನು ಹಾಕಿದಾಗ ಈ ಭಾಗವು ಸಂಪೂರ್ಣ ತೌಡಿನಲ್ಲಿ ಹೋಗಿಬಿಡುವದರಿಂದ ಗಿರಣಿಯ ಅಕ್ಕಿಯಲ್ಲಿ 'ಬ' ಜೀವಸತ್ವವು ಇಲ್ಲದಂತಾಗುವದು.

ಬೆರಿ ಬೆರಿಯು ಮೊದಲು ಮನುಷ್ಯನ ನರಮಂಡಲದ ಮೇಲೆ ಪರಿಣಾಮ ಮಾಡುವ ಬೇನೆಯಾಗಿದೆ. ಅದು ಮೊದಲು ನ್ಯುರಿಟಿಸ್ ಎಂಬ ಬೇನೆಯನ್ನುಂಟು ಮಾಡುವದು. ಆಮೇಲೆ ಕೆಲದಿನಗಳಲ್ಲಿ ಕೆಲವು ಸ್ನಾಯುಗಳ ಬಂಧನಗಳಲ್ಲಿ ಪಾರ್ಶ್ವವಾಯುವನ್ನು ಹುಟ್ಟಿಸುವದು. ಈ ಪಾರ್ಶ್ವವಾಯುರೋಗವು ಹೆಚ್ಚಾಗುತ್ತ ಹೋಗಿ ಕೊನೆಗೆ ಮನುಷ್ಯನು ಸಾಯುತ್ತಾನೆ.

ಕೆಲವೊಂದು ಆಹಾರದ ಅಭಾವದಿಂದ ಒಂದು ರೋಗೋತ್ಪತ್ತಿಯಾಗುತ್ತ ದೆಂಬ ವಿಚಾರದಿಂದ, ಬೇರೆ ಬೇರೆ ಆಹಾರಗಳ ಕೊರತೆಯಿಂದ ಬೇರೆ ರೋಗಗಳು ಆಗಬಹುದೇ? ಎಂಬ ಕಲ್ಪನೆಯೂ ಬಂದಿತು. ಕೆಲವು ದಿನಗಳ ಮೇಲೆ 'ಪಾಲೆಗ್ರಾ'

ರೋಗವೂ 'ಬ' ಜೀವಸತ್ವದ ಅಭಾವದಿಂದಲೇ ಆಗುವದೆಂದು ಗೊತ್ತಾಯಿತು. ನರಮಂಡಲ ಮಿದುಳುಗಳ ಮೇಲೆ ಕೆಟ್ಟ ಪರಿಣಾಮವನ್ನು ಮಾಡುವ 'ಪಾಲೆಗ್ರಾ' ರೋಗದ ಮುಖ್ಯ ಬಾಹ್ಯಲಕ್ಷಣಗಳಾವವೆಂದರೆ, ತೊಗಲು ಕೆಂಪಾಗೋಣ, ಜೀರ್ಣಾಂಗಗಳ ತೊಂದರೆ ಮತ್ತು ತರತರದ ಮಾನಸಿಕ ತೊಂದರೆಗಳು. ಸ್ಪೇನ-ಇಟಲಿ-ಸಂಯುಕ್ತ ಸಂಸ್ಥಾನಗಳ ದಕ್ಷಿಣ ಭಾಗಗಳಲ್ಲಿ ಈ ರೋಗವು ಹೆಚ್ಚಾಗಿದೆ. 'ಪಾಲೆಗ್ರಾ' ವು ಅಪಥ್ಯದಿಂದ ಆಗುವದೆಂದೂ ಪಥ್ಯದಿಂದ ನಿವಾರಣೆಯಾಗುವದೆಂದೂ ಗೊತ್ತಾಗಿದೆ.

'ಬ' ಜೀವಸತ್ವವು ಅನೇಕ ಮೂಲ ವಸ್ತುಗಳನ್ನೊಳಗೊಂಡಿದೆ. ಆದರೆ ತಪ್ಪು ಗ್ರಹಿಕೆಯನ್ನು ದೂರೀಕರಿಸಲು ಅದು ಕೆಳಗಿನ ಗುಣಗಳುಳ್ಳದ್ದಾಗಿದೆಯೆಂದು ವರ್ಣಿಸಬಹುದು: ಪಾಲೆಗ್ರಾದ ನಿರೋಧ, ಬೆಳೆವಣಿಗೆಯನ್ನು ಹೆಚ್ಚಿಸುವದು, ಮತ್ತು ಸ್ನಾಯುಗಳ ಪೋಷಣೆ, ಇವು 'ಬ' ಜೀವನಸತ್ವದ ಮುಖ್ಯ ಕಾರ್ಯಗಳು. 'ಬ' ಜೀವಸತ್ವಗಳುಳ್ಳ ಪದಾರ್ಥಗಳನ್ನು ಸೇವಿಸದಿರುವದರಿಂದ ಅದರ ಅಭಾವದಿಂದಾಗುವ ದುಷ್ಪರಿಣಾಮವು ಅತಿ ತೀವ್ರ ತಿಳಿಯುತ್ತದೆ. ಇದರಿಂದ ನಮ್ಮ ಶರೀರವು ಈ ಜೀವಸತ್ವವನ್ನು ಕಾಯ್ದಿಟ್ಟುಕೊಳ್ಳಲಾರದೆಂಬದು ಗೊತ್ತಾಗುವದು.

'ಅ' ಜೀವಸತ್ವವು ಮ್ಯಾಕ್‌ಕೋಲಂ ಮತ್ತು ಡೇವ್ಹಿಸ್ ಇವರಿಂದ ೧೯೧೩ ರಲ್ಲಿ ಸಂಶೋಧಿಸಲ್ಪಟ್ಟಿತು. ಪ್ರಯೋಗಶಾಲೆಯಲ್ಲಿಯ ಕೆಲವು ಪ್ರಾಣಿಗಳಿಗೆ ಬೆಣ್ಣೆ ಮತ್ತು ಪ್ರಾಣಿಗಳ ಕೊಬ್ಬಿನಂತಹ ವಸ್ತುಗಳನ್ನು ಕೊಡುವವರಿಂದ ಅವುಗಳಿಗೆ ಒಂದು ತರದ ಕಣ್ಣು ಬೇನೆಯಾಗಿ ಅವು ಕುರುಡಾಗುತ್ತವೆಂದೂ ಈ ರೋಗವಾದ ಪ್ರಾಣಿಗೆ ಬಂದ ಈ ಕಣ್ಣಿನ ರೋಗವು ಎಳೆಯದಿದ್ದಾಗಲೇ ಯೋಗ್ಯ ಆಹಾರವನ್ನು ಕೊಡುವದರಿಂದ ಗುಣವಾಗುವದೆಂದೂ ಗೊತ್ತಾಯಿತು. ಅವರು ಕೈಕೊಂಡ ಆಹಾರ ಸಂಶೋಧನೆಯಲ್ಲಿ ಅವರು ಅಭ್ಯಸಿಸುತ್ತಿದ್ದ ರಕ್ಷಕ ದ್ರವ್ಯವು ಕೆಲವು ಹಣ್ಣುಗಳಲ್ಲಿಯೂ ಹಳದಿಯ ಬಣ್ಣದ ಪಲ್ಲೆಯಲ್ಲಿಯೂ ಪಲ್ಲೆಯ ಹಸುರೆಲೆಗಳಲ್ಲಿಯೂ ಇದೆಯೆಂಬದು ಗೊತ್ತಾಯಿತು. ಜನರು ಸೇವಿಸುವ ಆಹಾರದಲ್ಲಿ ಈ ದ್ರವ್ಯವಿಲ್ಲದಿರುವದರಿಂದ ಬರೀ ಕಣ್ಣು ರೋಗವಷ್ಟೇ ಅಲ್ಲ ದೇಹದ ಬೇರೆ ಭಾಗಗಳಲ್ಲಿಯೂ ಬೇರೆ ಬೇರೆ ರೋಗಗಳು ಉಂಟಾಗಬಹುದೆಂದೂ ಮತ್ತು ಈ ರೋಗಗಳು ಸಾಂಕ್ರಾಮಿಕ ರೋಗಗಳ ಲಕ್ಷಣಗಳುಳ್ಳವಾಗಿವೆಯೆಂದೂ ಅವರು ಕಂಡುಹಿಡಿದರು.

ಮೇಲೆ ಹೇಳಿದ ಆಹಾರಗಳಲ್ಲಿಯ (Anti Opthalic) ದ್ರವ್ಯವು ಕೊನೆಗೆ 'ಅ' ಜೀವಸತ್ವವೆಂದು ಕರೆಯಲ್ಪಡಹತ್ತಿತು. ಈಗ ಎಲ್ಲ ತರದ ಸಾಂಕ್ರಾಮಿಕ

ರೋಗಗಳನ್ನು ಪ್ರತಿಬಂಧಿಸುವದರಲ್ಲಿ ಅದು ಶ್ರೇಷ್ಠವೆಂದು ತಿಳಿಯಲ್ಪಟ್ಟಿದೆ. ಸಾದಾ ಕೆಮ್ಮು ನೆಗಡಿಗಳನ್ನು ಹುಟ್ಟಿಸುವ, ಮೂಗಿನಹೊರಳೆ ಶ್ವಾಸಕೋಶ ಗಂಟಲುಗಳಿಗೆ ಸಂಬಂಧಿಸುವ ಸುಂಕುರೋಗಗಳನ್ನು ಪ್ರತಿಬಂಧಿಸುವದರಲ್ಲಿಯೂ ಅದು ನಿಃಸಂಶಯವಾಗಿ ಪರಿಣಾಮಕಾರಿಯಾಗಿದೆಯೆಂದು ಗೊತ್ತಾಗಿದೆ.

ನಮ್ಮ ಶರೀರಕ್ಕೆ 'ಅ' ಜೀವಸತ್ವವನ್ನು ಕಾಯ್ದಿಡುವ ಶಕ್ತಿಯಿದೆ. ಚಿಕ್ಕವರಿದ್ದಾಗ ಅದನ್ನು ಹೆಚ್ಚಾಗಿ ಸೇವಿಸುವದರಿಂದ ತಾತ್ಕಾಲಿಕ ಕೊರತೆಯು ಪೂರ್ಣವಾಗುವದಲ್ಲದೆ, ಮುಂಬರುವ ಸಾಂಕ್ರಾಮಿಕ ರೋಗಗಳ ಪ್ರತಿಬಂಧಕ್ಕೂ ಅದರ ಉಪಯೋಗವಾಗುತ್ತದೆ.

'ಕ' ಜೀವಸತ್ವವು ಸ್ಕರ್ವಿ (Scurvy) ಯನ್ನು ಪ್ರತಿಬಂಧಿಸುತ್ತದೆ. ಸ್ಕರ್ವಿಯು ಮಾನವೇತಿಹಾಸದಲ್ಲಿಯ ಮೊಟ್ಟಮೊದಲಿನ ರೋಗಗಳಲ್ಲೊಂದಾಗಿದೆ. ದೂರವಾದ ಸಮುದ್ರಪರ್ಯಟನಮಾಡುವ, ಆ ಕಾರಣ ತಾಜಾಹಣ್ಣು ಸೇವಿಸದಿರುವ, ನಾವಿಕರಿಗೇ ಈ ರೋಗವು ಮುಖ್ಯವಾಗಿ ಅಂಟಿತ್ತು. ಸುಮಾರು ೧೦೦ ವರ್ಷಗಳ ಹಿಂದೆ ಬ್ರಿಟಿಶ ನೌಕಾಬಲವು ತನ್ನ ನಾವಿಕರಿಗೆ ಲಿಂಬೆಹಣ್ಣಿನ ಭತ್ತೆಯನ್ನು ಕೊಡುವದನ್ನು ಸುರುವು ಮಾಡಿತು. ಸುಣ್ಣವು ಸ್ಕರ್ವಿಯಿಂದ ನಮ್ಮನ್ನು ರಕ್ಷಿಸುವದೆಂದು ತಿಳಿದಿದ್ದರು. ಲಿಂಬೆ, ಕಿತ್ತಳೆ, ಜವಾರಿ ಬಟಾಟೆಗಳಲ್ಲಿಯೂ ಕೂಡ ಈ ಗುಣವಿದೆಯೆಂದು ಇತ್ತೀಚೆಗೆ ಗೊತ್ತಾಯಿತು. ಸೈಟ್ರಸ್ ಹಣ್ಣು ಕೆಲವು ಪಲ್ಲೆಗಳು ಮತ್ತು ಹಸುರೆಲೆಗಳು ಸ್ಕರ್ವಿಯನ್ನು ಪ್ರತಿಬಂಧಿಸುವವೆಂದು ತಿಳಿದು ಬಂದಿದೆ.

ಸಮುದ್ರಪರ್ಯಟನ ಮಾಡುವವರಿಗೇ ಮುಖ್ಯವಾಗಿ ಸ್ಕರ್ವಿಯು ಬರುತ್ತಿರುವಂತೆಯೇ ಒಳದೇಶದಲ್ಲಿಯೂ ಆ ರೋಗವಿದ್ದ ಲಕ್ಷಣಗಳು ಕಂಡುಬರುತ್ತಿದ್ದವು. ಕೆಲವು ವರ್ಷಗಳ ಹಿಂದೆ ಓಮಾಹಾದ ಉತ್ತರಕ್ಕೆ ೧೦ ಮೈಲು ದೂರದಲ್ಲಿದ್ದ ಒಂದು ಕೋಟೆಯಲ್ಲಿ ೨೦೦ ಜನರದೊಂದು ತಂಡವು ವಾಸ ಮಾಡಿತ್ತು. ಒಂದು ವರ್ಷದೊಳಗಾಗಿಯೇ ಅಲ್ಲಿಯ ಅರ್ಧದಷ್ಟಕ್ಕಿಂತ ಹೆಚ್ಚು ಜನರು ಸ್ಕರ್ವಿಯಿಂದ ಸತ್ತರು. ಅವರು ತಮ್ಮೊಡನೆ ತಮ್ಮ ಡಬ್ಬಿಗಳಲ್ಲಿ ಪೂರ್ವದಿಂದ ತಂದಿದ್ದ ಆಹಾರದ ಮೇಲೆಯೇ ಇರುತ್ತಿದ್ದರು. ಆ ಆಹಾರದಲ್ಲಿ ಮುಖ್ಯವಾಗಿ ಬಿಳೀರೊಟ್ಟಿ, ಬಿಸ್ಕೀಟು, ಪ್ಯಾನ್‌ಕೇಕು, ಸಾಲ್ಟ್‌ಪೋರ್ಕ, ಸಕ್ಕರೆ ಬಟಾಟೆ ಮತ್ತು ಕಾಳಿನ ಆಹಾರದಂತಹ ಬಿಳಿಹಿಟ್ಟಿನ (ತೌಡು ತಗೆದ) ವಸ್ತುಗಳಿದ್ದವು. ಸ್ಕರ್ವಿಯಿಂದ ರಕ್ಷಿಸಲವಶ್ಯವಾದ ವಸ್ತುಗಳನ್ನೊಳಗೊಂಡ ಪಲ್ಲೆಗಳು ಬೇಕಾದಷ್ಟಿದ್ದರೂ ಅವನ್ನು ಉಪಯೋಗಿಸುವ ಜ್ಞಾನವಿಲ್ಲದ್ದರಿಂದ ಈ ಜನರು ಆ ಬೇನೆಬಿದ್ದು ಸತ್ತರು.

ಅಮೇರಿಕೆಯ ಅಂತಃಕಲಹದ ಕಾಲದಲ್ಲಿ 'ಆಂಡರ್ಸನ್ ವಿಲೆ' ಮತ್ತು 'ಲಿಬ್ಬಿ' ಎಂಬ ದಂಗೆಗಾರರ ಜೇಲುಗಳಲ್ಲಿ ಸ್ಕರ್ವಿ ರೋಗದ ಅನೇಕ ಭಯಂಕರ ಕೇಸುಗಳಾದವು. ಈ ಜೇಲುಗಳಲ್ಲಿಯ ಯೂನಿಯನ್‌ದ ಸೈನಿಕರನ್ನು ಕಾಳಿನ ಹಿಟ್ಟೇ ಮುಖ್ಯವಾಗಿದ್ದ ಆಹಾರದ ಮೇಲಿಟ್ಟಿದ್ದರು. ಸೆರೆಯಾಳುಗಳನ್ನು ಬೈಲಿನಲ್ಲಿಟ್ಟು ಅವರಿಗೆ ಸಾಕಷ್ಟು ಸ್ವಚ್ಛ ಹವೆ, ಮತ್ತು ಸೂರ್ಯಪ್ರಕಾಶಗಳನ್ನು ತೆಗೆದುಕೊಳ್ಳಲು ಅನುಕೂಲಮಾಡಿಕೊಟ್ಟಿದ್ದರು. ಈ ರೋಗವು ಮೊದಲು ಬಾಯಲ್ಲಿ ಹುಗುಳಾಗುವುದು ಮತ್ತು ಹಲ್ಲು ಸಡಿಲಾಗುವದು ಇವುಗಳಿಂದ ಕಾಣಿಸಿಕೊಂಡಿತು. ಇದು ಹಲ್ಲುಗಳು ಬೀಳುವ ವರೆಗೆ ಹೆಚ್ಚಾಗುತ್ತ ನಡೆಯಿತು. ಕೈಕಾಲುಗಳ ಮೇಲೆ ಹುಣ್ಣಾಗುವದು ಸುರುವಾಯಿತು. ಆಂಡರ್ಸನ್ ವಿಲೆ ಮತ್ತು ಲಿಬ್ಬಿಗಳ ಇತಿಹಾಸದಲ್ಲಿ ಕೈಕಾಲುಗಳ ಬೆರಳುಗಳು ಪೂರ್ಣವಾಗಿ ಮೋಟಾಗಿ ಬಿದ್ದುಹೋದವರ ಅನೇಕ ಚಿತ್ರಗಳನ್ನು ನಾವು ನೋಡಬಹುದು. ಅವರು ಇದೇ ರೋಗದಿಂದ ಕೈಕಾಲುಗಳನ್ನು ಕಳೆದುಕೊಂಡ ಕೇಸುಗಳನ್ನು ರೆಕಾರ್ಡ ಮಾಡಿದ್ದರು. ಈ ಚಿತ್ರಗಳು ಸ್ಕರ್ವಿಯ ಅತಿಕೆಟ್ಟ ಪರಿಣಾಮವನ್ನು ತೋರಿಸುತ್ತವೆ. ಇವು ತೀರ ಕೆಟ್ಟ ಕೇಸುಗಳನ್ನು ಮಾತ್ರ ಚಿತ್ರಿಸುತ್ತವೆ. ಸ್ಕರ್ವಿಯು ನಿಜವಾಗಿ 'ಕ' ಜೀವಸತ್ವದ ಕೊರತೆಯಿಂದಲೇ ಆಗುತ್ತದೆ. ಒಪ್ಥೇಮಿಯಾ, ಬೆರಿಬೆರಿ, ಪಾಲೆಗ್ರಾ ರೋಗಗಳಲ್ಲಿಯಂತೆಯೇ ಈ ರೋಗವನ್ನೂ ಪ್ರಯೋಗಶಾಲೆಯಲ್ಲಿಯ ಪ್ರಾಣಿಗಳ ಮೇಲೆ ಪ್ರಯೋಗ ಮಾಡಿ ನೋಡಬಹುದು. ಮತ್ತು ಅವುಗಳಿಗೆ ಅವಶ್ಯವಿದ್ದ ಆಹಾರದ ವಸ್ತುಗಳನ್ನು ಪೂರೈಸಿ ರೋಗವನ್ನು ಗುಣಪಡಿಸಬಹುದು. ಉಷ್ಣತೆಯಿಂದ ಈ ಜೀವಸತ್ವವು ಬೇಗ ನಾಶಹೊಂದುವದರಿಂದ ನಮ್ಮ ಶರೀರದಲ್ಲಿ 'ಕ' ಜೀವಸತ್ವವನ್ನು ಕಾಯ್ದಿಟ್ಟುಕೊಳ್ಳುವ ಶಕ್ತಿಯು ಕಡಿಮೆಯಾಗಿದೆ.

ಆರೋಗ್ಯಕರವಾದ ಎಲುವನ್ನುಂಟುಮಾಡುವ ಆಹಾರ ಮತ್ತು ಆತಪಸ್ನಾನ ಇವುಗಳಿಂದ ಸಿಗುವ 'ಡ' ಜೀವಸತ್ವವು ಪ್ರಾಣಿಗಳ ದೇಹದಲ್ಲಿಯ ಮಹತ್ವವಾದ ವಸ್ತುವಾಗಿದೆ. ಮಾನವಜನಾಂಗದ ಇತಿಹಾಸದಲ್ಲಿ 'ಡ' ಜೀವಸತ್ವವು ಆಹಾರದಲ್ಲಿಯಕ್ಕಿಂತ ಆತಪಸ್ನಾನದಿಂದಲೇ ಹೆಚ್ಚಾಗಿ ದೊರಕಿಸಲ್ಪಟ್ಟಿದೆ. ಕೆಲವು ತಲೆಗಳಿಂದ ಮನುಷ್ಯನು ತನ್ನ ತೊಗಲನ್ನು ಬಿಸಿಲಿನಿಂದ ಸಂರಕ್ಷಿಸಿದಂದಿನಿಂದ ಅಂದರೆ ಮನುಷ್ಯನು ಬಟ್ಟೆತೊಡುವದನ್ನು ಕಲಿತಾಗಿನಿಂದ 'ಡ' ಜೀವಸತ್ವದ ನೈಸರ್ಗಿಕ ಪೂರೈಕೆಯು ಸಂಪೂರ್ಣವಾಗಿ ನಿಂತು ಹೋಯಿತು. ಇದೇ ಕಾಲದಲ್ಲಿ ಕೆಲವೊಂದು ಶಾರೀರಿಕ ನ್ಯೂನತೆಗಳುಂಟಾಗಿವೆ. ಈಜಿಪ್ತಿನ ಸಾಲೆಗಳ ಹುಡುಗರಲ್ಲಿ ಈಗ ೮೦% ಹುಡುಗರಿಗೆ ರಿಕೆಟ್ (ಮುಟದೋಷ) ರೋಗವಾದದ್ದು

ಸ್ಪಷ್ಟವಾಗಿ ಕಂಡುಬರುವಷ್ಟು ಮಾನವಜಾತಿಯ ಎಲುಬಿನ ಬೆಳವಣಿಗೆಯಲ್ಲಿ ಕೊರತೆಯುಂಟಾಗಿದೆಯೆಂದು ಹೇಳುವದುಂಟು. ಈ ಕಾಲದಲ್ಲಿ ಕ್ಷಯರೋಗವೂ ಒಂದು ಸರ್ವಸಾಮಾನ್ಯ ರೋಗವಾಗಿದೆ. ಹಲ್ಲು ಬಾಯಿಗಳ ದೋಷದಿಂದುಂಟಾಗುವ ಪಾಯೋರಿಯಾದಂಥ ಅನೇಕ ರೋಗಗಳು 'ಡ' ಜೀವಸತ್ವದ ಕೊರತೆಯಿಂದಲೂ ಉಂಟಾಗುತ್ತವೆ. ರಾಸಾಯನಿಕವಾಗಿ ನಮಗೆ ಗೊತ್ತಿದ್ದ ಜೀವಸತ್ವವೆಂದರೆ 'ಡ' ವೊಂದೇ. ಅದು ಪ್ರಕಾಶಿತ ಇರ್ಗೊಸ್ಟೆರೆಲ್ ಎಂದು ಕಂಡುಬಂದಿದೆ. ಇರ್ಗೊಸ್ಟೆರೆಲ್‌ವು ರಾಸಾಯನಿಕ ವಸ್ತುವೂ ನಿಶ್ಚಲವೂ ಇರುತ್ತದೆ. ಆದರೆ ಅದನ್ನು ಕೆಲಹೊತ್ತು ಸೂರ್ಯಪ್ರಕಾಶ ಅಥವಾ ಅಲ್ಟ್ರಾವ್ಹಾಯೊಲೆಟ್ ಪ್ರಕಾಶದಲ್ಲಿ ಇಟ್ಟರೆ, ಅದು 'ಡ' ಜೀವಸತ್ವವಾಗಿ ಮಾರ್ಪಡುತ್ತದೆ.

'ಡ' ಜೀವಸತ್ವವನ್ನೊಳಗೊಂಡ ಆಹಾರ ಪದಾರ್ಥಗಳು ತೀರ ಕಡಿಮೆ ಇದ್ದುದರಿಂದಲೂ, ಅವುಗಳಲ್ಲಿ ಕೂಡ ಅದು ಇರುವದು ಅನಿಶ್ಚಿತವಾದುದರಿಂದಲೂ ಯಾವದೊಂದು ವಸ್ತುವಿನಲ್ಲಿ ಡ ಜೀವಸತ್ವವು ಯಾವಾಗಲೂ ಇರುತ್ತದೆಂದು ಹೇಳಬರುವಂತಿಲ್ಲ. ಹಾಲು ತತ್ತಿಗಳನ್ನು ಕೊಡುವ ಪ್ರಾಣಿಗಳು ಬಿಸಿಲಿನಲ್ಲಿರುವಾಗ ಅಥವಾ 'ಡ' ಜೀವಸತ್ವವನ್ನು ಸೇವಿಸುತ್ತಿರುವಾಗ ಅವುಗಳಲ್ಲಿ ಇದು ಇರುವದು. ಸೂರ್ಯಪ್ರಕಾಶವು ಕಡಿಮೆ ಇದ್ದ ಕಾಲದಲ್ಲಿ ಯಾವದೊಂದು ಪ್ರಾಣಿಯು ಈ ಜೀವಸತ್ವವನ್ನು ಆಹಾರರೂಪದಿಂದ ಸೇವಿಸುತ್ತಿದ್ದ ಹೊರತು ಇದು ಆ ಪ್ರಾಣಿಜನ್ಯವಸ್ತುಗಳಲ್ಲಿ ಸಿಗಲಾರದು. ಆದ್ದರಿಂದಲೇ ಇದು ಹಾಲು ಬೆಣ್ಣೆಗಳಲ್ಲಿ ಸಿಗುತ್ತಿದ್ದರೂ ಯಾವಾಗಲೂ ಅವುಗಳಲ್ಲಿರುತ್ತದೆಂಬ ನಿಯಮವಿಲ್ಲ. ಕಳೆದ ಕೆಲವರ್ಷಗಳಲ್ಲಿ ಕಾಳುಗಳಿಗೆ ಅಲ್ಟ್ರಾವ್ಹಾಯ್‌ಲೆಟ್ ಪ್ರಕಾಶ ಕೊಟ್ಟು ಅವುಗಳಲ್ಲಿ 'ಡ' ಜೀವಿಸತ್ವವನ್ನು ಹುಟ್ಟಿಸುವ ಪ್ರಯತ್ನ ನಡೆದಿದೆ. ಹೀಗೆ ಮಾಡುವದರಿಂದ ಆ ಕಾಳುಗಳಲ್ಲಿ ಮೊದಲಿದ್ದ ಕೆಲವು ಜೀವಸತ್ವಗಳ ಕೆಲವು ಭಾಗವು ಅಥವಾ ಎಲ್ಲವೂ ಇಲ್ಲದಂತಾಗುವಂತೆ ಕಾಣುತ್ತದೆ. ಆದ್ದರಿಂದ ಈ ರೀತಿಯಿಂದ ಏನಾದರೂ ಲಾಭವಾಗಬಹುದೆಂಬದು ಸಂಶಯಾಸ್ಪದವು. 'ಡ' ಜೀವಸತ್ವವನ್ನು ಕಾಡ್‌ಲಿವ್ಹರದ ಎಣ್ಣೆಯಿಂದ ಪಡೆಯಬಹುದು. ಇದು ಬೇರೆ ಅನೇಕ ಮೀನುಗಳ ಎಣ್ಣೆಯಲ್ಲಿಯೂ ಇರುತ್ತದೆ. ಈ ಎಣ್ಣೆಯನ್ನು ಆಹಾರವೆಂದು ವರ್ಗೀಕರಿಸುವದಕ್ಕಿಂತಲೂ ಔಷಧವೆಂದು ವರ್ಗೀಕರಿಸುವದು ಉತ್ತಮ. ನಮ್ಮನ್ನು ಕ್ಷಯ ಮತ್ತು ಸಂಗ್ರಹಿಣಿಯಿಂದ ರಕ್ಷಿಸಲು 'ಡ' ಜೀವಸತ್ವವು ಬಹಳೇ ಉಪಯುಕ್ತವಾಗಿದೆ. 'ಡ' ಜೀವಸತ್ವವು ಬೇರೆ ಯಾವದೇ ಜೀವಸತ್ವಕ್ಕಿಂತಲೂ ಹೆಚ್ಚು ಹೊತ್ತು ಸುರಕ್ಷಿತವಾಗಿರಬಲ್ಲುದು. ಬಿಸಿಲಿಲ್ಲದ ದಿನಗಳಲ್ಲಿ ಆರೋಗ್ಯವನ್ನು

ರಕ್ಷಿಸುವ ಈ ಜೀವಸತ್ವವನ್ನು ಬೇಸಿಗೆಯಲ್ಲಿ ಸೂರ್ಯರಶ್ಮಿಗೆ ಮೈಯೊಡ್ಡಿ ಮನುಷ್ಯಪ್ರಾಣಿಯು ಪಡೆಯುತ್ತಾನೆ.

ಪ್ರಯೋಗಶಾಲೆಗಳಲ್ಲಿದ್ದ ಪ್ರಾಣಿಗಳು ನೋಡಲಿಕ್ಕೆ ನೀರೋಗಿಯಾಗಿದ್ದರೂ ಅವರೆಗೆ ಗೊತ್ತಿದ್ದ ಬೇರೆ ಜೀವಸತ್ವಗಳನ್ನು ಸೇವಿಸುತ್ತಿದ್ದರೂ ಅವುಗಳಿಗೆ ಮರಿಗಳಾಗುತ್ತಿರಲಿಲ್ಲ. ಇದು ಸಂಶೋಧಿಸಲ್ಪಟ್ಟದರಿಂದ 'ಈ' ಜೀವಸತ್ವವು ಬೆಳಕಿಗೆ ಬಂದಿತು. ಅವುಗಳ ಈ ಸ್ಥಿತಿಗೆ (ರೋಗಕ್ಕೆ) ಯಾವ ವಿಶಿಷ್ಟ ಆಹಾರ ಪದಾರ್ಥಗಳು ಕಾರಣವಾದವೆಂಬದನ್ನು ಕಂಡುಹಿಡಿದರು. ಮತ್ತು ಆ ತರದ ಆಹಾರಪದಾರ್ಥಗಳ ಸೇವನೆಯಿಂದ ಆದೋಷವು ನಿವಾರಣೆಹೊಂದುವದೆಂಬದೂ ಕಂಡುಹಿಡಿಯಲ್ಪಟ್ಟಿತು. ಗೋದಿಯ ಹುಳದಲ್ಲಿಯ ಎಣ್ಣೆಯಲ್ಲಿ 'ಈ' ಜೀವಸತ್ವವು ಅತಿ ಹೆಚ್ಚಾಗಿದೆ. ಹಾಲುಹಕ್ಕರಿಕೆಯಲ್ಲಿಯೂ ಇದು ಹೆಚ್ಚಾಗಿರುವದು. ಹೆಚ್ಚು ಹಸುರಾದ ಪಲ್ಲೆಗಳಲ್ಲಿ ಇದು ಹೆಚ್ಚಾಗಿಯೂ ಕಡಿಮೆ ಹಸುರಾದ ಎಲೆಗಳುಳ್ಳವುಗಳಲ್ಲಿ ಕಡಿಮೆಯಾಗಿಯೂ ಇದ್ದದ್ದು ಕಂಡುಬರುತ್ತದೆ. ಹಕ್ಕರಿಕೆಯ ದೇಟಿಗಿಂತ ಎಲೆಗಳಲ್ಲಿ ಈ ಜೀವಸತ್ವವು ಹೆಚ್ಚಾಗಿದೆ. ಕೃತ್ರಿಮವಾದ ಉಷ್ಣಗೃಹಗಳಲ್ಲಿ ಬೆಳೆಸಿದ ಹಕ್ಕರಿಕೆಯಲ್ಲಿ ಇದು ಕಡಿಮೆಯಾಗಿರುತ್ತದೆ. ಬೇರೆ ಬೇರೆ ಅನೇಕ ಕಾಳು ಮತ್ತು ಹಸುರೆಲೆಗಳಲ್ಲಿಯೂ ಈ ಜೀವಸತ್ವವಿರುವದು. ನಮ್ಮ ಶರೀರವು 'ಈ' ಸತ್ವವನ್ನು ಕೆಲವೊಂದು ನಿಯಮಿತ ಪ್ರಮಾಣದವರೆಗೆ ಮಾತ್ರ ಕಾಯ್ದಿಟ್ಟುಕೊಳ್ಳಬಲ್ಲದು.

ಒಂದು ಸೇಂದ್ರಿಯ ಜೀವವನ್ನು ಉಪವಾಸದಿಂದ ನಾಶಪಡಿಸಬಹುದು. ಜೀವಿಗೆ ಯಾವುದೇ ಆದರೂ ಒಂದೇ ತರದ ಆಹಾರವು ಸಾಕಾಗಲಾರದು. ಸೇಂದ್ರಿಯ ಜೀವಿಗಳು ಸರಿಯಾಗಿ ಕೆಲಸ ಮಾಡಬೇಕಾದರೆ, ಅವಕ್ಕೆ ಬೇರೆಬೇರೆ ತರದ ಅನೇಕ ರಾಸಾಯನಿಕ ವಸ್ತುಗಳು ಬೇಕಾಗುತ್ತವೆ. ಯಾವದೊಂದು ಪ್ರಾಣಿಗೆ ಅವಶ್ಯವಾದ ಯಾವುದೇ ವಸ್ತುವನ್ನು ಕೊಡದಿದ್ದರೆ, ಅದೇ ವಸ್ತುವಿನ ಕೊರತೆಯ ಮೂಲಕ ಉಂಟಾಗುವ ರೋಗದ ಲಕ್ಷಣಗಳು ಕಾಣಹತ್ತುತ್ತವೆ. ಗಿನಿಗಳ ರ ಮೊದಲು ಪ್ರಾಣಿಗಳಿಗೆ ಕಾರ್ಬೋಹೈಡ್ರೇಟ್ (ಪಿಷ್ಟ), ಸಸಾರಜನಕ, ಕೊಬ್ಬು (ಸ್ನಿಗ್ಧ) ಮತ್ತು ಲವಣ ಇವಿಷ್ಟೇ ಅವಶ್ಯಕವೆಂಬ ಕಲ್ಪನೆಯಿತ್ತು. ಈ ವಸ್ತುಗಳನ್ನು ಪ್ರಮಾಣದಲ್ಲಿ ಸರಿಯಾಗಿ ಕೂಡಿಸಿ, ಸರಿಪ್ರಮಾಣದ ಉಷ್ಣತೆಗಳಿಂದ ಅನೇಕ ಆಹಾರ ಮಿಶ್ರಣಗಳನ್ನು ತಯಾರಿಸಿದರು. ಇದರಿಂದ ಈ ಆಹಾರಮಿಶ್ರಣಗಳಿಂದ ನಮಗೆ ಬೇಕಾದ ಎಲ್ಲ ವಸ್ತುಗಳು ದೊರೆಯುವದಿಲ್ಲ. ಆದರೆ ಆಹಾರ ಪದಾರ್ಥಗಳಲ್ಲಿರುವ ಜೀವಸತ್ವಗಳಂಥ ಕೆಲವು ಬೇರೆ ಮೂಲ ದ್ರವ್ಯಗಳು ಅವು ತೀರ ಕಡಿಮೆ ಪ್ರಮಾಣದಲ್ಲಿದ್ದರೆ ನಮ್ಮ ಆರೋಗ್ಯ ಮತ್ತು ಸುರಕ್ಷಿತತೆಗಳ

ಮೇಲೆ ಹೆಚ್ಚು ಪರಿಣಾಮಕಾರಿಗಳಾಗಿವೆ ಎಂಬದು ಕಂಡುಬರುತ್ತದೆ. ಶಿಷ್ಟ ಸಸಾರಜನಕ ಕೊಬ್ಬು ಲವಣಗಳೆಲ್ಲವೂ ಆಹಾರ ವಸ್ತುಗಳಲ್ಲಿರಬಹುದು. ಆದರೆ ಅವುಗಳೊಡನೆ ಜೀವಸತ್ವಗಳೂ ಇಲ್ಲದಿದ್ದರೆ, ಅವುಗಳ ಅಭಾವದಿಂದ (ಉಪವಾಸ) ದಿಂದ ಸಂಭವಿಸುವಂಥ ಮರಣವೇ ಉಂಟಾಗಬಹುದು.

ಜೀವಸತ್ವಗಳ ಅಭಾವದಿಂದ ಮನುಷ್ಯನಲ್ಲಿಯ ಸುಂಕುರೋಗವನ್ನು ಪ್ರತಿಬಂಧಿಸುವ ಶಕ್ತಿಯು ಕ್ಷೀಣವಾಗುತ್ತದೆ. ಎಷ್ಟೋ ವರ್ಷಗಳಿಂದ ಮನುಷ್ಯನೂ ಅವನ ಪೂರ್ವಜರೂ ಅನೇಕ ತರದ ಸುಂಕುರೋಗಗಳನ್ನು ಪ್ರತಿಬಂಧಿಸುವ ಆಹಾರದ ಮೇಲೆಯೇ ಇದ್ದಾರೆ. ಇಲ್ಲವಾದರೆ ಮಾನವ ಜಾತಿಯೇ ಇಲ್ಲದಂತಾಗುತ್ತಿತ್ತು. ಆದಿಕಾಲದಲ್ಲಿ ನಮ್ಮ ಪೂರ್ವಜರಿಗೆ ಆಹಾರವು ಸುಲಭ ಸಾಧ್ಯವಾಗಿದ್ದಾಗ ಆ ಕಾಲಮಾನದಂತೆ ಅವರು ಬಲಾಢ್ಯವೂ ಆರೋಗ್ಯಕರವೂ ಆದ ದೇಹವನ್ನೂ ತುಲನಾತ್ಮಕವಾಗಿ ಹೆಚ್ಚು ದೊಡ್ಡದೂ ಪುಷ್ಟವೂ ಆದ ಮಿದುಳನ್ನೂ ಸೃಷ್ಟಿಸಲು ಬೇಕಾದ ಆಹಾರಸತ್ವಗಳನ್ನು ಸೇವಿಸುತ್ತಿರಲೇ ಬೇಕು. ಈಗಿನ ಕೆಲ ಕಾಡುಜನರಲ್ಲಿಯೂ ಸೃಷ್ಟಿಕ್ರಮಾನುಸಾರಿಗಳಾದ ಪ್ರಾಣಿಗಳಲ್ಲಿಯೂ ಗಟ್ಟಿಗತನವೂ, ಆರೋಗ್ಯವೂ ಇದ್ದದ್ದು ಕಂಡುಬರುತ್ತದೆ.

ಮಾನವ ಕುಟುಂಬಕ್ಕೆ ತೀರ ಸಮೀಪದವನಾದ ಗೋರಿಲ್ಲಾನ ಅತಿಶಯವಾದ ಶರೀರ ಸಾಮರ್ಥ್ಯವನ್ನು ನೋಡಿದರೆ ನಾವೂ ನೈಸರ್ಗಿಕ ಜೀವನದಿಂದಿದ್ದರೆ, ನಮ್ಮ ಸಾಮರ್ಥ್ಯವು ಎಷ್ಟಾಗುತ್ತಿತ್ತೆಂಬದನ್ನು ತೋರಿಸುತ್ತದೆ. ಸುಧಾರಣೆಯ ಜೀವನದಲ್ಲಿ ಇದು ಅತ್ಯವಶ್ಯವಾದದ್ದಲ್ಲವೆಂದು ವಾದಿಸಬಹುದು. ಆದರೆ ಶಾರೀರಿಕ ಸಾಮರ್ಥ್ಯವು ನಮ್ಮಷ್ಟಕ್ಕೆ ನಾವು ನೈಸರ್ಗಿಕ ನಿಯಮದಿಂದ ದೊರಕಿಸಿಕೊಳ್ಳಬಹುದಾದ ಹೆಚ್ಚಿನ ಗುಣವೆಂದೂ ಸುಖಮಯ ಜೀವನದ ಹೆಚ್ಚಿನ ಆನಂದವನ್ನು ಸೂಚಿಸುವದೆಂದೂ ತಿಳಿದುಕೊಳ್ಳಬೇಕು. ಅದು ಎಲ್ಲರೂ ಅಪೇಕ್ಷಿಸತಕ್ಕ ವಸ್ತುವು; ಇದೇ ಎಲ್ಲ ಮಾನವ ಜಾತಿಯ ಗುರಿಯೆಂಬದನ್ನು ನಾವು ಮರೆಯತಕ್ಕದ್ದಲ್ಲ. ಇಲ್ಲವಾದರೆ ಶಾರೀರಿಕ ದೌರ್ಬಲ್ಯ, ಪೌರುಷ ಹೀನತ್ವ, ರೋಗದ ಹೆಚ್ಚಳ, ಇವುಗಳಿಂದ ತುಂಬಿದ ಈಗಿನ ಸದ್ಯದ ಪರಿಸ್ಥಿತಿಯಿಂದ ತೃಪ್ತರಿದ್ದರೆ, ಈಗ ನಡೆದ ಅಧೋಗತಿಯು ಮಾನವ ಜನಾಂಗದ ನಾಶಕ್ಕೆ ಕಾರಣವಾಗಬಹುದೆಂಬದನ್ನು ಸ್ಪಷ್ಟವಾಗಿ ತರ್ಕಿಸಿ ಕಾಣಬಹುದು.

(Physical Culture ದೊಳಗಿನ ಒಂದು ಲೇಖನ ಆಧಾರದಿಂದ)

ಸರ್ ಫೆರೋಜಶಹಾ ಮೇರವಾನಜಿ ಮೆಹಥಾ

"ದೇಶಕಾರ್ಯವೇ ತಮ್ಮಕಾರ್ಯ; ದೇಶಕಲ್ಯಾಣವೇ ತಮ್ಮ ಕಲ್ಯಾಣ" ಎಂದು ನಂಬಿ ನಡೆಯುವ ಮಹಾಪುರುಷರು ಹೆಚ್ಚಿದಂತೆ ದೇಶದ ಘನತೆಯು ಹೆಚ್ಚುವದು. ಇಂಥ ಲೋಕನಾಯಕರ ಚರಿತ್ರೆಯು ಯಾವದೊಂದು ಸಮಾಜ ಶ್ರೇಷ್ಟೇ ಅನುಕರಣೀಯವಾದುದಲ್ಲ; ಇಡಿಯ ದೇಶಕ್ಕೇ ಮಾರ್ಗದರ್ಶಿಯಾಗಿ ರುವದು. ಸರ್ ಫೆರೋಜಶಹಾ ಮೇರವಾನಜಿ ಮೇಥಾರವರ ಜೀವನಚರಿತ್ರೆಯು ಈ ತರಗತಿಗೆ ಸೇರಿದುದು.

ಸನ್ ೧೮೫೭ ನೆಯ ಇಸ್ವಿಯಲ್ಲಿ ಕಂಪನಿಯ ಸರಕಾರದ ರಾಜನೀತಿಯಿಂದ ರುನನೊಂದ ಕೆಲವರು ಕ್ಷತ್ರಿಯವೃತ್ತಿಯ ಮುಂದಾಳುಗಳ ವಿಚಾರದ ಪರಿ ಣಾಮವೆಂದು ದಿಲ್ಲಿ, ಲಖನೌ, ಕಾನಪುರ ಮುಂತಾದ ಉತ್ತರಹಿಂದುಸ್ತಾನ ದೊಳಗಿನ ಹಲವು ಸೇನಾನಿವಾಸಗಳಲ್ಲಿ ಯುದ್ಧಾಗ್ನಿಯು ಹೊತ್ತಿ ಉರಿಯಿತು. ಬ್ರಿಟಿಷ ಮುತ್ಸದ್ದಿಗಳ ಕಾರ್ಯಕ್ಷಮತೆಯಿಂದಲೂ ಸೈನಿಕರ ಸುವ್ಯವಸ್ಥೆ ಸತತ ಪ್ರಯತ್ನಗಳಿಂದಲೂ ಈ ಯುದ್ಧಾಗ್ನಿಯು ದೇಶದ ಸ್ವಾತಂತ್ರ್ಯಕ್ಕೆ ಕಾರಣವಾಗು ವದರ ಬದಲು ದೇಶವನ್ನು ಇನ್ನಷ್ಟು ಆಪತ್ತಿಗೆ ಗುರಿಪಡಿಸಿತು. ಮತ್ತು ಈ ಗಂದೋಲನದಿಂದ ಬ್ರಿಟಿಷರಾಜಸತ್ತೆಯ ಉಕ್ಕಿನ ಶೃಂಖಲೆಯ ಬಿಗಿತವು ಇನ್ನಷ್ಟು ದೃಢವಾದಂತಾಯಿತು. ಇಲ್ಲಿಂದ ಮುಂದಿನ ನಮ್ಮ ದೇಶದ ಇತಿ ಹಾಸವು ಮಹರ್ಷಿ ದಾದಾಭಾಯಿ ನವರೋಜಿ, ಸರ್ ಫೆರೋಜಶಹಾ ಮೇಥಾ ಸ್ಯೆ. ವಾ. ಗೋಪಾಲ ಕೃಷ್ಣ ಗೋಖಲೆ, ಲೋಕಮಾನ್ಯ ಬಾಳ ಗಂಗಾಧರ ಟಿಳಕ ಮೊದಲಾದ ಹಲಕೆಲವು ದೇಶಭಕ್ತರ ಚರಿತ್ರೆಯಲ್ಲಿ ಸಮಾವೇಶವಾಗಿ ಹೋಗುವ ದೆಂದು ಹೇಳುವದುಂಟು. ಅಷ್ಟು ವ್ಯಾಪಕವಾಗಿ ದೇಶಕಾರ್ಯದೊಡನೆ ತನ್ಮಯ ವಾಗಿ ಹೋಗಿವೆ, ಆ ಮಹನೀಯರ ಜೀವನಚರಿತ್ರೆ!

ಸನ್ ೧೮೪೫ ನೆಯ ಇಸವಿಯ ಆಗಷ್ಟ ೪ ನೆಯ ತಾರೀಖಿನ ದಿನ ಮುಂಬಯಿಯಲ್ಲಿ ಫೆರೋಜಶಹಾ ಮೇಥಾರವರು ಜನ್ಮತಾಳಿದರು. ೧೮೬೧ರಲ್ಲಿ ಮೆಟ್ರಿಕ್ಯುಲೇಶನ್, ೧೮೬೪ರಲ್ಲಿ ಬಿ. ಎ. ಪರೀಕ್ಷೆಗಳಲ್ಲಿ ಮೇಲ್ತರಗತಿಗಳಲ್ಲಿ ತೀರ್ಣರಾಗಿ ಆರೇ ತಿಂಗಳೊಳಗೆ ಎಮ್. ಎ. ಪರೀಕ್ಷೆಗೆ ಕುಳಿತು ಮೊದಲನೆಯ ತರಗತಿಯಲ್ಲಿ ಉತ್ತೀರ್ಣರಾದರು. ಇಷ್ಟೊಂದು ಕುಶಾಗ್ರಬುದ್ಧಿಯ ವಿದ್ಯಾರ್ಥಿ ಯೆನಿಸಿಕೊಂಡ ಇವರು ಇಂಗ್ಲಂಡಕ್ಕೆ ಹೋಗಿ ೧೮೬೯ ರಲ್ಲಿ ಬ್ಯಾರಿಸ್ಟರರಾಗಿ

ಬಂದು ಮುಂಬಯಿಯಲ್ಲಿ ಆ ವ್ಯವಸಾಯವನ್ನು ಪ್ರಾರಂಭಿಸಿದರು. ಇವರು ಇಂಗ್ಲಂಡದಲ್ಲಿ ಇರುವಾಗ ಕಾಯಿದೆಯ ಅಭ್ಯಾಸವನ್ನು ನಡೆಯಿಸುವದರೊಂದಿಗೆ ಅಲ್ಲಿಯ ರಾಜಕೀಯ ಮುಂದಾಳುಗಳೆನಿಸಿದ ಗ್ಲ್ಯಾಡ್‌ಸ್ಟನ್ ಮೊದಲಾದವರು ನಡೆಯಿಸಿದ ಚಳವಳಿಗಳನ್ನು ಅಭ್ಯಾಸಮಾಡಿ ಉದಾತ್ತವಾದ ರಾಜಕೀಯ ಧೋರಣೆಗಳನ್ನು ಅರಿತುಕೊಂಡಿದ್ದರು. ಅಲ್ಲಿರುವಾಗಲೇ ಇವರಿಗೆ ಕಲಕತ್ತೆಯ ಪ್ರಸಿದ್ಧ ಬ್ಯಾರಿಸ್ಟರರೂ ಮುಂದೆ ಕಾಂಗ್ರೆಸಿನ ಮೊದಲನೆಯ ಅಧ್ಯಕ್ಷರೂ ಆದ ದೇಶಭಕ್ತ ಉಮೇಶಚಂದ್ರ ಬ್ಯಾನರ್ಜಿಯವರ ಪರಿಚಯವಾಗಿತ್ತು. ಸ್ವದೇಶಕ್ಕೆ ಮರಳಿಬಂದೊಡನೆ ೨೨–೨೩ ವರ್ಷದ ಬಿಸಿರಕ್ತದ ಈ ತರುಣರಿಗೆ ಸುಪ್ರಸಿದ್ಧ ದೇಶಭಕ್ತರೆನ್ನಿಸಿಕೊಂಡ ದಾದಾಭಾಯಿ ನವರೋಜಿಯವರು ಗುರುಸ್ಥಾನದಲ್ಲಿದ್ದು ಮಾರ್ಗದರ್ಶಿಗಳಾದರು.

ಈ ರೀತಿ ಉಚ್ಚಶಿಕ್ಷಣ, ಉದಾತ್ತವಾದ ಮನಃಸಂಸ್ಕಾರ, ಉಚ್ಚಧ್ಯೇಯದ ಮಾರ್ಗದರ್ಶಿಗಳು ಎಂಬ ಮೂರು ನೆಲೆಗಳ ಭದ್ರವಾದ ರಥದಮೇಲೆ ನಿಂತು ಮೇಥಾರವರು ತಮ್ಮ ಸಾರ್ವಜನಿಕ ಕಾರ್ಯವನ್ನು ಆರಂಭಿಸಿದರು. ಇವರು ಬುದ್ಧಿವಂತರಾದ ಬ್ಯಾರಿಸ್ಟರರೆಂದು ಹೆಸರುಪಡೆದು ಅಲ್ಪಕಾಲದಲ್ಲಿಯೇ ಅತುಲ ಸಂಪತ್ತನ್ನು ದೊರಕಿಸಿದರು. ಅವರು ಬಯಸಿದರೆ ಯಾವ ತೊಂದರೆಯೂ ಇಲ್ಲದೆ ಒಬ್ಬ ರಾಜಕುಮಾರನಂತೆ ಸುಖದಿಂದ ಹೂವಿನ ಹಾಸಿಗೆಯಲ್ಲಿ ಮಲಗಿ ಜೀವನವನ್ನು ಸಾಗಿಸಬಹುದಾಗಿತ್ತು; ಆದರೆ ಸ್ವಸುಖವನ್ನು ಮರೆತು, ಸ್ವಜನರ ಸುಖದ ಚಿಂತೆಯಲ್ಲಿ ಮನಸ್ಸು ಕಳವಳಗೊಂಡ ಈ ಮಹನೀಯರು ಹಿಂದುಸ್ತಾನದೊಳಗಿನ ಸ್ಥಾನಿಕ ಸಂಸ್ಥೆಗಳಲ್ಲೆಲ್ಲ ಹೆಚ್ಚಿನದಾದ ಮುಂಬಯಿಯ ಕಾರ್ಪೊರೇಶನ್ನಿನ ಕಾರ್ಯಭಾರದಲ್ಲಿ ಮನಸ್ಸುಪಾಕಿ ೧೮೮೮ ರಿಂದ ೧೯೦೫ ರವರೆಗಿನ ಳಟ ವರ್ಷಗಳ ಅವಧಿಯಲ್ಲಿ ಪರಿಪರಿಯಿಂದ ದುಡಿದು ಅದಕ್ಕೊಂದು ಸುವ್ಯವಸ್ಥಿತ ಸ್ವರೂಪವನ್ನು ಕೊಡಲು ಕಾರಣರೆನ್ನಿಸಿದರು. ಆದುದರಿಂದ ಇವರಿಗೆ "ಮುಂಬಯಿ ನಗರದ ಸಿಂಹ" ಎಂದು ಹೇಳುವಂತಾಯಿತು. ಈ ದೀರ್ಘ ಕಾಲಾವಧಿಯಲ್ಲಿ ಅವರು ನೆರವೇರಿಸಿದ ಜನಹಿತದ ಕಾರ್ಯಗಳು ಅಷ್ಟಿಷ್ಟೆಂದು ಹೇಳುವಂತಿಲ್ಲ. ಇವರು ಅಕಾರಣವಾಗಿ ಸರಕಾರದ ವಿರೋಧವನ್ನು ಕಟ್ಟಿಕೊಳ್ಳದೆ ಇದ್ದರೂ ಜನತೆಯ ಹಿತವನ್ನು ಸಾಧಿಸುವದೇ ತಮ್ಮ ಅಧಿಕಾರದ ಗುರಿಯೆಂಬುದನ್ನು ಮಾತ್ರ ಎಂದೂ ಮರೆಯಲಿಲ್ಲ. ತಮ್ಮ ಮುಂದೆ ಬಂದ ಪ್ರತಿಯೊಂದು ಸಾರ್ವಜನಿಕ ಪ್ರಶ್ನೆಯಲ್ಲಿ ಜನತೆಯ ವಿರುದ್ಧಪಕ್ಷವನ್ನು ಸಯುಕ್ತಿಕವಾದ ನಿರ್ದಾಕ್ಷಿಣ್ಯದ ಸುಸ್ಪಷ್ಟ ಟೀಕೆಗಳಿಂದ ಖಂಡಿಸಿ ಸ್ವಪಕ್ಷವನ್ನು ಸಮರ್ಥಿಸಿ ಕಾರ್ಯಸಾಧಿಸಿಕೊಳ್ಳುವದು ಇವರ ವೈಶಿಷ್ಟ್ಯವಾಗಿದ್ದಿತು.

ಸರ್ ಫೆರೋಜಶಹಾ ಮೇಥಾರವರು ಘನವಿದ್ವಾಂಸರು, ಕಾಯಿದೆಯ ಪಂಡಿತರಾದ ಬ್ಯಾರಿಸ್ಟರರು, ಉಜ್ವಲ ದೇಶಭಕ್ತರು, ಜನತೆಯ ಸೇವಕರು, ಸರಿ. ಆದರೆ ಇಷ್ಟರಿಂದಲೇ ಅವರ ಗುಣವರ್ಣನೆ ತೀರದು. ನಮ್ಮ ದೇಶದಲ್ಲಿ ಇಂತಹ ಉದಾತ್ತ ಗುಣಗಳುಳ್ಳ ಮಹನೀಯರೆಷ್ಟೋ ಆಗಿಹೋಗಿರುವರು; ಆಗುತ್ತಲೂ ಇರುವರು. ದೇಶದ ಮುಂದಾಳುಗಳೆನ್ನಿಸಿಕೊಳ್ಳುವಂಥ ಮಹನೀಯರಲ್ಲಿ ಈ ಎಲ್ಲ ಗುಣಗಳು ಇರಲೇಬೇಕು. ಮೇಥಾರವರಲ್ಲಿ ಇವನ್ನೆಲ್ಲ ಮೀರಿದ ವೈಶಿಷ್ಟ್ಯಗಳು ಕೆಲವಿವೆ. ಸ್ವಾಭಿಮಾನ, ಧೈರ್ಯ, ಮಾತಿನಿಂದಲೂ ಕೃತಿಯಿಂದಲೂ ಪರರ ಮೇಲೆ ವರ್ಚಸ್ಸನ್ನು ಕೂಡಿಸುವ ಒಂದು ಬಗೆಯ ತೇಜಸ್ಸು, ಉಗ್ರವಾದ ಮುಖಚರ್ಯೆಯಿಂದೊಡಗೂಡಿದ ಗಾಂಭೀರ್ಯ ಇವು ಈ ಮಹಾನುಭಾವರ ವೈಶಿಷ್ಟ್ಯಗಳು. ಆದುದರಿಂದಲೇ ಇವರಿಗೆ 'ಹುಲಿ, ಸಿಂಹ' ಎಂಬ ಉಗ್ರ ಮೃಗಗಳ ಹೋಲಿಕೆಯ ದರ್ಪದರ್ಶಕವಾದ ಪದವಿಯು ದೊರೆದಿರುವದು.

ಲೋಕನಾಯಕರಲ್ಲಿ ಎರಡು ವರ್ಗಗಳನ್ನು ಕಲ್ಪಿಸುವದುಂಟು. ಜನತೆಯಲ್ಲಿ ಬೆರೆದು ಏಕಜೀವವಾಗಿ ಅವರ ಪ್ರೇಮವನ್ನು ಸಂಪಾದಿಸುವವರು ಒಂದು ಬಗೆಯವರು. ಆ ಜನತೆಯ ಮೇಲೆ ತಮ್ಮ ವರ್ಚಸ್ಸನ್ನು ಬೀರಿ ಅವರ ಮೇಲೆ ತಮ್ಮ ದರ್ಪವನ್ನು ಸ್ಥಾಪಿಸಿ ಜನತೆಯನ್ನು ತಮ್ಮ ಅಂಕೆಯಲ್ಲಿ ತಂದುಕೊಂಡು ಲೋಕನಾಯಕರೆನಿಸುವವರು ಎರಡನೆಯ ತರಗತಿಯವರು. ಮೇಥಾರವರು ಈ ಎರಡನೆಯ ವರ್ಗಕ್ಕೆ ಸೇರಿದವರು. ಗುರು ಶುಕ್ರರೇ ಮೊದಲಾದ ಗ್ರಹಗಳು ತಮ್ಮ ಉಪಗ್ರಹಗಳೊಡನೆ ಸೂರ್ಯನ ಸುತ್ತಲೂ ಸೇರಿ ಸೂರ್ಯಮಾಲೆಯೆನಿಸಿಕೊಳ್ಳುವಂತೆ ಆ ಕಾಲದ ನಮ್ಮ ದೇಶದ ಮುಂದಾಳುಗಳು ಮೇಥಾರವರ ಸುತ್ತಲೂ ನೆರೆದು ತಮ್ಮ ತಮ್ಮ ಕಾರ್ಯಕಲಾಪಗಳ ವಿಷಯದಲ್ಲಿ ಆಪ್ತಾಲೋಚನೆ ಮಾಡುತ್ತಿದ್ದರಂತೆ. ೧೮೭೦ ರಿಂದ ೧೯೧೫ ರ ವರೆಗಿನ ೪೫ ವರ್ಷಗಳಲ್ಲಿ ಉದ್ಭವಿಸಿದ ಹಿಂದುಸ್ತಾನದೊಳಗಿನ ಯಾವತ್ತು ಸಾರ್ವಜನಿಕ ಪ್ರಶ್ನೆಗಳಲ್ಲಿ ಈ ಮಹನೀಯರ ಅಂಗವು ಒಂದಿಲ್ಲೊಂದು ರೀತಿಯಿಂದ ಇದ್ದೇ ಇರುತ್ತಿತ್ತು. ಇಂತಹ ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿದ ಅವರ ಭಾಷಣಗಳನ್ನು ಸಂಗ್ರಹಿಸಿ ೯೦೦ ಪುಟಗಳನ್ನು ದೊಡ್ಡದಾದ ಒಂದು ಗ್ರಂಥವನ್ನು ಪ್ರಕಟಿಸಿರುವರು. ಇವರು ತಾವು ಪಾರ್ಸಿ ಧರ್ಮದವರಾದರೂ ಕೇವಲ ಆ ಧರ್ಮದವರ ಹಿತವನ್ನಷ್ಟೇ ಗುರಿಯಾಗಿಟ್ಟುಕೊಂಡು ಕೆಲಸ ಮಾಡುವದರ ಬದಲು ದೇಶೋದ್ಧಾರವನ್ನೇ ತಮ್ಮ ಹಿರಿಯ ಹಂಬಲವಾಗಿಟ್ಟುಕೊಂಡು ಯಾವಾಗಲೂ ನಡೆಯುತ್ತಿದ್ದರು; ಮತ್ತು ದೇಶದ ಉದ್ಧಾರವಾದರೆ ತನ್ನವರೂ ಸಹಜವಾಗಿಯೇ ಏಳ್ಗೆಯನ್ನು

ಪಡೆಯುವರೆಂಬ ಉಚ್ಚ ಭಾವನೆಯಿಂದ ಎಲ್ಲ ಕೆಲಸಗಳನ್ನು ನಡೆಯಿಸುತ್ತಿದ್ದರು. ಇವರ ಎಲ್ಲ ಸಾರ್ವಜನಿಕ ಭಾಷಣಗಳಲ್ಲಿಯೂ, ಕೃತಿಗಳಲ್ಲಿಯೂ ಈ ತರದ ಒಲವು ಸ್ಪಷ್ಟವಾಗಿ ಕಂಡುಬರುತ್ತಿತ್ತು.

ಮುಂಬಯಿಯ ಮ್ಯುನಸಿಪಾಲಿಟಿ, ವಿಶ್ವವಿದ್ಯಾನಿಲಯ, ಪ್ರಾಂತಿಕ ಕಾಯದೆಯ ಮಂಡಲ, ವರಿಷ್ಠ ಕಾಯದೆಯ ಮಂಡಲ ಈ ಎಲ್ಲ ಕಡೆಗಳಲ್ಲಿ ಜನತೆಯ ಪ್ರತಿನಿಧಿಗಳಾಗಿ ಕೆಲಸ ಮಾಡಿದ ಈ ಮಹನೀಯರು ಸರಕಾರಕ್ಕೂ ತುಂಬ ಮಾನ್ಯರಾಗಿದ್ದರು. ಅವರಿಗೆ ಸರಕಾರದವರು ೧೯೦೪ ರಲ್ಲಿ ಕೆ. ಸಿ. ಐ. ಇ. ಎಂಬ ಬಿರುದನ್ನು ಕೊಟ್ಟಿದ್ದರು. ಮುಂಬಯಿಯ ವಿಶ್ವವಿದ್ಯಾನಿಲಯದವರು ಇವರಿಗೆ ಎಲ್.ಎಲ್. ಡಿ. ಪದವಿಯನ್ನು ಅರ್ಪಿಸಿದ್ದರು.

ಸರ್ ಫೆರೋಜಶಹಾ ಮೇಥಾರವರು ಸರಕಾರಕ್ಕೂ ಜನತೆಗೂ ನಡುವಿದ್ದು ಎರಡೂ ಪಕ್ಷಗಳಲ್ಲಿ ಪರಸ್ಪರ ಪ್ರೀತಿವಿಶ್ವಾಸಗಳನ್ನು ಹುಟ್ಟಿಸಿ ದೇಶದ ಉದ್ಧಾರ ಮಾಡಬೇಕೆನ್ನುವ ಧೋರಣೆಯುಳ್ಳವರಾಗಿದ್ದರೆಂದು ಹೇಳುವದುಂಟು. ಅವರು ಮಾಡಿದ ಕೆಲಕೆಲವು ಭಾಷಣಗಳಲ್ಲಿ ಈ ಮಾತು ಸ್ಪಷ್ಟವಾಗಿದೆ. ೧೮೮೩ ರಲ್ಲಿ 'ಬಾಂಬೆ ಪ್ರೆಸಿಡೆನ್ಸಿ ಅಸೋಸಿಏಶನ್' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ಜನತೆಯ ಬೇಡಿಕೆಗಳನ್ನು ಸಯುಕ್ತಿಕವಾಗಿಯೂ ಸಮಂಜಸವಾಗಿಯೂ ಸರಕಾರದವರ ಮುಂದಿರಿಸುವ ಕೆಲಸವನ್ನು ಮೂವತ್ತು ವರ್ಷಗಳವರೆಗೆ ಬಿಟ್ಟುಬಿಡದೆ ನಡೆಯಿಸಿದರು. ಅದೇ ವರ್ಷವೇ ರಾಷ್ಟ್ರೀಯ ಮಹಾಸಭೆಯು ಉದಯವಾಗಲು ಅದನ್ನು ಸೇರಿ ಅಧ್ಯಕ್ಷರಾಗಿಯೂ ಅನುಗಾಲ ಸದಸ್ಯರಾಗಿಯೂ ಮಾಡಬೇಕಾದ ಕಾರ್ಯಗಳನ್ನು ಏಕನಿಷ್ಠೆಯಿಂದ ಮಾಡಿರುವರು. ಅವರ ಮಾತು ಯಾವಾಗಲೂ ಸಾಧಾರವಾಗಿರುತ್ತಿದ್ದಿತು. ಇಷ್ಟರಿಂದಲೇ ಶ್ರೋತೃವೃಂದವು ವಕ್ತಾರನಲ್ಲಿ ತಲ್ಲೀನವಾಗಲಾರದು; ಆದರೆ ಮೇಥಾರವರ ವಾಣಿಯಲ್ಲಿ ವಿಲಕ್ಷಣವಾದ ಓಜಸ್ಸು ಸೂಸುತ್ತಿದ್ದದರಿಂದ ಸಭಿಕರು ಪರವಶರಾಗಿಹೋಗುತ್ತಿದ್ದರು. ಸಿಂಹಗರ್ಜನೆಯಂತಹ ಗಂಭೀರ ವಾಣಿಯು ಶ್ರೋತೃಗಳ ಅಂತಃಕರಣವನ್ನು ಕಲಕಿಸಿಬಿಡುತ್ತಿತ್ತು. ಅಂಥದೇ ಉಗ್ರವಾದ ಮುಖಜರ್ಯೆಯು ಪ್ರತಿಪಕ್ಷದವರ ತೇಜಸ್ಸನ್ನೆಲ್ಲ ಕಂದಿಸಿಬಿಡುತ್ತಿದ್ದಿತು. ಅವರ ಧೈರ್ಯವೂ ಅಸಾಧಾರಣವಾದದ್ದು. ೧೮೭೭ ರಲ್ಲಿ ಒಮ್ಮೆ ಮುಂಬಯಿಯ ಗವ್ಹರ್ನರರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನೆರೆಯಿಸಿ "ಕೇವಲ ಯುರೋಪಿಯನ್ನರಷ್ಟೇ ಸ್ವಯಂಸೇವಕ (Volunteers) ರಾಗಲು ಅರ್ಹರು." ಎಂಬ ಒಂದು ಗೊತ್ತುವಳಿಯನ್ನು ಪಾಸುಮಾಡಿಕೊಳ್ಳಲು ಹಂಚಿಕೆ ನಡೆದಿತ್ತು. ಹಿಂದಿಗಳು ಈ ಯೋಗ್ಯತೆಗೆ ಅನರ್ಹರೆಂಬ

ಮುದ್ರಯನ್ನೊತ್ತುವದಕ್ಕೆ ಹಿಂದಿಗಳೇ ಕಾರಣರೆನಿಸುವದಕ್ಕೆ ನೆರೆದಿರುವ ಈ ಸಭೆಯ ಕಾರ್ಯಕಲಾಪಗಳು ಮೇಥಾರವರ ಸಂತಾಪಕ್ಕೆ ಕಾರಣವಾದವು. ಅವರು ಗವ್ಹರ್ನರಸಾಹೇಬರ ಎದುರಿಗೆ ನಿಂತು ನಿರ್ದಾಕ್ಷಿಣ್ಯದಿಂದ ಆ ಕಾರ್ಯವನ್ನು ವಿರೋಧಿಸಿ ಯಶಸ್ವಿಗಳಾದರು. ಹಿಂದವಾಸಿಗಳ ಶಸ್ತ್ರಗಳನ್ನು ಸೆಳೆದು ಕೊಂಡು ದೇಶದ ಕ್ಷತ್ರಿಯವೃತ್ತಿಯ ನಿರ್ಮೂಲನಗೊಳಿಸುವಂಥ ಶಸ್ತ್ರಸನ್ಯಾಸದ ಕಾಯದೆ (ಆರ್ಮ್ಸ್‌ಆಕ್ಟ್) ಯನ್ನು ವಿರೋಧಿಸಿದ ಹಿಂದವಾಸಿಗಳಲ್ಲಿ ಮೇಥಾರವರು ಮೊದಲಿಗರು. ೧೮೮೫ ರಲ್ಲಿ ನೆರೆದ ರಾಷ್ಟ್ರೀಯ ಮಹಾಸಭೆಯಲ್ಲಿ ಮಾಡಿದ ಇವರ ಉಪನ್ಯಾಸವು ಆಕರ್ಷಕವಾಗಿದ್ದಷ್ಟೇ ಪ್ರತಿಭಾಸಂಪನ್ನವೂ ಆಗಿದ್ದಿತು. ಆಗ ಅವರು ಬ್ರಿಟಿಷ ಸರಕಾರವು ಕಾಯಿದೆಯ ಬಲದಿಂದ ಇಡಿಯ ರಾಷ್ಟ್ರದ ಕ್ಷತ್ರಿಯ ತೇಜಸ್ಸನ್ನು ಕುಂದಿಸಿ ಪ್ರಜೆಗಳ ಸತ್ವವನ್ನು ಹೀರಲು ಬಯಸಿದರೆ ಅದು ಒಂದು ವೇಳೆ ಅವರಿಗೆ ಈಗ ಸುಂದರವಾಗಿ ತೋರಬಹುದು. ಆದರೆ ಕಾಲಾಂತರದಲ್ಲಿ ಅವರಿಗೆ ಒಮ್ಮಿಲ್ಲೊಮ್ಮೆ ತಮ್ಮ ಈ ಅನುಚಿತ ಕಾರ್ಯಕ್ಕಾಗಿ ಪಶ್ಚಾತ್ತಾಪವಾಗದೆ ಇರಲಾರದೆಂದೂ, ಹೀಗೆ ಇಡಿಯ ರಾಷ್ಟ್ರವನ್ನೇ ಪೌರುಷ ಹೀನವಾಗಿ ಮಾಡಬಯಸುವದರಲ್ಲಿ ಬ್ರಿಟಿಷ ಮುತ್ಸದ್ದಿಗಳ ಜಾಣತನವು ಪ್ರಕಟವಾಗುವದರ ಬದಲು ಅದೂರದರ್ಶಿತ್ವದ ಸಾಕ್ಷಿಯಾಗಿ ಉಳಿಯಬಹುದೆಂದೂ ಪ್ರತಿಪಾದಿಸಿದರು.

ವಿದ್ವತ್ತೆ, ವಕ್ತೃತ್ವ, ಹಿಡಿದ ಕೆಲಸವನ್ನು ಬಿಡದಿರುವ ಸತತ ಪ್ರಯತ್ನ, ನಿಸ್ಪೃಹತೆ, ಪರಪಕ್ಷದವರ ಮನವೊಲಿಸುವಿಕೆ ಇದಾವುದೂ ಸಾಧಿಸದಿದ್ದರೆ ಕಟು ತರವಾದ ಟೀಕಾಸ್ತ್ರವನ್ನಾದರೂ ಉಪಯೋಗಿಸಿ ದೇಶಸೇವೆಯ ತಮ್ಮ ಕಾರ್ಯಗಳನ್ನು ಸಾಧಿಸಿಕೊಂಡು ಕೀರ್ತಿಶಾಲಿಗಳಾದ ಈ ಮಹಾತ್ಮರ ಉಜ್ವಲವಾದ ಆತ್ಮಜ್ಯೋತಿಯು ೧೯೧೫ ನೆಯ ಇಸ್ವಿಯ ನೊವ್ಹೆಂಬರ ತಿಂಗಳ ೫ನೆಯ ತಾರೀಖಿನ ದಿನ ಪರಂಜ್ಯೋತಿಯಲ್ಲಿ ವಿಲೀನವಾಗಿ ದೊಡ್ಡದಾಯಿತು.

ಸಯಾಮು

ಚೀನದೇಶದ ದಕ್ಷಿಣಕ್ಕೆ ಬ್ರಹ್ಮದೇಶದಿಂದ ಪೂರ್ವದಿಕ್ಕಿಗೆ ಹಬ್ಬಿರುವ ವಿಶಾಲವಾದ ಭೂಭಾಗವು ತುಂಬ ಫಲಭರಿತವಾದ ಪ್ರದೇಶವಾಗಿದೆ. ಹವಾ ಮಳೆಗಳ ಅನುಕೂಲತೆಯಿಂದ ಭೂಮಿಯು ಫಲದ್ರೂಪವಾಗಿರುವದು. ಈ ಪ್ರದೇಶದ ಗುಡ್ಡಗಳಲ್ಲಿ ಗಗನಚುಂಬಿತವಾದ ಬಗೆಬಗೆಯ ಕಾಡುಗಿಡಗಳ ದಟ್ಟಡವಿಯು ಬೆಳೆದುನಿಂತಿರುವದು. ಈ ಅಡವಿಗಳಲ್ಲಿ ಆನೆ, ಹುಲಿ, ಸಿಂಹ ಗಳಂಥ ಪಶುಗಳೂ ಬಗೆಬಗೆಯ ಹಾವುಗಳೂ ವಿಪುಲವಾಗಿರುವವು. ದೇವದಾರು ವೃಕ್ಷಗಳು ಸಮೃದ್ಧವಾಗಿ ಬೆಳೆಯುವವು. ಈ ಪ್ರದೇಶದಲ್ಲಿ ರಾಜಕೀಯ ದೃಷ್ಟಿಯಿಂದ ಸಯಾಮವೆಂಬ ಒಂದು ಸ್ವತಂತ್ರ ದೇಶವೂ ಫ್ರೆಂಚ ಇಂಡೊ ಚಾಯನಾ ಎಂಬ ಪ್ರದೇಶವೂ ಸಮಾವೇಶವಾಗಿರುವವು.

ಸಯಾಮು ದೇಶವು ೧೯೩೯ ನೆಯ ಇಸ್ವಿಯಲ್ಲಿ ಥಾಯ್ (ಸ್ವತಂತ್ರ) ಲೇಂಡ್ (ದೇಶ) ಎಂಬ ಹೊಸ ಹೆಸರನ್ನು ಧರಿಸಿಕೊಂಡಿತು. ಮೊದಲು ಲೋಕ ದೀಪಕನೆಂಬ ಅರಸನು ಇದನ್ನು ಆಳುತ್ತಿದ್ದನು. ೧೯೩೨ನೆಯ ಇಸ್ವಿಯಲ್ಲಿ ಪ್ರಜೆಗಳ ಒತ್ತಾಯದಿಂದ ರಾಜ್ಯಕಾರಭಾರದ ಸೂತ್ರಗಳು ಒಂದು ಪ್ರತಿನಿಧಿ ಸಭೆಯ ಆಧೀನಕ್ಕೆ ಹೋದವು. ಅದರಲ್ಲಿ ಅರ್ಧದಷ್ಟು ಲೋಕನಿಯುಕ್ತ ಸಭಾಸದರೂ ಮಿಕ್ಕವರು ಸರಕಾರದಿಂದ ಆರಿಸಲ್ಪಟ್ಟವರೂ ಇರಬೇಕೆಂದು ಗೊತ್ತಾಯಿತು. ಪ್ರಜೆಗಳು ೧೯೩೫ ನೆಯ ಇಸ್ವಿಯಲ್ಲಿ ಹೂಡಿದ ಬಂಡಾಯದ ಪರಿಣಾಮವೆಂದು ಅರಸನಾದ ಪ್ರಜಾದೀಪಕನು ತನ್ನ ಅರಸೊತ್ತಿಗೆಯನ್ನು 'ಆನಂದ' ಎಂಬ ಅಲ್ಪವಯಸ್ಸಿನ ಬಾಲಕನಿಗೆ ಒಪ್ಪಿಸಿ ತಾನು ಇಂಗ್ಲಂಡಕ್ಕೆ ಹೋಗಿ ಸುಖವಸ್ತುವಾಗಿ ವಾಸಿಸಹತ್ತಿದ್ದಾನೆ. ಈಗ ಸಂಪೂರ್ಣ ಪ್ರಜಾಪ್ರತಿನಿಧಿಯಾದ ಸಭೆಯು ಎಲ್ಲ ರಾಜ್ಯಸೂತ್ರಗಳನ್ನು ಕೈಕೊಂಡಿರುವದು.

ಸಯಾಮದ ಹೊಸ ಸರಕಾರವು ೧೯೩೬ನೆಯ ಇಸ್ವಿಯಲ್ಲಿ ಪರದೇಶಗಳ ಸರಕಾರಗಳೊಡನೆ ಹೊಸ ಕರಾರುಗಳನ್ನು ಮಾಡಿಕೊಂಡಿತು. ಆಲ್ಲಿಯವರೆಗೂ ಈ ದೇಶದ ಮೇಲೆ ಗ್ರೇಟಬ್ರಿಟನ್ನದ ವರ್ಚಸ್ಸು ಹೆಚ್ಚಾಗಿದ್ದಿತು. ಇತ್ತೀಚೆಗೆ ಜಪಾನವು ಈ ಭಾಗದಲ್ಲಿ ತನ್ನ ವರ್ಚಸ್ಸನ್ನು ಬೀರಿತು. ಮೊನ್ನೆ ಹೂಡಿದ ಮಹಾಯುದ್ಧದಕಾಲದಲ್ಲಿ ಜಪಾನವು ತನ್ನ ಈ ವರ್ಚಸ್ಸಿನ ಮೂಲಕವಾಗಿಯೇ ಸ್ವಾತಂತ್ರ್ಯದಿಂದಿದ್ದ ಥಾಯ್‌ಲೆಂಡವನ್ನು ತನ್ನ ಬಗಲುಗೂಸಾಗಿ ಮಾಡಿಕೊಂಡು

ನ್ನ ಸೈನ್ಯಕ್ಕೆ ಮಾರ್ಗವನ್ನು ದೊರಕಿಸಿಕೊಂಡದ್ದಲ್ಲದೆ ಹತ್ತು ವರ್ಷಗಳ ವರೆಗೆ ನಡೆಯುವ ಒಂದು ಲಷ್ಕರೀ ಒಪ್ಪಂದವನ್ನು ಕೂಡ ಮಾಡಿಕೊಳ್ಳಲು ಸಾಧ್ಯವಾಯಿತು. ಇದೀಗ ಸಯಾಮದ ರಾಜಕೀಯ ವಿಷಯದ ವಿವೇಚನೆ.

ಸಯಾಮು ದೇಶದ ಪ್ರಾಕೃತಿಕ ಭೂಗೋಲವು ಕೂಡ ತುಂಬ ಆಕರ್ಷಕವಾಗಿರುವದು. ಇದು ಉಷ್ಣಕಟಿಬಂಧದಲ್ಲಿರುವದು. ಪಶ್ಚಿಮ ಉತ್ತರ ಪೂರ್ವ ಈ ಮೂರು ದಿಕ್ಕುಗಳಲ್ಲಿ ಎತ್ತರವಾದ ಪರ್ವತಶ್ರೇಣಿಗಳು ಹಬ್ಬಿರುವವು. ದಕ್ಷಿಣದಲ್ಲಿ ಸಮುದ್ರಸಾಮೀಪ್ಯವಿದೆ. ಆದ್ದರಿಂದ ಸಮೃದ್ಧಿಯಾಗಿ ಮಳೆಯಾಗುವದು. ಆದ್ದರಿಂದಲೇ ಪರ್ವತಗಳಲ್ಲಿ ದಟ್ಟಡವಿ ಹಬ್ಬಿದೆ. ಈ ಭಾಗದಲ್ಲಿ ಹುಟ್ಟುವ ನದಿಗಳು ಬಯಲುಗಳಲ್ಲಿ ಹರಿದು ತಮ್ಮ ನೆರೆಯ ಪ್ರದೇಶವನ್ನು ಫಲವತ್ತಾಗಿ ಮಾಡಿವೆ. ಈ ದೇಶದ ಕ್ಷೇತ್ರವು ತುಸು ಹೆಚ್ಚು ಕಡಿಮೆ ಮದ್ರಾಸ ಇಲಾಖೆಯಷ್ಟಿರುವದು. ಆದರೆ ಜನಸಂಖ್ಯೆಯು ವಿರಳವಾಗಿದೆ. ಮದ್ರಾಸ ಇಲಾಖೆಯಷ್ಟು ಎಂದರೆ ಸುಮಾರು ಒಂದೂವರೆ ಕೋಟಿ ಜನರು ಮಾತ್ರ ಇಲ್ಲಿ ವಾಸಿಸುವರು. ಆದ್ದರಿಂದ ಜನರಿಗೆ ಒಕ್ಕಲುತನದಿಂದ ಜೀವಿಸಲಿಕ್ಕೆ ಬೇಕಾದಷ್ಟು ಭೂಮಿಯುಂಟೆಂದು ಹೇಳಿದಂತಾಯಿತು. ಅಕ್ಕಿಯೇ ಇವರು ಬೆಳೆಯುವ ಮುಖ್ಯ ಧಾನ್ಯ. ಒಕ್ಕಲುತನದಿಂದ ಸರಕಾರಕ್ಕೆ ಒಟ್ಟು ಉತ್ಪನ್ನದಲ್ಲಿ ಅರ್ಧದಷ್ಟು ರಕಮು ದೊರೆಯುವದು. ಅಡವಿಯೊಳಗಿನ ದೇವದಾರು ವೃಕ್ಷಗಳ ವ್ಯವಸಾಯದಿಂದಲೂ ಸರಕಾರಕ್ಕೆ ದೊಡ್ಡ ರಕಮು ದೊರೆಯುವದು. ಒಟ್ಟು ಉತ್ಪನ್ನದಲ್ಲಿ ನೂರರಲ್ಲಿ ಳಂ ರಷ್ಟು ರಕಮು ಅರಣ್ಯಖಾತೆಯಿಂದ ಬರುವದಂತೆ.

ಸಯಾಮದಲ್ಲಿ ತವರು ದೊಡ್ಡಪ್ರಮಾಣದಿಂದ ದೊರೆಯುವದು. ಈ ದೇಶದ ಗುಡ್ಡಗಾಡುಗಳಲ್ಲಿಯೂ ಹಳ್ಳಕೊಳ್ಳಗಳಲ್ಲಿ ಹೊಲನೆಲಗಳಲ್ಲಿಯೂ ಎಲ್ಲಿ ನೋಡಿದಲ್ಲಿ ತವರು ದೊರೆಯುವದೆಂದು ಹೇಳುವರು. ಈ ತವರಿನ ವ್ಯವಸಾಯವನ್ನು ಕೂಡ ಸರಕಾರದವರು ತಮ್ಮ ಅಂಕಿತದಲ್ಲಿಟ್ಟುಕೊಂಡಿದ್ದಾರೆ.

ಹಡಗುಕಟ್ಟುವದು ಮಣ್ಣಿನ ಪಾತ್ರೆಗಳನ್ನು ಮಾಡುವದು ಮುಂತಾದ ಚಿಕ್ಕಪುಟ್ಟ ವ್ಯವಸಾಯಗಳು ಈ ದೇಶದಲ್ಲಿ ನಡೆಯುವವು.

ಬಾಂಕಾಕ ನಗರವು ಈ ದೇಶದ ರಾಜಧಾನಿಯು. ಇಲ್ಲಿಂದ ಸಿಂಗಾಪುರದ ವರೆಗೆ ರೈಲುದಾರಿಯಿರುವದು. ಬಾಂಕಾಕ ನಗರವು ಈ ದೇಶದೊಳಗಿನ ರೈಲುದಾರಿಗಳ ಕೇಂದ್ರದಲ್ಲಿರುವದು. ಹಲವು ಚಿಕ್ಕದೊಡ್ಡ ನದಿಗಳ ಪ್ರವಾಹದ ಮೂಲಕವಾಗಿ ಈ ದೇಶದಲ್ಲಿ ಮಳೆಗಾಲದ ಪ್ರವಾಸವು ಸುಖಕರವಾಗಿ ಸಾಗುವದಿಲ್ಲ. ಇತಾಲಿಯೊಳಗಿನ ವೇನಿಸ ನಗರದಂತೆ ಬಾಂಕಾಕ ನಗರವು ನದಿಗಳ

ಕಾಲುವೆಗಳ ಜಾಳಿಗೆಯಲ್ಲಿ ಪಸರಿಸಿರುವದು. ನದಿಗಳ ನೀರಿನ ಮೇ ತೇಲಾಡುವ ಮನೆಗಳಲ್ಲಿ ಜನರು ವಾಸಿಸುವದೂ ಉಂಟು. ಪರದೇಶದ ವಕೀಲರ ವಾಸಿಸುವಂಥ ಭವ್ಯವಾದ ಸುಂದರ ಕಟ್ಟಡಗಳೂ ಕೂಡ ನೀರಲ್ಲಿ ತೇಲಾಡುವ ಮನೆಗಳಾಗಿರುವವೆಂಬ ಮಾತಿನಿಂದ ಇಂಥ ಮನೆಗಳು ಈ ನಗರದಲ್ಲಿ ಯಾವ ಪ್ರಮಾಣದಲ್ಲಿರುವವೆಂಬದನ್ನು ತರ್ಕಿಸಬಹುದು. ಸದ್ಯಕ್ಕೆ ಈ ನಗರದ ಜನ ವಸತಿಯು ೬೫೦ ಸಾವಿರವಿರುವದಲ್ಲದೆ ಸುತ್ತಲಿನ ಶಾಖಾನಗರಗಳಲ್ಲಿಯ ಜನಸಂಖ್ಯೆಯು ದಿನದಿನಕ್ಕೆ ಹೆಚ್ಚುತ್ತಲೇ ಇದೆ.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಈ ದೇಶದಲ್ಲಿ ಯುರೋಪಿಯನ ವ್ಯಾಪಾರಿಗಳು ಹೆಚ್ಚಾಗಿರಲಿಲ್ಲ. ೧೯೨೦ ನೆಯ ಇಸ್ವಿಯಲ್ಲಿ ಬ್ರಿಟಿಷರೂ ಅಮೇರಿಕನ್ನರೂ ತಾವು ಆಕ್ರಮಿಸಿಕೊಂಡ ವ್ಯಾಪಾರದ ಹಕ್ಕುಗಳನ್ನು ಬಿಟ್ಟು ಕೊಡಬೇಕಾಯಿತು. ಜೀನೀ ವ್ಯಾಪಾರಿಗಳು ಕೆಲವರು ಇಲ್ಲಿ ಇದ್ದಾರೆ.

ಸಯಾಮೀ ಜನರು ಬೌದ್ಧ ಧರ್ಮದವರು. ರಾಜಧಾನಿಯಾದ ಬಾಂಕಾಕ ನಗರಲ್ಲಿಯೂ ಹಲವು ಬೌದ್ಧ ದೇವಾಲಯ (ಪಾಗೋಡಾ) ಗಳು ಅಲ್ಲಲ್ಲಿ ಕಾಣಬರುವವು. ಈ ದೇಶದಲ್ಲಿ ಪ್ರತಿ ಹದಿಮೂರು ಚೌರಸ ಮೈಲಿಗೆ ಒಂದರಂತೆ ಒಟ್ಟು ೨ ಸಾವಿರಕ್ಕಿಂತ ಹೆಚ್ಚು ಬೌದ್ಧ ದೇವಾಲಯಗಳಿರುವವಂತೆ.

ಕನ್ನಡ 'ವರ್ಷ ಪ್ರಾಯಿಕ್ಕು' ಪರೀಕ್ಷೆ ೧೯೪೩

ಬರುವ ವರ್ಷದ ವರ್ಷಪ್ರಾಯಿಕ್ಕು ಪರೀಕ್ಷೆಯ ತಾ|| ೨೬-೮-೧೯೪೩ನೆಯ ಗುರುವಾರ ದಿವಸ ಪ್ರಾರಂಭವಾಗಿ ಮುಂದಿನ ಎರಡುದಿವಸಗಳಲ್ಲಿ ನಡೆಯುವದು.

ಈ ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದವಾರರು ತಮ್ಮ ಅರ್ಜಿಯನ್ನು ತಾ|| ೧-೮-೧೯೪೩ ಕ್ಕೆ ಅಥವಾ ಅದಕ್ಕೂ ಮೊದಲೆ ಮೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ ದಕ್ಷಿಣಭಾಗ ಅವರಿಗೆ ಮುಟ್ಟುವಂತೆ ಕುಳುಹಿಸಿಕೊಡತಕ್ಕದ್ದು.

ಈ ಪರೀಕ್ಷೆಯ ಸಂಬಂಧದ ಹೆಚ್ಚಿನ ವಿವರಗಳನ್ನು ಪ್ರಾಥಮಿಕ ಶಿಕ್ಷಣ ಮಾಸಪತ್ರಿಕೆಯ ೧೯೪೨ ನೇ ಇಸ್ವಿ ಮೇ ತಿಂಗಳ ಸಂಚಿಕೆಯ ೨೫ ನೆಯ ಪುಟದಲ್ಲಿ ಪ್ರಕಟಿಸಲಾಗಿದೆ.

ಟ್ರೇ. ಕಾ. ಧಾರವಾಡ
೧೦-೯-೧೯೪೨

ಸಹಿ/ H. S. Toragal,
ಪ್ರಿನ್ಸಿಪಾಲರು.

ಕೋಷ್ಟಕಗಳು

ನಮ್ಮ ಇಲಾಖೆಯ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಪ್ರಕಾರದ ತೂಕ ಅಳತೆಗಳ ಲೆಕ್ಕಗಳೂ ಮಾಪುಗಳೂ ಪ್ರಚಾರದಲ್ಲಿರುವದರಿಂದ ವ್ಯವಹಾರಕ್ಕೆ ತೊಂದರೆಯಾಗುವದಲ್ಲದೆ ತಗಲು ಲೆಕ್ಕಗಳಿಗೂ ಅಸ್ಪದವುಂಟಾಗುತ್ತಿತ್ತು. ಈ ಸಂಗತಿಯು ಸರಕಾರದ ಲಕ್ಷ್ಯಕ್ಕೆ ಬಂದದ್ದರಿಂದ ೧೯೩೨ ನೆಯ ಇಸವಿಯಲ್ಲಿ ಮುಂಬಯಿ ಸರಕಾರದವರು ಒಂದು ಕಾಯಿದೆಯನ್ನು ಪಾಸುಮಾಡಿ ಇಡಿಯ ಇಲಾಖೆಯಲ್ಲೆಲ್ಲ ಒಂದೇ ಬಗೆಯ ತೂಕ ಅಳತೆಗಳ ಪರಿಮಾಣಗಳು ಪ್ರಚಾರದಲ್ಲಿ ಬರುವಂತೆ ಮಾಡಿದರು. ಈ ಕಾಯಿದೆಯಂತೆ ೧೯೩೬ ನೆಯ ಇಸವಿಯ ಮಾರ್ಚ ಮೊದಲನೆಯ ತಾರೀಖಿನಿಂದ ಹೊಸ ತೂಕ ಅಳತೆಗಳ ಮಾಪುಗಳೂ ಲೆಕ್ಕಗಳೂ ಪ್ರಚಾರದಲ್ಲಿ ಬಂದವು. ಅಂದಿನಿಂದ ಹಳೆಯ ತೂಕ ಅಳತೆಗಳ ಮಾಪುಗಳನ್ನು ತೂಕ ಅಳತೆಗಳಿಗೆ ಉಪಯೋಗಿಸುವದಾಗಲಿ ಲೆಕ್ಕದಲ್ಲಿ ಹಿಡಿಯುವದಾಗಲಿ ಕಾಯಿದೆಯಂತೆ ಅಪರಾಧವಾಗುವದು. ಹೀಗಿದ್ದರೂ ಎಷ್ಟೋ ಕಡೆಗಳಲ್ಲಿ ಖಾಸಗಿ ವ್ಯವಹಾರಗಳಲ್ಲಿ ಇನ್ನೂ ಹಳೆಯ ಮಾಪುಗಳನ್ನೇ ಉಪಯೋಗಿಸುವದೂ ಅದರಂತೆ ಲೆಕ್ಕ ಮಾಡುವದೂ ಕಂಡುಬರುವದು. ಹಲಕೆಲವು ಪಾಠ ಪುಸ್ತಕಗಳಲ್ಲಿಯೂ ಸಹ ತೂಕ ಅಳತೆಗಳ ಹಳೆಯ ಕೋಷ್ಟಕಗಳನ್ನೇ ಕೊಟ್ಟಿರುವದೂ ಉಂಟು. ಪಾಠ ಪುಸ್ತಕಗಳಲ್ಲಿ ಇವು ಇರುವದರಿಂದ ಇವನ್ನು ವ್ಯವಹಾರದಲ್ಲಿ ಉಪಯೋಗಿಸಬಹುದೆಂದು ಅಪ್ರತ್ಯಕ್ಷವಾಗಿ ಸೂಚಿತವಾಗುವ ಸಂಭವವಿರುವದು; ಆದ್ದರಿಂದ ಪಾಠ ಪುಸ್ತಕಗಳಲ್ಲಿ ಈ ಹಳೆಯ ಕೋಷ್ಟಕಗಳಿರುವದು ತೀರ ಅಯೋಗ್ಯವಾಗುವದು.

(೧) ಈ ಮೊದಲು ಪ್ರಕಟವಾದ ಅಥವಾ ಇನ್ನು ಮುಂದೆ ಪ್ರಕಟವಾಗಬಹುದಾದ ಶಾಲೋಪಯೋಗಕ್ಕೆ ತಕ್ಕವೆನಿಸುವ ಗಣಿತದ ಅಥವಾ ವಾಚನದ ಇಲ್ಲವೆ ಬೇರೆ ವಿಷಯದ ಎಲ್ಲ ಪುಸ್ತಕಗಳಲ್ಲಿ (ಮುಂದೆ ಹೇಳುವ) ಹೊಸ ಬಗೆಯ ಕೋಷ್ಟಕಗಳನ್ನೇ ಉಪಯೋಗಿಸಬೇಕೆಂದು ಎಲ್ಲ ಗ್ರಂಥಕರ್ತರಿಗೂ ಪ್ರಕಾಶಕರಿಗೂ ಈ ಮೂಲಕ ಸೂಚನೆ ಕೊಡಲಾಗಿದೆ.

(೨) ಎಲ್ಲ ಶಿಕ್ಷಕರು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಈ ಹೊಸ ಕೋಷ್ಟಕಗಳನ್ನಷ್ಟೇ ಕಲಿಸಬೇಕಲ್ಲದೆ ಯಾವಕಾರಣದಿಂದಲೂ ಹಳೆಯ ಕೋಷ್ಟಕಗಳನ್ನು ಕಲಿಸಕೂಡದು.

ಮುಂಬಯಿ ಸರಕಾರದ ೧೯೩೨ನೆಯ ಇಸವಿಯ ತೂಕ ಮಾಪುಗಳ ಕಾಯಿದೆಯ ಪ್ರಕಾರ ಮುಂಬಯಿ ಪ್ರಾಂತದಲ್ಲಿ ಉಪಯೋಗಿಸಬೇಕಾದ ತೂಕ ಳಿತೆಗಳ ಮಾಪುಗಳ ಕೋಷ್ಟಕಗಳು.

ತೂಕಗಳು

೧. **ಎಲ್ಲ ವ್ಯವಹಾರಗಳಲ್ಲಿ:—**

(ಅ) ತೊಲೆ, ಸೇರು, ಮತ್ತು ಮಣ (ಹಿಂದಪದ್ಧತಿಯ ತೂಕಗಳು)

೧ ತೊಲೆ=೧೮೦ ಗ್ರೇನುಗಳು

೮೦ ತೊಲೆಗಳು=೧ ಸೇರು.

೪೦ ಸೇರುಗಳು=೧ ಮಣ.

ಸೇರಿನ ಭಾಗಗಳಾದ ½ ಸೇರು, ¼ ಸೇರು, ⅛ ಮತ್ತು ೧/೧೬ ಸೇರುಗಳಿಗೆ ವ್ಯವಹಾರದಲ್ಲಿ ಸಾಮಾನ್ಯವಾಗಿ ಅಚ್ಚೇರು ಪಾವಸೇರು ಅರಪಾವು ಮತ್ತು ಚಟಾಕು ಎಂದು ಅನ್ನುತ್ತಾರೆ.

(ಬ) ಅವಾರ್ಡಪಾಯಿಸ್‌ವೇಟ– (ಒಣ ಪದಾರ್ಥಗಳನ್ನು ತೂಗುವ) ಇಂಗ್ಲಿಷ ಪದ್ಧತಿಯ ತೂಕಗಳು.

ಒಂದು ಪೌಂಡಿಗೆ ರತ್ತಲ ಎಂದೂ ಅನ್ನುತ್ತಾರೆ. ಇದರ ತೂಕವು ೭೦೦೦ ಗ್ರೇನುಗಳಿಗೆ ಸರಿ ಇರುತ್ತದೆ.

೧೬ ದ್ರಾಮುಗಳು=೧ ಔಂಸು

೧೬ ಔಂಸುಗಳು=೧ ಪೌಂಡು

೨೮ ಪೌಂಡುಗಳು=೧ ಕ್ವಾರ್ಟರು

೪ ಕ್ವಾರ್ಟರುಗಳು=೧ ಹಂಡ್ರಡ್ವೇಟು

೨೦ ಹಂಡ್ರಡ್ವೇಟುಗಳು=೧ ಟನ್ನು=೨೨೪೦ ಪೌಂಡು.

ವಿಶೇಷ ಸೂಚನೆ:— ಇಂಗ್ಲಿಷ ಹಾಗು ಹಿಂದಪದ್ಧತಿಯ ತೂಕಗಳಲ್ಲಿಯ ಸಂಬಂಧವನ್ನು ಕೆಳಗೆ ತೋರಿಸಿದೆ.

೧ ಸೇರು = ೮೦ ತೊಲೆಗಳು = ೧೪೪೦೦ ಗ್ರೇನುಗಳು.

೨ ಪೌಂಡುಗಳು = ೨೭·೪೪ ತೊಲೆಗಳು = ೧೪೦೦೦ ಗ್ರೇನುಗಳು

ಆದ್ದರಿಂದ ೧ ಸೇರು ಹಾಗು ೨ ಪೌಂಡುಗಳ ನಡುವೆ ೪೦೦ ಗ್ರೇನುಗಳ ಅಂತರವು ಕಂಡುಬರುತ್ತದೆ. ೪೦೦ ಗ್ರೇನುಗಳು ಸರಾಸರಿ ೨½ ತೊಲೆಗಳಿಗೆ ಸರಿಯಾಗುವವು. ಇವೆರಡು ತೂಕಗಳನ್ನು ನೋಟದಿಂದಲೇ ತಿಳಿದುಕೊಳ್ಳಬಹುದು. ಸೇರುಗಳ ಸೆಟ್ಟಿನ ಕಲ್ಲುಗಳು ದುಂಡಗೂ ಪೌಂಡುಗಳ ಸೆಟ್ಟಿನ ಕಲ್ಲುಗಳು ಚೌಕಾಗಿಯೂ ಇರುತ್ತವೆ.

೨. **ಬಂಗಾರ ಬೆಳ್ಳಿಗಳನ್ನು ತೂಕಮಾಡಲಿಕ್ಕೆ:—**

೧ ವಾಲ = ೪½ ಗ್ರೇನುಗಳು

೪೦ ವಾಲಗಳು = ೧ ತೊಲೆ = ೧೮೦ ಗ್ರೇನುಗಳು.

ವಿಶೇಷ ಸೂಚನೆ :— ಬೆಳ್ಳಿಬಂಗಾರದ ತೂಕದ ಈಗಿನ ಹಾಗು ಮೊದಲಿನ ಅಳತೆ ಗಳನ್ನು ಗುರುತಿಸುವದಕ್ಕೆ ಮೊದಲಿನ ಕಲ್ಲುಗಳ ಮೇಲೆ " ಬುಲಿಯನ್ ತೋಲಾ " ಎಂದು ಬರೆದಿದ್ದಾರೆ. ಅವುಗಳ ಆಕಾರವು ಸಿಲಿಂಡರಿನಂತೆ ಅದೆ. ಈಗಿನವು ಮಾತ್ರ ಹಲಚಿಯಾಗಿದ್ದು ಗುಂಡಗಿರುತ್ತವೆ.

೬. ವಜ್ರ, ಮುತ್ತು, ರತ್ನಗಳ ತೂಕಮಾಡಲಿಕ್ಕೆ :—

೬೨ ರತಿಗಳು=೧ ತೊಲೆ

೧ ರತಿ=೨-೯೦೩ ಗ್ರೇನುಗಳು

೪. ದವಾಖಾನೆಗಳಲ್ಲಿಯೂ ಔಷಧವಮಾರುವ ಅಂಗಡಿಗಳಲ್ಲಿಯೂ ಉಪಯೋಗ ಮಾಡುವ ತೂಕಗಳು:—

೨೦ ಗ್ರೇನುಗಳು=೧ ಸ್ಕ್ರೂಪಲ್

೩ ಸ್ಕ್ರೂಪಲ್ಲುಗಳು=೧ ದ್ರಾಮು.

೮ ದ್ರಾಮುಗಳು=೧ ಔಂಸ=೪೮೦ ಗ್ರೇನುಗಳು.

ವಿಶೇಷ ಸೂಚನೆ :— ಔಷಧಾಲಯಗಳಲ್ಲಿ ಉಪಯೋಗಿಸುವ ಒಂದು ಔಂಸಿನಿಂದ ಮತ್ತು ಔಂಸುಗಳವರೆಗಿನ ಕಲ್ಲುಗಳ ಮೇಲೆ " Apoth " ಎಂದು ಮುದ್ರಿಸಿರುತ್ತಾರೆ.

ಅಳತೆಯ ಕೋಷ್ಟಕ

೧. ಕಾಳು-ಕಡಿಗಳನ್ನು ಅಳೆಯಲಿಕ್ಕೆ :—

ಹವೆಯಿಲ್ಲದ– ಶುದ್ಧವಾದ– ಒಂದು ಸೇರು ನೀರಿನ ತೂಕವು ೮೦ ತೊಲೆ ಗಳಿಗೆ ಸರಿ ಇರುತ್ತದೆ. ಇಂಥ ಒಂದು ಸೇರಿನ ಮಾಪು ಪ್ರವಾಹಿ ಪದಾರ್ಥ ಗಳನ್ನೂ ಕಾಳುಗಳನ್ನೂ ಅಳೆಯಲಿಕ್ಕೆ ಉಪಯೋಗವಾಗುವದು.

೨ ಸೇರುಗಳು=೧ ಅಧೊಲಿ

೨ ಅಧೊಲಿಗಳು=೧ ಪಾಯಲಿ

೧೬ ಪಾಯಲಿಗಳು=೧ ಮಣ=೬೪ ಸೇರುಗಳು.

೨ ಮಣಗಳು=೧ ಮಾಪು.

ವಿಶೇಷ ಸೂಚನೆ :— ಸೇರಿನ $\frac{1}{2}$, $\frac{1}{4}$, $\frac{1}{8}$ ಹಾಗು $\frac{1}{16}$ ಭಾಗಗಳಿಗೆ ವ್ಯವಹಾರದಲ್ಲಿ ಅಚ್ಚೇರು, ಪಾವಸೇರು, ಅರಪಾವು ಚಟಾಕು ಎಂದು ಅನ್ನುತ್ತಾರೆ.

೨. ಹಾಲು ಎಣ್ಣೆ ಮುಂತಾದ ಆಹಾರದ ಪ್ರವಾಹಿಪದಾರ್ಥಗಳ ಅಳತೆಯ ಕೋಷ್ಟಕವು :—

೧೬ ಚಟಾಕುಗಳು = ೧ ಸೇರು.

೪೦ ಸೇರುಗಳು = ೧ ಮಣ.

೩. ಔಷಧಗಳನ್ನು ಅಳೆಯಲಿಕ್ಕೆ :—

೬೦ ಮಿನಿವ್ಸು (ಹನಿಗಳು) = ೧ ಪ್ರವಾಹಿ ಡ್ರಾಮು.

೮ ಡ್ರಾಮುಗಳು = ೧ ಪ್ರವಾಹಿ ಔಂಸ.

ಮುಂಬಯಿ ಸರಕಾರದ ೧೯೩೨ನೆಯ ಇಸವಿಯ ತೂಕ ಮಾಪುಗಳ ಕಾಯಿದೆಯ ಪ್ರಕಾರ ಮುಂಬಯಿ ಪ್ರಾಂತದಲ್ಲಿ ಉಪಯೋಗಿಸಬೇಕಾದ ತೂಕ ಅಳತೆಗಳ ಮಾಪುಗಳ ಕೋಷ್ಟಕಗಳು.

ತೂಕಗಳು

೧. ಎಲ್ಲ ವ್ಯವಹಾರಗಳಲ್ಲಿ:—

(ಅ) ತೊಲೆ, ಸೇರು, ಮತ್ತು ಮಣ (ಹಿಂದಪದ್ಧತಿಯ ತೂಕಗಳು)

೧ ತೊಲೆ=೧೮೦ ಗ್ರೇನುಗಳು

೮೦ ತೊಲೆಗಳು=೧ ಸೇರು.

೪೦ ಸೇರುಗಳು=೧ ಮಣ.

ಸೇರಿನ ಭಾಗಗಳಾದ ½ ಸೇರು, ¼ ಸೇರು, ⅛ ಮತ್ತು ೧/೧೬ ಸೇರುಗಳಿಗೆ ವ್ಯವಹಾರದಲ್ಲಿ ಸಾಮಾನ್ಯವಾಗಿ ಅಚ್ಚೇರು ಪಾವಸೇರು ಅರಪಾವು ಮತ್ತು ಚಟಾಕು ಎಂದು ಅನ್ನುತ್ತಾರೆ.

(ಬ) ಅವಾರ್ಡಪಾಯಿಸ್‌ವೇಟ- (ಒಣ ಪದಾರ್ಥಗಳನ್ನು ತೂಗುವ) ಇಂಗ್ಲಿಷ ಪದ್ಧತಿಯ ತೂಕಗಳು.

ಒಂದು ಪೌಂಡಿಗೆ ರತ್ತಲ ಎಂದೂ ಅನ್ನುತ್ತಾರೆ. ಇದರ ತೂಕವು ೭೦೦ ಗ್ರೇನುಗಳಿಗೆ ಸರಿ ಇರುತ್ತದೆ.

೧೬ ದ್ರಾಮುಗಳು=೧ ಔಂಸು

೧೬ ಔಂಸುಗಳು=೧ ಪೌಂಡು

೨೮ ಪೌಂಡುಗಳು=೧ ಕ್ವಾರ್ಟರು

೪ ಕ್ವಾರ್ಟರುಗಳು=೧ ಹಂಡ್ರಡ್ವೇಟು

೨೦ ಹಂಡ್ರಡ್ವೇಟುಗಳು=೧ ಟನ್ನು=೨೨೪೦ ಪೌಂಡು.

ವಿಶೇಷ ಸೂಚನೆ:— ಇಂಗ್ಲಿಷ ಹಾಗು ಹಿಂದಪದ್ಧತಿಯ ತೂಕಗಳಲ್ಲಿಯ ಸಂಬಂಧವನ್ನು ಕೆಳಗೆ ತೋರಿಸಿದೆ.

೧ ಸೇರು = ೮೦ ತೊಲೆಗಳು = ೧೪೪೦೦ ಗ್ರೇನುಗಳು.

೨ ಪೌಂಡುಗಳು = ೨೨.೮೪ ತೊಲೆಗಳು = ೧೪೦೦೦ ಗ್ರೇನುಗಳು

ಆದ್ದರಿಂದ ೧ ಸೇರು ಹಾಗು ೨ ಪೌಂಡುಗಳ ನಡುವೆ ೪೦೦ ಗ್ರೇನುಗಳ ಅಂತರವು ಕಂಡುಬರುತ್ತದೆ. ೪೦೦ ಗ್ರೇನುಗಳು ಸರಾಸರಿ ೨½ ತೊಲೆಗಳಿಗೆ ಸರಿಯಾಗುವವು. ಇವೆರಡು ತೂಕಗಳನ್ನು ನೋಟದಿಂದಲೇ ತಿಳಿದುಕೊಳ್ಳಬಹುದು. ಸೇರುಗಳ ಸೆಟ್ಟಿನ ಕಲ್ಲುಗಳು ದುಂಡಗೂ ಪೌಂಡುಗಳ ಸೆಟ್ಟಿನ ಕಲ್ಲುಗಳು ಚೌಕಾಗಿಯೂ ಇರುತ್ತವೆ.

೨. ಬಂಗಾರ ಬೆಳ್ಳಿಗಳನ್ನು ತೂಕಮಾಡಲಿಕ್ಕೆ:—

೧ ವಾಲ = ೪½ ಗ್ರೇನುಗಳು

೪೦ ವಾಲಗಳು = ೧ ತೊಲೆ = ೧೮೦ ಗ್ರೇನುಗಳು.

ವಿಶೇಷ ಸೂಚನ :— ಬೆಳ್ಳಿಬಂಗಾರದ ತೂಕದ ಈಗಿನ ಹಾಗು ಮೊದಲಿನ ಅಳತೆಗಳನ್ನು ಗುರುತಿಸುವದಕ್ಕೆ ಮೊದಲಿನ ಕಲ್ಲುಗಳ ಮೇಲೆ " ಬುಲಿಯನ್ ತೋಲಾ " ಎಂದು ಬರೆದಿದ್ದಾರೆ. ಅವುಗಳ ಆಕಾರವು ಸಿಲಿಂಡರಿನಂತೆ ಅದೆ. ಈಗಿನವು ಮಾತ್ರ ಹಲಚಿಯಾಗಿದ್ದು ದುಂಡಗಿರುತ್ತವೆ.

೩. ವಜ್ರ, ಮುತ್ತು, ರತ್ನಗಳ ತೂಕಮಾಡಲಿಕ್ಕೆ:—

೬೨ ರತಿಗಳು=೧ ತೊಲೆ
೧ ರತಿ=೨-೯೦೩ ಗ್ರೇನುಗಳು

೪. ದವಾಖಾನೆಗಳಲ್ಲಿಯೂ ಔಷಧವಮಾರುವ ಅಂಗಡಿಗಳಲ್ಲಿಯೂ ಉಪಯೋಗ ಮಾಡುವ ತೂಕಗಳು:—

೨೦ ಗ್ರೇನುಗಳು=೧ ಸ್ಕ್ರೂಪಲ್
೩ ಸ್ಕ್ರೂಪಲ್ಲುಗಳು=೧ ದ್ರಾಮು.
೮ ದ್ರಾಮುಗಳು=೧ ಔಂಸ=೪೮೦ ಗ್ರೇನುಗಳು.

ವಿಶೇಷ ಸೂಚನೆ :— ಔಷಧಾಲಯಗಳಲ್ಲಿ ಉಪಯೋಗಿಸುವ ಒಂದು ಔಂಸಿನಿಂದ ಮತ್ತು ಔಂಸುಗಳವರೆಗಿನ ಕಲ್ಲುಗಳ ಮೇಲೆ " Apoth " ಎಂದು ಮುದ್ರಿಸಿರುತ್ತಾರೆ.

ಅಳತೆಯ ಕೋಷ್ಟಕ

೧. ಕಾಳು-ಕಡಿಗಳನ್ನು ಅಳೆಯಲಿಕ್ಕೆ:—

ಹವೆಯಿಲ್ಲದ- ಶುದ್ಧವಾದ- ಒಂದು ಸೇರು ನೀರಿನ ತೂಕವು ೪೦ ತೊಲೆಗಳಿಗೆ ಸರಿ ಇರುತ್ತದೆ. ಇಂಥ ಒಂದು ಸೇರಿನ ಮಾಪು ಪ್ರವಾಹಿ ಪದಾರ್ಥಗಳನ್ನೂ ಕಾಳುಗಳನ್ನೂ ಅಳೆಯಲಿಕ್ಕೆ ಉಪಯೋಗವಾಗುವದು.

೨ ಸೇರುಗಳು=೧ ಅಧೊಲಿ
೨ ಅಧೊಲಿಗಳು=೧ ಪಾಯಲಿ
೧೬ ಪಾಯಲಿಗಳು=೧ ಮಣ=೬೪ ಸೇರುಗಳು.
೨ ಮಣಗಳು=೧ ಮಾಪು.

ವಿಶೇಷ ಸೂಚನೆ :— ಸೇರಿನ $\frac{1}{2}$, $\frac{1}{4}$, $\frac{1}{8}$ ಹಾಗು $\frac{1}{16}$ ಭಾಗಗಳಿಗೆ ವ್ಯವಹಾರದಲ್ಲಿ ಅಚ್ಚೇರು, ಪಾವಸೇರು, ಅರಪಾವು ಚಟಾಕು ಎಂದು ಅನ್ನುತ್ತಾರೆ.

೨. ಹಾಲು ಎಣ್ಣೆ ಮುಂತಾದ ಆಹಾರದ ಪ್ರವಾಹಿಪದಾರ್ಥಗಳ ಅಳತೆಯ ಕೋಷ್ಟಕವು :—

೧೬ ಚಟಾಕುಗಳು = ೧ ಸೇರು.
೪೦ ಸೇರುಗಳು = ೧ ಮಣ.

೩. ಔಷಧಗಳನ್ನು ಅಳೆಯಲಿಕ್ಕೆ :—

೬೦ ಮಿನಿಮ್ಸು (ಹನಿಗಳು) = ೧ ಪ್ರವಾಹಿ ಡ್ರಾಮು.
೮ ಡ್ರಾಮುಗಳು = ೧ ಪ್ರವಾಹಿ ಔಂಸ.

೨೦ ಔಂಸಗಳು = ೧ ಪಿಂಟ
೮ ಪಿಂಟುಗಳು = ೧ ಇಂಪೀರಿಯಲ್ ಗ್ಯಾಲನ್ = ೧೬೦ ದ್ರವಾಹಿ ಔಂಸಗಳು.

ವಿಶೇಷ ಸೂಚನೆ:— ಒಂದು ಇಂಪೀರಿಯಲ್ ಗ್ಯಾಲನ್ ಶುದ್ಧನೀರಿನ ತೂಕ = ೧೦ ಪೌಂಡುಗಳು; ಒಂದು ಔಂಸು ಶುದ್ಧನೀರಿನ ತೂಕ= ೪೩೭.೫ ಗ್ರೇನುಗಳು.

೪. ಮೂಡಕ ಪೇಯಗಳ ಅಳತೆಗಳು:—

೨ ದ್ರವಾಹಿ ಔಂಸಗಳು = ೧ ಪೆಗ್.
೮೦ ಪೆಗ್ಗುಗಳು = ೧ ಇಂಪೀರಿಯಲ್ ಗ್ಯಾಲನ್ = ೪೮ ಲಿಕರ್ ಡ್ರ್ಯಾಮ್.

೫. ಪೆಟ್ರೋಲ, ಮೊಬಿಲಾಯಿಲ್, ಮೊದಲಾದ ಎಣ್ಣೆಗಳ ಅಳತೆಗಳ ಕೋಷ್ಟಕ:—

೪ ಗಿಲ್ಸ್ = ೧ ಪಿಂಟ್.
೨ ಪಿಂಟುಗಳು = ೧ ಕ್ವಾರ್ಟ್.
೪ ಕ್ವಾರ್ಟ್‌ಗಳು = ೧ ಗ್ಯಾಲನ್.

ಉದ್ದಳತೆಯ ಕೋಷ್ಟಕ

೧೨ ಇಂಚುಗಳು = ೧ ಫೂಟು.
೩ ಫೂಟುಗಳು = ೧ ಯಾರ್ಡು.
೫೫೦ ಯಾರ್ಡುಗಳು = ೧ ಫರ್ಲಾಂಗ.
೮ ಫರ್ಲಾಂಗುಗಳು = ೧ ಮೈಲು.

ಕ್ಷೇತ್ರಮಾಪನ

೧೪೪ ಚೌರಸ ಇಂಚುಗಳು = ೧ ಚೌರಸಫೂಟು.
೯ ಚೌರಸ ಫೂಟುಗಳು = ೧ ಚೌರಸಯಾರ್ಡ.
೧೦೦ ಚೌರಸ ಫೂಟುಗಳು = ೧ ಚೌರಸ (ಸ್ಕ್ವೇರ್)
೧೬ ಆಣೆಗಳು = ೧ ಗುಂಠೆ.
೪೦ ಗುಂಠೆಗಳು = ೧ ಎಕರೆ = ೪೮೪೦ ಚೌ. ಯಾ. ಗಳು.

ಘನಮಾಪನ

೧೭೨೮ ಘನ ಇಂಚುಗಳು = ೧ ಘನಫೂಟು.
೨೭ ಘನಫೂಟುಗಳು = ೧ ಘನಯಾರ್ಡು.
೧೨೮ ಘನಫೂಟುಗಳು = ೧ ಬ್ರಾಸ್.

ಪತ್ರಗಳ ಮುಖ್ಯಾಂಶಗಳು

ತಾಳಿಕೋಟೆ :—(ವಿಜಾಪುರ ಜಿಲ್ಲೆ) ೮–೭–೧೯೨೨ನೆಯ ದಿವಸ ಈ ಭಾಗದ ಶಿ. ಶಿ. ಸಮ್ಮೇಲನವು ಅ. ಡೆ. ಎ. ಇ. ಅವರಾದ ಶ್ರೀಮಾನ್ **ಜೇರೆ** ಸಾಹೇಬರ ನೇತೃತ್ವದಲ್ಲಿ ಜರುಗಿತು. ಆಡಂಬರದ ಯಾವ ಕಾರ್ಯಕ್ರಮವೂ ಇರದೆ, ಉಪಯುಕ್ತವಾದ ಪಾಠ, ಡ್ರಿಲ್, ಆಟ, ಸಾಭಿನಯ ಗೀತ. ಕೋಲಾಟ ಮೊದಲಾದವು ಚೆನ್ನಾಗಿ ಸಾಗಿದವು.

ತಿಳಿಸಿದವರು :—ಶ್ರೀ. ಏ. ಬಿ. ಜೋಶಿ, ಹೆ। ಮಾ। ತಾಳಿಕೋಟೆ.

ಗೊಳಸಂಗಿ :— (ವಿಜಾಪುರ ಜಿಲ್ಲೆ) ೧೮–೭–೧೯೨೨ನೆಯ ದಿವಸ ಅ. ಡೆ. ಎ. ಇ. ಅವರಾದ ಶ್ರೀಮಾನ್ **ಎಸ್. ಪಿ. ಪಾಟೀಲ** ಸಾಹೇಬರ ಅಧ್ಯಕ್ಷತೆಯಲ್ಲಿ ಈ ಭಾಗದ ಶಿ. ಶಿ. ಸಮ್ಮೇಲನವು ನೆರವೇರಿತು. ಮಾದರಿಯ ಪಾಠ, ಸಂಭಾಷಣೆ, ಆಟ ಮೊದಲಾದವು ನಡೆದ ಬಳಿಕ ಅಧ್ಯಕ್ಷರ ರಸಭರಿತವಾದ ಭಾಷಣದಿಂದ ಊರ ಹಿರಿಯರು ಉತ್ಸಾಹಗೊಂಡು ಶಾಲೆಯಲ್ಲಿ ಬೇಕಾಗುವ ಜಾಗಟೆ, ಗಡಿಯಾರ, ಮಲ್ಲಕಂಬ ಮೊದಲಾದ ಉಪಕರಣಗಳಿಗಾಗಿ ಸುಮಾರು ೫೦ ರೂ. ಗಳನ್ನು ರೋಖ ಕೊಟ್ಟರು. ಇನ್ನೂ ೨೦ ರೂ.ಗಳ ವಾಗ್ದಾನವಿವೆ. ಇದರಲ್ಲಿ ಶ್ರೀಮಂತ **ಯಳಮೇಲಿ ಚೆನ್ನಮಲ್ಲಪ್ಪ**ನವರು ನಲ್ಲಿಸಿದ **೧೧** ರೂ. ಮುಖ್ಯವಾದದ್ದು.

ತಿಳಿಸಿದವರು :—ಹೆಡ್‌ಮಾಸ್ತರ ಒಕ್ಕಲತನದ ಶಾಲೆ, ಗೊಳಸಂಗಿ.

ಶಾಡಂಬಿ :—(ಬಂಕಾಪುರ ತಾಲೂಕು) ೧೯–೬–೧೯೨೨ನೆಯ ದಿವಸ ಈ ಊರಲ್ಲಿ ಎಡ್ಮಿನಿಸ್ಟ್ರೇಟಿವ್ವ ಆಫೀಸರರಾದ ಶ್ರೀಮಾನ್ **ಜಗತಾಪ** ಸಾಹೇಬರ ಹಿರಿಯತನದಲ್ಲಿ ಪ್ರೌಢ ದಿನವನ್ನು, ಆಚರಿಸಲಾಯಿತು. ೧–೮–೧೯೧೧ ರಿಂದ ಈ ವರೆಗೆ ೫೨ ನಿರಕ್ಷರರು ಸಾಕ್ಷರರಾಗಿರುವರು. ಅವರೆಲ್ಲರೂ ಈ ಕಾರ್ಯದಲ್ಲಿ ಭಾಗವಹಿಸಿದರು.

ತಿಳಿಸಿದವರು :— ಶ್ರೀ. ವೀ. ಬ. ಬೆಳವತ್ತಿ ಹೆ। ಮಾ। ಧುಂಡಸಿ.

ಚಚಡಿ :—(ನವದತ್ತಿ ತಾಲೂಕು) ಇಲ್ಲಿಯ ಶ್ರೀಮಂತ ಸರದಾರರಾದ **ದೇಸಾಯಿ** ಅವರು ಶಾಲೆಯ ವಿದ್ಯಾರ್ಥಿಗಳ ಸ್ಕೌಟ ಚಟುವಟಿಕೆಗಳನ್ನು ಕಂಡು ಸಂತೋಷಬಟ್ಟು ಸಹಾಯವೆಂದು **೧೦** ರೂಪಾಯಿಗಳನ್ನು ದಯಪಾಲಿಸಿದರು.

ತಿಳಿಸಿದವರು :—ಶ್ರೀ. ಸಿ. ವೀ. ಹೊಸಮನಿ ವಿದ್ಯಾರ್ಥಿ, ಚಚಡಿ.

ಸುಳೇಭಾವಿ :— (ಸಾಂಗಲಿ ಸಂಸ್ಥಾನ) ಇಲ್ಲಿಯ ಲೋಕಪ್ರಿಯ ಹೆಡ್‌ಮಾಸ್ತರರಾದ ಶ್ರೀ. ಕಾ. ಯ. ಜೋಶಿ ಅವರಿಗೆ ವರ್ಗವಾದ ನಿಮಿತ್ತ ಊರಲ್ಲಿಯ ಹಿರಿಯರೆಲ್ಲರೂ ಕೂಡಿ ತಾಂಬೂಲ ಸಮಾರಂಭ ಮಾಡಿ ಸನ್ಮಾನಿಸಿದರು.

ತಿಳಿಸಿದವರು :— ಶ್ರೀ. ನವಲಗುಂದ ಶಿವರಾಮರಾಯರು ಶಹಾಪುರ, ಕ. ಶಾಲೆ.

ಚಿಕ್ಕೋಡಿ :— (ಬೆಳಗಾವಿ ಜಿಲ್ಲೆ) ೨೬–೭–೧೯೨೨ ನೆಯ ದಿವಸ ಈ ಊರಲ್ಲಿ ತಾಲೂಕಿನ ಶಿಕ್ಷಕಿಯರ ಸಮ್ಮೇಲನವು ಜರುಗಿತು. ಅಂದು ಸಂಜೆಗೆ ಕನ್ನಡ ಗಂಡುಮಕ್ಕಳ ಶಾಲೆಯಲ್ಲಿ, ಬೇಗನೆ ನಿವೃತ್ತರಾಗಲಿರುವ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾದ ಶ್ರೀಮಾನ್ ಪುರೋಹಿತ ಬೋಧರಾಯರಿಗಾಗಿ ತಾಂಬೂಲ ಸಮಾರಂಭವಾಯಿತು.

ತಿಳಿಸಿದವರು :—ಶ್ರೀ. ಶಾ. ನ. ಮಹಿಷಿ, ಮಾಸ್ತರರು ಚಿಕ್ಕೋಡಿ.

ಕೋಲ್ಹಾರ :— (ವಿಜಾಪುರ ಜಿಲ್ಲೆ) ಈ ಭಾಗದ ಶಿ. ಶಿ. ಸಮ್ಮೇಲನವು ೨೫–೭–೧೯೨೨ ನೆಯ ದಿವಸ ಅ. ಡೆ. ಎ. ಇ. ಅವರಾದ ಶ್ರೀಮಾನ್ **ಪಾಟೀಲ** ಸಾಹೇಬರ ಹಿರಿಯತನದಲ್ಲಿ ಜರುಗಿತು. ಪಾಠ, ಆಟ, ಸಂಭಾಷಣೆಗಳು ಜೆನ್ನಾಗಿ ಸಾಗಿದವು. ವಿದ್ಯಾರ್ಥಿಗಳು ' ಸುಳ್ಳಿನ ಸೋಲು ' ಎಂಬ ಚಿಕ್ಕ ನಾಟಕವನ್ನು ಅಭಿನಯಿಸಿದರು.

ತಿಳಿಸಿದವರು:—ಶ್ರೀ. ಹ. ಅ. ವಾಲಗದ, ಹೆ। ಮಾ। ಕೊಲ್ಹಾರ.

ಅಥರಗಾ :— (ಇಂಡಿ ತಾಲೂಕು) ತಾ॥ ೨೯–೭–೧೯೨೨ ನೆಯ ದಿವಸ ಈ ಊರಲ್ಲಿ ಡೆ. ಎ. ಇ ಅವರಾದ ಶ್ರೀಮಾನ್ **ಗುಂಜೀಕರ** ಸಾಹೇಬರ ಹಿರಿಯತನದಲ್ಲಿ ಶಿ. ಶಿ. ಸಮ್ಮೇಲನವು ನೆರವೇರಿತು. ಸುಮಾರು ೩೦ ಶಿಕ್ಷಕರು ಕೂಡಿದ್ದರು. ಸಾಹೇಬರು ತನ್ನ ಸಮಾರೋಪ ಭಾಷಣದಲ್ಲಿ " ಶಿಕ್ಷಕರು ಉಚ್ಚ ಭಾವನೆಯಿಂದ ನಿರಕ್ಷರತೆಯನ್ನು ಹೊಡೆದೋಡಿಸಬೇಕು. " ಎಂದು ಕಳಕಳಿಯಿಂದ ತಿಳಿಸಿದರು.

ತಿಳಿಸಿದವರು :— ಶ್ರೀ. ಪಾಟೀಲ ರಾಮನಗೌಡರು ಅಥರಗಾ.

ಬಾಗೇವಾಡಿ :— (ವಿಜಾಪುರ ಜಿಲ್ಲೆ) ಸೊಲ್ಲಾಪುರ ಮಹಿಲಾಮಂದಿರದ ಉತ್ಪಾದಕರಾದ ಶ್ರೀಮತಿ ಪಟ್ಟಣಶೆಟ್ಟಿ ಪ್ರಯಾಗಬಾಯಿ ಅವರು ಇಲ್ಲಿಯ ಹೆಣ್ಣುಮಕ್ಕಳ ಶಾಲೆಗೆ ಬಂದು ಶಾರೀರಿಕ ಚಟುವಟಿಕೆಗಳನ್ನು ಕಂಡು ಸಂತೋಷಚಿತ್ತರಾಗಿ ೫ ರೂ. ಗಳ ಸಹಾಯ ಮಾಡಿದರು.

ತಿಳಿಸಿದವರು :— ಶ್ರೀ. ವೆ. ಕೃ. ಬಾಡಗಂಡಿ, ಹೆ. ಮಾಸ್ತರ.

ಸಾಕ್ಷರಿಗಳಾದ ಪ್ರಬುದ್ಧರಿಗಾಗಿ
ನಾವೇನು ಮಾಡಬೇಕು?

ಸದ್ಯದ ಮಹಾಯುದ್ಧವು ಜಗತ್ತಿನ ಎಲ್ಲ ಮುಖ್ಯ ರಾಷ್ಟ್ರಗಳನ್ನು ಆಕ್ರಮಿಸಿರುವದು. ನಮ್ಮ ಹಿಂದುಸ್ತಾನಕ್ಕೂ ಅದು ತೀರ ಹತ್ತಿರ ಬಂದಿರುವದು. ಜಪಾನವು ನಮ್ಮ ಮೇಲೆ ಕಣ್ಣಿಟ್ಟಿರುವದು. ಅದು ಬ್ರಹ್ಮದೇಶವನ್ನು ಆಕ್ರಮಿಸಿಕೊಂಡಿರುವದು. ಬ್ರಹ್ಮದೇಶವು ಮೊದಲು ಹಿಂದುಸ್ತಾನದ ಒಂದು ಭಾಗವಿತ್ತೆಂಬದು ನಮಗೆ ಗೊತ್ತಿದೆ. ಆದ್ದರಿಂದ ಮಹಾಯುದ್ಧವೆಂಬ ಭೂತವು ನಮ್ಮ ಮನೆಯನ್ನು ಹೊಕ್ಕಂತೆಯೇ ಸರಿ. ಇಂಥ ಆಪತ್ಕಾಲದಲ್ಲಿ ನಾವೇನು ಮಾಡಬೇಕು?

ವೈರಿಗಳನ್ನು ಎದುರಿಸುವದು ನಮ್ಮ ಮೊದಲನೆಯ ಕೆಲಸ.

ಹಾಗೆ ವೈರಿಗಳನ್ನು ಪ್ರತ್ಯಕ್ಷ ಎದುರಿಸುವವರಿಗೆ ನಾವು ನೆರವಾಗಬೇಕು. ವೈರಿಗಳನ್ನು ಎದುರಿಸುವ ನಮ್ಮ ಸರಕಾರಕ್ಕೆ ಸಹಾಯಮಾಡಬೇಕು. ನಮ್ಮ ಸರಕಾರಕ್ಕೆ ಹಣವು ಬೇಕು. ನಮನಮಗೆ ಸಾಧ್ಯವಾದಮಟ್ಟಿಗೆ ನಾವು ಹಣವನ್ನು ಕೂಡಿಸಿ ಕೊಡಬೇಕು. ಆ ಹಣವು ನಮಗೆ ಬಡ್ಡಿಸಹಿತವಾಗಿ ಮುಂದೆ ತಿರುಗಿ ದೊರೆಯುವದು.

ಸರಕಾರದ ಸೈನ್ಯದಲ್ಲಿ ಕೆಲಸಮಾಡುವ ಸೈನಿಕರನ್ನೂ ಇತರ ಕೆಲಸಗಾರರನ್ನೂ ಒದಗಿಸಿಕೊಡಬೇಕು. ಸೈನ್ಯದಲ್ಲಿ ಸೇರುವವರಿಗೆ ಯೋಗ್ಯ ಸಂಬಳವು ದೊರೆಯುವದು. ಅವರ ಹೆಂಡಿರುಮಕ್ಕಳಿಗೆ ಸಹಾಯವೂ, ಶಿಕ್ಷಣವೂ ದೊರೆಯುವವು.

ಸರಕಾರದ ಮದ್ದು-ಗುಂಡಿನ ಕಾರಖಾನೆಗಳಲ್ಲಿಯೂ ಯಂತ್ರಗಳನ್ನು ತಯಾರಿಸುವ, ಹಡಗು ವಿಮಾನಗಳನ್ನು

ಕಟ್ಟುವ, ಕಾರಖಾನೆಗಳಲ್ಲಿಯೂ ಕೆಲಸಮಾಡುವದಕ್ಕೆ ಯೋಗ್ಯರಾದಕೆಲಸಗಾರರನ್ನು ಒದಗಿಸಿಕೊಡಬೇಕು. ಇಂಥವರಿಗೆ ಸರಕಾರದವರು ಸಂಬಳಕೊಟ್ಟು ತಕ್ಕ ಶಿಕ್ಷಣವನ್ನು ಕೊಡುವರು. ನಮ್ಮ ಜನರಿಗೆ ಇಂಥ ಶಿಕ್ಷಣವು ತೀರ ಆವಶ್ಯಕವಾಗಿದೆ. ಕೈಗಾರಿಕೆಯ ಶಿಕ್ಷಣವನ್ನು ಪ್ರಾರಂಭಿಸಬೇಕೆಂದು ನಮ್ಮ ಜನರು ಸರಕಾರವನ್ನು ಕೇಳಿಕೊಳ್ಳುತ್ತಿದ್ದರು. ಈಗ ಅಂಥ ಸುಯೋಗವು ತಾನಾಗಿ ಬಂದಿರುವದು.

ಯುದ್ಧಕಾಲದಲ್ಲಿ ನಮ್ಮಲ್ಲಿಯೇ ಅವ್ಯವಸ್ಥೆಯೂ ಗೊಂದಲವೂ ಆಗದಂತೆ ನೋಡಿಕೊಳ್ಳುವದು ಇನ್ನೊಂದು ಬಗೆಯ ಕೆಲಸ. ಯುದ್ಧದ ಮೂಲಕ ಹಲಕೆಲವು ಸಾಮಾನುಗಳು ಹೊತ್ತಿಗೆ ಸರಿಯಾಗಿ ದೊರೆಯುವದಿಲ್ಲ. ಹಲಕೆಲವು ಸಾಮಾನುಗಳ ಬೆಲೆಯು ಮಿತಿಮೀರಿ ಹೆಚ್ಚುವದು. ಇದರಿಂದಲೂ ಜನರಲ್ಲಿ ಗೊಂದಲವಾಗಬಹುದು. ಕೆಲವರು ಹೊಟ್ಟೆಗೆ ಸಿಗದ ಸಂಕಟಕ್ಕೆ ಕಳವು ದರೋಡೆಗಳಿಗೆ ಸಿದ್ಧರಾಗಬಹುದು. ಮತ್ತೆ ಕೆಲವರು ತಮಗೆ ಇದು ಅನುಕೂಲಸಮಯವೆಂದು ಕಳವು ಕೊಲೆ ಸುಲಿಗೆಗಳನ್ನು ಮಾಡಲು ಹವಣಿಸಬಹುದು. ಇಂಥವರನ್ನು ತಡೆದು ನಮ್ಮನ್ನೂ ನಮ್ಮ ಹೆಂಡಿರು ಮಕ್ಕಳನ್ನೂ ಆಸ್ತಿಯನ್ನೂ ಸುರಕ್ಷಿತವಾಗಿ ಇಟ್ಟುಕೊಳ್ಳಬೇಕಾದರೆ ನಮ್ಮಲ್ಲಿ ಒಂದು ಬಗೆಯ ವ್ಯವಸ್ಥೆಯಿರಬೇಕಾಗುವದು. ನಾವೆಲ್ಲರೂ ಸೇರಿ ಒಬ್ಬೊಬ್ಬರು ಒಂದೊಂದು ಕೆಲಸವನ್ನು ಹಂಚಿಕೊಂಡು ಅದರಂತೆ ಕೆಲಸ ಮಾಡಬೇಕಾಗುವದು. ಒಂದೊಂದು ಹಳ್ಳಿಯವರು ತಮ್ಮಲ್ಲಿ ವ್ಯವಸ್ಥೆಮಾಡಿಕೊಂಡು ನೆರೆಯ ಹಳ್ಳಿಯವರಿಗೆ ಕಷ್ಟಕಾಲದಲ್ಲಿ ನೆರವಾಗಲಿಕ್ಕೆ ಸಿದ್ಧರಾಗಿರಬೇಕು.

ಹೊಸ ಪದ್ಧತಿಯ ಹಿಂದೀ ಜಮಾಖರ್ಚು ಭಾಗ ೧

(ಮನೆಯ ಜಮಾಖರ್ಚು)

ಶ್ರೀ. ರಾ. ಸಿ. ಸಜ್ಜನ ಇವರು ಹೊಸ ಅಭ್ಯಾಸಪತ್ರಿಕೆಯ ಪ್ರಕಾರ ಈ ಪುಸ್ತಕವನ್ನು ರಚಿಸಿರುವರು. ಸರಕಾರದವರು ಇದನ್ನು ಮೇಲಿನ ಎಲ್ಲ ಇಯತ್ತೆ-ಗಳಿಗೆ ಟೆಕ್ಸ್ಟ್‌ಬುಕ್ ಎಂದು ನುಂಜೂರು ನೂಡಿರುವರು. ಮತ್ತು ಸ್ಕೂಲಬೋರ್ಡು-ಗಳ ಅಧಿಕಾರಿಗಳೂ ಮಾನ್ಯವಾಡಿದ್ದಾರೆ. ಇದರಲ್ಲಿ ಇಯತ್ತೆವಾರ ಜಮಾಖರ್ಚಿನ ಅಭ್ಯಾಸಕ್ರಮದಂತೆ ಆರಂಭದ ಜಮಾಖರ್ಚು, ಕೀರ್ದಿ, ಖತಾವಣಿ, ಬಾಕಿಗಳ ವಸೂಲಿ, ಉತ್ಪನ್ನ ಖರ್ಚಿನ ಖಾತೆ, ಅಢಾವೆ, ತೋಂಡಮಿಳವಣಿ ಕೀರ್ದಿ ಮತ್ತು ಗ್ರಾಮಲಾಸಹಕಾರಿ ಸಂಘದ ಅಂಗಡಿ (ಸೊಸಾಯಿಟಿ) ಯ ಜಮಾಖರ್ಚು ಮುಂತಾದ ವಿಷಯಗಳೂ, ಸ್ವಾಮಿಸರಿ ನೋಟು, ಮನಿಯಾರ್ಡರ, ಇನ್ಸುಅರನ್ಸ, ಚೆಕ್ಕು, ಹುಂಡಿ, ಬಡ್ಡಿಯ ಆಕರಣೆ ಮೊದಲಾದ ವ್ಯವಹಾರದೊಳಗಿನ ಮಾಹಿತಿಗಳೂ ಪ್ರಶ್ನೆಗಳೂ ಅವುಗಳ ಉತ್ತರಗಳೂ ಕೊನೆಗೆ ಪರೀಕ್ಷೆಯ ಪ್ರಶ್ನಕಾಗದಗಳೂ ಇರುವವು. ಇದು ಈಗಿನ ಪರೀಕ್ಷೆಯ ಪದ್ಧತಿಯಂತೆ ಬರೆದಿರುವದರಿಂದ ಹೆಣ್ಣು-ಮಕ್ಕಳ ಮತ್ತು ಗಂಡುಮಕ್ಕಳ ಪ್ರಾ. ಶಾ. ಪ್ರ. ಪ. ಪರೀಕ್ಷೆಯ ಉಮೇದವಾರ-ರಿಗೂ ಬಹು ಉಪಯುಕ್ತವಾದುದಿರುತ್ತದೆ. ಆದಕಾರಣ ಎಲ್ಲ ಮಹನೀಯರು ಇದರ ಲಾಭವನ್ನು ಪಡೆಯಬೇಕೆಂದು ಆಶಿಸುತ್ತೇವೆ. **ಬೆಲೆ : ೮ ಆಣೆ**

ಪತ್ತೆ :- **ರಾ. ಸಿ. ಸಜ್ಜನ ಮಾಸ್ತರ,** ಜೋರಾಪುರ ಪೇಟೆ, ವಿಜಾಪುರ.

ವಿನಂತಿ

★

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಸುವ ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು.

೨. ಈ ಮಾಸಪತ್ರಿಕೆಯು ಪ್ರತಿತಿಂಗಳ ಕೊನೆಯವಾರದಲ್ಲಿ ಪ್ರಸಿದ್ಧ-ವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೩. ಲೇಖಕರು ಹಾಗು ಪ್ರಕಾಶಕರು ಪ್ರಾಥಮಿಕ ಶಿಕ್ಷಕ ಶಿಕ್ಷಕಿ-ಯರಿಗೆ ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆ-ಗಾಗಿ ಕಳಿಸಬಹುದು.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕವಿತಾಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡುಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

ಅಕ್ಟೋಬರ್ ೧೯೪೨ Reg. No B. 3691

(ಇದಂಲ್ಲ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಶಿಕ್ಷಣದ ಆಸ್ಥಿವಾರವಾವುದು	೧
೨.	ಮುಖ್ಯಾಧ್ಯಾಪಕರೂ ಆವರ ಕಾರ್ಯಕಲಾಪಗಳೂ	೯
೩.	ವಿಜಾಪುರ ಪಟ್ಟಣದಲ್ಲಿಯ ಪ್ರಾಥಮಿಕ ಶಿಕ್ಷಣ ..	೨೧
೪.	ಔದ್ಯೋಗಿಕ ಶಿಕ್ಷಣ	೨೩
೫.	ಸೇವಾನಿವೃತ್ತರಾದ ಕುಲಕರ್ಣಿ ಜೀವಣ್ಣರಾಯರು ..	೨೪
೬.	ಪುಸ್ತಕ ಪರಿಚಯ	೨೬
೭.	ಪತ್ರಗಳ ಮುಖ್ಯಾಂಶಗಳು	೩೯
೮.	ಸದ್ಯದ ಮಹಾಯುದ್ಧದಲ್ಲಿ ಸ್ತ್ರೀಯರ ಕಾರ್ಯಗಳು .. (ಪ್ರಬುದ್ಧರಿಗಾಗಿ)	೪೧

Printed by V. Y. Jathar at the Karnatak Printing Works, Dharwar and Published by H. S. Torgal, Esq. M. A., Principal Training College For-Men Dharwar, at his Office.

ವಿದ್ಯಾ ಸಂಚಿಕೆಗೆ ನಾಲ್ಕು ಅಣೆಗಳು. ವಾರ್ಷಿಕ ಚಂದಾ ಹಣ ನಿರಡು ರೂಪಾಯಿಗಳು ನಾತ್ರ.

ಪುರೋಗಾಮಿ ಶಿಕ್ಷಕ

(ಲೇಖಕರು : ಶ್ರೀ. ಎಸ್. ಬಿ. ಗಜೇಂದ್ರಗಡ, ಬಿ.ಎ., ಬಿ.ಟಿ., ವಿಜಾಪುರ

ಪ್ರಾಥಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಇರುವ
ಟೈನಂದಿನ ಅಭ್ಯಾಸದಲ್ಲಿ— ಕಲಿಸುವ ಕಾರ್ಯದಲ್ಲಿ ಅತ್ಯಂತ ಉಪ-
ಯುಕ್ತವಾಗುವಂತೆ, ವಿದ್ಯಾಖಾತೆಯ ಅಭ್ಯಾಸಪತ್ರಿಕೆ-
ಯನ್ನು ಸಂಪೂರ್ಣವಾಗಿ ಅನುಸರಿಸಿ ಬರೆಯಲ್ಪಟ್ಟಿದೆ.

ಪುಟಗಳು ೩೩೬ ಬೆಲೆ ೨-೪ ೦

ಇದು ಮೂರು ಮುಖ್ಯ ಭಾಗಗಳನ್ನೊಳಗೊಂಡಿದೆ.

(೧) ಶೈಕ್ಷಣಿಕ ಮನಃಶಾಸ್ತ್ರವನ್ನು ೧೫೫ ಪುಟಗಳಲ್ಲಿ ವಿವೇಚಿಸಿದೆ. (೨) ಶಿಕ್ಷಣಶಾಸ್ತ್ರದ ಮೂಲತತ್ವಗಳನ್ನೂ ಪ್ರತ್ಯಕ್ಷವಾಗಿ ಕಲಿಸುವ ಶಾಸ್ತ್ರೀಯ ಪದ್ಧತಿಯನ್ನೂ ವಿವರಿಸಿದೆ. (೩) ಆಧುನಿಕ ಶಿಕ್ಷಣ ಕ್ರಮದ ಮಹತ್ವದ ಅಂಗಗಳಾದ ಶಾರೀರಿಕ ಶಿಕ್ಷಣ, ಶಿಸ್ತು, ಸಂಘಟನೆ ಮೊದಲಾದ ವಿಷಯಗಳನ್ನು ತಿಳಿಸಿದೆ.

ಶಿಕ್ಷಣದ ಸರ್ವಾಂಗಗಳನ್ನೂ ಸುಲಲಿತವಾದ ಭಾಷೆಯಲ್ಲಿ ಒತ್ತಟ್ಟಿಗೆ
ಸುಂದರವಾಗಿ ಮಂಡಿಸಿದ ಶಾಸ್ತ್ರೀಯ ಗ್ರಂಥವು

ಕನ್ನಡದಲ್ಲಿ ಇದೊಂದೇ!

ಕನ್ನಡ-ಇಂಗ್ಲಿಷ್ ಶಾಲೆ-ಕಾಲೇಜುಗಳ ಎಲ್ಲಾ ಪಠ್ಯಪುಸ್ತಕಗಳೂ ಇತರ ಪುಸ್ತಕ
ಸ್ಕೂಲ್ ಸ್ಟೇಶನರಿ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ.

ಸ್ಟೂಡೆಂಟ್ಸ್ ಓನ್ ಬುಕ್ ಡಿಪೋ, ಧಾರವಾಡ.